ಮೈಸೂರು ಮಿತ್ರ

ಮೈಸೂರು–ಮಂಡ್ಯ–ಚಾಮರಾಜನಗರ–ಕೊಡಗು–ಹಾಸನ

ಬೆಳಗಿನ ಪ್ರಾದೇಶಿಕ ದಿನಪತ್ರಿಕೆ

ನವೆಂಬರ್ 24 ಭಾನುವಾರ 2024

ಸಂಪುಟ: 45 | ಸಂಚಿಕೆ: 217 | ಪುಟಗಳು: 12


ಮೈಸೂರು ಸುದ್ದಿ: ದೂರವಾಣಿ: 2496520/21/26/27/28 ಜಾಹೀರಾತು: 2496522/23
ನಗರ ಕಚೇರಿಗಳು: ಕೆ.ಆರ್. ಸರ್ಕಲ್, ವಿಶ್ವೇಶ್ವರಯ್ಯ ಕಟ್ಟಡ Ph: 2431774, ಡಿ.ದೇವರಾಜ ಅರಸು ರಸ್ತೆ, Ph: 2428695 ಸುದ್ದಿ
ಜಾಹೀರಾತಿಗಾಗಿ–ಮಂಡ್ಯ: 8762960325, ಚಾಮರಾಜನಗರ: 9242265657, ಕೊಡಗು: 9731469871

ಸುದ್ದಿ, ಫೋಟೋಗೆ: news@mysurumithra.com
ಜಾಹೀರಾತು: ad@mysurumithra.com, *website: www.mysurumithra.com*

₹4



ಚನ್ನಪಟ್ಟಣ, ಶಿಗ್ಗಾಂವಿ, ಸಂಡೂರು ವಶ



ಸಿ.ಪಿ.ಯೋಗೇಶ್ವರ್
(ಚನ್ನಪಟ್ಟಣ – ಕಾಂಗ್ರೆಸ್)



ಇ.ಅನ್ನಪೂರ್ಣ
(ಸಂಡೂರು – ಕಾಂಗ್ರೆಸ್)



ಯಾಸಿರ್ ಖಾನ್ ಪಠಾಣ್
(ಶಿಗ್ಗಾಂವಿ – ಕಾಂಗ್ರೆಸ್)

ಸಿ.ಪಿ.ಯೋಗೇಶ್ವರ್, ಯಾಸಿರ್ ಖಾನ್ ಪಠಾಣ್, ಇ.ಅನ್ನಪೂರ್ಣ ಜಯಭೇರಿ

ನಿಖಿಲ್ ಕುಮಾರಸ್ವಾಮಿಗೆ ಹ್ಯಾಟ್ರಿಕ್ ಸೋಲು

ಬೆಂಗಳೂರು, ನ.23(ಕೆಎಂಶಿ)– ರಾಜ್ಯದಲ್ಲಿ ನಡೆದ ಮೂರು ವಿಧಾನಸಭಾ ಕ್ಷೇತ್ರಗಳ ಉಪಚುನಾವಣೆಯಲ್ಲಿ ಆಡಳಿತಾರೂಢ ಕಾಂಗ್ರೆಸ್ ಭರ್ಜರಿ ಜಯಗಳಿಸಿದರೆ, ಎನ್‌ಡಿಎ ಮೈತ್ರಿಕೂಟ ಭಾರಿ ಮುಖಭಂಗ ಅನುಭವಿಸಿದೆ. ಚನ್ನಪಟ್ಟಣ, ಶಿಗ್ಗಾಂವಿ ಹಾಗೂ ಸಂಡೂರು ಕ್ಷೇತ್ರದಲ್ಲಿ ಕಾಂಗ್ರೆಸ್ ಅಭ್ಯರ್ಥಿಗಳು ಜಯಭೇರಿ ಬಾರಿಸಿ ಬಿಜೆಪಿ ಹಾಗೂ ಜೆಡಿಎಸ್ ಅಭ್ಯರ್ಥಿಗಳು ಭಾರಿ ಅಂತರದಲ್ಲಿ ಸೋಲುಂಡಿದ್ದಾರೆ. ಮಾಜಿ ಸಚಿವ ಸಿ.ಪಿ.ಯೋಗೇಶ್ವರ್ ಚನ್ನಪಟ್ಟಣದಲ್ಲಿ ತಮ್ಮ ಪ್ರತಿಸ್ಪರ್ಧಿ ಜೆಡಿಎಸ್‌ನ ನಿಖಿಲ್ ಕುಮಾರಸ್ವಾಮಿ ಅವರನ್ನು 25,413 ಮತಗಳ ಅಂತರದಿಂದ ಪರಾಭವಗೊಳಿಸಿ ಆರನೇ ಬಾರಿಗೆ ವಿಧಾನಸಭೆ ಪ್ರವೇಶಿಸಿದ್ದಾರೆ.

ಯೋಗೇಶ್ವರ್ ಅವರಿಗೆ 1,12,642 ಮತಗಳು, ಪ್ರತಿಸ್ಪರ್ಧಿ ನಿಖಿಲ್ ಕುಮಾರಸ್ವಾಮಿಗೆ 87,229 ಮತ ಲಭಿಸಿವೆ ಸಂಡೂರಿನಲ್ಲಿ ಕಾಂಗ್ರೆಸ್‌ನ ಇ.ಅನ್ನಪೂರ್ಣ 93,616 ಮತಗಳನ್ನು ಪಡೆದು ತಮ್ಮ ಪ್ರತಿಸ್ಪರ್ಧಿ ಬಿಜೆಪಿಯ ಬಂಗಾರು ಹನುಮಂತು ಅವರನ್ನು 9,649 ಮತಗಳಿಂದ ಸೋಲಿಸಿದ್ದಾರೆ. ಹನುಮಂತು ಅವರಿಗೆ 83,967 ಮತಗಳು ಲಭಿಸಿವೆ.

ಶಿಗ್ಗಾಂವಿಯಲ್ಲಿ ಕಾಂಗ್ರೆಸ್‌ನ ಯಾಸಿರ್ ಖಾನ್ ಪಠಾಣ್ 1,00756 ಮತ ಪಡೆದು ತಮ್ಮ ಪ್ರತಿಸ್ಪರ್ಧಿ ಬಿಜೆಪಿಯ ಭರತ್ ಬೊಮ್ಮಾಯಿ ಅವರನ್ನು 13,448 ಮತಗಳ ಅಂತರದಿಂದ ಸೋಲಿಸಿ ಮೊದಲ ಬಾರಿಗೆ ವಿಧಾನಸಭೆ ಪ್ರವೇಶಿಸಿದ್ದಾರೆ. ಭರತ್ ಅವರಿಗೆ 87,308 ಮತ ಲಭ್ಯವಾಗಿವೆ. ಉಪಚುನಾವಣೆ ಫಲಿತಾಂಶದಿಂದ ವಿಧಾನಸಭೆಯಲ್ಲಿ 136 ಸ್ಥಾನದಲ್ಲಿದ್ದ ಕಾಂಗ್ರೆಸ್ ತನ್ನ ಸಂಖ್ಯಾಬಲವನ್ನು 138ಕ್ಕೆ ಹೆಚ್ಚಿಸಿಕೊಂಡಿದೆ, ಬಿಜೆಪಿ–ಜೆಡಿಎಸ್ ತಲಾ ಒಂದೊಂದು ಸ್ಥಾನ ಕಳೆದುಕೊಂಡಿವೆ. ಕೇಂದ್ರ ಸಚಿವ ಹಾಗೂ ಮಾಜಿ ಮುಖ್ಯಮಂತ್ರಿ ಎಚ್.ಡಿ.ಕುಮಾರಸ್ವಾಮಿ ಹಾಗೂ ಮತ್ತೊಬ್ಬ ಮಾಜಿ ಸಿಎಂ ಬಸವರಾಜ ಬೊಮ್ಮಾಯಿ ತಮ್ಮಿಂದ ತೆರವಾದ ಸ್ಥಾನಗಳಿಗೆ ಪುತ್ರರನ್ನು ಕಣಕ್ಕಿಳಿಸಿ, ವಿಧಾನಸಭೆಗೆ ಪ್ರವೇಶ ಮಾಡಿಸುವಲ್ಲಿ ವಿಫಲರಾಗಿದ್ದಾರೆ. ● 6ನೇ ಪುಟಕ್ಕೆ

ಕುಟುಂಬ ಹಣಿಯಲು ಮುಂದಾದವರಿಗೆ ಫಲಿತಾಂಶವೇ ಉತ್ತರ



ಬೆಂಗಳೂರು: ರಾಜ್ಯದಲ್ಲಿ ನಡೆದ ಉಪ ಚುನಾವಣೆ ಕಾಂಗ್ರೆಸ್ ಪಕ್ಷದ ಸತ್ಯ ಮತ್ತು ಬಿಜೆಪಿ–ಜೆಡಿಎಸ್ ಪಕ್ಷಗಳ ಸುಳ್ಳುಗಳ ನಡುವಿನ ಚುನಾವಣೆಯಾಗಿತ್ತು. ಸತ್ಯ ಗೆದ್ದಿದೆ. ವಿರೋಧ ಪಕ್ಷಗಳ ನಿರಂತರ ಅಪಪ್ರಚಾರ, ಸುಳ್ಳು ಆರೋಪಗಳನ್ನು ಮೆಟ್ಟಿನಿಂತು ನಾವು ಸಾಧಿಸಿರುವುದು ದಿಗ್ವಿಜಯವಾಗಿ ಕಾಣುತ್ತಿದೆ ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ವಿಶ್ಲೇಷಿಸಿದರು.

ಸುದ್ದಿಗಾರರ ಜೊತೆ ಶನಿವಾರ ಮಾತನಾಡಿದ ಅವರು, ನಾನು ದಂತಗೋಪುರದಲ್ಲಿ ಕುಳಿತವನಲ್ಲ. ಜನರ ಜೊತೆ ನಿರಂತರ ಒಡನಾಟ ಇಟ್ಟುಕೊಂಡವನು. ನಮ್ಮ ಗ್ಯಾರಂಟಿ ಯೋಜನೆಗಳ ಬಗ್ಗೆ ಬಿಜೆಪಿ–ಜೆಡಿಎಸ್‌ನವರು ಅಪಪ್ರಚಾರ ಮಾಡುತ್ತಿದ್ದರು. ಪ್ರಧಾನಿ ಕೂಡಾ ನಮ್ಮ ಗ್ಯಾರಂಟಿ ಯೋಜನೆಗಳ ಅನುಷ್ಠಾನದ ಬಗ್ಗೆ ಸುಳ್ಳು ಹೇಳಿದರು. ಮಹಾರಾಷ್ಟ್ರದಲ್ಲಿ ಸುಳ್ಳು ಜಾಹೀರಾತು ನೀಡಿದ್ದರು. ಅವೆಲ್ಲದಕ್ಕೂ ಜನ ಉತ್ತರ ಕೊಟ್ಟಿದ್ದಾರೆ ಎಂದರು. ಎಲ್ಲಕ್ಕಿಂತಲೂ ಮಿಗಿಲಾಗಿ ಈ ಉಪ ಚುನಾವಣೆ ಫಲಿತಾಂಶ ಬೇರೆಯದೇ ಕಾರಣಕ್ಕೂ ನನಗೆ ಮಹತ್ವದ್ದಾಗಿತ್ತು. ಈ ಬಾರಿ ನಾನು ಮುಖ್ಯಮಂತ್ರಿಯಾದ ನಂತರ ನನ್ನ ಮತ್ತು ಸರ್ಕಾರದ ವಿರುದ್ಧ ಸುಳ್ಳು ಆರೋಪಗಳನ್ನು ಮಾಡುತ್ತಾ ನನ್ನ ಚಾರಿತ್ರ್ಯ ಹನನ ಮಾಡುವ ಪ್ರಯತ್ನವನ್ನು ಬಿಜೆಪಿ–ಜೆಡಿಎಸ್ ನಾಯಕರು ಮಾಡುತ್ತಾ ಬಂದಿದ್ದಾರೆ. ರಾಜಭವನದಿಂದ ಹಿಡಿದು ಕೇಂದ್ರ ತನಿಖಾ ಸಂಸ್ಥೆಗಳವರೆಗೆ ಎಲ್ಲವನ್ನೂ ದುರ್ಬಳಕೆ ಮಾಡಿ ಹಗರಣವನ್ನು ಸೃಷ್ಟಿಸಿ ನನ್ನನ್ನು ಮತ್ತು ನನ್ನ ಕುಟುಂಬ ವನ್ನು ಹಣಿಯುವ ಪ್ರಯತ್ನ ಮಾಡಿದ್ದಾರೆ. ನನ್ನನ್ನು ಕಟ್ಟಿ ಹಾಕುವ ದೂರಾಲೋಚನೆಯಿಂದಲೇ ಬಿಜೆಪಿ ನಾಯಕರು ನನ್ನ ಮತ್ತು ನನ್ನ ಪತ್ನಿಯ ಮೇಲೆ ಸುಳ್ಳು ಆರೋಪಗಳನ್ನು ಮಾಡಿದ್ದಾರೆ. ● 6ನೇ ಪುಟಕ್ಕೆ

ರಾಹುಲ್ ದಾಖಲೆ ಬ್ರೇಕ್: ವಯನಾಡ್‌ನಲ್ಲಿ ಪ್ರಿಯಾಂಕಾ ಗಾಂಧಿಗೆ 4.10 ಲಕ್ಷ ಭಾರಿ ಮತಗಳ ಅಂತರದ ಗೆಲುವು



ಪ್ರಿಯಾಂಕಾ ಗಾಂಧಿ (ವಯನಾಡ್–ಕಾಂಗ್ರೆಸ್)

ತಿರುವನಂತಪುರಂ, ನ.23– ಕಾಂಗ್ರೆಸ್ ನಾಯಕಿ ಪ್ರಿಯಾಂಕಾ ಗಾಂಧಿ ಅವರು ಕೇರಳದ ವಯನಾಡ್ ಲೋಕಸಭಾ ಕ್ಷೇತ್ರದಲ್ಲಿ 4.10 ಲಕ್ಷ ಭಾರಿ ಮತಗಳ ಅಂತರದಿಂದ ಗೆಲುವು ಸಾಧಿಸಿದ್ದಾರೆ.

ರಾಹುಲ್ ಗಾಂಧಿ ರಾಜೀನಾಮೆಯಿಂದ ತೆರವಾದ ವಯನಾಡ್ ಲೋಕಸಭಾ ಕ್ಷೇತ್ರದಲ್ಲಿ ಅವರ ಸಹೋದರಿ ಪ್ರಿಯಾಂಕಾ ಗಾಂಧಿ ಸ್ಪರ್ಧಿಸಿದ್ದು 4,10,931 ಅಧಿಕ ಮತಗಳ ಅಂತರದಿಂದ ಚೊಚ್ಚಲ ಗೆಲುವು ಸಾಧಿಸಿದ್ದಾರೆ.

ಪ್ರಿಯಾಂಕಾ ಗಾಂಧಿ ಒಟ್ಟು 6,22,338 ಮತಗಳನ್ನು ಪಡೆದುಕೊಂಡಿದ್ದು, ಸಿಪಿಐನ ಹಿರಿಯ ನಾಯಕ ಸತ್ಯನ್ ಮೊಕೇರಿ 2,11,407 ಲಕ್ಷ ಮತ್ತು ಬಿಜೆಪಿಯ ನವ್ಯಾ ಹರಿದಾಸ್ ಸುಮಾರು 1,09,939 ಮತಗಳೊಂದಿಗೆ ಮೂರನೇ ಸ್ಥಾನದಲ್ಲಿದ್ದಾರೆ. 2024ರ ಲೋಕಸಭಾ ಚುನಾವಣೆಯಲ್ಲಿ ರಾಹುಲ್ ವಯನಾಡ್ ಮತ್ತು ರಾಯ್ ಬರೇಲಿ ಎರಡೂ ಕ್ಷೇತ್ರದಲ್ಲಿ ಸ್ಪರ್ಧಿಸಿ ಭಾರಿ ಮತಗಳ ಅಂತರದಿಂದ ಗೆದ್ದಿದ್ದರು. ಸೋನಿಯಾ ಗಾಂಧಿ ಅವರು ರಾಜ್ಯಸಭೆಗೆ ಪ್ರವೇಶಿಸಿದ್ದರಿಂದ ರಾಯ್ ಬರೇಲಿ ಕ್ಷೇತ್ರ ಉಳಿಸಿಕೊಂಡ ರಾಹುಲ್ ಗಾಂಧಿ, ವಯನಾಡ್ ಕ್ಷೇತ್ರವನ್ನು ಸಹೋದರಿಗೆ ಬಿಟ್ಟುಕೊಟ್ಟರು. ವಿಶೇಷವೆಂದರೆ ಕಳೆದ ಬಾರಿ ಲೋಕಸಭಾ ಚುನಾವಣೆಯಲ್ಲಿ ರಾಹುಲ್ ಗಾಂಧಿ 3.64 ಲಕ್ಷ ಮತಗಳ ಅಂತರದಿಂದ ಒಟ್ಟು 6.47 ಲಕ್ಷ ಮತಗಳನ್ನು ಪಡೆದು ಗೆಲುವು ಸಾಧಿಸಿದ್ದರು. ಇದೀಗ ಪ್ರಿಯಾಂಕಾ ಗಾಂಧಿ 4.10 ಲಕ್ಷ ಮತಗಳ ಅಂತರದಿಂದ ಗೆಲುವು ಸಾಧಿಸಿದ್ದಾರೆ.

2028ರ ಚುನಾವಣೆಗೆ ಮುನ್ನುಡಿ



ಬೆಂಗಳೂರು, ನ.23– 2028ರ ಚುನಾವಣೆಗೆ ಈ ಫಲಿತಾಂಶ ಮುನ್ನುಡಿಯಾಗಿದೆ. ರಾಜ್ಯದ ಜನರು ಬದುಕು ಕಟ್ಟಿಕೊಳ್ಳಿ ಎಂದು ಸಂದೇಶ ನೀಡಿದ್ದಾರೆ. ಸಮೀಕ್ಷೆ ಸುಳ್ಳಾಗುತ್ತವೆ. ನಾವು ಮಾಡೋದೇ ಬೇರೆ. ನೀವು ಮಾಡೋದೇ ಬೇರೆ ಅಂದಿದ್ದೆ. ಚನ್ನಪಟ್ಟಣ ಸೋಲು ಗೆಲುವು ನನ್ನದೇ ಎಂದಿದ್ದೆ. ಇದೀಗ ಮೂರು ಕ್ಷೇತ್ರಗಳ ಫಲಿತಾಂಶ ಬಂದಿದೆ ಎಂದು ಕೆಪಿಸಿಸಿ ಅಧ್ಯಕ್ಷರೂ ಆದ ಉಪ ಮುಖ್ಯ ಮಂತ್ರಿ ಡಿ.ಕೆ.ಶಿವಕುಮಾರ್ ತಿಳಿಸಿದ್ದಾರೆ.

ಚುನಾವಣಾ ಫಲಿತಾಂಶದ ನಂತರ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ನಿಖಿಲ್ ಸೋಲು ಎಂದು ನಾನು ಹೇಳಲ್ಲ. ಕುಮಾರಸ್ವಾಮಿ ಎಂಪಿ ಆಗಿದ್ದವರು. ಆ ಕ್ಷೇತ್ರದಲ್ಲಿ ಅವರು ಕುರುಹು ಬಿಟ್ಟು ಹೋಗಿದ್ದರು. ಅದಕ್ಕೆ ಜನ ತೀರ್ಪು ಕೊಟ್ಟಿದ್ದಾರೆ. ಭರತ್ ಬೊಮ್ಮಾಯಿ ಸೋಲು ಅದೇ ರೀತಿಯಾಗಿದೆ. ಕಳೆದ ಬಾರಿ ನಮ್ಮ ಅಭ್ಯರ್ಥಿ ಸೋತಿದ್ದರು. ಸಂಡೂರಿನಲ್ಲಿ ಮೊದಲಿನಿಂದ ನಾವೇ ಇದ್ದೇವೆ. ಮೂರು ಚುನಾವಣೆ ಅಭಿವೃದ್ಧಿಗೆ ಸಿಕ್ಕ ಗೆಲುವು ಎಂದರು. ವಿಪಕ್ಷಗಳಿಗೆ ಜನರು ತಕ್ಕ ರೀತಿಯಲ್ಲಿ ಸಂದೇಶ ನೀಡಿದ್ದಾರೆ. ಭಾವನೆಗಳ ಜೊತೆಗೆ ರಾಜಕಾರಣ ಬೇಡ. ಬದುಕಿನ ಮೇಲೆ ರಾಜಕಾರಣ ಮಾಡಿ ಎಂದು ಬಿಜೆಪಿಗೆ ಸಂದೇಶ ಕೊಟ್ಟಿದ್ದಾರೆ. ಗಾರಂಟಿ ಬಗ್ಗೆ ಅಪಪ್ರಚಾರ ಮಾಡಿದ್ದರು. 56 ಸಾವಿರ ಕೋಟಿ ನಾವು ಕೊಟ್ಟಿದ್ದೆವು. ಜನರ ಬದುಕನ್ನು ನಾವು ಕಟ್ಟುತ್ತಿಲ್ವೇ. ತಾಯಂದಿರು ಉಚಿತ ಪ್ರವಾಸ ಮಾಡ್ತಿಲ್ವೇ. ಗೃಹ ಲಕ್ಷ್ಮಿಯಿಂದ ಮನೆ ತಾಂಡವವಾಡ್ತಿಲ್ಲವೇ ಎಂದು ಪ್ರಶ್ನಿಸಿದರು. ಲಂಚ ಸಾಬೀತು ಮಾಡೋಕೆ ಆಗುತ್ತಾ. ಇದೆಲ್ಲ ನೋಡಿಯೇ ಜನ ಕೈಹಿಡಿದಿದ್ದಾರೆ. ● 6ನೇ ಪುಟಕ್ಕೆ

ಮಹಾರಾಷ್ಟ್ರದಲ್ಲಿ ಬಿಜೆಪಿ ನೇತೃತ್ವದ ಮಹಾಯುತಿ ಮೈತ್ರಿಕೂಟಕ್ಕೆ ದಾಖಲೆ ಗೆಲುವು

ಜಾರ್ಖಂಡ್‌ನಲ್ಲಿ ಇಂಡಿಯಾ ಮೈತ್ರಿಕೂಟ ಅಧಿಕಾರಕ್ಕೆ



ದೇವೇಂದ್ರ ಫಡ್ನವೀಸ್ ಏಕನಾಥ್ ಶಿಂಧೆ ಅಜೀತ್ ಪವಾರ್



ಹೇಮಂತ್

ನವದೆಹಲಿ, ನ.23–ಮಹಾರಾಷ್ಟ್ರ ಮತ್ತು ಜಾರ್ಖಂಡ್ ವಿಧಾನಸಭಾ ಚುನಾವಣೆಯ ಫಲಿತಾಂಶ ಪ್ರಕಟಗೊಂಡಿದ್ದು, ಮಹಾರಾಷ್ಟ್ರದಲ್ಲಿ ಬಿಜೆಪಿ ನೇತೃತ್ವದ ಮಹಾಯುತಿ ಮೈತ್ರಿಕೂಟ ಭರ್ಜರಿ ಗೆಲುವು ಸಾಧಿಸಿದ್ದರೆ, ಕಾಂಗ್ರೆಸ್ ನೇತೃತ್ವದ ಮಹಾವಿಕಾಸ್ ಅಘಾಡಿ ಹೀನಾಯವಾಗಿ ಸೋಲುಂಡಿದೆ ಅತ್ತ ಜಾರ್ಖಂಡ್‌ನಲ್ಲಿ ಇಂಡಿಯಾ ಮೈತ್ರಿಕೂಟ ಭರ್ಜರಿ ಗೆಲುವು ಸಾಧಿಸಿದ್ದು, ಹಾಲಿ ಮುಖ್ಯಮಂತ್ರಿ ಹೇಮಂತ್ ಸುರೇನ್ ನೇತೃತ್ವದ ಜೆಎಂಎಂ ಸತತ ಮೂರನೇ ಬಾರಿಗೆ ಅಧಿಕಾರದ ಗದ್ದುಗೆ ಏರುತ್ತಿದೆ.

288 ಕ್ಷೇತ್ರಗಳನ್ನೊಳಗೊಂಡ ಮಹಾರಾಷ್ಟ್ರ ವಿಧಾನಸಭೆಯಲ್ಲಿ ಅಧಿಕಾರ ಗದ್ದುಗೆಗೇರಲು 145 ಮ್ಯಾಜಿಕ್ ನಂಬರ್ ಆಗಿದ್ದು, ಬಿಜೆಪಿ 132 ಸ್ಥಾನಗಳೊಂದಿಗೆ ಭರ್ಜರಿ ಗೆಲುವು ಸಾಧಿಸಿದೆ. ಅಲ್ಲದೇ ಬಿಜೆಪಿ ನೇತೃತ್ವದ ಮಹಾಯುತಿ ಮೈತ್ರಿಕೂಟ 236 ಸ್ಥಾನಗಳಲ್ಲಿ ಗೆಲುವು ಪಡೆದಿದೆ. ದೇವೇಂದ್ರ ಫಡ್ನವೀಸ್ ನೇತೃತ್ವದಲ್ಲಿ ಬಿಜೆಪಿ ಏಕನಾಥ್ ಶಿಂಧೆ ನೇತೃತ್ವದಲ್ಲಿ ಶಿವಸೇನೆ, ಅಜಿತ್ ಪವಾರ್ ನೇತೃತ್ವದಲ್ಲಿ ಎನ್‌ಸಿಪಿ ಉತ್ತಮ ಸಾಧನೆಗೈದಿದೆ. ಕಾಂಗ್ರೆಸ್ ನೇತೃತ್ವದ ಮಹಾವಿಕಾಸ್ ಅಘಾಡಿ ಮೈತ್ರಿಕೂಟವು 49 ಸ್ಥಾನ ಪಡೆದಿದ್ದರೆ, ನಾಲ್ವರು ಇತರರು ಗೆದ್ದಿದ್ದಾರೆ. ಮಹಾ ರಾಷ್ಟ್ರದಲ್ಲಿ ಬಿಜೆಪಿ 132 ಕ್ಷೇತ್ರಗಳಲ್ಲಿ ಗೆಲುವು ಸಾಧಿಸಿದ್ದರೆ, ಶಿವಸೇನಾ 57, ಎನ್‌ಸಿಪಿ 41, ಶಿವಸೇನಾ(ಉದ್ಧವ್ ಠಾಕ್ರೆ) 20, ಕಾಂಗ್ರೆಸ್ 16, ಶರತ್ ಪವಾರ್ ನೇತೃತ್ವದ ಎನ್‌ಸಿಪಿ 10, ಸಮಾಜವಾದಿ ಪಾರ್ಟಿ 2, ಜೆನ್ ಸ್ವರಾಜ್ ಶಕ್ತಿ 2, ರಾಷ್ಟ್ರೀಯ ಯುವ ಸ್ವಾಭಿಮಾನ್ ಪಾರ್ಟಿ, ರಾಷ್ಟ್ರೀಯ ಸಮಾಜ ಪಕ್ಷ ಎಐಎಂಐಎಂ, ಸಿಪಿಐ(ಎಂ), ಪಿಎನ್‌ಪಿಐ, ಆರ್‌ಎವಿಎ ಪಕ್ಷಗಳು ತಲಾ ● 6ನೇ ಪುಟಕ್ಕೆ

ಮಹಾರಾಷ್ಟ್ರ ಗೆಲುವು ‘ಏಕ್ ಹೈ ತೋ ಸೇಫ್ ಹೈ’ ಸಂದೇಶ ನೀಡಿದೆ


● ಪ್ರಧಾನಿ ಮೋದಿ ವಿಜಯದ ಭಾಷಣ ● ಜಾರ್ಖಂಡ್ ಅಭಿವೃದ್ಧಿಗೆ ಸಹಕಾರ ಭರವಸೆ



ನವದೆಹಲಿ: ಮಹಾರಾಷ್ಟ್ರದ ಗೆಲುವು ‘ಒಂದಾಗಿದ್ದರೆ ಸುರಕ್ಷಿತವಾಗಿರುತ್ತೀವಿ’ (ಏಕ್ ಹೈ ತೋ ಸೇಫ್ ಹೈ) ಸಂದೇಶ ನೀಡಿದೆ ಎಂದು ಪ್ರಧಾನಿ ನರೇಂದ್ರ ಮೋದಿ ಹೇಳಿದ್ದಾರೆ.

ಮಹಾರಾಷ್ಟ್ರ ವಿಧಾನಸಭಾ ಚುನಾವಣೆಯಲ್ಲಿ ಭಾರತೀಯ ಜನತಾ ಪಕ್ಷ ನೇತೃತ್ವದ ಮಹಾಯುತಿಯು ಅಭೂತಪೂರ್ವ ವಿಜಯ ದಾಖಲಿಸಿದ ಹಿನ್ನೆಲೆಯಲ್ಲಿ ನವದೆಹಲಿಯ ಬಿಜೆಪಿ ಪ್ರಧಾನ ಕಚೇರಿಯಲ್ಲಿ ವಿಜಯೋತ್ಸವ ಭಾಷಣ ಮಾಡಿದ ಪ್ರಧಾನಿ ಮೋದಿ, ಈ ಫಲಿತಾಂಶವನ್ನು ಚುನಾವಣೆ ವೇಳೆ ತಾವು ಪಠಿಸಿದ್ದ ಒಗ್ಗಟ್ಟಿನ ಮಂತ್ರದೊಂದಿಗೆ ವಿಶ್ಲೇಷಿಸಿದ್ದಾರೆ. ● 6ನೇ ಪುಟಕ್ಕೆ

ಇದು ಸಿದ್ದರಾಮಯ್ಯ ಸರ್ಕಾರಕ್ಕೆ ಜನ ಕೊಟ್ಟ ತೀರ್ಪಲ್ಲ


ಎ.ಹೆಚ್.ವಿಶ್ವನಾಥ್

ಮೈಸೂರು, ನ.23(ಆರ್‌ಕೆ)– ಮುಖ್ಯಮಂತ್ರಿ ಸಿದ್ದರಾಮಯ್ಯ ಆಡಳಿತಕ್ಕೆ ಜನಕೊಟ್ಟ ತೀರ್ಪು ಇದಲ್ಲ. ಈ ತೀರ್ಪಿನಿಂದ ಹಗರಣಗಳು ಮುಚ್ಚಿ ಹೋಗುವುದಿಲ್ಲ ಎಂದು ವಿಧಾನಪರಿಷತ್ ಸದಸ್ಯ ಎ.ಹೆಚ್. ವಿಶ್ವನಾಥ್ ಇಂದಿಲ್ಲಿ ತಿಳಿಸಿದ್ದಾರೆ.

ರಾಜ್ಯದ ಚನ್ನಪಟ್ಟಣ, ಶಿಗ್ಗಾಂವಿ, ಸಂಡೂರು ಮೂರು ಕ್ಷೇತ್ರಗಳ ಉಪ ಚುನಾವಣೆಯ ಫಲಿತಾಂಶ ಹೊರಬರುತ್ತಿದ್ದಂತೆಯೇ ಪ್ರತಿಕ್ರಿಯೆ ನೀಡಿರುವ ಅವರು, ಇದು ಸಿದ್ದರಾಮಯ್ಯ ಸರ್ಕಾರಕ್ಕೆ ಜನ ಕೊಟ್ಟ ತೀರ್ಪಲ್ಲ. ಹಾಗಾಗಿ ಗೆದ್ದವರು ಬೀಗುವ ಅವಶ್ಯಕತೆಯೂ ಇಲ್ಲ. ಹಣ, ಅಧಿಕಾರ, ಶಿಫಾರಸುಗಳ ಮೇಲೆ ಈ ಚುನಾವಣೆ ನಡೆದಿದೆ. ಮುಡಾ ಹಗರಣ, ಮೈಸೂರು ವ್ಯಾಪ್ತಿಯದ್ದಾಗಿದ್ದು, ಅದು ಚನ್ನಪಟ್ಟಣ ಚುನಾವಣೆಯಲ್ಲಿ ಪ್ರಭಾವ ಬೀರಲಿತ್ತು ಎಂದು ಹೇಳುವಂತಿಲ್ಲ. ಉಪ ಚುನಾವಣೆಗಳು ಯಾವ ರೀತಿ ನಡೆಯುತ್ತವೆ ಎಂಬುದು ಎಲ್ಲರಿಗೂ ಗೊತ್ತಿದೆ. ಹಗರಣಗಳ ಆರೋಪ ಹೊತ್ತವರು ಉಪ ಚುನಾವಣೆಗಳ ತೀರ್ಪಿನಿಂದ ಖುಷಿ ಪಡುವ ಅಗತ್ಯವಿಲ್ಲ. ಚನ್ನಪಟ್ಟಣದಲ್ಲಿ ನಿಖಿಲ್ ಕುಮಾರಸ್ವಾಮಿ ಸೋತಿದ್ದಾರೆ ಅಷ್ಟೆ ಎಂದರು.

ಪ್ರಜಾತಂತ್ರ ವ್ಯವಸ್ಥೆಯಲ್ಲಿ ಇದೆಲ್ಲ ಸರ್ವೇ ಸಾಮಾನ್ಯ. ಯಾವುದೇ ಸರ್ಕಾರ ಅಧಿಕಾರದಲ್ಲಿದ್ದಾಗ ನಡೆಯುವ ಉಪಚುನಾವಣೆಗಳು ವಿಭಿನ್ನವಾಗಿರುತ್ತವೆ. ಗೆದ್ದ ತಕ್ಷಣ ತಮ್ಮ ಸರ್ಕಾರ ಸುಭದ್ರ–ಸುಭಿಕ್ಷವಾಗಿದೆ ಅಥವಾ ಜನರು ನಮ್ಮ ಪರ ಇದ್ದಾರೆ ಎಂದುಕೊಳ್ಳುವುದು ಸರಿಯಲ್ಲ. ಬಿಜೆಪಿ, ಜೆಡಿಎಸ್‌ನವರು ಒಟ್ಟಾಗಿ ಕೆಲಸ ಮಾಡಿದ್ದರು. ಆದರೆ ಅದು ಫಲ ಕೊಡಲಿಲ್ಲ. ಬಿಜೆಪಿಯಲ್ಲಿ ನಾಲ್ಕೈದು ಗುಂಪು ಇರುವುದು ಸತ್ಯ. ಬಿಜೆಪಿಯವರಿಗೆ ಜನರು ಮತ್ತೆ ಮತ್ತೆ ಅವಕಾಶ ಕೊಟ್ಟಿದ್ದಾರೆ. ಆದರೆ ಇಂದಿನ ತೀರ್ಪಿನಿಂದ ತಪ್ಪು ತಿದ್ದಿಕೊಳ್ಳುವ ಅವಕಾಶ ಇದೆ. ಮುಂದೆ ಈಗಾಗದಂತೆ ಪಕ್ಷದ ಹಿರಿಯ ನಾಯಕರು ಕೆಲಸ ನಿರ್ವಹಿಸಬೇಕಾಗಿದೆ ಎಂದು ವಿಶ್ವನಾಥ್ ಸಲಹೆ ನೀಡಿದರು.

ಅಕ್ರಮವಾಗಿ ಬದಲಿ ನಿವೇಶನಗಳ ಹಂಚಿಕೆ ಪ್ರಕರಣ

ಮುಡಾದ ನಾಲ್ಕು ಪ್ರಮುಖ ಬಡಾವಣೆಗಳ ಅನುಮೋದಿತ ನಕ್ಷೆಯಲ್ಲಿ ಸರ್ವೆ ನಂಬರ್ ನಾಪತ್ತೆ

ಮುಡಾ ಅಧಿಕಾರಿಗಳಿಂದ ದೇಸಾಯಿ ಆಯೋಗಕ್ಕೆ ಮಾಹಿತಿ ನೀಡಲು ತಯಾರಿ



ಮೈಸೂರು, ನ.23(ಆರ್‌ಕೆ)– ಮೈಸೂರು ನಗರಾಭಿವೃದ್ಧಿ ಪ್ರಾಧಿಕಾರ (ಮುಡಾ)ದಿಂದ ಅಭಿವೃದ್ಧಿಗೊಂಡಿರುವ ನಾಲ್ಕು ಪ್ರಮುಖ ಬಡಾವಣೆಗಳ ಅನುಮೋದಿತ ನಕ್ಷೆಯಲ್ಲಿ ಭೂಮಿಯ ಸರ್ವೆ ನಂಬರ್‌ಗಳನ್ನೇ ನಮೂದಿಸದಿರುವ ಬಗ್ಗೆ ತೀವ್ರ ಆಕ್ಷೇಪ ವ್ಯಕ್ತಪಡಿಸಿದ್ದ ನ್ಯಾಯಮೂರ್ತಿ ಪಿ.ಎನ್. ದೇಸಾಯಿ ಆಯೋಗಕ್ಕೆ ದಾಖಲೆಗಳ ಮಾಹಿತಿ ನೀಡಲು ಅಧಿಕಾರಿಗಳು ತರಾತುರಿಯಲ್ಲಿ ಸಿದ್ಧತೆ ನಡೆಸಿದ್ದಾರೆ.

ಶೇ.50:50ರ ಅನುಪಾತ, ಪ್ರೋತ್ಸಾಹದಾಯಕ ಹಾಗೂ ಬದಲಿ ನಿವೇಶನಗಳ ಹಂಚಿಕೆ ಹಗರಣ ಸಂಬಂಧ ತನಿಖೆ ನಡೆಸುತ್ತಿರುವ ಹೈಕೋರ್ಟ್ ನಿವೃತ್ತ ನ್ಯಾಯಾಧೀಶ ಪಿ.ಎನ್. ದೇಸಾಯಿ ನೇತೃತ್ವದ ಏಕಸದಸ್ಯ ಆಯೋಗವು ಇತ್ತೀಚೆಗಷ್ಟೇ ಮೈಸೂರಿಗೆ ಭೇಟಿ ನೀಡಿ ಮುಡಾ ಕಚೇರಿಯಲ್ಲಿ ಕಡತಗಳ ಪರಿಶೀಲನೆ ನಡೆಸಿದಾಗ 4 ಪ್ರತಿಷ್ಠಿತ ಬಡಾವಣೆಗಳ ಅನುಮೋದಿತ ನಕ್ಷೆ (Approved Layout Plan)ಯಲ್ಲಿ ಸರ್ವೆ ನಂಬರ್‌ಗಳನ್ನೇ ನಮೂದಿಸದಿರುವುದು ಕಂಡುಬಂದಿತ್ತು. ರವೀಂದ್ರನಾಥ ಠಾಗೋರ್‌ನಗರ, ಲಲಿತಾದ್ರಿನಗರ ಉತ್ತರ, ದಕ್ಷಿಣ ಹಾಗೂ ನಾಚನಹಳ್ಳಿ ಪಾಳ್ಯ ಬಡಾವಣೆಗಳ ನಕ್ಷೆ ಅನುಮೋದಿಸುವಾಗ ಆ ಭೂಮಿಯ ಸರ್ವೆ ನಂಬರ್ ನಮೂದಿಸದಿರುವುದು ಪತ್ತೆಯಾದ ಕಾರಣ, ಇಡೀ ದಿನ ಅಧಿಕಾರಿಗಳನ್ನು ತರಾಟೆಗೆ ತೆಗೆದುಕೊಂಡ ದೇಸಾಯಿ ಅವರು, ಈ ಸಂಬಂಧ ಸಂಪೂರ್ಣ ಮಾಹಿತಿಯನ್ನು ದಾಖಲೆಗಳ ಸಮೇತ ಬೆಂಗಳೂರಿನ ಕುಮಾರಕೃಪ ಕಚೇರಿಗೆ ತಲುಪಿಸುವಂತೆ ಸೂಚಿಸಿದ್ದರು.

ಈ ನಾಲ್ಕೂ ಬಡಾವಣೆಗಳಿಗೆ ಸಂಬಂಧಪಟ್ಟಂತೆ ಹಲವು ಬದಲಿ ನಿವೇಶನಗಳನ್ನು ಮಂಜೂರು ಮಾಡಿರುವ ಕಾರಣ ಅಲ್ಲಿನ ಬಡಾವಣೆಗಳ ಅನುಮೋದಿತ ನಕ್ಷೆಗಳ ಬಗ್ಗೆ ತನಿಖಾ ಆಯೋಗದ ಮುಖ್ಯಸ್ಥರು ಹೆಚ್ಚು ಕೇಂದ್ರೀಕರಿಸಿರುವುದು ಇಲ್ಲಿ ಗಮನಾರ್ಹ. ಮುಡಾ ನಿವೇಶನಗಳ ಹಂಚಿಕೆ ಹಗರಣದಲ್ಲಿ ಬಹುಪಾಲು 'ಬದಲಿ'ಯಾಗಿ ಮಂಜೂರು ಮಾಡಲಾಗಿರುವುದು ಪತ್ತೆಯಾಗಿದ್ದು, ಸರ್ವೆ ನಂಬರ್‌ಗಳನ್ನೇ ನಮೂದಿಸದಿರುವ ಅನುಮೋದಿತ ನಕ್ಷೆಗಳ ಬಗ್ಗೆ ದೇಸಾಯಿ ಅವರಿಗೆ ಸಂಶಯ ಮೂಡಿದೆ. ಈ ಕಾರಣದಿಂದಲೇ ದೇಸಾಯಿ ಅವರು ಮೈಸೂರಿಗೆ ಬಂದು ಖುದ್ದು ಪರಿಶೀಲನೆ ನಡೆಸಿದ್ದರು.

ಬದಲಿ ನಿವೇಶನಗಳ ಹಂಚಿಕೆಯಲ್ಲೂ ಬ್ರಹ್ಮಾಂಡ ಭ್ರಷ್ಟಾಚಾರ ನಡೆದಿದ್ದು, 220 ಎಕರೆ ಪ್ರದೇಶದಲ್ಲಿ ಮುಡಾ ಅಭಿವೃದ್ಧಿಪಡಿಸಿರುವ ಆರ್.ಟಿ.ನಗರ ಬಡಾವಣೆಯ ಮಧ್ಯೆ ಸುಮಾರು 50 ಎಕರೆಯಷ್ಟು ವಿವಿಧ ಸರ್ವೆ ನಂಬರ್‌ಗಳ ಭೂಮಿಯನ್ನು ಪ್ರಭಾವಿ ವ್ಯಕ್ತಿಗಳು ಸ್ವಾಧೀನದಿಂದ ಕೈಬಿಡಿಸಿಕೊಂಡಿರುವುದರಿಂದ ಆರ್.ಟಿ.ನಗರ ಬಡಾವಣೆಗೆ ಒದಗಿಸಿರುವ ರಸ್ತೆ, ಚರಂಡಿ, ನೀರು, ವಿದ್ಯುತ್ ಮುಂತಾದ ಸೌಲಭ್ಯಗಳನ್ನು ಖಾಸಗಿಯವರು ಉಚಿತವಾಗಿ ಬಳಸಿಕೊಳ್ಳುವಂತಾಗಿದೆ ಎಂಬುದರ ಬಗ್ಗೆಯೂ ಆಯೋಗವು ತನಿಖೆ ನಡೆಸುತ್ತಿದೆ. 2007–08ರಲ್ಲಿ ಭೂಸ್ವಾಧೀನ ಪ್ರಕ್ರಿಯೆ ನಡೆದು, 2018–19ರಲ್ಲಿ ಆರ್.ಟಿ.ನಗರ, ಲಲಿತಾದ್ರಿನಗರ ಬಡಾವಣೆಯನ್ನು ರಚಿಸಲಾಗಿದೆ. ಆ ಅವಧಿಯಲ್ಲಿ ಭೂಸ್ವಾಧೀನದಿಂದ ಕೈಬಿಟ್ಟಿದ್ದು, ಖಾಸಗಿಯವರಿಗೆ ಹೆಚ್ಚು ಲಾಭವಾಗುವಂತೆ ಮಾಡಲಾಗಿದೆ ಎಂಬ ಗಂಭೀರ ಆರೋಪದ ಬಗ್ಗೆ ಆಯೋಗವು ತನಿಖೆ ನಡೆಸುತ್ತಿದೆ.

ಗಾಂಜಾ ಮಾರುತ್ತಿದ್ದ ವ್ಯಕ್ತಿ ಪೊಲೀಸ್ ವಶಕ್ಕೆ

ಮೈಸೂರು, ನ.23(ಎಸ್‌ಬಿಡಿ)– ಆಂಧ್ರಪ್ರದೇಶದಿಂದ ಗಾಂಜಾ ಖರೀದಿಸಿ ತಂದು ಮಾರಾಟ ಮಾಡುತ್ತಿದ್ದ ವ್ಯಕ್ತಿಯನ್ನು ಮೈಸೂರಿನ ನರಸಿಂಹರಾಜ ಠಾಣೆ ಪೊಲೀಸರು ವಶಕ್ಕೆ ಪಡೆದಿದ್ದಾರೆ. ಗೌಸಿಯಾನಗರದ ಮೊಹಮ್ಮದ್ ರಾಜಿಕ್(40)ನನ್ನು ವಶಕ್ಕೆ ಪಡೆದಿದ್ದು, ಆತ ಮಾರಾಟ ಮಾಡಲು ಕೊಂಡೊಯ್ಯುತ್ತಿದ್ದ ಸುಮಾರು 6 ಕೆಜಿ ಗಾಂಜಾ ಜಪ್ತಿ ಮಾಡಲಾಗಿದೆ. ನರಸಿಂಹರಾಜ ಠಾಣೆ ಸಬ್‌ಇನ್ಸ್‌ಪೆಕ್ಟರ್ ಎಸ್.ಕೆ.ಗಣೇಶ್, ಸಿಬ್ಬಂದಿ ಸಂಜಯ್ ಪವಾರ್, ಬಸವರಾಜು ಹಾಗೂ ರತನ್‌ಕುಮಾರ್ ಅವರೊಂದಿಗೆ ಶುಕ್ರವಾರ ಕೆಸರೆ–ನಾಯ್ಡುನಗರ ರಸ್ತೆಯಲ್ಲಿ ಗಸ್ತಿನಲ್ಲಿದ್ದಾಗ ಪಾದಚಾರಿಯೊಬ್ಬ ಪೊಲೀಸ್ ವಾಹನ ನೋಡಿ ಗಾಬರಿಗೊಂಡು ಕೈಯ್ಯಲ್ಲಿದ್ದ ಪ್ಲಾಸ್ಟಿಕ್ ಚೀಲವನ್ನು ರಸ್ತೆ ಬದಿ ಬಿಸಾಡಿ ಓಡಲಾರಂಭಿಸಿದ. ಪೊಲೀಸರು ಆತನನ್ನು ಬೆನ್ನತ್ತಿ ಹಿಡಿದು ವಿಚಾರಣೆಗೆ ಒಳಪಡಿಸಿದಾಗ ಆಂಧ್ರಪ್ರದೇಶದ ಹಳ್ಳಿಯೊಂದರಲ್ಲಿ ಗಾಂಜಾ ಖರೀದಿಸಿ ತಂದು ನಿರ್ಜನ ಪ್ರದೇಶದಲ್ಲಿ ಮಾರಾಟ ಮಾಡಲು ತೆರಳುತ್ತಿದ್ದನೆಂದು ತಿಳಿಸಿದ್ದಾನೆ. ಈ ಸಂಬಂಧ ಎಸ್‌ಐ ದೂರಿನನ್ವಯ ನರಸಿಂಹರಾಜ ಠಾಣೆ ಇನ್ಸ್‌ಪೆಕ್ಟರ್ ಲಕ್ಷ್ಮಿಕಾಂತ ತಳವಾರ್ ಪ್ರಕರಣ ದಾಖಲಿಸಿಕೊಂಡು ಮುಂದಿನ ಕ್ರಮ ಕೈಗೊಂಡಿದ್ದಾರೆ.

ಸೈಬರ್ ದೋಖಾ: ಲಾಭದ ಆಸೆ ಬಿದ್ದ ಗೃಹಿಣಿಯರಿಬ್ಬರಿಗೆ ಲಕ್ಷಾಂತರ ರೂ. ವಂಚನೆ

ಮೈಸೂರು, ನ.23(ಎಸ್‌ಬಿಡಿ)– ಸೈಬರ್ ವಂಚಕರು ವರಸೆ ಬದಲಿಸಿದ್ದು, ಗೃಹಿಣಿಯರಿಗೆ ಲಾಭದ ಆಸೆ ತೋರಿಸಿ ಲಕ್ಷಾಂತರ ರೂ. ದೋಚಲಾರಂಭಿಸಿದ್ದಾರೆ.

ಅಪರಿಚಿತ ವಂಚಕರ ಮಾತಿಗೆ ಮರುಳಾಗಿ ಅಧಿಕ ಲಾಭದಾಸೆಯಿಂದ ಲಕ್ಷಾಂತರ ರೂ. ಹಣ ಕಳೆದುಕೊಂಡಿರುವ ಮೈಸೂರಿನ ಇಬ್ಬರು ಗೃಹಿಣಿಯರು ಸೆನ್ ಪೊಲೀಸ್ ಠಾಣೆಯಲ್ಲಿ ಪ್ರತ್ಯೇಕ ದೂರು ದಾಖಲಿಸಿದ್ದಾರೆ.

ಪ್ರಕರಣ 1– ರಾಜೀವ್‌ನಗರದ 28 ವರ್ಷದ ಗೃಹಿಣಿಗೆ ಟೆಲಿಗ್ರಾಂನಲ್ಲಿ ಪ್ರಶಾಂತ್ ಹೆಸರಿನಲ್ಲಿ ಪರಿಚಯವಾದ ವ್ಯಕ್ತಿ, ಕಂಪನಿಯೊಂದರ ಬಗ್ಗೆ ತಿಳಿಸಿ, ಇಲ್ಲಿಗೆ ಹಣ ಹೂಡಿಕೆ ಮಾಡಿದರೆ ಭಾರೀ ಲಾಭ ಮಾಡಿಕೊಡುವುದಾಗಿ ನಂಬಿಸಿದ್ದಾನೆ. ಆತನ ಮಾತು ನಂಬಿದ ಗೃಹಿಣಿ ತಮ್ಮ ಪತಿಯ ಖಾತೆಯಿಂದ 1.50 ಲಕ್ಷ ರೂ. ಹಣ ಹೂಡಿದ್ದಾರೆ. ಒಂದೆರಡು ತಿಂಗಳಲ್ಲಿ ಅದು 3.30 ಲಕ್ಷ ಆಗಿರುವುದಾಗಿ ವ್ಯಾಲೆಟ್‌ನಲ್ಲಿ ತೋರಿಸಿದೆ. ಆ ಹಣವನ್ನು ವಿತ್‌ಡ್ರಾ ಮಾಡಲು ಮುಂದಾದಾಗ 5.50 ಲಕ್ಷ ಪಾವತಿಸಿದರೆ ಎಲ್ಲವನ್ನೂ ಒಟ್ಟಿಗೆ ಪಡೆಯಬಹುದು ಎಂದು ಸೂಚಿಸಿದ್ದರಿಂದ ಅವರು ಹಾಗೆಯೇ ಮಾಡಿದ್ದಾರೆ. ಹೀಗೆ ಹಂತ ಹಂತವಾಗಿ ಒಟ್ಟು 30.78 ಲಕ್ಷ ರೂ. ಹೂಡಿಕೆ ಮಾಡಿದ ಬಳಿಕ ಮೋಸ ಹೋಗಿರುವುದು ಗೊತ್ತಾಗಿದೆ.

ಪ್ರಕರಣ ಕಾವೇರಿ ಬಡಾವಣೆಯ 33 ವರ್ಷದ ಗೃಹಿಣಿಯೊಬ್ಬರಿಗೆ ಪರಿಚಿತನಾದ ಪ್ರಭು ಎಂಬಾತ ಕ್ರಿಪ್ಟೋ ಲಾಂಚರ್‌ನಲ್ಲಿ ಹೂಡಿಕೆ ಮಾಡಿದರೆ 20–25 ಪರ್ಸೆಂಟ್ ಲಾಭ ಬರುತ್ತದೆ ಎಂದು ನಂಬಿಸಿ, ಹಂತ ಹಂತವಾಗಿ 29 ಲಕ್ಷ ರೂ. ಹೂಡಿಕೆ ಮಾಡಿಸಿದ್ದಾನೆ. ಎರಡು ತಿಂಗಳಿಗೆ ಲಾಭ ಸೇರಿ 9.07 ಲಕ್ಷ ಹಣವನ್ನು ಗೃಹಿಣಿಗೆ ವಾಪಸ್ ನೀಡಲಾಗಿದೆ. ನಂತರ ಯಾರೂ ಸಂಪರ್ಕಕ್ಕೆ ಸಿಗದಂತಾಗಿದ್ದಾರೆ.

ರಾಜ್ಯ ಮಹಿಳಾ ಆಯೋಗದ ಅಧ್ಯಕ್ಷರ ಸೂಚನೆಯಂತೆ

ಮೈಸೂರು ಗ್ರಾಮಾಂತರ ಬಸ್ ನಿಲ್ದಾಣದ ಬೇಬಿ ಫೀಡಿಂಗ್, ಮಹಿಳಾ ನಿರೀಕ್ಷಣಾ ಕೊಠಡಿಯಲ್ಲಿ ಸುರಕ್ಷತಾ ಕ್ರಮ



ಮಹಿಳೆಯರ ವಿಶ್ರಾಂತಿ ಕೊಠಡಿ



ವಿಕಲಚೇತನರ ಶೌಚಾಲಯ


ತೃತೀಯ ಲಿಂಗಿಗಳ ಶೌಚಾಲಯ.

ಮೈಸೂರು, ನ.23(ಆರ್‌ಕೆ)– ಮೈಸೂರಿನ ಹೃದಯ ಭಾಗದಲ್ಲಿರುವ ಕೆಎಸ್‌ಆರ್‌ಟಿಸಿ ಗ್ರಾಮಾಂತರ (ಸಬ್‌ಅರ್ಬನ್) ಬಸ್ ನಿಲ್ದಾಣದಲ್ಲಿನ ಮಹಿಳಾ ನಿರೀಕ್ಷಣಾ, ಬೇಬಿ ಫೀಡಿಂಗ್, ಮಂಗಳಮುಖಿಯರ ಕೊಠಡಿಗಳಲ್ಲಿ ಸುರಕ್ಷತಾ ಕ್ರಮ ಕೈಗೊಳ್ಳಲಾಗಿದೆ. ಅವುಗಳಿಗೆ ಬಾಗಿಲು ಅಳವಡಿಸಿ, ಅಲ್ಲಿನ ಓವರ್‌ಹೆಡ್ ಟ್ಯಾಂಕ್ ಸ್ವಚ್ಛಗೊಳಿಸಿ ಶುದ್ಧ ನೀರು ಪೂರೈಸುವಂತೆ ಕ್ರಮ ಕೈಗೊಂಡಿದ್ದಾರೆ. ಹಾಗೆಯೇ ಶೌಚಾಲಯಗಳಲ್ಲಿ ಸ್ವಚ್ಛತಾ ವ್ಯವಸ್ಥೆ ಮಾಡಲಾಗಿದೆ.

ಇತ್ತೀಚೆಗೆ ಕರ್ನಾಟಕ ರಾಜ್ಯ ಮಹಿಳಾ ಆಯೋಗದ ಅಧ್ಯಕ್ಷೆ ಡಾ.ನಾಗಲಕ್ಷ್ಮಿ ಚೌಧರಿ ಅವರು ಗ್ರಾಮಾಂತರ ಬಸ್ ನಿಲ್ದಾಣಕ್ಕೆ ಹಠಾತ್ ಭೇಟಿ ನೀಡಿ ಪರಿಶೀಲಿಸಿದ ವೇಳೆ ಅಲ್ಲಿನ ಮಹಿಳಾ ಪ್ರಯಾಣಿಕರ ನಿರೀಕ್ಷಣಾ ಕೊಠಡಿಯ ಬಾಗಿಲು ಮುರಿದು ಹೋಗಿತ್ತು. ಮಹಿಳೆಯರಿಗೆ ಸುರಕ್ಷತೆ ಇರಲಿಲ್ಲ. ಬಹಳ ದಿನಗಳಿಂದ ಈ ಕೊಠಡಿಗಳಿಗೆ ಬಾಗಿಲುಗಳೇ ಇಲ್ಲದೆ ಮಹಿಳೆಯರು ತೀವ್ರ ಮುಜುಗರಕ್ಕೀಡಾಗಿದ್ದರೂ ಕೆಎಸ್‌ಆರ್‌ಟಿಸಿ ಅಧಿಕಾರಿಗಳು ಅತ್ತ ಗಮನವನ್ನೇ ಹರಿಸಿಲ್ಲ ಎಂದು ಪ್ರಯಾಣಿಕರು ದೂರಿದ್ದರು. ಜೊತೆಗೆ ನಿಲ್ದಾಣದಲ್ಲಿನ ಶಿಶುಗಳಿಗೆ ಹಾಲುಣಿಸುವ (ಬೇಬಿ ಫೀಡಿಂಗ್) ಕೊಠಡಿಗೂ ಬಾಗಿಲಿರಲಿಲ್ಲ. ಪರಿಣಾಮ ತಾಯಂದಿರು ತಮ್ಮ ಕಂದಮ್ಮಗಳಿಗೆ ಹಾಲುಣಿಸುವಾಗ ತೀವ್ರ ಸಮಸ್ಯೆಗೀಡಾಗಿದ್ದರು. ಇದನ್ನು ಖುದ್ದು ಪರಿಶೀಲಿಸಿದ ನಾಗಲಕ್ಷ್ಮಿ, ಕೆಎಸ್‌ಆರ್‌ಟಿಸಿ ಅಧಿಕಾರಿಗಳನ್ನು ತರಾಟೆಗೆ ತೆಗೆದುಕೊಂಡು, ಇದು ಮಾನವ ಹಕ್ಕುಗಳ ಸ್ಪಷ್ಟ ಉಲ್ಲಂಘನೆ. ತಕ್ಷಣ ಬೇಬಿ ಫೀಡಿಂಗ್ ಕೊಠಡಿಗೆ ಬಾಗಿಲು ಅಳವಡಿಸಿ, ಕೈಗೊಂಡ ಕ್ರಮದ ಬಗ್ಗೆ ತಮಗೆ ಫೋಟೋ ಸಮೇತ ವರದಿ ನೀಡುವಂತೆ ಸೂಚನೆ ನೀಡಿದ್ದರು.

ಅಲ್ಲದೆ, ಮಂಗಳಮುಖಿಯರು, ಅಂಗವಿಕಲರಿಗಾಗಿ ಇರುವ ಶೌಚಾಲಯಕ್ಕೂ ಬಾಗಿಲಿರಲಿಲ್ಲ. ಸಾಮಾನ್ಯ ಮಹಿಳಾ ಮತ್ತು ಪುರುಷರ ಶೌಚಾಲಯಗಳ ಸ್ವಚ್ಛತೆ ಕಾಯ್ದುಕೊಳ್ಳದ ಕಾರಣ ಗಬ್ಬು ನಾರುತ್ತಿದ್ದುದು ಕಂಡು ಬಂದಿತ್ತು. ಬಸ್ ನಿಲ್ದಾಣದ ಕುಡಿಯುವ ನೀರಿನ ಓವರ್ ಹೆಡ್ ಟ್ಯಾಂಕ್ ಸರಿಯಾದ ನಿರ್ವಹಣೆ ಇಲ್ಲದೆ ಪ್ರಯಾಣಿಕರಿಗೆ ಕುಡಿಯಲು ಸ್ವಚ್ಛ ನೀರು ಲಭ್ಯವಿಲ್ಲ ಎಂಬ ದೂರುಗಳು ಸಹ ಕೇಳಿ ಬಂದ ಹಿನ್ನೆಲೆಯಲ್ಲಿ ಕೆಎಸ್‌ಆರ್‌ಟಿಸಿ ಅಧಿಕಾರಿಗಳೊಂದಿಗೆ ಸಭೆ ನಡೆಸಿದ ಆಯೋಗದ ಅಧ್ಯಕ್ಷರು, ತಕ್ಷಣವೇ ಆದ್ಯತೆ ಮೇರೆಗೆ ಮಹಿಳೆಯರ ನಿರೀಕ್ಷಣಾ ಕೊಠಡಿ, ಬೇಬಿ ಫೀಡಿಂಗ್ ರೂಂ, ಮಂಗಳಮುಖಿಯರ ಶೌಚಾಲಯಗಳ ಸ್ವಚ್ಛಗೊಳಿಸಿ, ಸುರಕ್ಷತಾ ಕ್ರಮ ಹಾಗೂ ಓವರ್‌ಹೆಡ್ ಟ್ಯಾಂಕ್ ಸ್ವಚ್ಛಗೊಳಿಸಿ ಕುಡಿಯಲು ಸ್ವಚ್ಛ ನೀರು ಪೂರೈಸಬೇಕು ಎಂದು ತಾಕೀತು ಮಾಡಿದ್ದರು.

ಶುದ್ಧ ಕುಡಿಯುವ ನೀರಿಗೂ ವ್ಯವಸ್ಥೆ

ಬೆಂಗಳೂರನ್ನು ಹೊರತುಪಡಿಸಿದರೆ ಮೈಸೂರು ರಾಜ್ಯದ ವಿವಿಧ ಜಿಲ್ಲೆಗಳು ಮತ್ತು ನೆರೆಯ ಜಿಲ್ಲೆಗಳಿಗೆ ಸಂಪರ್ಕ ಕಲ್ಪಿಸುವ ಪ್ರಮುಖ ಕೇಂದ್ರವಾಗಿದೆ. ಇಲ್ಲಿಗೆ ದೇಶ–ವಿದೇಶಗಳಿಂದ ಪ್ರವಾಸಿಗರು ಬರುತ್ತಾರೆ. ದಿನನಿತ್ಯ ಸಾವಿರಾರು ಬಸ್‌ಗಳು ಕಾರ್ಯಾಚರಣೆ ಮಾಡಲಿದ್ದು, ಲಕ್ಷಾಂತರ ಮಂದಿ ಪ್ರಯಾಣಿಸುತ್ತಾರೆ. ಅದಕ್ಕನುಗುಣವಾಗಿ ಸ್ವಚ್ಛತೆ, ಕುಡಿಯುವ ನೀರು, ಶೌಚಾಲಯ, ಊಟ, ತಿಂಡಿಗಳ ಹೋಟೆಲ್‌ಗಳು, ವಿಶ್ರಾಂತಿ ಕೊಠಡಿ ಹೀಗೆ ನಾನಾ ಮೂಲಸೌಕರ್ಯ ಕಲ್ಪಿಸುವಂತೆಯೂ ಡಾ.ನಾಗಲಕ್ಷ್ಮಿ ಸೂಚನೆ ನೀಡಿದ್ದರು. ಅದರಂತೆ ಮರುದಿನವೇ ಎಲ್ಲಾ ಕುಂದು–ಕೊರತೆಗಳನ್ನು ರಾಜ್ಯ ರಸ್ತೆ ಸಾರಿಗೆ ಅಧಿಕಾರಿಗಳು ನಿವಾರಿಸಿ, ಮಹಿಳಾ ಆಯೋಗದ ಅಧ್ಯಕ್ಷರಿಗೆ ಫೋಟೋ ಸಮೇತ ವರದಿ ನೀಡಿದ್ದಾರೆ.

ಮೈಸೂರು ಹಾಗೂ ಸುತ್ತಮುತ್ತ ಇಂದು...



ಇಂದಿನ ಪಂಚಾಂಗ

24.11.2024 ಭಾನುವಾರ, ಮಳೆ ನಕ್ಷತ್ರ: ಅನೂರಾಧ, 19.11.2024 ರಿಂದ 01.12.2024 ಕ್ರೋಧಿನಾಮ ಸಂವತ್ಸರ, ದಕ್ಷಿಣಾಯನ, ಶರದ್ ಋತು, ಕಾರ್ತಿಕ ಮಾಸ, ಕೃಷ್ಣ ಪಕ್ಷ, ತಿಥಿ: ನವಮಿ, ನಕ್ಷತ್ರ: ಪುಬ್ಬ, ರಾಹುಕಾಲ: ಸಂಜೆ 4.30 ರಿಂದ 6ರವರೆಗೆ

■ **ಗೋಜೋ ರಿಯೋ ಕರಾಟೆ ಡು ಅಕಾಡೆಮಿ ಕರ್ನಾಟಕ :** ರಾಷ್ಟ್ರ ಮಟ್ಟದ ಮುಕ್ತ ಕರಾಟೆ ಚಾಂಪಿಯನ್‌ಶಿಪ್, ಉದ್ಘಾಟನೆ : ಎಸ್. ಪಾರ್ತಿಬಾನ್, ಮುಖ್ಯ ಅತಿಥಿಗಳು : ಧೀಜರ್ ಪವಾರ್, ಅಭಿಷೇಕ್ ಎಸ್. ಚಾವರೆ, ಭಾಸ್ಕರ್ ನಾಯಕ್, ಎನ್. ಶಂಕರ, ಎಸ್. ದೀಪಕ್ ಕುಮಾರ್, ಕಶ್ಯಪ್ ಬ್ರಹ್ಮ, ಯಾಂಗಯ್ಯ ತೋಕಲಾ, ಸೋಸಲೆ ಸಿದ್ದರಾಜು, ಸ್ಥಳ: ಚಾಮುಂಡಿ ವಿಹಾರ ಕ್ರೀಡಾಂಗಣ, ಬೆಳಗ್ಗೆ 9ಕ್ಕೆ.

■ **ನವ ಕರ್ನಾಟಕ ಪಬ್ಲಿಕೇಷನ್ ಪ್ರೈವೇಟ್ ಲಿಮಿಟೆಡ್:** ಕನ್ನಡ ರಾಜ್ಯೋತ್ಸವ, ವಿಶೇಷ ರಿಯಾಯಿತಿ ಪುಸ್ತಕ ಮಾರಾಟ, ಸ್ಥಳ: ಚಾಮರಾಜ ಜೋಡಿ ರಸ್ತೆ, ರಾಮಸ್ವಾಮಿ ಸರ್ಕಲ್ ಬೆಳಗ್ಗೆ 9.30ರಿಂದ.

■ **ವಸುಂಧರ ಪ್ರದರ್ಶಕ ಕಲೆಗಳ ಕೇಂದ್ರ, ಮೈಸೂರು:** ವಸುಂಧರೋತ್ಸವ–2024, ಮೈಸೂರು ಕಲಾ ದಿವಸ್, ಪ್ರತಿಭಾನ್ವಿತ 550ಕ್ಕೂ ಹೆಚ್ಚು ನೃತ್ಯ ಕಲಾವಿದರಿಂದ ಸಮೂಹ ನೃತ್ಯ ಪ್ರದರ್ಶನ (ಡಾ. ವಸುಂಧರಾ ದೊರೆಸ್ವಾಮಿಯವರ ಶಿಷ್ಯರು ಹಾಗೂ ಕರ್ನಾಟಕದ ಇತರ ಪ್ರಖ್ಯಾತ ನೃತ್ಯಗುರುಗಳ ಶಿಷ್ಯರಿಂದ), ನೃತ್ಯ ಸಂಯೋಜನೆ ಮತ್ತು ನಿರ್ದೇಶನ–ಡಾ.ವಸುಂಧರಾ ದೊರೆಸ್ವಾಮಿ, ಸಾನ್ನಿಧ್ಯ: ಸುತ್ತೂರು ಶ್ರೀ ಶಿವರಾತ್ರಿ ದೇಶಿಕೇಂದ್ರ ಸ್ವಾಮೀಜಿ, ಶ್ರೀ ಗಣಪತಿ ಸಚ್ಚಿದಾನಂದ ಸ್ವಾಮೀಜಿ, ಶ್ರೀ ದತ್ತ ವಿಜಯಾನಂದ ತೀರ್ಥ ಸ್ವಾಮೀಜಿ, ಅತಿಥಿಗಳು : ಸಂಸದ ಯದುವೀರ ಕೃಷ್ಣದತ್ತ ಚಾಮರಾಜ ಒಡೆಯರ್, ಮುಖ್ಯ ಅತಿಥಿಗಳು: ಆಳ್ವಾಸ್ ವಿದ್ಯಾಸಂಸ್ಥೆ, ಮೂಡಬಿದಿರೆ, ಮಂಗಳೂರು, ಸಂಸ್ಥಾಪಕ ಡಾ. ಮೋಹನ್ ಆಳ್ವಾ, ಮಂಗಳೂರು ಗಣೇಶ್ ಬೀಡೀಸ್ ಮ್ಯಾನೇಜಿಂಗ್ ಪಾರ್ಟನರ್ ಡಾ.ಎಂ. ಜಗನ್ನಾಥ್ ಶೆಣೈ, ಆಶಯ ಭಾಷಣ : ಕೇಂದ್ರ ಸಂಗೀತ ನಾಟಕ ಅಕಾಡೆಮಿ ಅಧ್ಯಕ್ಷ ಶ್ರೀಮತಿ ಡಾ. ಸಂಧ್ಯಾ ಪುರೇಚಾ, ಸ್ಥಳ: ನಾದಮಂಟಪ, ಶ್ರೀ ಗಣಪತಿ ಸಚ್ಚಿದಾನಂದ ಆಶ್ರಮ, ನಂಜನಗೂಡು ರಸ್ತೆ, ಬೆಳಗ್ಗೆ 9.30ಕ್ಕೆ.

■ **ರಾಮ್‌ಸನ್ಸ್ ಪ್ರತಿಷ್ಠಾನ:** ಬೊಂಬೆ ಮನೆ ದಸರೆ ಬೊಂಬೆ ಪ್ರದರ್ಶನ 20ನೇ ಅವತರಣಿಕೆ, ಸ್ಥಳ: ರಾಮ್‌ಸನ್ಸ್ ಬೊಂಬೆ ಮನೆ, 91, ಆಮ್ರಪಾಲಿ ಸೀರೆ ಮಳಿಗೆ ಮೇಲೆ, ನಜರ್‌ಬಾದ್ ಮುಖ್ಯರಸ್ತೆ, ಬೆಳಗ್ಗೆ 10ರಿಂದ

■ **ಡಾ. ವಿಜಯಲಕ್ಷ್ಮಿ ಬಸವರಾಜ್ ಚಾರಿಟಬಲ್ ಸೊಸೈಟಿ :** ರಾಜ್ಯ ಮಟ್ಟದ ಅಂಧರ ಸಾಂಸ್ಕೃತಿಕ ಸ್ಪರ್ಧೆಗಳು, ಅಧ್ಯಕ್ಷತೆ : ಜಿಲ್ಲಾಧಿಕಾರಿ ಲಕ್ಷ್ಮೀಕಾಂತರೆಡ್ಡಿ, ಉದ್ಘಾಟನೆ : ಡಾ. ಶವಾಸ್ಲ ಇಕ್ಬಾಲ್, ಮುಖ್ಯ ಅತಿಥಿಗಳು: ಶ್ರೀಮತಿ ಪ್ರಮೋದಾದೇವಿ ಒಡೆಯರ್, ಶ್ರೀಮತಿ ಕೆ.ಎಂ. ಗಾಯತ್ರಿ, ಟಿ. ರಾಘವೇಂದ್ರ, ಬಿ. ಬಸವರಾಜು, ನಾಮದೇವ ಬಿಲ್ಕರ್, ಎಸ್.ಎನ್. ಸಂದೇಶ್‌ಕುಮಾರ್, ಶಂಕರಗೌಡ ಪಾಟೀಲ್, ಉದಯಶಂಕರ್ ಅರಸ್, ಡಿ. ಮೋಹನ್, ಸ್ಥಳ:ಅಂಧ ಮಕ್ಕಳ ಸರ್ಕಾರಿ ಪಾಠಶಾಲೆ ಆವರಣ, ತಿಲಕ್‌ನಗರ, ಬೆಳಗ್ಗೆ 10ಕ್ಕೆ.

■ **ಸುರುಚಿ ರಂಗಮನೆ, ಸಾಹಿತ್ಯ ಚಾವಡಿ :** ಸಾಹಿತ್ಯ ಚಾವಡಿ–ಸಂವಾದ – ಕಾರ್ಯಕ್ರಮ–151, ಎಚ್.ಎಲ್. ಓಂಶಿವಪ್ರಕಾಶ್ ಅವರಿಂದ ಡಿಜಿಟಲ್ ಕನ್ನಡಕ್ಕೆ ಡಿಜಿಟಲೀಕರಣದ ಮುನ್ನುಡಿ ಕುರಿತು ಭಾಷಣ ಮತ್ತು ಪ್ರಾತ್ಯಕ್ಷಿಕೆ, ಸ್ಥಳ: ಸ್ಥಳ: ಸುರುಚಿ ರಂಗಮನೆ, ಚಿತ್ರಭಾನು ರಸ್ತೆ, ಕುವೆಂಪುನಗರ, ಬೆಳಿಗ್ಗೆ 10.30 ರಿಂದ

■ **ಸಿದ್ಧಾರ್ಥ ಕ್ಷೇಮಾಭಿವೃದ್ಧಿ ಸಂಘ :** ವಾರ್ಷಿಕ ಸರ್ವ ಸದಸ್ಯರ ಸಭೆ, ಅಧ್ಯಕ್ಷತೆ : ಸಂಘದ ಅಧ್ಯಕ್ಷ ಡಾ. ಹಿರಿಯಣ್ಣ, ಸ್ಥಳ: ಸೌಹಾರ್ದ ಗೃಹ ನಿರ್ಮಾಣ ಸಹಕಾರ ಸಂಘದ ಕೊಠಡಿ ನಂ. 1621, 4ನೇ ಮೇನ್, ಇ ಅಂಡ್ ಎಫ್ ಬ್ಲಾಕ್, ಬೆಳಗ್ಗೆ 10.30ಕ್ಕೆ.

■ **ಅಖಿಲ ಭಾರತೀಯ ಸಾಹಿತ್ಯ ಪರಿಷದ್, ಮೈಸೂರು ಜಿಲ್ಲಾ ಸಮಿತಿ:** ವಾಲ್ಮೀಕಿ ಜಯಂತಿ ಪ್ರಯುಕ್ತ ವಿಶೇಷ ಸಾಹಿತ್ಯ ಕಾರ್ಯಕ್ರಮ, ಸಾಹಿತ್ಯ ಸಂವಾದ: ಮಂಕುತಿಮ್ಮನ ಕಗ್ಗದಲ್ಲಿ ಜೀವನ ಮೌಲ್ಯಗಳು ಕುರಿತು ತಿಮ್ಮಣ್ಣ ಭಟ್ ಅವರಿಂದ; ಜೀವನದಲ್ಲಿ ಹಾಸ್ಯದ ಮಹತ್ವ ಕುರಿತು ನರಸಿಂಹಮೂರ್ತಿ ಅವರಿಂದ; ಮಹರ್ಷಿ ವಾಲ್ಮೀಕಿ ಕುರಿತ ಉಪನ್ಯಾಸ ಬಿ.ಕೆ.ಜಗದೀಶ್ ಅವರಿಂದ, ನಾಲ್ಕು ಪುಸ್ತಕಗಳ ಲೋಕಾರ್ಪಣೆ, ಉದ್ಘಾಟನೆ: ಕೆ.ಆರ್.ವಿನೂತಾ, ಮುಖ್ಯ ಅತಿಥಿಗಳು: ಡಾ.ಪಿ.ಹೆಚ್.ರಾಘವೇಂದ್ರ ಶೆಟ್ಟಿ, ತಿಮ್ಮಣ್ಣ ಭಟ್, ಡಾ.ವಿ.ರಂಗನಾಥ್, ಸ್ಥಳ: 116, ಬೃಂದಾವನ, ವಿನಯ ಮಾರ್ಗ, ಸಿದ್ಧಾರ್ಥನಗರ, ಬೆಳಗ್ಗೆ 10.30ಕ್ಕೆ.

■ **ಶ್ರೀ ವೀರಭದ್ರೇಶ್ವರಸ್ವಾಮಿ ಹಾಗೂ ಶ್ರೀ ಚಾಮರಾಜೇಶ್ವರಸ್ವಾಮಿ ದೇವಸ್ಥಾನ ಟ್ರಸ್ಟ್ :** ಕಾರ್ತಿಕ ಮಾಸದ ವಿಶೇಷ ಪೂಜಾ ಮಹೋತ್ಸವ, ಅಗ್ನಿ ಕೊಂಡೋತ್ಸವ ಮತ್ತು ಗಿರಿಜಾ ಕಲ್ಯಾಣ, ವರಪೂಜೆ, ಸ್ಥಳ: ದೇವಸ್ಥಾನ, ಡಿ. ಬನುಮಯ್ಯ ರಸ್ತೆ, ಕೆ.ಆರ್. ಮೊಹಲ್ಲಾ.

■ **ಕುಮಾರ್ ಪ್ರದರ್ಶಕ ಕಲೆಗಳ ಕೇಂದ್ರ:** 48ನೇ ಅಂತರರಾಷ್ಟ್ರೀಯ ನಿರಂತರ ಕಲೆಮನೆ ಉತ್ಸವ, ಅಭಿನಂದನಾ ಕಾರ್ಯಕ್ರಮ, ಮುಖ್ಯ ಅತಿಥಿಗಳು: ಮಹಾರಾಜ ಕಾಲೇಜಿನ ನಿವೃತ್ತ ಪ್ರಾಧ್ಯಾಪಕರಾದ ಪ್ರೊ.ನಂಜರಾಜ ಅರಸ್, ಕರ್ನಾಟಕ ರಾಜ್ಯೋತ್ಸವ ಪ್ರಶಸ್ತಿ ಪುರಸ್ಕೃತರಾದ ಗುರು ಲಲಿತಾ ಕೋರೆ ಎಂ.ರಾವ್, ಪ್ರೊ.ಪದ್ಮಾ ಶೇಖರ್, ಕರ್ನಾಟಕ ಕಲಾಶ್ರೀ ಪ್ರಶಸ್ತಿ ಪುರಸ್ಕೃತ ಟಿ.ರವೀಂದ್ರ ಶರ್ಮಾ, ಸಹ ಪ್ರಾಧ್ಯಾಪಕ ಡಾ.ಕೃಷ್ಣಮೂರ್ತಿ ಗಣಪತಿ ಭಟ್ ಅವರಿಂದ ಹಿಂದೂಸ್ಥಾನಿ ಶಾಸ್ತ್ರೀಯ ಸಂಗೀತ ಹಾಡು ಗಾರಿಕೆ; ಗುರು ಕ್ಷಮಾ ಕಟ್ವಾರ ಮತ್ತು ಅವರ ಶಿಷ್ಯರಿಂದ ಸಮೂಹ ಲಘು ಶಾಸ್ತ್ರೀಯ ಸಂಗೀತ; ವಿದುಷಿ ಶ್ವೇತಾ ಪ್ರಸನ್ನ ಮತ್ತು ಶಿಷ್ಯ ವೃಂದದಿಂದ ಕೂಚುಪುಡಿ ನೃತ್ಯ; ವಿದ್ವಾನ್ ದರ್ಶನ್ ಶಂಕರ್ ಮತ್ತು ಅವರ ಶಿಷ್ಯರಿಂದ ಭರತನಾಟ್ಯ; ವಿದುಷಿ ಲಕ್ಷ್ಮೀ ವಿಶ್ವನಾಥನ್ ಮತ್ತು ಅವರ ಪುತ್ರಿ ಕುಮಾರಿ ತನ್ವಿ ವಿನೋದ್, (ತಾಯಿ ಮತ್ತು ಮಗಳು) ಅವರಿಂದ ಭರತನಾಟ್ಯ, ಸ್ಥಳ: ಕಲೆಮನೆ ಸಭಾಂಗಣ, ಮಧ್ಯಾಹ್ನ 2.30ಕ್ಕೆ.

■ **ಜಗನ್ಮೋಹನ ಅರಮನೆ :** ಸ್ಟಾರ್ ಸುವರ್ಣ ಮಹೋತ್ಸವ ಕಾರ್ಯಕ್ರಮ, ವಿಶೇಷವಾಗಿ ಮಹಿಳೆಯರಿಗೆ ಲಕ್ಕಿ ಡಿಪ್, ರಸಪ್ರಶ್ನೆ, ಮಹಿಳೆಯರು ಮತ್ತು ಮಕ್ಕಳಿಗೆ ಮನರಂಜನಾ ಕಾರ್ಯಕ್ರಮ ಹಾಗೂ ವಿಜೇತರಾದ ಸ್ಪರ್ಧಿಗಳಿಗೆ ಬಹುಮಾನ ವಿತರಣೆ ಕಾರ್ಯಕ್ರಮ, ಸ್ಥಳ: ಜಗನ್ಮೋಹನ ಅರಮನೆ, ಮಧ್ಯಾಹ್ನ 3.30ಕ್ಕೆ.

■ **ಸ್ಟ್ಯಾನ್ಲಿ ಪಾರ್ಕರ್ ಸ್ಕೂಲ್ ಆಫ್ ಮ್ಯೂಸಿಕ್ :** ಕನ್ನಡ ರಾಜ್ಯೋತ್ಸವ ಅಂಗವಾಗಿ ಸಂಗೀತ ಸಂಜೆ ಕಾರ್ಯಕ್ರಮ, ಸ್ಥಳ: ಗಾನಭಾರತಿ ವೀಣೆ ಶೇಷಣ್ಣ ಭವನ, ಕುವೆಂಪುನಗರ, ಮಧ್ಯಾಹ್ನ 3.30ಕ್ಕೆ.

■ **ಭಾವನೆಗಳ ಅನಾವರಣಕ್ಕೊಂದು ವೇದಿಕೆ, ಮೈಸೂರು ಸಾಹಿತ್ಯ ದಾಸೋಹ :** 9ನೇ ವಾರ್ಷಿಕೋತ್ಸವ ಮತ್ತು ಕನ್ನಡ ರಾಜ್ಯೋತ್ಸವ ಸಮಾರಂಭ, ಉದ್ಘಾಟನೆ: ಹಿರಿಯ ವಿದ್ವಾಂಸ ಡಾ.ಕೆ.ಅನಂತರಾಮು, ಮುಖ್ಯ ಅತಿಥಿಗಳು : ಕಾರ್ಯನಿರ್ವಾಹಕ ಪತ್ರಕರ್ತ ಅಂಶಿ ಪ್ರಸನ್ನಕುಮಾರ್, ಅಧ್ಯಕ್ಷತೆ: ಮೈಸೂರು ಸಾಹಿತ್ಯ ದಾಸೋಹ ಸಂಸ್ಥಾಪಕ ಎಂ.ಆರ್.ಆನಂದ್, ಹಿರಿಯ ವಿಜ್ಞಾನ ಲೇಖಕ ಎಸ್.ರಾಮಪ್ರಸಾದ್, ಹಿರಿಯ ಲೇಖಕಿ ಶ್ರೀಮತಿ ಪದ್ಮಾ ಆನಂದ್, ಸ್ಥಳ: ಕೃಷ್ಣಮೂರ್ತಿಪುರಂ ಶ್ರೀ ರಾಮಮಂದಿರ, ಸಂಜೆ 4ಕ್ಕೆ.

■ **ಮೈಸೂರು ಸಾಹಿತ್ಯ ಮತ್ತು ಸಾಂಸ್ಕೃತಿಕ ಪ್ರತಿಷ್ಠಾನ :** ಕನ್ನಡ ರಾಜ್ಯೋತ್ಸವ, ಸುವರ್ಣ ಕರ್ನಾಟಕ ಸಂಭ್ರಮ, ಕೃತಿಗಳ ಲೋಕಾರ್ಪಣೆ ಹಾಗೂ ಮಕ್ಕಳ ದಿನಾಚರಣೆ, ಉದ್ಘಾಟನೆ ಮತ್ತು ಕೃತಿಗಳ ಲೋಕಾರ್ಪಣೆ: ಸಾಹಿತಿ ಡಾ.ಲತಾ ಮೈಸೂರು, ಅಧ್ಯಕ್ಷತೆ: ಮೈಸೂರು ಸಾಹಿತ್ಯ ಮತ್ತು ಸಾಂಸ್ಕೃತಿಕ ಪ್ರತಿಷ್ಠಾನ ಅಧ್ಯಕ್ಷ ಎಂ.ಬಿ. ಸಂತೋಷ್, ಮುಖ್ಯ ಅತಿಥಿಗಳು: ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ ಅಧ್ಯಕ್ಷ ಮಡ್ಡೀಕೆರೆ ಗೋಪಾಲ್, ಕೃತಿಗಳ ಪರಿಚಯ : ಕವಯತ್ರಿ ಶ್ರೀಮತಿ ಬಿ. ಶೋಭಾ, ಕವಯತ್ರಿ ಎನ್.ಆರ್.ರೂಪಶ್ರೀ, ಮೈಸೂರು ಸಾಹಿತ್ಯ ಮತ್ತು ಸಾಂಸ್ಕೃತಿಕ ಪ್ರತಿಷ್ಠಾನ ಸಾಂಸ್ಕೃತಿಕ ಸಮಿತಿ ಅಧ್ಯಕ್ಷೆ ಸಿ.ವಾಣಿ ರಾಘವೇಂದ್ರ, ಸ್ಥಳ:ಐಡಿಯಲ್ ಜಾವಾ ರೋಟರಿ ಶಾಲೆ ಆವರಣ, ಮುಡಾ ಕಚೇರಿ ಎದುರು, ಜೆಎಲ್‌ಬಿ ರಸ್ತೆ, ಸಂಜೆ 4.30ಕ್ಕೆ.

■ **ಭೂಮಿಕಾ ಅಸೋಸಿಯೇಟ್ಸ್ ಹಾಗೂ ದಿವಂಗತ ಮೈಕ್ ಚಂದ್ರು ಗೆಳೆಯರ ಬಳಗ :** ಗೀತನಮನ ಕಾರ್ಯಕ್ರಮ, ಗೀತರಸಿಕರ ಮನಸೂರೆಗೊಂಡ ಜನಪ್ರಿಯ ಕನ್ನಡ ಚಲನಚಿತ್ರಗಳ ಮಧುರ ಮೆಲುಕು, ಸ್ಥಳ: ಶಾರದಾ ವಿಲಾಸ ಶತಮಾನೋತ್ಸವ ಭವನ, ಕೃಷ್ಣಮೂರ್ತಿಪುರಂ, ಸಂಜೆ 5.30ಕ್ಕೆ

■ **ಶ್ರೀರಾಮಕೃಷ್ಣ ಆಶ್ರಮ :** ಸ್ವಾಮಿ ಜ್ಞಾನಯೋಗಾನಂದ ಅವರಿಂದ ಶ್ರೀರಾಮಕೃಷ್ಣ ವಚನವೇದ ಕುರಿತು ಉಪನ್ಯಾಸ, ಸ್ಥಳ: ಸ್ವಾಮಿ ಶಾಂಭವನಾಂದಜಿ ಸ್ಮಾರಕ ಸಭಾಂಗಣ, ಯಾದವಗಿರಿ, ಸಂಜೆ 6 ರಿಂದ.

■ **ಶ್ರೀ ತ್ಯಾಗರಾಜ ಸಂಗೀತ ಸಭಾ ಚಾರಿಟಬಲ್ ಟ್ರಸ್ಟ್, ರೋಟರಿ ಸಂಸ್ಥೆ :** ಮಕ್ಕಳ, ಯುವ ದಿನಾಚರಣೆ ಪ್ರಯುಕ್ತ ಕರ್ನಾಟಕ ಶಾಸ್ತ್ರೀಯ ಸಂಗೀತ ಗುರುಗಳ ವಿದ್ಯಾರ್ಥಿಗಳಿಂದ ಗಾಯನ ಮತ್ತು ವಾದ್ಯ ಸಂಗೀತ ಪ್ರಸ್ತುತಿ, ಉದ್ಘಾಟನೆ : ರೋಟರಿ ಸಂಸ್ಥೆ ಅಧ್ಯಕ್ಷ ಎಂ.ಎಲ್. ನಾಗೇಶ್, ಅಧ್ಯಕ್ಷತೆ : ಶ್ರೀ ತ್ಯಾಗರಾಜ ಸಂಗೀತ ಸಭಾ ಚಾರಿಟಬಲ್ ಟ್ರಸ್ಟ್ ಅಧ್ಯಕ್ಷ ಡಾ. ಪಿ. ಮೋಹನದಾಸ್ ಭಟ್, ಸ್ಥಳ: ರೋಟರಿ ಸಂಸ್ಥೆ ಮೈಸೂರು ಪಶ್ಚಿಮ ಸಭಾಂಗಣ, ಸರಸ್ವತಿಪುರಂ, ಸಂಜೆ 6ಕ್ಕೆ.

■ **ಅಭಿವ್ಯಕ್ತಿ ಕಲಾ ಮತ್ತು ಸಾಂಸ್ಕೃತಿಕ ಟ್ರಸ್ಟ್ :** ಅಭಿವ್ಯಕ್ತಿ ಹಬ್ಬ–24, ನೃತ್ಯೋಲ್ಲಾಸ ಕಾರ್ಯಕ್ರಮ, ಮುಂಬೈನ ಹೆಸರಾಂತ ನೃತ್ಯ ಕಲಾವಿದೆ ವಿದುಷಿ ಮೀರಾ ನಾರಾಯಣ್ ಅವರಿಂದ ಭರತನಾಟ್ಯ ಪ್ರದರ್ಶನ, ಸ್ಥಳ: ರಮಾಗೋವಿಂದ ರಂಗಮಂದಿರ, ರಾಮಕೃಷ್ಣನಗರ, ಸಂಜೆ 6.15 ರಿಂದ.

■ **ದಿವ್ಯ ಜೀವನ ಸಂಘ ಮಹಿಳಾ ಶಾಖೆ :** ಸುಂದರ ಕಾಂಡ ರಾಮಾಯಣ ಸಪ್ತಾಹ ಪ್ರವಚನ, ಸ್ಥಳ: ಶಿವಾನಂದ ಜ್ಞಾನಾಲಯ, ಜೆಎಲ್‌ಬಿ ರಸ್ತೆ, ಸಂಜೆ 6.30 ರಿಂದ 7.30 ರವರೆಗೆ

■ **ಜಗದ್ಗುರು ಶ್ರೀ ವೀರ ಸಿಂಹಾಸನ ಮಹಾಸಂಸ್ಥಾನ ಮಠ (ಶ್ರೀ ಸುತ್ತೂರು ಕ್ಷೇತ್ರ, ಮೈಸೂರು ಜಿಲ್ಲೆ) :** ಆದಿ ಜಗದ್ಗುರು ಶ್ರೀ ಶಿವರಾತ್ರೀಶ್ವರ ಶಿವಯೋಗಿಗಳ ಕರ್ತೃ ಗದ್ದುಗೆ, ಶ್ರೀ ಮಹದೇಶ್ವರ ಸನ್ನಿಧಿ, ಶ್ರೀ ವೀರಭದ್ರೇಶ್ವರ ಮತ್ತು ಶ್ರೀ ಸೋಮೇಶ್ವರ ದೇವಸ್ಥಾನಗಳು, ಕಾರ್ತಿಕ ಮಾಸದ ವಿಶೇಷ ಪೂಜಾ ಕಾರ್ಯಕ್ರಮ, ಸ್ಥಳ: ಮಠದ ಆವರಣ, ಸಂಜೆ.

■ **ರಂಗಾಯಣ :** ರಂಗಾಯಣ ರೆಪರ್ಟರಿ ಕಲಾವಿದರಿಂದ ಚೆಕ್‌ಮೇಟ್ ನಾಟಕ ಪ್ರದರ್ಶನ, ಮೂಲ : ಯೋಗೇಶ್ ಸೋಮಣ್, ನಿರ್ದೇಶನ : ಅನೂಪ್ ಜೋಷಿ, ಸಂಗೀತ : ಶ್ರೀನಿವಾಸ ಭಟ್, ಸ್ಥಳ: ಭೂಮಿಗೀತ ರಂಗ ಮಂದಿರ, ಸಂಜೆ 6.30ಕ್ಕೆ

■ **ಬೃಂದಾವನ ಬಡಾವಣೆ ನಾಗರೀಕರ ಹಿತರಕ್ಷಣಾ ವೇದಿಕೆ :** ಉದ್ಘಾಟನಾ ಸಮಾರಂಭ ಮತ್ತು 69ನೇ ಕನ್ನಡ ರಾಜ್ಯೋತ್ಸವ, ಬೆಳಗ್ಗೆ 10ಕ್ಕೆ ಧ್ವಜಾರೋಹಣ, ಸಂಜೆ 6ಕ್ಕೆ ಸಂಗೀತ ಸಂಜೆ, ಉಪಸ್ಥಿತರು: ಡಾ. ಭಾಷ್ಯಂ ಸ್ವಾಮೀಜಿ, ಶಾಸಕ ಟಿ.ಎಸ್.ಶ್ರೀವತ್ಸ, ಎ.ಆರ್.ಮಲ್ಲರಾಜ ಅರಸು, ಮಾಜಿ ಶಾಸಕ ಎಲ್.ನಾಗೇಂದ್ರ, ಡಾ.ಎಸ್. ಶ್ರೀಕಾಂತ್, ಸ್ಥಳ: ಶ್ರೀ ಮಹಾಗಣಪತಿ ದೇವಸ್ಥಾನ, ಬೃಂದಾವನ ಬಡಾವಣೆ, ಸಂಜೆ 7ಕ್ಕೆ.

ಮೈಸೂರು ಆಕಾಶವಾಣಿ



ಬೆಳಗ್ಗೆ: 6.10 ಚಿಂತನ–ಎಂ.ಶ್ರೀನಿವಾಸಮೂರ್ತಿ, 6.15 ಗೀತಾರಾಧನ, 6.35 ಮತ್ತು ಸಂಜೆ 6.10 ಸಿನೆಮಾ ಯಾನ–ಕನ್ನಡ ಕಲಾತ್ಮಕ ಚಿತ್ರಗಳ ಪರಿಚಯ ಮಾಲಿಕೆ, ಪ್ರಸ್ತುತಿ: ಶ್ರೀನಿವಾಸ್ ಪ್ರಸಾದ್, 6.40 ಅರಿವಿನ ಶಿಖರ–ಸರ್ವಜ್ಞನ ತ್ರಿಪದಿಗಳನ್ನಾಧರಿಸಿದ ಬಾನುಲಿ ಸರಣಿ, ಗಾಯನ–ಸದಾಶಿವ ಪಾಟೀಲ್, ಪಿ.ಎಸ್.ರಂಜನಿ, ವ್ಯಾಖ್ಯಾನ–ಪ್ರೊ.ಸಿ.ನಾಗಣ್ಣ, 6.50 ರೈತರಿಗೆ ಸಲಹೆ, 7.15 ಸಮಗ್ರ ವಿಕಾಸಕ್ಕಾಗಿ ದಿಟ್ಟ ಹೆಜ್ಜೆ–ಪ್ರಾಯೋಜಿತ ಕಾರ್ಯಕ್ರಮ, ಪ್ರಾಯೋಜಕರು–ವಿಕಾಸ ಅಕಾಡೆಮಿ, ಕಲಬುರ್ಗಿ, 8.30 ಹಾದಿಯಲ್ಲಿ ಕಂಡ ಮುಖ ಬಾನುಲಿ ಸರಣಿ, ಮೂಡಲಪಾಯ ಯಕ್ಷಗಾನ ಕಲಾವಿದ ಹಾಗೂ ಮದ್ದಳೆ ವಾದಕ ತಲಕಾಡಿನ ಟಿ.ಎಸ್.ರವೀಂದ್ರ ಅವರೊಂದಿಗೆ ಸಂವಾದ. ಪ್ರಸ್ತುತಿ: ಅಬ್ದುಲ್ ರಶೀದ್, 9.05 ನಮ್ಮ ಆರೋಗ್ಯ–ಆಯಿಷ್ ಯಶೋಗಾಥೆ ಸರಣಿಯಲ್ಲಿ 'ಶ್ರವಣ ದೋಷ ನಿವಾರಣೆಗೆ ಕಾಕ್ಲಿಯರ್ ಇಂಪ್ಲಾಂಟ್' ಮತ್ತು 'ತೊದಲುವಿಕೆ ಅಥವಾ ಉಗ್ಗುವಿಕೆ' ಕುರಿತು ಕಾರ್ಯಕ್ರಮ. ಭಾಗವಹಿಸುತ್ತಾರೆ: ಡಾ.ಗೀತಾ. ಸಿ, ಸೀಮಾ ಮರಿಸ್ವಾಮಿ, ಕಾರ್ತಿಕ್ ಪಿ., ಮತ್ತು ಶಶಾಂಕ್. ಹೆಚ್.ಎಂ. ನಡೆಸಿಕೊಡುತ್ತಾರೆ: ಬೇದ್ರೆ ಮಂಜುನಾಥ್ ಮತ್ತು ದಿಗ್ವಿಜಯ್ ಬಿ ಪ್ರಾಯೋಜಕರು–ಅಖಿಲ ಭಾರತ ವಾಕ್ ಶ್ರವಣ ಸಂಸ್ಥೆ, ಮೈಸೂರು, 9.35 ಶ್ವಾಸಕೋಶ ಕ್ಯಾನ್ಸರ್ ಕುರಿತು ಮಾಹಿತಿ, ಪ್ರಾಯೋಜಕರು: ಇಂಡಿಯನ್ ಕ್ಯಾನ್ಸರ್ ಸೊಸೈಟಿ, ಕರ್ನಾಟಕ ಚಾಪ್ಟರ್, 9.40 ಕನ್ನಡ ಚಿತ್ರಗೀತೆಗಳು, 10.00 ಕೇಳಿ ಗಿಳಿಗಳೇ: ವಿಶ್ವ ಪ್ರಜ್ಞಾ ಶಾಲೆಯ ಮಕ್ಕಳಿಂದ ಕಾರ್ಯಕ್ರಮ ವೈವಿಧ್ಯ, 10.30 ಮಕ್ಕಳ ಮಂಟಪ: ಹಕ್ಕಿಗೂಡು, ಕಥೆ ಹೇಳುತ್ತಾರೆ–ಹೆಚ್.ಎಸ್.ಶಿವರಾಂ, ಮಾಹಿತಿ, ಸಮೂಹ ಗಾಯನ, ಪ್ರಸ್ತುತಿ: ಎಂ.ಎಸ್.ಭಾರತಿ, 11.00 ಮನ್ ಕೀ ಬಾತ್–ಭಾರತದ ಜನತೆಯೊಂದಿಗೆ ಪ್ರಧಾನ ಮಂತ್ರಿಗಳಾದ ನರೇಂದ್ರ ಮೋದಿಯವರ ಮನದ ಮಾತು

ಮಧ್ಯಾಹ್ನ: 12.05 ವನಿತಾ ವಿಹಾರ–ಮಾತಿನ ಮಂಟಪ–ಮಹಿಳಾ ಲೋಕದ ವಿದ್ಯಮಾನ, 12.35 ದೇವರನಾಮ–ವಿದ್ಯಾಭೂಷಣ, 12.45 ಜನಪದ ಸಂಗೀತ–ಟಿ. ನರಸೀಪುರ ತಾಲೂಕು ಕೈಯ್ಯಂಬಳ್ಳಿಯ ಇಂದಿರಮ್ಮ ಹಾಗೂ ಸಂಗಡಿಗರಿಂದ ಮನೆಯಮ್ಮನ ಹಾಡು, 1.00 ಸಕ್ಕರೆ ನಾಡಿನ ಅಕ್ಕರೆಯ ಲೇಖಕರು, ಲೇಖನ ಹಾಗೂ ಪ್ರಸ್ತುತಿ: ಶಭಾನ ಮತ್ತು ಕೀರ್ತಿ ಎಸ್. ಬೈಂದೂರು, ಪರಿಕಲ್ಪನೆ: ಅಬ್ದುಲ್ ರಶೀದ್, 1.20–ಕೋಮು ಏಕತಾ ಸಪ್ತಾಹ–ಮಹಿಳಾ ದಿನ, ಮಾತನಾಡುತ್ತಾರೆ–ಡಾ.ಕೆ.ಎಸ್.ಪವಿತ್ರ, 2.40 ಕನ್ನಡ ಚಲನಚಿತ್ರ ಧ್ವನಿವಾಹಿನಿ–ಒಲವೇ ಬದುಕು, 3.40 ಸಿರಿಗನ್ನಡಂ ಗೆಲ್ಗೆ, ಪ್ರಸ್ತುತಿ: ಜಿ.ಕೆ. ರವೀಂದ್ರ ಕುಮಾರ್, 3.45 ಕರ್ನಾಟಕ ಶಾಸ್ತ್ರೀಯ ಸಂಗೀತ: ತಿಟ್ಟೆ ಕೃಷ್ಣ ಐಯ್ಯಂಗಾರ್–ಹಾಡುಗಾರಿಕೆ, 4.45 ಚಿತ್ರಗೀತೆಗಳು, 6.51 ಕೃಷಿರಂಗ: ತೋರಣ ಹೂರಣ–ಸಾಪ್ತಾಹಿಕ ಸರಣಿ ಕಾರ್ಯಕ್ರಮ, ಪ್ರಸ್ತುತಿ:– ಎನ್.ಕೇಶವಮೂರ್ತಿ, ಆರ್.ಲೋಕೇಶ್ವರಿ, ಡಾ.ಎನ್.ಶಿವಕುಮಾರ್, ಕೃಷಿ ಲೋಕ, ಕೃಷಿ ದರ್ಪಣ–ವಾರದ ಕೃಷಿರಂಗ, ಕಿಸಾನ್‌ವಾಣಿ ಕಾರ್ಯಕ್ರಮಗಳ ಮುನ್ನೋಟ, ಪ್ರಸ್ತುತಿ–ಆರ್.ಲೋಕೇಶ್ವರಿ, 7.45 ಕನ್ನಡದಲ್ಲಿ ಭಾಷಣ, 8.00 ಮನ್ ಕೀ ಬಾತ್–ಭಾರತದ ಜನತೆಯೊಂದಿಗೆ ಪ್ರಧಾನಿ ನರೇಂದ್ರ ಮೋದಿರವರ ಮನದ ಮಾತಿನ ಕನ್ನಡ ಅನುವಾದದ ಮರುಪ್ರಸಾರ, 9.15 ರಂಗಗೀತೆಗಳು–ಸುಭದ್ರಾ ಕಲ್ಯಾಣ ನಾಟಕದ ಹಾಡುಗಳು, 9.30 National Science Magazine Radio Scope, 10.00 ರವಿವಾರದ ಅಖಿಲ ಭಾರತ ಸಂಗೀತ ಸಭಾ, ಪಂ.ದೇಬಶೀಶ್ ಭಟ್ಟಾಚಾರ್ಯ–ಸರೋದ್ ವಾದನ

ವಿಜೇತ ಕಾಂಗ್ರೆಸ್ ಅಭ್ಯರ್ಥಿಗಳಿಂದ ಪ್ರಮಾಣಪತ್ರ ಸ್ವೀಕಾರ


ಪ್ರಮಾಣಪತ್ರ ಸ್ವೀಕರಿಸುತ್ತಿರುವ ಸಿ.ಪಿ. ಯೋಗೇಶ್ವರ್.


ಪ್ರಮಾಣಪತ್ರದೊಂದಿಗೆ ಅನ್ನಪೂರ್ಣ ತುಕಾರಾಂ.


ಯಾಸಿರ್ ಪಠಾಣ್‌ಗೆ ಪ್ರಮಾಣಪತ್ರ ನೀಡುತ್ತಿರುವುದು.

ಜೆಡಿಎಸ್ ಅಂತಿಮ ದಿನಗಳನ್ನು ಎಣಿಸುತ್ತಿದೆ: ಸಿ.ಪಿ.ಯೋಗೇಶ್ವರ್

ರಾಮನಗರ, ನ.23– ಚನ್ನಪಟ್ಟಣದಲ್ಲಿ ಗೆಲುವಿನ ನಂತರ ಮಾಧ್ಯಮಗಳಿಗೆ ಪ್ರತಿಕ್ರಿಯಿಸಿದ ಸಿ.ಪಿ.ಯೋಗೇಶ್ವರ್ ಅವರು, ಮಾಜಿ ಪ್ರಧಾನಿ ಎಚ್.ಡಿ.ದೇವೇಗೌಡ ಹಾಗೂ ಕೇಂದ್ರ ಸಚಿವ ಎಚ್.ಡಿ.ಕುಮಾರಸ್ವಾಮಿ ಅವರು ತಮ್ಮ ಪ್ರತಿಷ್ಠೆಗೆ ನಿಖಿಲ್ ಕುಮಾರಸ್ವಾಮಿಯನ್ನು ಬಲಿಕೊಟ್ಟಿದ್ದಾರೆ ಎಂದರು. ಕುಮಾರಸ್ವಾಮಿ ಮನಸ್ಸು ಮಾಡಿದ್ದರೆ ಮಗನನ್ನು ಮಂಡ್ಯದಲ್ಲಿ ಲೋಕಸಭೆ ಚುನಾವಣೆಗೆ ನಿಲ್ಲಿಸಿ ಗೆಲ್ಲಿಸಬಹುದಿತ್ತು. ಆದರೆ, ಕೇಂದ್ರ ಸಚಿವರಾಗುವ ತವಕದಿಂದ ತಾವೇ ಅಲ್ಲಿ ಸ್ಪರ್ಧಿಸಿದರು. ಈಗ ಮಗನನ್ನು ಬಲಿಕೊಟ್ಟರು ಎಂದು ಯೋಗೇಶ್ವರ್ ಟೀಕಿಸಿದರು. ನಿಖಿಲ್ ಕುಮಾರಸ್ವಾಮಿ, ಸೋಲಿನ ಮೂಲಕ ಜೆಡಿಎಸ್ ಕೊನೆಯ ದಿನಗಳನ್ನು ಎಣಿಸುತ್ತಿದೆ.

ದೇವೇಗೌಡರು ದೈತ್ಯ ಶಕ್ತಿ ಎಂದು ಬಹಳ ಹಿಂದಿನಿಂದಲೂ ಹೇಳುತ್ತಾ ಬಂದಿದ್ದೇನೆ. ಅದು ಸತ್ಯ. ಆದರೆ, ಅವರಿಗೆ ವಯಸ್ಸಾಗಿದೆ. ಈ ಕಾರಣದಿಂದ ಅವರನ್ನು ಜನ ಚುನಾವಣೆಯಲ್ಲಿ ತಿರಸ್ಕರಿಸಿದ್ದಾರೆ. ಈಗ ಅವರು ವಿಶ್ರಾಂತ ಜೀವನ ನಡೆಸಲು ಸೂಕ್ತ ಕಾಲ ಎಂದರು.

ನಾನು ಹಿಂದೆ ಲೋಕಸಭೆ ಚುನಾವಣೆಯಲ್ಲಿ ಬಿಜೆಪಿಯ ಡಾ. ಮಂಜುನಾಥ್ ಪರ ಕೆಲಸ ಮಾಡಿದ್ದೆ. ಅದರಿಂದಾಗಿ ಡಿ.ಕೆ.ಸುರೇಶ್‌ಗೆ ಸೋಲಾಗಿತ್ತು. ಆದರೆ, ಈ ಚುನಾವಣೆಯಲ್ಲಿ ಅದೇ ಡಿಕೆ ಸುರೇಶ್ ಹೆಗಲಿಗೆ ಹೆಗಲು ಕೊಟ್ಟು ನನ್ನನ್ನು ಗೆಲ್ಲಿಸಿದ್ದಾರೆ. ಡಿಕೆ ಸಹೋದರರ ಸಹಕಾರಕ್ಕೆ ಧನ್ಯವಾದ ಎಂದು ಯೋಗೇಶ್ವರ್ ಹೇಳಿದರು.

ಉಪ ಚುನಾವಣೆಯಲ್ಲಿ ಬಿಜೆಪಿ ಸೋಲಿಗೆ ಬಿಎಸ್‌ವೈ, ವಿಜಯೇಂದ್ರ ಒಳ ಒಪ್ಪಂದವೇ ಕಾರಣ

ಚಿಕ್ಕೋಡಿ(ಬೆಳಗಾವಿ ಜಿಲ್ಲೆ), ನ.23– ರಾಜ್ಯದ ಮೂರು ಕ್ಷೇತ್ರಗಳ ಉಪಚುನಾವಣೆಯಲ್ಲಿ ಬಿಜೆಪಿ ಹೀನಾಯ ಸೋಲಿಗೆ ಪಕ್ಷದ ರಾಜ್ಯ ಘಟಕದ ಅಧ್ಯಕ್ಷ ಬಿ.ವೈ.ವಿಜಯೇಂದ್ರ ಹಾಗೂ ಅವರ ತಂದೆ ಬಿ.ಎಸ್.ಯಡಿಯೂರಪ್ಪ ಕಾರಣ. ಅವರು ಕಾಂಗ್ರೆಸ್‌ನೊಂದಿಗೆ ಮಾಡಿಕೊಂಡ ಒಳ ಒಪ್ಪಂದದಿಂದಲೇ ಬಿಜೆಪಿಗೆ ಇಂಥ ದುಃಸ್ಥಿತಿ ಬಂದಿದೆ ಎಂದು ಶಾಸಕ ಬಸನಗೌಡ ಪಾಟೀಲ ಯತ್ನಾಳ್ ಆರೋಪಿಸಿದರು.


ಯತ್ನಾಳ್

ತಾಲೂಕಿನ ಕಬ್ಬೂರಿನಲ್ಲಿ ಶನಿವಾರ ಸುದ್ದಿಗಾರರ ಜತೆ ಮಾತನಾಡಿದ ಅವರು, ಕರ್ನಾಟಕದಲ್ಲಿ ಬಿಜೆಪಿ ಸೋಲಿಗೆ ತಂದೆ ಹಾಗೂ ಮಗನೇ ಕಾರಣ. ಇಂಥ ಸೋಲನ್ನು ನಾವು ನಿರೀಕ್ಷಿಸಿರಲಿಲ್ಲ. ಇನ್ನಾದರೂ ಪಕ್ಷದ ಹೈಕಮಾಂಡ್‌ನವರು ತಂದೆ–ಮಗನ ಮೇಲಿನ ಮೋಹ ಬಿಡಬೇಕು ಎಂದರು. ಪಕ್ಷಕ್ಕೆ ರಾಜ್ಯದ ಉಸ್ತುವಾರಿ ನೇಮಿಸುವಾಗ, ಬಿಜೆಪಿ ಹೈಕಮಾಂಡ್‌ನವರು ಪ್ರಾಮಾಣಿಕರು ಮತ್ತು ಸಂಸ್ಕಾರವಂತರನ್ನು ಪರಿಗಣಿಸಬೇಕು. ಈ ಹಿಂದೆ ಅರುಣ್ ಸಿಂಗ್ ಬಿಜೆಪಿ ರಾಜ್ಯ ಉಸ್ತುವಾರಿಯಾಗಿದ್ದರು. ಯಡಿಯೂರಪ್ಪ ಹಾಗೂ ವಿಜಯೇಂದ್ರ ಸಂದೇಶವಾಹಕನಾಗಿ ಅವರು ಕೆಲಸ ಮಾಡಿದ್ದರಿಂದ ರಾಜ್ಯದಲ್ಲಿ ಬಿಜೆಪಿ ಇಂಥ ಸ್ಥಿತಿಗೆ ತಲುಪಿದೆ ಎಂದು ದೂರಿದರು.

ಬಿಜೆಪಿ ರಾಜ್ಯ ಘಟಕದ ಅಧ್ಯಕ್ಷರಾಗಿ ವಿಜಯೇಂದ್ರ ಅವರನ್ನು ನೇಮಿಸಿದ್ದನ್ನು ಜನರು ತಿರಸ್ಕರಿಸಿದ್ದಾರೆ. ಈಗ ಬಿಜೆಪಿ ಹೀನಾಯ ಸೋಲು ಕಂಡಿದ್ದರಿಂದ ನನಗೂ ನೋವಾಗಿದೆ ಎಂದರು.

ವಕ್ಫ್ ಮಂಡಳಿ ವಿರುದ್ಧದ ಹೋರಾಟದಿಂದ ಚುನಾವಣೆಯಲ್ಲಿ ಬಿಜೆಪಿಗೆ ಲಾಭವಾಗಿಲ್ಲವೇ ಎಂಬ ಪ್ರಶ್ನೆಗೆ ಉತ್ತರಿಸಿದ ಯತ್ನಾಳ್, ವಕ್ಫ್ ಮಂಡಳಿ ವಿರುದ್ಧದ ಹೋರಾಟ ಈಗ ಆರಂಭವಾಗಿದೆ. ಮಹಾರಾಷ್ಟ್ರದಲ್ಲಿ ವಕ್ಫ್ ಮಂಡಳಿ ವಿಚಾರ ಇಟ್ಟುಕೊಂಡೇ ಚುನಾವಣೆ ಎದುರಿಸಿದ್ದೇವೆ. ಹಾಗಾಗಿ ಅಲ್ಲಿ ಬಿಜೆಪಿಗೆ ಅಭೂತಪೂರ್ವ ಗೆಲುವು ಸಿಕ್ಕಿದೆ ಎಂದು ಹೇಳಿದರು. ಉದ್ಧವ್ ಠಾಕ್ರೆ ಅವರು ಔರಂಗಜೇಬನ ಸಮಾಧಿಗೆ ನಮಸ್ಕಾರ ಮಾಡಿದರು. ಹಾಗಾಗಿ ಮಹಾರಾಷ್ಟ್ರದ ಜನರು ಅವರನ್ನು ಮುಳುಗಿಸಿದರು ಎಂದು ವಾಗ್ದಾಳಿ ನಡೆಸಿದರು.

ನಾಳೆ ಮಹಾರಾಷ್ಟ್ರ ಬಿಜೆಪಿ ಶಾಸಕಾಂಗ ಪಕ್ಷದ ಸಭೆ

ಮುಂಬೈ, ನ.23– ಮಹಾರಾಷ್ಟ್ರದ ವಿಧಾನಸಭಾ ಚುನಾವಣೆಯಲ್ಲಿ ಬಿಜೆಪಿ ನೇತೃತ್ವದ ಮಹಾಯುತಿ ಮೈತ್ರಿಕೂಟ ಬಹುಮತ ಗಳಿಸಿದ್ದು, ಬಿಜೆಪಿ ಹೆಚ್ಚಿನ ಸ್ಥಾನಗಳನ್ನು ಪಡೆದಿದೆ.

ಈಗ ರಾಜ್ಯದಲ್ಲಿ ಮುಖ್ಯಮಂತ್ರಿ ಆಯ್ಕೆಗೆ ಸಂಬಂಧಿಸಿದಂತೆ ಚರ್ಚೆಗಳು ನಡೆಯುತ್ತಿವೆ. ಮುಖ್ಯಮಂತ್ರಿಯನ್ನು ಆಯ್ಕೆ ಮಾಡುವ ಸಂಬಂಧ ನ.25ರಂದು ಬಿಜೆಪಿ ಶಾಸಕಾಂಗ ಪಕ್ಷದ ಸಭೆ ನಡೆಯಲಿದ್ದು, ನ.26ರಂದು ಪ್ರಮಾಣ ವಚನ ಸ್ವೀಕಾರ ಸಮಾರಂಭ ನಡೆಯಲಿದೆ. ಮಹಾಯುತಿ ಮೈತ್ರಿಕೂಟದ ದೊಡ್ಡ ಸಭೆಯೂ ಇದೇ ಸಮಯದಲ್ಲಿ ನಡೆಯುವ ಸಾಧ್ಯತೆಯಿದೆ.

ಶಿಗ್ಗಾಂವಿ ಜನರ ತೀರ್ಪನ್ನು ತಲೆಬಾಗಿ ಒಪ್ಪಿಕೊಳ್ತೇನೆ

ಬೆಂಗಳೂರು, ನ.23(ಕೆಎಂಶಿ)–ಉಪಚುನಾವಣೆಯಲ್ಲಿ ಶಿಗ್ಗಾಂವಿ ಕ್ಷೇತ್ರದ ಜನರ ತೀರ್ಪನ್ನು ನಾನು ತಲೆಬಾಗಿ ಒಪ್ಪಿಕೊಳ್ಳುತ್ತೇನೆ, ಕಾಂಗ್ರೆಸ್ ಅಭ್ಯರ್ಥಿ ಯಾಸಿರ್ ಖಾನ್ ಪಠಾಣ್‌ಗೆ ಅಭಿನಂದನೆ ಸಲ್ಲಿಸುವುದಾಗಿ ಮಾಜಿ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ತಿಳಿಸಿದ್ದಾರೆ. ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಕ್ಷೇತ್ರದಲ್ಲಿ ಅಭಿವೃದ್ಧಿ ಪರ್ವ ಹಾಗೆಯೇ ಮುಂದುವರೆಯಲಿ ಅಂತ ಆಶಿಸುತ್ತೇನೆ, ಶಿಗ್ಗಾಂವಿ ಕ್ಷೇತ್ರದ ಜನರ ತೀರ್ಪನ್ನು ನಾನು ತಲೆಬಾಗಿ ಒಪ್ಪಿ, ಸ್ವೀಕಾರ ಮಾಡುತ್ತೇನೆ, ಚುನಾವಣೆ ಸಂದರ್ಭದಲ್ಲಿ ಜನರ ಸ್ಪಂದನೆ ಕಂಡು ನಮಗೆ ಗೆಲ್ಲುವ ಭರವಸೆ ಇತ್ತು, ಹಣದ ಹೊಳೆ ಹರಿಸಿ, ಕಾಂಗ್ರೆಸ್ ಗೆಲುವು ಸಾಧಿಸಿದ್ದಾರೆ ಎಂದು ಆರೋಪಿಸಿದರು.


ಬೊಮ್ಮಾಯಿ

ಸರ್ಕಾರ ಅವರದ್ದೇ ಇದೆ, ಆಡಳಿತ ಪಕ್ಷ ಕಾಂಗ್ರೆಸ್ ಅಭ್ಯರ್ಥಿಯನ್ನು ಜನ ಆಯ್ಕೆ ಮಾಡಿದ್ದಾರೆ, ನಾವು ಶಿಗ್ಗಾಂವಿ ಕ್ಷೇತ್ರದಲ್ಲಿ ಸಾಕಷ್ಟು ಅಭಿವೃದ್ಧಿ ಮಾಡಿದ್ದೇವೆ, ಅಭಿವೃದ್ಧಿ ಪರ್ವ ಹಾಗೆಯೇ ಮುಂದುವರೆಯಲಿ, ಕ್ಷೇತ್ರದ ಜನರಿಗೆ ಒಳ್ಳೆಯದಾಗಲಿ. ಚುನಾವಣೆಯಲ್ಲಿ 10 ಜನ ಸಚಿವರು, 40ಕ್ಕಿಂತ ಹೆಚ್ಚು ಶಾಸಕರು, ಮಾಜಿ ಶಾಸಕರು ಬಂದು ಕ್ಷೇತ್ರದಲ್ಲೇ ಬಿಡಾರ ಹೂಡಿ ಪ್ರಚಾರ ಮಾಡಿದರು, ಸರ್ಕಾರ ವರ್ಸಸ್ ಬೊಮ್ಮಾಯಿ ಎಂದೇ ಚುನಾವಣೆ ಬಿಂಬಿತವಾಗಿತ್ತು, ಸರ್ಕಾರಿ ಯಂತ್ರ, ಹಣದಿಂದ ಚುನಾವಣೆ ಗೆದ್ದಿದ್ದಾರೆ.

ಲೋಕಸಭಾ ಚುನಾವಣೆ ನಂತರ ಶಿಗ್ಗಾಂವಿಯಲ್ಲಿ ನಾವು ಚೆನ್ನಾಗಿ ಕೆಲಸ ಮಾಡಿದ್ದೆವು. ಆದರೆ ಇಡೀ ಸರ್ಕಾರವೇ ಬಂತು, ಸಾಮಾನ್ಯವಾಗಿ ಉಪಚುನಾವಣೆಗಳಲ್ಲಿ ಮತದಾರ ಆಡಳಿತ ಪಕ್ಷದ ಪರ ಇರುತ್ತಾನೆ. ರಾಜ್ಯದಲ್ಲಿ ಬಿಜೆಪಿ ಆಡಳಿತ ಇದ್ದಾಗ 17 ಕ್ಷೇತ್ರಗಳ ಉಪಚುನಾವಣೆಯಲ್ಲಿ 13 ಕ್ಷೇತ್ರ ಗೆದ್ದಿದ್ದೆವು, ಸರ್ಕಾರದ ಕೆಲಸಕ್ಕೆ ಮತ ಚಲಾವಣೆ ಆಗಿದೆ ಎಂಬ ತರ್ಕದಲ್ಲಿ ಅರ್ಥವಿಲ್ಲ ಎಂದರು.

ಸೋಲಿನ ಹೊಣೆಯನ್ನ ನಾನೇ ಹೊರುತ್ತೇನೆ...

ಚನ್ನಪಟ್ಟಣ ಎನ್‌ಡಿಎ ಅಭ್ಯರ್ಥಿ ನಿಖಿಲ್ ಕುಮಾರಸ್ವಾಮಿ


ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಎನ್‌ಡಿಎ ಅಭ್ಯರ್ಥಿ ಹಾಗೂ ಜೆಡಿಎಸ್ ಯುವ ಘಟಕದ ಅಧ್ಯಕ್ಷ ನಿಖಿಲ್ ಕುಮಾರಸ್ವಾಮಿ

ರಾಮನಗರ, ನ.23– ಇದು ಬಯಸದೇ ಬಂದ ಉಪಚುನಾವಣೆ, ಕೊನೆ ಗಳಿಗೆಯ ತೀರ್ಮಾನಕ್ಕೆ ನಾನು ತಲೆ ಬಾಗುತ್ತೇನೆ ಎಂದು ಎನ್‌ಡಿಎ ಅಭ್ಯರ್ಥಿ ಹಾಗೂ ಜೆಡಿಎಸ್ ಯುವ ಘಟಕದ ಅಧ್ಯಕ್ಷ ನಿಖಿಲ್ ಕುಮಾರಸ್ವಾಮಿ ಹೇಳಿದರು.

ಚುನಾವಣೆ ಫಲಿತಾಂಶದ ಬಳಿಕ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಚುನಾವಣಾ ಸಂದರ್ಭದಲ್ಲಿ ನಾನು ಕೆಲವು ಮಾತು ಕೊಟ್ಟಿದ್ದೆ. ಆ ಮಾತನ್ನು ಚುನಾವಣೆಯ ಸೋಲು–ಗೆಲುವು ನಿರ್ಧಾರ ಮಾಡಲ್ಲ. ನಿಮ್ಮ ಋಣ ತೀರಿಸುವ ಪ್ರಾಮಾಣಿಕ ಪ್ರಯತ್ನ ಮಾಡುತ್ತೇನೆ. ಮಾತಿನಿಂದ ಹಿಂದೆ ಸರಿಯಲ್ಲ. ನಾನು ಈ ಜಿಲ್ಲೆಯ ಮಗ ಎಂದು ಭಾವಿಸುತ್ತೇನೆ. ಇಲ್ಲಿ ಹುಟ್ಟದೇ ಇರಬಹುದು ಆದರೆ ಭಾವನಾತ್ಮಕವಾಗಿ ಸಂಬಂಧ ಇದೆ ಎಂದು ಹೇಳಿದರು.

ರಾಜ್ಯದಲ್ಲಿ ನಡೆದ 3 ಕ್ಷೇತ್ರದ ಉಪಚುನಾವಣೆಗಳಲ್ಲಿ ಚನ್ನಪಟ್ಟಣ ಬಹು ನಿರೀಕ್ಷೆಯ ಚುನಾವಣೆ ಆಗಿತ್ತು. ಉಪ ಚುನಾವಣೆಯಲ್ಲಿ ಕೊನೆಹಂತದ ತೀರ್ಮಾನಕ್ಕೆ ಪಕ್ಷದ ಶಿಸ್ತಿನ ಸಿಪಾಯಿ ಆಗಿ ನಾನು ಎನ್‌ಡಿಎ ಅಭ್ಯರ್ಥಿ ಆಗಿ ಸ್ಪರ್ಧೆ ಮಾಡಿದೆ. ಚುನಾವಣೆಯ ಫಲಿತಾಂಶ ಎಲ್ಲರಿಗೂ ಆಘಾತ ತಂದಿದೆ. ಕಳೆದ 18 ದಿನದಲ್ಲಿ ಪ್ರತಿ ಹಳ್ಳಿಯಲ್ಲೂ ಎಲ್ಲರೂ ನನಗೆ ಪ್ರೀತಿ, ವಾತ್ಸಲ್ಯ ತೋರಿದ್ದಾರೆ. ಸುಮಾರು 87 ಸಾವಿರ ಮತ ಬಂದಿದೆ. ಪ್ರಜಾಪ್ರಭುತ್ವದಲ್ಲಿ ತೀರ್ಮಾನ, ತೀರ್ಪು ನೀಡುವ ಹಕ್ಕು ಇರುವುದು ಜನರಿಗೆ. ಮತದಾರರಿಗೆ ಎಲ್ಲರಿಗೂ ಧನ್ಯವಾದ ತಿಳಿಸುತ್ತೇನೆ ಎಂದು ತಿಳಿಸಿದರು. ಎಲ್ಲರೂ ಬಹಳ ಪ್ರಾಮಾಣಿಕವಾಗಿ ದುಡಿದಿದ್ದಾರೆ.

ಆದರೆ ಚುನಾವಣೆ ಸೋಲಿಗೆ ಕೆಲವು ಕಾರಣ ಇರುತ್ತದೆ. ಒಂದು ಸಮುದಾಯದ ಮತ ಒಂದು ಕಡೆ ಕ್ರೋಢೀಕರಿಸಿದ್ದೂ ಒಂದು ಕಾರಣ ಆಗಿರಬಹುದು. ನಮ್ಮ ಪಕ್ಷ ಸಾಕಷ್ಟು ಬಾರಿ ಆ ಸಮುದಾಯದ ಜೊತೆ ನಿಂತಿದ್ದೇವೆ. ಆದರೂ ಆ ಸಮುದಾಯ ನಮ್ಮ ಜೊತೆ ನಿಂತಿಲ್ಲ. ಹೋರಾಟದ ಹಿನ್ನೆಲೆಯಲ್ಲಿ ಈ ಪಕ್ಷ ಕಟ್ಟಿದ್ದೇವೆ. ವಯಸ್ಸು ಚಿಕ್ಕದಿದೆ ಎಲ್ಲವನ್ನೂ ಸಮಚಿತ್ತದಿಂದ ತೆಗೆದುಕೊಂಡಿದ್ದೇನೆ. ರಾಜ್ಯದ ನಿಷ್ಠಾವಂತ ಕಾರ್ಯಕರ್ತರೆಲ್ಲರಿಗೂ ಧ್ವನಿಯಾಗಿರುತ್ತೇನೆ ಎಂದರು. ನಾನು ಮೂರು ಬಾರಿ ಸೋತಿದ್ದೇನೆ ಎಂಬುದನ್ನು ಒಪ್ಪಿಕೊಳ್ಳುತ್ತೇನೆ. ನಾನು ಇದುವರೆಗೂ ಗೆಲುವನ್ನು ನೋಡಿಲ್ಲ. ಇತಿಹಾಸ ನೋಡಿದರೆ ಅಬ್ರಾಹಂ ಲಿಂಕನ್, ಅಂಬೇಡ್ಕರ್, ವಾಜಪೇಯಿ ಸೋತಿದ್ದನ್ನು ಹೇಳುತ್ತಾರೆ. ಈ ಪರಿಸ್ಥಿತಿಯಲ್ಲಿ ಕಾರ್ಯಕರ್ತರಿಗೆ ಟಿಕೆಟ್ ಕೊಟ್ಟು, ಅವರು ಸೋತಿದ್ದರೆ ಕುಟುಂಬ, ರಾಜಕಾರಣ, ಸ್ವಾರ್ಥ ಎಂಬ ಆರೋಪ ಬರುತ್ತಿತ್ತು. ಈಗ ಈ ಹೊಣೆ ನಾನೇ ಹೊರುತ್ತೇನೆ. ನೆಮ್ಮದಿಯಿಂದ ಮಲಗುತ್ತೇನೆ. ಈ ಒಂದು ಸೋಲಿನಿಂದ ಜಿಲ್ಲೆಯಲ್ಲಿ ಜೆಡಿಎಸ್ ಮುಕ್ತ ಅಂದುಕೊಳ್ಳಲು ಸಾಧ್ಯವಿಲ್ಲ. ಕಾಂಗ್ರೆಸ್ ನವರು ಲೋಕಸಭೆಯಲ್ಲಿ ಸೋತರು ಅವರ ಬಲವಿಲ್ಲ ಎಂದು ಹೇಳಲು ಸಾಧ್ಯವಿಲ್ಲ. ಹಾಗೆಯೇ ಈ ಗೆಲುವಿನಿಂದ ಅವರ ಬಲ ಮತ್ತೆ ಹೆಚ್ಚಿದೆ ಎನ್ನಲು ಸಾಧ್ಯವಿಲ್ಲ ಎಂದು ತಿಳಿಸಿದರು.

ಎನ್‌ಡಿಎ ಅಭ್ಯರ್ಥಿಗಳ ಸೋಲು ನಿರಾಶೆ ತಂದಿದೆ

ಬೆಂಗಳೂರು, ನ.23(ಕೆಎಂಶಿ)– ರಾಜ್ಯದ ಮೂರು ವಿಧಾನಸಭಾ ಕ್ಷೇತ್ರಗಳ ಉಪಚುನಾವಣೆಯಲ್ಲಿ ಎನ್‌ಡಿಎ ಮೈತ್ರಿಕೂಟ ಅಭ್ಯರ್ಥಿಗಳ ಸೋಲು ಖಂಡಿತಾ ನಿರಾಶೆ ಮೂಡಿಸಿದೆ. ಇದಕ್ಕೆ ಕಾರಣ ಏನು ಎಂಬುದನ್ನು ಅರಿತು ಮುಂದಿನ ದಿನಗಳಲ್ಲಿ ತಪ್ಪನ್ನು ಸರಿಪಡಿಸುವ ಕೆಲಸವನ್ನು ಪ್ರಾಮಾಣಿಕವಾಗಿ ಮಾಡುತ್ತೇವೆ ಎಂದು ಬಿಜೆಪಿ ರಾಜ್ಯಾಧ್ಯಕ್ಷ ಬಿ.ವೈ.ವಿಜಯೇಂದ್ರ ತಿಳಿಸಿದ್ದಾರೆ. ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಬಿಜೆಪಿ ಮತ್ತು ಮಿತ್ರ ಪಕ್ಷ ಜೆಡಿಎಸ್‌ಗೆ ಉಪಚುನಾವಣೆಯಲ್ಲಿ ಗೆಲುವು ಸಾಧಿಸಲು ಏಕೆ ಸಾಧ್ಯವಾಗಲಿಲ್ಲ ಎಂಬ ಬಗ್ಗೆ ಎರಡೂ ಪಕ್ಷಗಳ ಮುಖಂಡರು ಕುಳಿತು ಚರ್ಚೆ ಮಾಡಲಿದ್ದೇವೆ ಎಂದರು.


ವಿಜಯೇಂದ್ರ

ಚನ್ನಪಟ್ಟಣ, ಶಿಗ್ಗಾಂವಿ ಹಾಗೂ ಸಂಡೂರು ಸೇರಿದಂತೆ ಮೂರೂ ಕ್ಷೇತ್ರಗಳಲ್ಲೂ ನಮಗೆ ಹಿನ್ನಡೆ ಆಗಿದೆ, ಚನ್ನಪಟ್ಟಣದಲ್ಲಿ ನಮ್ಮ ಮಿತ್ರ ಪಕ್ಷ ಜೆಡಿಎಸ್, ಶಿಗ್ಗಾಂವಿ ಹಾಗೂ ಸಂಡೂರಿನಲ್ಲಿ ಬಿಜೆಪಿ ಗೆಲ್ಲಲಿದೆ ಎಂಬ ವಿಶ್ವಾಸ ಇಟ್ಟುಕೊಂಡಿದ್ದೆವು, ಆದರೆ, ನಮಗೆ ನಿರಾಸೆ ಆಗಿರುವುದು ಸತ್ಯ. ಮೊದಲ ಬಾರಿ ಸಂಡೂರು ಕ್ಷೇತ್ರದಲ್ಲಿ ಬಿಜೆಪಿ ಸುಮಾರು 80 ಸಾವಿರ ಮತಗಳನ್ನು ಪಡೆದಿದೆ, ನಾವು ಇಲ್ಲಿ 10 ಸಾವಿರ ಮತಗಳ ಅಂತರದಿಂದ ಗೆಲ್ಲುವ ವಿಶ್ವಾಸವಿತ್ತು, ಅದಕ್ಕೆ ತಕ್ಕಂತೆ ಎಲ್ಲ ಶ್ರಮ ಹಾಕಿದ್ದೆವು, ಆದರೂ ನಮಗೆ ಗೆಲ್ಲಲು ಸಾಧ್ಯವಾಗಿಲ್ಲ.

ಸಂಡೂರಿನ ಫಲಿತಾಂಶ ಹಿನ್ನಡೆ ಎಂಬುದಾಗಿ ನಾವು ಭಾವಿಸುವುದಿಲ್ಲ, ಉತ್ತಮ ಪ್ರಮಾಣದಲ್ಲಿ ಮತಗಳನ್ನು ನಾವು ಪಡೆದಿದ್ದೇವೆ, ಮುಂದಿನ ದಿನಗಳಲ್ಲಿ ನಾವೆಲ್ಲರೂ ಕುಳಿತು ಹಿನ್ನಡೆಗೆ ಕಾರಣಗಳೇನು ಎಂದು ಚರ್ಚಿಸುತ್ತೇವೆ ಎಂದರು. ಶಿಗ್ಗಾಂವಿ ಫಲಿತಾಂಶ ಆಘಾತ ತಂದಿದೆ, ಮಾಜಿ ಸಿಎಂ ಬಸವರಾಜ ಬೊಮ್ಮಾಯಿ ಅವರ ಪುತ್ರ ಭರತ್ ಬಿಜೆಪಿ ಅಭ್ಯರ್ಥಿಯಾಗಿದ್ದರು, ಪಕ್ಷದ ಎಲ್ಲ ಕಾರ್ಯಕರ್ತರು ಹಗಲು–ರಾತ್ರಿ ಶ್ರಮ ಹಾಕಿದ್ದರು. ಬಸವರಾಜ ಬೊಮ್ಮಾಯಿ ಅಲ್ಲಿ ಸಾಕಷ್ಟು ಅಭಿವೃದ್ಧಿ ಕೆಲಸ ಮಾಡಿದ್ದಾರೆ, ಮತದಾರರು ಆಡಳಿತ ಪಕ್ಷದ ಕಡೆ ವಾಲಿದ್ದಾರೆ. ಇದೆಲ್ಲವನ್ನೂ ನಾವು, ಹಿರಿಯರು ಕುಳಿತು ಸೋಲಿನ ವಿಮರ್ಶೆ ಮಾಡುತ್ತೇವೆ ಎಂದರು.

ಮೈಸೂರು ವಿಶ್ವವಿದ್ಯಾನಿಲಯ
ದೈಹಿಕ ಶಿಕ್ಷಣ ಮತ್ತು ಕ್ರೀಡಾ ವಿಜ್ಞಾನ ಅಧ್ಯಯನ ವಿಭಾಗ,
ಸ್ಪೋರ್ಟ್ಸ್ ಪೆವಿಲಿಯನ್, ಮೈಸೂರು – 5
ಸಂಖ್ಯೆ: ದೈ.ಶಿ.ಕ್ರೀ.ವಿ/168/2024–25 ದಿನಾಂಕ: 21.11.2024

ಟೆಂಡರ್ ಪ್ರಕಟಣೆ

(ಕರ್ನಾಟಕ ಸರ್ಕಾರದ ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಮೂಲಕ ಮಾತ್ರ)
https:www.kppp.karnataka.gov.in

ದೈಹಿಕ ಶಿಕ್ಷಣ ಮತ್ತು ಕ್ರೀಡಾ ವಿಜ್ಞಾನ ಅಧ್ಯಯನ ವಿಭಾಗಕ್ಕೆ ಅಗತ್ಯವಾಗಿ ಬೇಕಾಗಿರುವ ಕ್ರೀಡಾಸಾಮಾಗ್ರಿಗಳನ್ನು ಖರೀದಿಸಲು ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳಲ್ಲಿ ಪಾರದರ್ಶಕತೆ ಅಧ್ಯಾದೇಶ 2000, ಅಧ್ಯಾಯ–02ರ ಅಧಿನಿಯಮ 3(2)ರ ಪ್ರಕಾರ ಕರ್ನಾಟಕ ಸರ್ಕಾರದ ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಮೂಲಕ ಮಾತ್ರ ಸಲ್ಲಿಸಲು ಟೆಂಡರ್‌ಗಳನ್ನು ಆಹ್ವಾನಿಸಿರುತ್ತಾರೆ. ಟೆಂಡರ್ ಸಲ್ಲಿಸಲು ಅಂತಿಮ ದಿ: 05.12.2024. ಟೆಂಡರ್ ಸಂಖ್ಯೆ: Sports Materials : UOM/2024-25/IND0038

ಸೂಚನೆ: ಹೆಚ್ಚಿನ ವಿವರಗಳನ್ನು ದೂರವಾಣಿ ಸಂಖ್ಯೆ: 9901203647 E-Mail: dospess,uom@gmail.com ಪಡೆಯಬಹುದಾಗಿದೆ.

ಸಹಿ/– ಅಧ್ಯಕ್ಷರು, ದೈಹಿಕ ಶಿಕ್ಷಣ ಮತ್ತು ಕ್ರೀಡಾ ವಿಜ್ಞಾನ, ಅಧ್ಯಯನ ವಿಭಾಗ, ಸ್ಪೋರ್ಟ್ಸ್ ಪೆವಿಲಿಯನ್, ಮೈಸೂರು – 570 005
DIPR/DDMYS-840/KSMCA-573/2024-25

2ನೇ ವರ್ಷದ ಸವಿನೆನಪು



ಉದಯ್ ಬಹದ್ದೂರ್ ಶೆಣೈ
(ಅರಣ್ಯ ಇಲಾಖೆ)
ಜನನ: 01.01.1937 – ನಿಧನ: 25.11.2022
ನೀವು ನಮ್ಮನ್ನಗಲಿ 2 ವರ್ಷಗಳು ಕಳೆದರೂ ನಿಮ್ಮ ನೆನಪು ಸದಾ ನಮ್ಮ ಮನ ಮನೆಯಲ್ಲಿ ಚಿರಸ್ಥಾಯಿಯಾಗಿದೆ.
ಇಂತಿ ನಿಮ್ಮ ಕುಟುಂಬವರ್ಗದವರು


ಮೈಸೂರು ಟಿ.ಕೆ ಪಾರ್ಕ್ ಗೃಹ ನಿರ್ಮಾಣ ಸಹಕಾರ ಸಂಘ ನಿ., ಸರಸ್ವತಿಪುರಂ, ಮೈಸೂರು
ಇದರ ರಿಟರ್ನಿಂಗ್ ಆಫೀಸರ್‌ವರ ಕಾರ್ಯಾಲಯ

ಪತ್ರಿಕಾ ಪ್ರಕಟಣೆ

ಮೇಲ್ಕಂಡ ಸಹಕಾರ ಸಂಘದ ಆಡಳಿತ ಮಂಡಳಿಗೆ ಚುನಾವಣಾ ದಿನಾಂಕದಿಂದ ಮುಂದಿನ ಐದು (5) ವರ್ಷಗಳ ಅವಧಿಗೆ ಚುನಾವಣೆ ನಡೆಸಲು ದಿನಾಂಕ: 08–12–2024ರ ಭಾನುವಾರ ಬೆಳಗ್ಗೆ 09–00 ಗಂಟೆಯಿಂದ ಮಧ್ಯಾಹ್ನ 3–00 ಗಂಟೆಯವರೆಗೆ ಸಂಘದ ಕಛೇರಿಯಲ್ಲಿ ನಡೆಸಲು ನಿಗಧಿಪಡಿಸಲಾಗಿರುತ್ತದೆ. ಚುನಾವಣೆಗೆ ಸ್ಪರ್ಧಿಸಲು ನಾಮಪತ್ರಗಳನ್ನು ದಿನಾಂಕ:24–11–2024 ರಿಂದ 30–11–2024ರವರೆಗೆ ಬೆಳಗ್ಗೆ 11–00 ಗಂಟೆಯಿಂದ ಮಧ್ಯಾಹ್ನ 2–00 ಗಂಟೆಯವರೆಗೆ ಸಂಘದ ಕಛೇರಿಯಲ್ಲಿ ಸ್ವೀಕರಿಸಲಾಗುವುದು. ಚುನಾವಣಾ ವೇಳಾಪಟ್ಟಿಯನ್ನು ಎಲ್ಲಾ ಅರ್ಹ ಸದಸ್ಯರುಗಳಿಗೂ ರವಾನಿಸಲಾಗಿದ್ದು, ಹೆಚ್ಚಿನ ವಿವರಗಳಿಗಾಗಿ ಸಂಘದ ಕಾರ್ಯದರ್ಶಿ ಅಥವಾ ರಿಟರ್ನಿಂಗ್ ಆಫೀಸರ್‌ರವರನ್ನು ಸಂಪರ್ಕಿಸಲು ಕೋರಲಾಗಿದೆ.

ಸಹಿ/– (ಆರ್.ವಿ.ಕೆ) ರಿಟರ್ನಿಂಗ್ ಆಫೀಸರ್,
ಮೈಸೂರು ಟಿ.ಕೆ ಪಾರ್ಕ್ ಗೃಹ ನಿರ್ಮಾಣ ಸಹಕಾರ ಸಂಘ ನಿ, ಸರಸ್ವತಿಪುರಂ, ಮೈಸೂರು

ನಿಧನ



ವಾಸು. ಹೆಚ್

(ಹನುಮಂತಪ್ಪನವರ ಮಗ)

ಇವರು ದಿನಾಂಕ 23.11.2024 ರಂದು ನಿಧನರಾಗಿದ್ದು, ಅಂತ್ಯಕ್ರಿಯೆಯನ್ನು ದಿನಾಂಕ 24.11.2024ರ ಮಧ್ಯಾಹ್ನ 1 ಗಂಟೆಗೆ ಚಾಮುಂಡಿಬೆಟ್ಟದ ತಪ್ಪಲಿನಲ್ಲಿ ನೆರವೇರಿಸಲಾಗುತ್ತದೆ.

ದುಃಖತಪ್ತರು: ಹನುಮಂತು ಮಿಲ್ಟ್ರಿ ಹೋಟೆಲ್, ಕುಟುಂಬವರ್ಗ ಮತ್ತು ಸಿಬ್ಬಂದಿವರ್ಗದವರು. ಮೊ: 6363210535

ನಕ್ಕರೆ ಅದೇ ಸ್ವರ್ಗ

ಗುಂಡ : ಯಾಕೋ ತುಂಬಾ ತಲೆನೋವು
ತಿಮ್ಮ : ಹಾಗಾದ್ರೆ, ನಿನ್ನ ಹೆಂಡತಿ ಜೊತೆ ಸ್ವಲ್ಪ ಹೊತ್ತು ಮಾತಾಡು
ಗುಂಡ : ಏಕೆ?
ತಿಮ್ಮ : ತಲೆನೋವನ್ನು ತಲೆನೋವಿನಿಂದಲೇ ಹೋಗಿಸಲು ಸಾಧ್ಯ!

ಮೈಸೂರು ಮಿತ್ರ

ಭಾನುವಾರ, 24 ನವೆಂಬರ್ 2024

ಸತ್ಯೇನೋತ್ತಭಿತಾ ಭೂಮಿಃ!! ನಹಿ ಸತ್ಯಾತ್ಪರೋ ಧರ್ಮಃ!
(ಭೂಮಿಯು ಸತ್ಯದ ಮೇಲೆ ನಿಂತಿದೆ, ಸತ್ಯಕ್ಕಿಂತ ಮಿಗಿಲಾದ ಧರ್ಮವಿಲ್ಲ)
ಸಂಪಾದಕ: ಎಂ.ಗೋವಿಂದೇಗೌಡ M.A.

ಅಮೃತ ವಾಹಿನಿ.........

ಇರುವೆ ನಿಮ್ಮ ಕಾಲಿಗೆ ಕಚ್ಚಿತೆಂದು ನೀವು ಅದರ ಕಾಲಿಗೆ ಕಚ್ಚಲು ಸಾಧ್ಯವಿಲ್ಲ. ಹಾಗಾಗಿ ಜೀವನದಲ್ಲಿ ನೀವು ಯಾರನ್ನೂ ಕಡಿಮೆ ಎಂದು ಭಾವಿಸಬೇಡಿ. ಅವರು ಮಾಡುವುದನ್ನು ಬಹುಶಃ ನೀವು ಮಾಡಲಾರಿರಿ.

ವೇದ ಸುಳ್ಳಾದರೂ ಗಾದೆ ಸುಳ್ಳಾಗದು { ನೂರಾರು ರೋಗಿಗಳನ್ನು ಕೊಂದು ಒಬ್ಬ ವೈದ್ಯ ಆದಂತೆ !

ನಿಮ್ಮ ಪತ್ರಗಳು

■ ಡಿ.ಸುಬ್ಬಯ್ಯ ರಸ್ತೆ ದುರವಸ್ಥೆ



ಮಾನ್ಯರೆ,

ಮೈಸೂರಿನ ಡಿ.ಸುಬ್ಬಯ್ಯ ರಸ್ತೆಯಲ್ಲಿ ಯುಜಿಡಿ ಪೈಪ್ ಹಾಕಲು ರಸ್ತೆ ಅಗೆದು ತಿಂಗಳುಗಳೇ ಕಳೆದರೂ ಈ ವರೆಗೂ ರಸ್ತೆ ದುರಸ್ತಿ ಮಾಡಿ ಹೊಸದಾಗಿ ಡಾಂಬರೀಕರಣ ಮಾಡಿಲ್ಲ. ಇದರಿಂದಾಗಿ ವಾಹನ ಸವಾರರು ಹಾಗೂ ಸಾರ್ವಜನಿಕರು ಗುಂಡಿ ಬಿದ್ದ ರಸ್ತೆಯಲ್ಲೇ ಹಿಡಿಶಾಪ ಹಾಕುತ್ತಾ ಓಡಾಡುವಂತಾಗಿದೆ. ನಗರ ಪಾಲಿಕೆ ಸದಸ್ಯರ ಅವಧಿ ಮುಗಿದಿದೆ. ಶಾಸಕ ಹರೀಶ್‌ಗೌಡರು ಚುನಾವಣೆಯಲ್ಲಿ ಗೆದ್ದ ನಂತರ ಇತ್ತ ತಿರುಗಿಯೂ ನೋಡಿಲ್ಲ. ಪಾಲಿಕೆ ಅಧಿಕಾರಿಗಳೂ ಇತ್ತ ಗಮನ ಹರಿಸುವುದಿಲ್ಲ. ನೀರಿನ ಕಂದಾಯ, ಮನೆ ಕಂದಾಯವನ್ನು ಕಡ್ಡಾಯವಾಗಿ ಪಾವತಿಸಿಕೊಳ್ಳುವ ಪಾಲಿಕೆ ಅಧಿಕಾರಿಗಳಿಗೆ ಜನರಿಗೆ ರಸ್ತೆ ಮೊದಲಾದ ಮೂಲ ಸೌಕರ್ಯ ಕಲ್ಪಿಸಬೇಕೆಂಬ ಕನಿಷ್ಠ ಜ್ಞಾನವಿಲ್ಲದೇ ಇರುವುದು ಬೇಸರದ ಸಂಗತಿ. ಜವಾಬ್ದಾರಿಯುತ ಸ್ಥಾನದಲ್ಲಿರುವ ಶಾಸಕರು ಕೂಡಲೇ ಇತ್ತ ಗಮನ ಹರಿಸಿ ರಸ್ತೆ ದುರಸ್ತಿಗೆ ಕ್ರಮ ಕೈಗೊಳ್ಳಬೇಕಾಗಿದೆ.

–ಸಾರಿಕಾ, ಡಿ.ಸುಬ್ಬಯ್ಯ ರಸ್ತೆ ಮೈಸೂರು.

■ ಬೆಲೆ ಏರಿಕೆ ಬಿಸಿ ಮಧ್ಯಮ ವರ್ಗಕ್ಕೆ ಮಾತ್ರ ತಾಗಿದೆ

ಮಾನ್ಯರೆ,

ದಿನದಿಂದ ದಿನಕ್ಕೆ ದಿನನಿತ್ಯ ಬಳಸುವ ವಸ್ತುಗಳು, ಹಣ್ಣು, ತರಕಾರಿಗಳು, ದಿನಸಿ ಪದಾರ್ಥಗಳು, ಬೇಳೆ, ಕಾಳುಗಳ ಬೆಲೆಗಳು ಏರುತ್ತಿವೆ. ಒಂದು ದಿನ ಇದ್ದ ಬೆಲೆ ಮತ್ತೊಂದು ದಿನಕ್ಕೆ ಇರುವುದಿಲ್ಲ. ಗಗನಕ್ಕೆ ಏರುತ್ತಿರುವ ಬಿಸಿ ಮಧ್ಯಮ ವರ್ಗಕ್ಕೆ ಮಾತ್ರ ತಾಗುತ್ತಿದೆ ಎಂಬುದು ನನ್ನ ಅನಿಸಿಕೆ. ಬಿಪಿಎಲ್ ಕಾರ್ಡ್ ಹೊಂದಿರುವವರು ಸರ್ಕಾರದಿಂದ ಸಿಗುವ ಎಲ್ಲಾ ಬಿಟ್ಟಿ ಭಾಗ್ಯಗಳ ಜೊತೆಗೆ ಕೇಂದ್ರ ಸರ್ಕಾರದ ಯೋಜನೆಗಳು ಮತ್ತು ಇನ್ನಿತರ ಪ್ರಯೋಜನಗಳನ್ನು ಕೂಡ ಪಡೆದುಕೊಳ್ಳುತ್ತಿದ್ದಾರೆ. (ಕಡು ಬಡವರಿಗೆ ಅನುಕೂಲವಾಗಲಿ). ಶ್ರೀಮಂತರಿಗೆ ಬೆಲೆ ಏರಿಕೆಯ ಬಿಸಿ ತಾಗುವುದಿಲ್ಲ. ಆದರೆ ಮಧ್ಯಮ ವರ್ಗದ ಜನತೆ ಬೆಲೆ ಏರಿಕೆಯಿಂದ ತತ್ತರಿಸುತ್ತಿದ್ದಾರೆ. ಅಲ್ಲದೆ ಇವರು ಅನೇಕ ತೆರಿಗೆಗಳನ್ನು ಕೂಡ ಪಾವತಿಸಬೇಕು. ಇವರಿಗೆ ಸರ್ಕಾರದ ಕೆಲವು ಬಿಟ್ಟಿ ಯೋಜನೆಗಳು ಸಿಗುತ್ತಿಲ್ಲ. ಸರ್ಕಾರ ಮಧ್ಯಮ ವರ್ಗದವರನ್ನು ಕಡೆಗಣಿಸಿದೆ. ಅಲ್ಲದೆ ಯಾವುದೇ ಅಭಿವೃದ್ಧಿ ಕಾರ್ಯಗಳು ನಡೆಯುತ್ತಿಲ್ಲ. ಇಂತಹ ಸರ್ಕಾರ ನಮಗೆ ಬೇಕೇ?

–ರೂಪ ಎಂ., ಸೋಮನಾಥನಗರ, ದಟ್ಟಗಳ್ಳಿ ಮೈಸೂರು

■ ಶೀಘ್ರ ಡಾಂಬರೀಕರಣಗೊಳಿಸಿ

ಮಾನ್ಯರೆ,

ಮೈಸೂರು ತಾಲೂಕು ಜಯಪುರ ಹೋಬಳಿಯ ಯಡಹಳ್ಳಿ ಗ್ರಾಮದಿಂದ ದೇವಗಳ್ಳಿಗೆ ಸಂಪರ್ಕಿಸುವ ರಸ್ತೆಯು ಯಡಹಳ್ಳಿಯ ಹೊರಹೊಲಯ ಲೇಔಟ್‌ನಿಂದ ದೇವಗಳ್ಳಿಗೆ ಸಂಪರ್ಕಿಸುವ ತಿರುವಿನವರೆಗೆ ಸಂಪೂರ್ಣ ಹಾಳಾಗಿದೆ. ಹಾಗೂ ದಾರಿಪುರ ಗ್ರಾಮದಿಂದ ಮುಳ್ಳೂರಿಗೆ ಸಂಪರ್ಕಿಸುವ ತಿರುವಿನವರೆಗೆ ರಸ್ತೆಯು ಕೂಡ ಸಂಪೂರ್ಣ ಹಾಳಾಗಿದೆ. ಹಲವು ವರ್ಷಗಳಿಂದ ಈ ಎರಡು ರಸ್ತೆಗಳು ಹಾಳಾಗಿದ್ದರೂ ರಸ್ತೆಗೆ ಡಾಂಬರೀಕರಣ ಮಾಡದೆ ಸಂಬಂಧಪಟ್ಟ ಗ್ರಾಮ ಪಂಚಾಯತಿಯವರು ಹಾಗೂ ಅಧಿಕಾರ ವರ್ಗದವರು ನಿರ್ಲಕ್ಷ್ಯ ತೋರುತ್ತಿದ್ದಾರೆ. ದಿನನಿತ್ಯ ಈ ಎರಡು ರಸ್ತೆಗಳಲ್ಲಿ ಹಲವಾರು ಜನರು ತಮ್ಮ ದಿನ ನಿತ್ಯದ ಕೆಲಸಗಳಿಗೆ ಓಡಾಡುತ್ತಾರೆ. ದಯವಿಟ್ಟು ಸಂಬಂಧಪಟ್ಟವರು ರಸ್ತೆಯನ್ನು ಡಾಂಬರೀಕರಣ ಮಾಡಿ ಸಾರ್ವಜನಿಕರ ಸುಗಮ ಓಡಾಟಕ್ಕೆ ಅನುವು ಮಾಡಿಕೊಡಬೇಕಾಗಿ ವಿನಂತಿಸಿಕೊಳ್ಳುತ್ತೇನೆ.

–ಮಂಜೇಶ್ ದೇವಗಳ್ಳಿ, ಮೈಸೂರು

■ ನಕ್ಸಲರನ್ನು ಸಮಾಜದ ಮುಖ್ಯವಾಹಿನಿಗೆ ತನ್ನಿ

ಮಾನ್ಯರೆ,

ನಕ್ಸಲ್ ನಾಯಕ ವಿಕ್ರಂ ಗೌಡನನ್ನು ನಕ್ಸಲ್ ವಿರೋಧಿ ಪಡೆಯ ಸದಸ್ಯರು ಗುಂಡಿಕ್ಕಿ ಕೊಂದಿರುವುದು ಮಾಧ್ಯಮಗಳಲ್ಲಿ ವರದಿಯಾಗಿದೆ. 44 ವರ್ಷ ವಯಸ್ಸಿನ ವಿಕ್ರಂಗೌಡನ ವಿರುದ್ಧ ಕೊಲೆ ಸೇರಿದಂತೆ ಹಲವಾರು ಪ್ರಕರಣಗಳು ರಾಜ್ಯದಲ್ಲಿ ಮಾತ್ರವಲ್ಲದೇ ನೆರೆಯ ಕೇರಳ ರಾಜ್ಯದಲ್ಲಿ ಕೂಡ ದಾಖಲಾಗಿದ್ದವೆಂದು ಪೊಲೀಸ್ ಮೂಲಗಳು ತಿಳಿಸಿವೆ.

22 ವರ್ಷಗಳ ಹಿಂದೆಯೇ ವಿಕ್ರಂಗೌಡ ನಕ್ಸಲ್ ಚಟುವಟಿಕೆಗಳಲ್ಲಿ ಭಾಗಿಯಾಗಲು ಪ್ರಾರಂಭಿಸಿದ ಎಂದು ತಿಳಿದು ಬಂದಿದೆ. ವಿಕ್ರಂಗೌಡನಂತೆ ದೇಶದ ಹಲವಾರು ರಾಜ್ಯಗಳಲ್ಲಿ ನಕ್ಸಲೈಟ್‌ಗಳಾಗಿ ನೂರಾರು ಯುವಕ, ಯುವತಿಯರು ಕಾರ್ಯ ನಿರ್ವಹಿಸುತ್ತಿದ್ದಾರೆಂದು ಹೇಳಲಾಗಿದೆ. ಒಂದು ಕಾಲದಲ್ಲಿ ಆಂಧ್ರಪ್ರದೇಶ, ಪಶ್ಚಿಮ ಬಂಗಾಳ, ಗುಜರಾತ್, ಬಿಹಾರ್, ಮಧ್ಯಪ್ರದೇಶ ಮುಂತಾದ ರಾಜ್ಯಗಳಲ್ಲಿ ನಕ್ಸಲೀಯರ ಹಾವಳಿ ಮಿತಿ ಮೀರಿತ್ತು.

ನಕ್ಸಲರನ್ನು ಸಮಾಜದ ಮುಖ್ಯವಾಹಿನಿಗೆ ತಂದು, ಅವರೂ ಸಹ ಇತರರಂತೆ ಬದುಕು ಕಟ್ಟಿಕೊಳ್ಳಲು ಕೆಲವು ರಾಜ್ಯ ಸರ್ಕಾರಗಳು ಪ್ರಾರಂಭಿಸಿದ ಪ್ರಯತ್ನಗಳು ಬಹುತೇಕ ವಿಫಲವಾಗಿವೆ ಎಂದು ಹೇಳಬಹುದು. ಕೇಂದ್ರ ಮತ್ತು ಸಂಬಂಧಪಟ್ಟ ರಾಜ್ಯಗಳು ಇನ್ನು ಮುಂದಾದರೂ ನಕ್ಸಲೀಯರನ್ನು ಸಮಾಜದ ಮುಖ್ಯವಾಹಿನಿಗೆ ಕರೆದೊಯ್ಯುವತ್ತ ಪ್ರಾಮಾಣಿಕ ಪ್ರಯತ್ನ ಮಾಡವೇಕಾಗಿದೆ.

–ಕೆ.ವಿ.ವಾಸು, ವಕೀಲರು ಮತ್ತು ನೋಟರಿ, ಮೈಸೂರು



ಡಾ.ರಮಾ ವಿ. ಬೆಣ್ಣೂರ್
ಸಂಗೀತ ವಿಮರ್ಶಕರು
ಮೊ: 99452 82346

ನಾದಲಹರಿ

ಸ್ವರಗಳ ಗುಂಜಾರ...

ಸಂಗೀತ ಕ್ಷೇತ್ರದಲ್ಲಿ ಆಗಿಹೋಗಿರುವ ಹೆಜ್ಜೆ ಗುರುತುಗಳನ್ನು ದಾಖಲಿಸುವುದು ಯಾರೇ ಆದರೂ ಮಾಡಬಹುದಾದ ಮಹತ್ಕಾರ್ಯ ಎಂಬುದರಲ್ಲಿ ಎಳ್ಳಷ್ಟೂ ಉತ್ಪ್ರೇಕ್ಷೆ ಇಲ್ಲ. ಮಹಾನ್ ವಾಗ್ಗೇಯಕಾರರು ನಮ್ಮಲ್ಲಿ ಆಗಿಹೋಗಿದ್ದಾರೆ. ಅವರ ರಚನೆಗಳನ್ನು ದಾಖಲಿಸುವುದು, ಅವರ ಜೀವನ ಚರಿತ್ರೆಯನ್ನು ಸಾಕ್ಷ್ಯಾಧಾರಗಳ ಸಮೇತ ಪ್ರಕಟಿಸುವುದು, ಸಂಗೀತ ಮತ್ತು ವಾದ್ಯಗಳು ದಾಟಿ ಬಂದಿರುವ ಘಟ್ಟಗಳನ್ನು ವೈಜ್ಞಾನಿಕವಾಗಿ ದಾಖಲಿಸುವುದು ಇವೆಲ್ಲವೂ ಮುಂದಿನ ಪೀಳಿಗೆಗೆ ಮಾಡುವಂತಹ ಮಹೋಪಕಾರಗಳೇ ಹೌದು. ಈ ಆಧುನಿಕ ಪ್ರಪಂಚದಲ್ಲಿ ಇದರ ಸಾಲಿಗೆ ಸೇರಬಹುದಾದ ಮತ್ತೊಂದು ಪ್ರಯತ್ನ ಎಂದರೆ, ಸಾಕ್ಷ್ಯಚಿತ್ರಗಳನ್ನು ತಯಾರಿಸುವುದು, ಡಿಜಿಟಲ್ ಮಾಧ್ಯಮದಲ್ಲಿ ದಾಖಲೆಗಳನ್ನು ನಿರ್ಮಿಸುವುದು ಇತ್ಯಾದಿಗಳು.

ಇತ್ತೀಚೆಗೆ ಹಿಂದೂಸ್ತಾನಿ ಸಂಗೀತ ಕ್ಷೇತ್ರದಲ್ಲಿ ಇಂತಹ ಎರಡು ಬೃಹತ್ ಪ್ರಯತ್ನಗಳು ನಡೆದು ಸಂಗೀತ ಇತಿಹಾಸಕ್ಕೆ ಮಹತ್ತರ ಕಾಣಿಕೆಯನ್ನು ಅರ್ಪಿಸಿದುವು. ಮೊದಲನೆಯದು ವಿಷ್ಣುನಾರಾಯಣ ಭಾತ್ಕಂಡೆಯವರ 1896 ರಚನೆಗಳನ್ನು ಆಡಿಯೋ ರೆಕಾರ್ಡ್ ಮಾಡಿದುದು ಮತ್ತು ಅತ್ಯಂತ ಹಿರಿಯ ಹಿಂದುಸ್ತಾನಿ ಗಾಯಕರಾದ ಪಂಡಿತ್ ಇಂದೂಧರ್ ನಿರೋಡಿ ಮತ್ತು ಕಲಾ ಪೋಷಕರಾದ ಶ್ರೀ ಜಗನ್ನಾಥ ಶೆಣೈ ಅವರುಗಳನ್ನು ಕುರಿತಾದ ಸಾಕ್ಷ್ಯಚಿತ್ರಗಳನ್ನು ಲೋಕಾರ್ಪಣೆ ಮಾಡಿದುದು. ಮೈಸೂರಿನಲ್ಲಿ ನೆಲೆಸಿದ್ದ ಪಂಡಿತ್ ನಿರೋಡಿಯವರ ಮಹತ್ ಸಾಧನೆಗಳಲ್ಲಿ ಒಂದು ಈ ರಚನೆಗಳನ್ನು ಹಾಡಿ, ಮುಂದಿನ ಪೀಳಿಗೆಗೆ ಅರ್ಪಿಸಿದುದು. ಇದರ ಹಿಂದೆ ಅವರ ನಿರಂತರ ಸಾಧನೆ, ಅವಿರತ ಪ್ರಯತ್ನ ಮತ್ತು ಅಪರಿಮಿತ ಸಂಗೀತ ಪ್ರೀತಿ ಇದೆ. ತನ್ನ ಜ್ಞಾನವನ್ನು ಇತರರಿಗೂ ಹಂಚಬೇಕೆಂಬ ಕಳಕಳಿ ಇದೆ. ಮೇಲೆ ಹೇಳಿದ ಈ ಎರಡೂ ಪ್ರಾಜೆಕ್ಟ್‌ಗಳ ತಯಾರಿ ಅಥವಾ ನಿರ್ಮಾಣದಲ್ಲಿ ಮೈಸೂರಿನ ಸ್ವರಸಂಕುಲ ಸಂಗೀತ ಸಭಾದ ಮಹತ್ತರ ಪಾತ್ರ ಇದೆ ಎಂಬುದನ್ನು ಅಲ್ಲಗಳೆಯಲಾಗದು.

ಇದೇ ನವಂಬರ್ 10ನೆಯ ತಾರೀಖಿನಂದು ಗಾನಭಾರತಿಯ ವೀಣೆ ಶೇಷಣ್ಣ ಭವನದಲ್ಲಿ ಇದೇ ಸ್ವರಸಂಕುಲ ಸಂಸ್ಥೆಯು ತಾನು ಮತ್ತು ಕನ್ನಡಿ ಕ್ರಿಯೇಷನ್‌ನ ಜೊತೆಗೂಡಿ ನಿರ್ಮಿಸಿದಂತಹ ಎರಡು ಸಾಕ್ಷ್ಯ ಚಿತ್ರಗಳನ್ನು ಲೋಕಾರ್ಪಣೆ ಮಾಡಿತು. ಪಂಡಿತ್ ಇಂದೂಧರ್ ನಿರೋಡಿ ಮತ್ತು ಎಂ.ಜಗನ್ನಾಥ ಶೆಣೈ ಅವರನ್ನು ಕುರಿತ ಸಾಕ್ಷ್ಯಚಿತ್ರಗಳವು. ಸ್ವರಸಂಕುಲದ ಅಧ್ಯಕ್ಷರಾಗಿರುವ ಡಾ.ಎಂ.ಎಸ್.ಭಾಸ್ಕರ್ ಅವರ ಪರಿಕಲ್ಪನೆ ಮತ್ತು ವೀರಭದ್ರಯ್ಯ ಅವರ ನಿರ್ವಹಣೆಯ ಮೂಸೆಯಿಂದ ಹೊರಬಂದಿರುವ ಈ ಚಿತ್ರಗಳು ಮುಂದಿನ ಪೀಳಿಗೆಗೆ ಅಮೂಲ್ಯ ಕೊಡುಗೆ ಆಗುವುದರಲ್ಲಿ ಎರಡು ಮಾತಿಲ್ಲ. ಇದುವರೆಗೂ ಮೈಸೂರು ನಿವಾಸಿಗಳಾಗಿದ್ದ ನಿರೋಡಿಯವರು ಇದೀಗ ಹಲವು ತಿಂಗಳುಗಳಿಂದ ಮುಂಬೈವಾಸಿಗಳಾಗಿದ್ದು, ಈ ಕಾರ್ಯಕ್ರಮಕ್ಕೆ ಬರಲಾಗಿರಲಿಲ್ಲ. ಶ್ರೀ ಜಗನ್ನಾಥ ಶೆಣೈ ಅವರ ಉಪಸ್ಥಿತಿಯು ಆ ಕೊರತೆಯನ್ನು ಬಹುಮಟ್ಟಿಗೆ ತುಂಬಿತು.

ಯಾವುದೇ ಕಲೆಯ ಬೆಳವಣಿಗೆಗೆ ಆಶ್ರಯದಾತರು, ಅವರ ನೆರವು ಬೇಕೇಬೇಕು. ಹಿಂದೆ ರಾಜಮಹಾರಾಜರು ಮಾಡುತ್ತಿದ್ದಂತಹ ಕಾರ್ಯವನ್ನು ಇಂದು ಸಂಘ ಸಂಸ್ಥೆಗಳು, ಉದಾರತೆಯನ್ನು ಮೈಗೂಡಿಸಿಕೊಂಡ ಮಹಾದಾನಿಗಳು ಮಾಡುತ್ತಿದ್ದಾರೆ ಎಂತಲೇ ಕಲೆ ನಶಿಸಿಹೋಗದೆ ಬೆಳೆಯುತ್ತಲೇ ಇದೆ. ಅಂತಹ ಅಪರೂಪದ ದಾನಿಗಳಲ್ಲಿ ಒಬ್ಬರು ಮೈಸೂರಿಗರಾದ ಶ್ರೀ ಜಗನ್ನಾಥ ಶೆಣೈ ಅವರು. ಮೈಸೂರಿನ ಅನೇಕ ಕಲಾ ಸಂಸ್ಥೆಗಳು ಇವರ ನೆರವನ್ನು ಪಡೆದಿವೆ, ಪಡೆಯುತ್ತಿವೆ. ಅವರ ತಂದೆ–ತಾಯಿಗಳು ಅವರಲ್ಲಿ ಬಿತ್ತಿರುವ ಉತ್ತಮ ಸಂಸ್ಕಾರ ಮತ್ತು ಶಿಸ್ತಿನಿಂದಾಗಿ 'ಮಂಗಳೂರು ಬೀಡಿ ವರ್ಕ್ಸ್' ಅನ್ನು ಅತ್ಯಂತ ಯಶಸ್ವಿಯಾಗಿ ನಡೆಸಿಕೊಂಡು ಹೋಗುತ್ತಿರುವುದರ ಜೊತೆಗೆ, ಮೈಸೂರಿನ ಸಾಂಸ್ಕೃತಿಕ ಲೋಕದ ಅವಿಭಾಜ್ಯ ಅಂಗವೂ ಆಗಿದ್ದಾರೆ ಶ್ರೀ ಶೆಣೈ ಅವರು. ಅವರ ತಂದೆ ಮತ್ತು ತಾಯಿಯವರ ಹೆಸರಿನಲ್ಲಿ ಮೈಸೂರಿನ ಗಾನ ಭಾರತಿಯಲ್ಲಿ ಒಂದು ಸುಸಜ್ಜಿತ ರಂಗ ಮಂದಿರವನ್ನು ಕಟ್ಟಿಸಿಕೊಟ್ಟಿದ್ದಾರೆ. ನೃಪತುಂಗ ಶಾಲೆಯಲ್ಲಿ ಅಪೂರ್ಣಾವಸ್ಥೆಯಲ್ಲಿದ್ದ ರಂಗಮಂದಿರವನ್ನು ಪೂರ್ಣಗೊಳಿಸಿ, ಕಲಾಲೋಕಕ್ಕೆ ಅರ್ಪಣೆ ಮಾಡಿದ್ದಾರೆ. ಹಲವಾರು ಸಾಂಸ್ಕೃತಿಕ ಸಂಘ ಸಂಸ್ಥೆಗಳ ಅಧ್ಯಕ್ಷರೂ ಆಗಿರುವ ಜಗನ್ನಾಥ ಶೆಣೈ ಅವರ ಬದುಕಿನ ಯಶೋಗಾಥೆಯನ್ನು ನಿರ್ದೇಶಕರಾದ ರಂಜಿತ್ ಸೇತು ಮತ್ತು ಡಾ.ಎಂ.ಸಿ. ಮನೋಹರ ಅವರು ಸಮರ್ಥವಾಗಿ ಚಿತ್ರದಲ್ಲಿ ಹೊರತಂದಿದ್ದಾರೆ. ತಂದೆ–ತಾಯಿಗಳ ಬಗ್ಗೆ ಶೆಣೈ ಅವರಿಗೆ ಇರುವ ಗೌರವವೇ ಅವರ ಮಕ್ಕಳಿಗೂ ರವಾನೆ ಆಗಿರುವುದು ಈ ಚಿತ್ರದಲ್ಲಿ ನಿಚ್ಚಳವಾಗಿ ಕಂಡುಬರುತ್ತದೆ. ಜೀವನದ ಮೌಲ್ಯಗಳು ಹೀಗೇ ಕುಟುಂಬಗಳಲ್ಲಿ ಒಂದು ತಲೆಮಾರಿನಿಂದ ಮತ್ತೊಂದಕ್ಕೆ ಸಾಗಿಸಲ್ಪಡುವವು ಅಲ್ಲವೇ. 'ನಾನು ಬದುಕಿನ ಏಳುಬೀಳಿನ ಹಾದಿಯಲ್ಲಿ ಮತ್ತೊಬ್ಬರ ಸಹಾಯ, ಸಲಹೆಗಳಿಲ್ಲದೆ ನನ್ನ ದಾರಿಯನ್ನು ನಾನೇ ಕಂಡುಕೊಂಡ ವ್ಯಕ್ತಿ' ಎಂಬ ಅವರ ಮಾತುಗಳು ಚಿಂತನಯೋಗ್ಯವಾದುವು. ಅವರ ಬದುಕು ಹೀಗೇ ಸಮಾಜಕ್ಕೆ ತನ್ನ ಸೇವೆಯನ್ನು ಸಲ್ಲಿಸುತ್ತಾ ಅನೇಕರ ಬದುಕನ್ನು ಕಟ್ಟಿಕೊಳ್ಳಲು ಸಹಾಯ ಮಾಡುತ್ತಾ ಸಮೃದ್ಧವಾಗಿರಲಿ ಎಂಬ ಹಾರೈಕೆಯಷ್ಟೇ ನಮ್ಮದು.



ಪಂಡಿತ್ ಇಂದೂಧರ್ ನಿರೋಡಿ

> “ ವಿದ್ಯೆ ಹೆಚ್ಚಿದಷ್ಟೂ ವಿನಯವೂ ಹೆಚ್ಚಬೇಕು ಎಂಬುದಕ್ಕೆ ಅವರೊಂದು ಜೀವಂತ ಉದಾಹರಣೆಯಂತಿದ್ದಾರೆ. ಅವರ ಸರಳ, ನೇರ ಮಾತು ಮತ್ತು ಸ್ವಭಾವವು ಮಗುವಿನಷ್ಟೇ ನಿಷ್ಕಲ್ಮಷ. ತಮ್ಮ ಜ್ಞಾನವನ್ನು ಇತರರಿಗೆ ಹಂಚಬೇಕೆನ್ನುವ ತುಡಿತವನ್ನು ಅವರಲ್ಲಿ ಸದಾ ಗುರುತಿಸಬಹುದು. ಅವರ ಯಾವುದೇ ಕಛೇರಿಯಲ್ಲಿ ತಾವು ಹಾಡಲಿರುವ ರಾಗವನ್ನೋ, ಬಂಧಿಷ್ ಅನ್ನು ಕುರಿತೋ ಶ್ರೋತೃಗಳಿಗೆ ತಿಳಿಯಪಡಿಸಿಯೇ ಅವರು ಹಾಡಲು ಉಪಕ್ರಮಿಸುವುದು. ಅವರ ಸಂದೇಹಗಳನ್ನು ನಿಶ್ಚಿತವಾಗಿಯೂ ಪರಿಹರಿಸುತ್ತಾರೆಂಬ ಭರವಸೆಯಲ್ಲಿಯೇ ಅನೇಕ ಹಿಂದುಸ್ತಾನಿ ಕಲಾಕಾರರು ಅವರ ಬಳಿ ಬರುವುದು ಸಾಮಾನ್ಯ.

ಕಲೆಯ ಸುಗಂಧ ಪಸರಿಸಿದ್ದ ಕುಟುಂಬದಲ್ಲಿ ಜನಿಸಿದ ಶ್ರೀ ಇಂದೂಧರ ನಿರೋಡಿಯವರು ಸಹಜವಾಗಿಯೇ ಬಾಲ್ಯದಲ್ಲಿಯೇ ಸಂಗೀತದೆಡೆಗೆ ಆಕರ್ಷಿತರಾದರು. ಜೀವವಿಮಾ ಸಂಸ್ಥೆಯಲ್ಲಿ ಹಿರಿಯ ಅಧಿಕಾರಿಯಾಗಿದ್ದ ಅವರು ನಿವೃತ್ತಿಯ ನಂತರ ತಮ್ಮ ಬದುಕನ್ನು ಸಂಪೂರ್ಣವಾಗಿ ಸಂಗೀತಕ್ಕಾಗಿಯೇ ಮೀಸಲಾಗಿಟ್ಟವರು. 'ಆಡುಮಾತಿಗೆ ವ್ಯಾಕರಣವನ್ನು ಸೇರಿಸಿ ಭಾಷೆಯನ್ನು ರೂಪಿಸಿಕೊಂಡ ಹಾಗೆ ಭಾವಸಹಿತವಾದ ಧ್ವನಿಯ ಲಯಬದ್ಧ ಅನುಕರಣೆ ಕಾಲಕ್ರಮದಲ್ಲಿ ಶಾಸ್ತ್ರೀಯ ಸಂಗೀತವಾಗಿ ವಿಕಾಸಗೊಂಡಿದೆ' ಎಂಬ ಅವರ ಮಾತು ಅತ್ಯಂತ ಸರಳವಾಗಿ ಸಂಗೀತದ ಬೆಳವಣಿಗೆಯ ಹಾದಿಯನ್ನು ಸೂಚಿಸುತ್ತದೆ. ವಿದ್ಯೆ ಹೆಚ್ಚಿದಷ್ಟೂ ವಿನಯವೂ ಹೆಚ್ಚಬೇಕು ಎಂಬುದಕ್ಕೆ ಅವರೊಂದು ಜೀವಂತ ಉದಾಹರಣೆಯಂತಿದ್ದಾರೆ. ಅವರ ಸರಳ, ನೇರ ಮಾತು ಮತ್ತು ಸ್ವಭಾವವು ಮಗುವಿನಷ್ಟೇ ನಿಷ್ಕಲ್ಮಷ. ತಮ್ಮ ಜ್ಞಾನವನ್ನು ಇತರರಿಗೆ ಹಂಚಬೇಕೆನ್ನುವ ತುಡಿತವನ್ನು ಅವರಲ್ಲಿ ಸದಾ ಗುರುತಿಸಬಹುದು. ಅವರ ಯಾವುದೇ ಕಛೇರಿಯಲ್ಲಿ ತಾವು ಹಾಡಲಿರುವ ರಾಗವನ್ನೋ, ಬಂಧಿಷ್ ಅನ್ನು ಕುರಿತೋ ಶ್ರೋತೃಗಳಿಗೆ ತಿಳಿಯಪಡಿಸಿಯೇ ಅವರು ಹಾಡಲು ಉಪಕ್ರಮಿಸುವುದು. ಅವರ ಸಂದೇಹಗಳನ್ನು ನಿಶ್ಚಿತವಾಗಿಯೂ ಪರಿಹರಿಸುತ್ತಾರೆಂಬ ಭರವಸೆಯಲ್ಲಿಯೇ ಅನೇಕ ಹಿಂದುಸ್ತಾನಿ ಕಲಾಕಾರರು ಅವರ ಬಳಿ ಬರುವುದು ಸಾಮಾನ್ಯ. ತಮಗೆ ದೊರೆತ ಉತ್ತಮ ಗುರುಗಳಲ್ಲಿ ಶಿಷ್ಯತ್ವ ಮತ್ತು ಸಾನ್ನಿಧ್ಯವು ಅವರ ಬದುಕಿನ ಅತೀ ದೊಡ್ಡ ಆಶೀರ್ವಾದ ಎಂದು ನಂಬಿರುವ ಅವರ ಮಾತುಗಳಲ್ಲಿ ಗುರುಭಕ್ತಿ ತಾನೇ ತಾನಾಗಿ ಗೋಚರವಾಗುತ್ತದೆ. ನಮ್ಮ ನಡುವೆ ಅಂತಹ ಮಹಾನ್ ಗಾಯಕ, ಬೋಧಕ ಮತ್ತು ಉನ್ನತ ವ್ಯಕ್ತಿ ಇರುವುದು ನಮ್ಮ ಭಾಗ್ಯವೇ ಸರಿ ಎಂದು ಯಾರಿಗಾದರೂ ಅನ್ನಿಸುವಂತೆ ಮಾಡುತ್ತದೆ ಈ ಸಾಕ್ಷ್ಯಚಿತ್ರ.

ಈ ಕಾರ್ಯಕ್ರಮದ ನಂತರ ಹಿಂದೂಸ್ತಾನಿ ಸಂಗೀತದ ಮತ್ತೋರ್ವ ಮಹಾನ್ ಗಾಯಕ ಪಂಡಿತ್ ರಾಮರಾವ್ ವಿ ನಾಯಕ್ ಅವರ ನೆನಪಿನಲ್ಲಿ ಪುಣೆಯ ನಿಷಾದ್ ಭಾಕ್ರೆಯವರ ಗಾಯನವನ್ನು ಏರ್ಪಡಿಸಲಾಗಿತ್ತು.

ಹಾರ್ಮೋನಿಯಂ ಮತ್ತು ತಬಲಾ ಸಾಥ್ ನೀಡಿದವರು ವೀರಭದ್ರಯ್ಯ ಹಿರೇಮಠ್ ಮತ್ತು ಭೀಮಾಶಂಕರ್ ಬಿದನೂರರು. ರಾಗ್ ಪೂರಿಯಾಕಲ್ಯಾಣ್, ಗಗನ ವಿಹಂಗ್, ನಟ್‌ಕಾಮೋದ್‌ಗಳಲ್ಲದೆ ನಾಟ್ಯಸಂಗೀತವನ್ನೂ ಅವರು ಪ್ರಸ್ತುತಪಡಿಸಿದರು. ಒಟ್ಟಾರೆ ಅದೊಂದು ಹೃದಯಂಗಮ ಕಾರ್ಯಕ್ರಮವಾಗಿತ್ತು ಎಂಬುದಕ್ಕೆ ಕಿಕ್ಕಿರಿದಿದ್ದ ಸಭಾಂಗಣವೇ ಸಾಕ್ಷಿಯಾಗಿತ್ತು.

ಕನ್ನಡ ರಾಜ್ಯೋತ್ಸವ ಪ್ರಯುಕ್ತ 'ಕುರುಕ್ಷೇತ್ರ' ಪೌರಾಣಿಕ ನಾಟಕ ಪ್ರದರ್ಶನ

ಮೈಸೂರು, ನ.23(ಎಸ್‌ಪಿಎನ್)– ಮೈಸೂರಿನ ಪುರಭವನದಲ್ಲಿ ವಿಜಯನಗರ ಜಿಲ್ಲೆ ಕೂಡ್ಲಿಗಿ ತಾಲೂಕಿನ ಸೂಲದಹಳ್ಳಿ ಶ್ರೀ ಕಂದಗಲ್ಲು ಹನುಮಂತರಾಯ ಕಲಾ ಸಂಘದ ಕಲಾವಿದರು 69ನೇ ಕನ್ನಡ ರಾಜ್ಯೋತ್ಸವ ಪ್ರಯುಕ್ತ 'ರಕ್ತರಾತ್ರಿ' ಹಾಗೂ 'ಕುರುಕ್ಷೇತ್ರ' ಪೌರಾಣಿಕ ನಾಟಕ ಪ್ರದರ್ಶನಗೊಂಡಿತು.

ಶನಿವಾರ ಬೆಳಗ್ಗೆ 11 ಗಂಟೆಗೆ ರಕ್ತರಾತ್ರಿ ಹಾಗೂ ಸಂಜೆ 4 ಗಂಟೆಗೆ ಕುರುಕ್ಷೇತ್ರ ನಾಟಕ ಪ್ರದರ್ಶನಗೊಂಡು ಪ್ರೇಕ್ಷಕರ ಮೆಚ್ಚುಗೆಗೆ ಪಾತ್ರವಾಯಿತು. ಇದಕ್ಕೂ ಮುನ್ನ ಈ ನಾಟಕ ಪ್ರದರ್ಶನವನ್ನು ಹಿರಿಯ ರಂಗಭೂಮಿ ಕಲಾವಿದ ಬೆಟ್ಟಹಳ್ಳಿ ಪಟೇಲ್ ಗಂಗರಾಜು ಉದ್ಘಾಟಿಸಿದರು.

ರಂಗಭೂಮಿ ಕಲಾವಿದರಾದ ಡಾ.ಮಾಯಣ್ಣಗೌಡ, ಕಲಾವಿದರಾದ ಇರಗಪ್ಪ, ಕುಮಾರಗೌಡ, ಕಳಸ್ತವಾಡಿ ದೇವರಾಜ್, ಪ್ರೇಮ, ಆರ್.ಜಿ.ಪುಟ್ಟಪ್ಪ, ಸಿದ್ಧಾರ್ಥ, ಲಕ್ಷ್ಮಣ ಬೋವಿ, ಸತೀಶ್ ದಾಳಿಂಬ, ಪ್ರದೀಪ್ ಬಳ್ಳಿಕೆರೆ, ಸಂಘದ ಕಾರ್ಯದರ್ಶಿ ಹಾಗೂ ಸಂಗೀತ ನಿರ್ದೇಶಕ ಎ.ತಿಪ್ಪೇಸ್ವಾಮಿ ಉಪಸ್ಥಿತರಿದ್ದರು.



ಮೈಸೂರು ಪುರಭವನದಲ್ಲಿ ಕುರುಕ್ಷೇತ್ರ ನಾಟಕ ಪ್ರದರ್ಶನಗೊಂಡಿತು.

ಬ್ರಾಹ್ಮಣ ಸಮುದಾಯದ ಒಗ್ಗಟ್ಟು ಪ್ರದರ್ಶಿಸಿ ರಾಜ್ಯಕ್ಕೆ ಹೊಸ ಸಂದೇಶ ರವಾನಿಸುವ ಅನಿವಾರ್ಯತೆ ಬಂದಿದೆ

● ಶಾಸಕ ಶ್ರೀವತ್ಸ ಅಭಿಮತ ● ಬೆಂಗಳೂರಿನ 'ಬ್ರಾಹ್ಮಣ ಮಹಾಸಮ್ಮೇಳನ'ಕ್ಕೆ ಕುಟುಂಬ ಸಮೇತ ಪಾಲ್ಗೊಳ್ಳಲು ಮನವಿ

ಮೈಸೂರು, ನ.23(ಎಸ್‌ಪಿಎನ್)– ಪ್ರಸ್ತುತ ಹಿಂದೂ ಧರ್ಮದ ಆಚಾರ–ವಿಚಾರಗಳನ್ನು ಉಳಿಸಲು ನಾವೆಲ್ಲರೂ ಒಗ್ಗಟ್ಟು ಪ್ರದರ್ಶಿಸಬೇಕಿದೆ ಎಂದು ಶಾಸಕ ಟಿ.ಎಸ್.ಶ್ರೀವತ್ಸ ಮನವಿ ಮಾಡಿದರು.

ಮೈಸೂರು ಕೃಷ್ಣಮೂರ್ತಿಪುರಂನ ಶ್ರೀರಾಮ ಮಂದಿರದಲ್ಲಿ ಅಖಿಲ ಕರ್ನಾಟಕ ಬ್ರಾಹ್ಮಣ ಮಹಾಸಭಾ ಸ್ಥಾಪನೆಯಾಗಿ 50 ವರ್ಷ ಪೂರೈಸಿದ ಹಿನ್ನಲೆಯಲ್ಲಿ ಬೆಂಗಳೂರಿನಲ್ಲಿ 2025ರ ಜ.18 ಮತ್ತು 19 ರಂದು ನಡೆಯುವ ಎರಡು ದಿನಗಳ 'ಬ್ರಾಹ್ಮಣ ಮಹಾ ಸಮ್ಮೇಳನ'ದ ಪೂರ್ವ ಭಾವಿ ಸಭೆಯಲ್ಲಿ ಅವರು ಮಾತನಾಡಿದರು.

1974ರಲ್ಲಿ ಬಾಗಲಕೋಟೆಯಲ್ಲಿ ಬ್ರಾಹ್ಮಣ ಸಮುದಾಯದವರನ್ನು ಅವಹೇಳನ ಮಾಡಿದರು ಎಂಬ ಕಾರಣಕ್ಕೆ ನಮ್ಮನ್ನು ನಾವು ರಕ್ಷಿಸಿಕೊಳ್ಳಲು ಆರಂಭವಾದ ಬ್ರಾಹ್ಮಣ ಮಹಾಸಭಾ ಇಂದು ಬೃಹತ್ ಸಂಘಟನೆಯಾಗಿ ಬೆಳೆದು 50 ವರ್ಷ ಪೂರೈಸುತ್ತಿದೆ. ಈ ಸವಿನೆನಪಿನಲ್ಲಿ 2 ದಿನ ವಿವಿಧ ಕಾರ್ಯಕ್ರಮಗಳನ್ನು ಬೆಂಗಳೂರು ಅರಮನೆ ಮೈದಾನದ ತ್ರಿಪುರವಾಸಿನಿ ಸಭಾಂಗಣದಲ್ಲಿ ಮಹಾಸಭಾ ಅಧ್ಯಕ್ಷ ಅಶೋಕ್ ಹಾರನಹಳ್ಳಿ ನೇತೃತ್ವದಲ್ಲಿ ಹಮ್ಮಿಕೊಳ್ಳಲಾಗಿದೆ ಎಂದು ತಿಳಿಸಿದರು.

ಈ ಕಾರ್ಯಕ್ರಮವನ್ನು ಶೃಂಗೇರಿ ಶಾರದಾ ಪೀಠದ ಶ್ರೀ ವಿಧುಶೇಖರಭಾರತೀ ಸ್ವಾಮೀಜಿ ಉದ್ಘಾಟನೆ ನೆರವೇರಿಸಲಿದ್ದಾರೆ. ಇದರೊಂದಿಗೆ ವಿವಿಧ ಮಠಾಧೀಶರು ಭಾಗವಹಿಸಲಿದ್ದಾರೆ. ಸಮ್ಮೇಳನದಲ್ಲಿ ಭಾಗಿಯಾಗುವ ಹಲವು ಮಠಾಧೀಶರ ಸಮ್ಮುಖದಲ್ಲಿ ಬ್ರಾಹ್ಮಣ ಸಮುದಾಯ ಒಂದೆಡೆ ಸೇರಿ ಕಷ್ಟ–ಸುಖ ವಿನಿಮಯ ಮಾಡಿಕೊಂಡು ರಾಜ್ಯಕ್ಕೆ ಸಂದೇಶ ರವಾನಿಸುವುದು ಈ ಕಾರ್ಯಕ್ರಮದ ಉದ್ದೇಶವಾಗಿದೆ ಎಂದರು.

ಅಲ್ಲದೆ, ಮೈಸೂರು ಹೊರ ವಲಯದಲ್ಲಿ ಲೋಕಕಲ್ಯಾಣಕ್ಕಾಗಿ 2022ರಿಂದ 2034ರವರೆಗೆ ಹೋಮ ನಡೆಯುತ್ತಿದೆ. ಈ ಹೋಮದ ಬಗ್ಗೆಯೂ ಕೆಲವರು ವ್ಯಂಗ್ಯ ಮಾತುಗಳನ್ನಾಡುತ್ತಿರುವುದು ಬೇಸರದ ಸಂಗತಿ. ಈ ಹಿಂದೆ ಚಾಮುಂಡೇಶ್ವರಿ ದೇವಿ ವಿಚಾರವಾಗಿಯೂ ವ್ಯಂಗ್ಯ ಮಾಡಿದ್ದರು. ಮಹಿಷಾ ದಸರಾ ಆಚರಣೆ ನೆಪದಲ್ಲಿ ಕೆಲ ವಿಚಾರವಾದಿಗಳು ಬ್ರಾಹ್ಮಣರು ಪೂಜೆ ಮಾಡುವ ಗುಡಿಗಳಿಗೆ ಹೋಗಬೇಡಿ ಎಂದು ಜನರನ್ನು ನಮ್ಮ ವಿರುದ್ಧ ಪ್ರಚೋದಿಸುತ್ತಿದ್ದಾರೆ. ಈ ಹೇಳಿಕೆಗೆ ನಾವು ಇಲ್ಲಿಯವರೆಗೂ ಸಂಘಟಿತ ರೂಪದಲ್ಲಿ ಖಂಡಿಸಿಲ್ಲ ಎಂದು ಬೇಸರ ಹೊರ ಹಾಕಿದರು.

ಅಲ್ಲದೆ, ನಮ್ಮ ಧರ್ಮದ ಬಗ್ಗೆ ಪಕ್ಕದ ರಾಜ್ಯದ ರಾಜಕಾರಣಿಗಳೇ ಅವ ಹೇಳಕಾರಿಯಾಗಿ ಮಾತನಾಡುತ್ತಿದ್ದಾರೆ. ನಮ್ಮ ಧರ್ಮ, ಆಚಾರ–ವಿಚಾರಗಳನ್ನು ಉಳಿಸಿಕೊಳ್ಳುವ ನಿಟ್ಟಿನಲ್ಲಿ ಬ್ರಾಹ್ಮಣ ಸಮುದಾಯ ಒಗ್ಗಟ್ಟು ಪ್ರದರ್ಶಿಸಿ ರಾಜ್ಯಕ್ಕೆ ಸಂದೇಶ ನೀಡಬೇಕಿದೆ. ಹಾಗಾಗಿ ಮೈಸೂರಿನ ವಿಪ್ರ ಮುಖಂಡರು ಮನೆಗೊಬ್ಬರು ಎನ್ನದೇ ಕುಟುಂಬ ಸಮೇತ ಸಮ್ಮೇಳನದಲ್ಲಿ ಭಾಗಿಯಾಗುತ್ತೇನೆ ಎಂದು ಸಂಕಲ್ಪ ತೊಡುವಂತೆ ಸಲಹೆ ನೀಡಿದರು.

ಪ್ರತಿಭಾ ಪುರಸ್ಕಾರ: ಕರ್ನಾಟಕ ಬ್ರಾಹ್ಮಣ ಮಹಾಸಭಾ ರಾಜ್ಯ ಉಪಾಧ್ಯಕ್ಷ ನಂ. ಶ್ರೀಕಂಠಕುಮಾರ್ ಪ್ರಾಸ್ತಾವಿಕ ನುಡಿಗಳನ್ನಾಡಿದರು. ಎಸ್‌ಎಸ್‌ಎಲ್‌ಸಿಯಲ್ಲಿ ಅತೀ ಹೆಚ್ಚು ಅಂಕಗಳಿಸಿದ ಎಂ.ಡಿ.ಸುದೀಕ್ಷ, ಪಿಯುಸಿಯಲ್ಲಿ ಸ್ವಾತಿ ಎಸ್.ಭಟ್, ಗಿನ್ನಿಸ್ ದಾಖಲೆ ಮಾಡಿರುವ ಪೃಥು ಪಿ. ಅದ್ವೈತ್ ಅವರನ್ನು ಗೌರವಿಸಲಾಯಿತು.

ಈ ವೇಳೆ ಕರ್ನಾಟಕ ಬ್ರಾಹ್ಮಣ ಮಹಾಸಭಾ ಹಿರಿಯ ಸದಸ್ಯ ಟಿ.ಕೆ.ವಿಜಯಕುಮಾರ್ ರಾವ್, ಶಂಕರನಾರಾಯಣ, ರಾಜ್ಯ ಸಮಿತಿ ಸದಸ್ಯರಾದ ಶಂಕರನಾರಾಯಣ, ಜಿ.ಆರ್.ಮೋಹನ್, ಎಂ ವೆಂಕಟೇಶ್, ಗುಂಡ್ಲುಪೇಟೆ ರಮೇಶ್, ಮುಡಾ ಮಾಜಿ ಅಧ್ಯಕ್ಷ ಹೆಚ್.ವಿ.ರಾಜೀವ್, ಶಾರದಾ ವಿಪ್ರ ಸಂಘ, ಗಾಯತ್ರೀ ವಿಪ್ರ ಸಂಘ, ಗಾಯತ್ರಿ ಎಜುಕೇಷನಲ್ ಟ್ರಸ್ಟ್, ನರಸಿಂಹರಾಜ ವಿಪ್ರ ಸಂಘ, ಹೆಬ್ಬಾಳು ಬ್ರಾಹ್ಮಣ ಸಂಘ, ಹೊಯ್ಸಳ ಕರ್ನಾಟಕ ಸಂಘ, ಜೆ.ಪಿ.ನಗರ ಬ್ರಾಹ್ಮಣ ಸಂಘ, ಮೂಗೂರು ಕರ್ನಾಟಕ ಬ್ರಾಹ್ಮಣ ಸಂಘ, ನೌಕರರ ಬ್ರಾಹ್ಮಣ ಸಂಘ, ಇನ್ನಿತರೆ ಪ್ರತಿನಿಧಿಗಳು ಉಪಸ್ಥಿತರಿದ್ದರು. ಇದಕ್ಕೂ ಮುನ್ನ ಬೆಂಗಳೂರಿನಲ್ಲಿ ನಡೆಯುವ ಅಖಿಲ ಕರ್ನಾಟಕ ಬ್ರಾಹ್ಮಣ ಮಹಾಸಭಾ ಸುವರ್ಣ ಸಂಭ್ರಮ–2025ರ ಸಮ್ಮೇಳನದ ಪೋಸ್ಟರ್, ಕರಪತ್ರವನ್ನು ಶಾಸಕ ಟಿ.ಎಸ್.ಶ್ರೀವತ್ಸ ಬಿಡುಗಡೆಗೊಳಿಸಿದರು.



ಮೈಸೂರು ಕೃಷ್ಣಮೂರ್ತಿಪುರಂನ ಶ್ರೀರಾಮ ಮಂದಿರದಲ್ಲಿ ಅಖಿಲ ಕರ್ನಾಟಕ ಬ್ರಾಹ್ಮಣ ಮಹಾಸಭಾ ಸುವರ್ಣ ಸಂಭ್ರಮದ 'ಬ್ರಾಹ್ಮಣ ಮಹಾ ಸಮ್ಮೇಳನ'ದ ಪೋಸ್ಟರ್, ಕರಪತ್ರಗಳನ್ನು ಬಿಡುಗಡೆಗೊಳಿಸಲಾಯಿತು.

Printed by T.S. Gopinath, Published by M. Govinde Gowda on behalf of Academy Newspapers Private Limited, 15-C Industrial 'A' Layout, Bannimantap, Mysore-570 015 and Printed at Academy Newspapers Private Limited, 15-C Industrial 'A' Layout, Bannimantap, Mysore-570 015 and Published at 15-C Industrial 'A' Layout, Bannimantap, Mysore-570 015, Editor: M. Govinde Gowda Ph: 2496520 / 2496521 / 2496526 / 2496527 / 2496528. Fax: 0821-2496525. CITY OFFICES: Visveswaraya Building, III Floor, K.R. CIRCLE, MYSORE-570 001, Ph: 2431774 and No. 114, D. DEVARAJ URS ROAD (Opposite Big Bus), MYSORE-570 001. Ph: 2428695. RNI Reg. No. 36581 / 1980 E-mail address: mysoorumithra@gmail.com For advertisements: mysoorumithra@gmail.com

ಮೈಸೂರಿನ 50 ವರ್ಷದ ಅಭಿವೃದ್ಧಿ ಮುನ್ನೋಟ; ಚಿಂತನ–ಮಂಥನ : ವಿವಿಧ ಕ್ಷೇತ್ರದ ಮುಖಂಡರಿಂದ ಅಭಿಪ್ರಾಯ ಸಂಗ್ರಹ

ಮೆಟ್ರೋಗೆ ವ್ಯವಸ್ಥೆ ಮಾಡಿಕೊಳ್ಳಿ; ಪಾರಂಪರಿಕತೆ ಸಂರಕ್ಷಿಸಿ; ಹಸಿರು ವಲಯ ಮೀಸಲಿರಿಸಿ; ದೊಡ್ಡ ಗಡಿಯಾರಕ್ಕೆ ಮಿಂಚು ಪ್ರತಿಬಂಧಕ ಅಳವಡಿಸಿ; ಬಸ್ ನಿಲ್ದಾಣ ವಿಸ್ತರಿಸಿ; ಇನ್ನು ಮುಂದೆ ಮುಡಾ ಮಾತ್ರ ಬಡಾವಣೆ ಅಭಿವೃದ್ಧಿಪಡಿಸಲಿ




ಮೈಸೂರು ಜಿಪಂ ಸಭಾಂಗಣದಲ್ಲಿ ಮೈಸೂರಿನ 50 ವರ್ಷದ ಅಭಿವೃದ್ಧಿ ಮುನ್ನೋಟ ಕುರಿತಂತೆ ಜಿಲ್ಲಾ ಉಸ್ತುವಾರಿ ಸಚಿವ ಡಾ.ಮಹದೇವಪ್ಪ ಅಧ್ಯಕ್ಷತೆಯಲ್ಲಿ ತಜ್ಞರು, ನಾಗರಿಕರು, ಜನಪ್ರತಿನಿಧಿಗಳ ಅಭಿಪ್ರಾಯ ಸಂಗ್ರಹ ಸಭೆ ನಡೆಯಿತು. ಎಡಚಿತ್ರದಲ್ಲಿ ಸಭೆಯಲ್ಲಿ ಭಾಗವಹಿಸಿದ್ದ ವಿವಿಧ ಕ್ಷೇತ್ರದ ಮುಖಂಡರನ್ನು ಕಾಣಬಹುದು.

ಮೈಸೂರು, ನ.23(ಬಿಎಲ್‌ಯು)– ಮುಂದಿನ 50 ವರ್ಷದ ಮೈಸೂರು ನಗರದ ಅಭಿವೃದ್ಧಿಯನ್ನು ದೃಷ್ಟಿಯಲ್ಲಿಟ್ಟುಕೊಂಡು ಯೋಜನಾಬದ್ಧ ವಿಸ್ತರಣೆ ಹಾಗೂ ಅಭಿವೃದ್ಧಿ ಮಾಡುವ ನಿಟ್ಟಿನಲ್ಲಿ ವಿಸ್ತೃತ ಯೋಜನೆ ರೂಪಿಸುವ ನಿಟ್ಟಿನಲ್ಲಿ ಜಿಲ್ಲಾ ಉಸ್ತುವಾರಿ ಸಚಿವ ಡಾ.ಹೆಚ್.ಸಿ.ಮಹದೇವಪ್ಪ ಅಧ್ಯಕ್ಷತೆಯಲ್ಲಿ ಇಂದು ನಗರದ ನಾನಾ ಕ್ಷೇತ್ರದ ತಜ್ಞರು, ಪ್ರಾಧ್ಯಾಪಕರು, ಜನಪ್ರತಿನಿಧಿಗಳು, ಕೈಗಾರಿಕೋದ್ಯಮಿಗಳ ಸಭೆ ನಡೆಯಿತು.

ಮೈಸೂರು ಜಿಲ್ಲಾ ಪಂಚಾಯತ್‌ನ ಅಬ್ದುಲ್ ನಜೀರ್ ಸಾಬ್ ಸಭಾಂಗಣದಲ್ಲಿ ಇಂದು ನಡೆದ ಸಭೆಯಲ್ಲಿ ಮೈಸೂರು ನಗರದ ಸಾಂಸ್ಕೃತಿಕತೆ ಹಾಗೂ ಪಾರಂಪರಿಕತೆ ಸಂರಕ್ಷಿಸಿ ಯೋಜನಾ ಬದ್ಧವಾಗಿ ನಗರವನ್ನು ಅಭಿವೃದ್ಧಿಪಡಿಸುವ ನಿಟ್ಟಿನಲ್ಲಿ ಹಲವು ಸಲಹೆ, ಮಾರ್ಗದರ್ಶನ ನೀಡಿದರು.

ಇಂದು ಬೆಳಿಗ್ಗೆಯಿಂದ ಮಧ್ಯಾಹ್ನದ ತನಕ ನಡೆದ ಸಭೆಯಲ್ಲಿ ಹಲವರು ತಮ್ಮ ಅತ್ಯಮೂಲ್ಯ ಸಲಹೆಗಳನ್ನು ನೀಡಿದರು. ಈ ವೇಳೆ ಮಾತನಾಡಿದ ಡಾ.ಮಹದೇವಪ್ಪ, ಸ್ವಾತಂತ್ರ್ಯಪೂರ್ವದಲ್ಲಿ ಭಾರತದ ಜನಸಂಖ್ಯೆ 35 ಕೋಟಿ ಇತ್ತು, ಆದರೆ ಈಗ 145 ಕೋಟಿಯಾಗಿದೆ. ಆದರೆ ದೇಶದ ಭೌಗೋಳಿಕ ಪ್ರದೇಶ ಮಾತ್ರ ಇದ್ದಷ್ಟೇ ಇದೆ. ಇದರಿಂದ ವಿಸ್ತರಣೆಯಾಗುತ್ತಿರುವ ನಗರಗಳಿಗೆ ಮೂಲ ಸೌಕರ್ಯ ಕಲ್ಪಿಸುವುದು ದೊಡ್ಡ ಸವಾಲಾಗಿದೆ ಎಂದು ಅಭಿಪ್ರಾಯಪಟ್ಟರು.

ಮೈಸೂರು ನಗರ ಕೂಡ ದಿನ ಕಳೆದಂತೆ ಬೆಳೆಯುತ್ತಿದ್ದು, ಮೂಲ ಸೌಕರ್ಯ ಕಲ್ಪಿಸುವ ನಿಟ್ಟಿನಲ್ಲಿ ನಗರ ಪಾಲಿಕೆ ಹಾಗೂ ಇತರೆ ಸ್ಥಳೀಯ ಸಂಸ್ಥೆಗಳ ನಡುವೆ ಸಮನ್ವಯತೆ ಇಲ್ಲ. ಮುಂದೆ ಇಂತಹ ಸಮಸ್ಯೆಗಳು ಆಗಬಾರದು. ಈ ನಿಟ್ಟಿನಲ್ಲಿ ಇನ್ನು 50 ವರ್ಷಗಳ ಮೈಸೂರು ನಗರದ ಅಭಿವೃದ್ಧಿ ದೃಷ್ಟಿಯಲ್ಲಿಟ್ಟುಕೊಂಡು ಯೋಜನಾಬದ್ಧವಾಗಿ ನಗರವನ್ನು ರೂಪಿಸಲು ಸಾರ್ವಜನಿಕರಿಂದ ಚಿಂತನ ಮಂಥನ ಕಾರ್ಯಕ್ರಮ ನಡೆಸಲಾಗುತ್ತಿದೆ. ಈ ನಿಟ್ಟಿನಲ್ಲಿ ಪ್ರತಿಯೊಬ್ಬರು ತಮ್ಮ ಅಮೂಲ್ಯ ಸಲಹೆಗಳನ್ನು ನೀಡಬಹುದು ಎಂದು ಹೇಳಿದರು.

ಡಾ.ಹಿ.ಶಿ.ರಾಮಚಂದ್ರೇಗೌಡ, ನಿವೃತ್ತ ಪ್ರಾಧ್ಯಾಪಕ: ಹಾಲಿ ಮೈಸೂರು ನಗರ ಹಾಗೂ ಗ್ರಾಮಾಂತರ ಬಸ್ ನಿಲ್ದಾಣಗಳ ನಡುವೆ ಅಂತರವಿದೆ. ಇದರಿಂದ ವಯಸ್ಸಾದವರು ಸೇರಿದಂತೆ ಇತರರು ಬಸ್ ನಿಲ್ದಾಣಕ್ಕೆ ಹೋಗಲು ಪ್ರಯಾಸ ಪಡುತ್ತಿದ್ದಾರೆ. ಆದ ಕಾರಣ ಸರ್ಕಾರಿ ಅತಿಥಿ ಗೃಹದ ಜಾಗ ಬಳಕೆ ಮಾಡಿಕೊಂಡು ವಿಶಾಲ ಬಸ್ ನಿಲ್ದಾಣ ನಿರ್ಮಾಣ ಮಾಡಬೇಕು.

ಉಗ್ರ ನರಸಿಂಹೇಗೌಡ, ನಾಗರಿಕರು: ಮೂಲ ಸೌಕರ್ಯ ಕಲ್ಪಿಸದೆ ಖಾಸಗಿ ಬಡಾವಣೆ ನಿರ್ಮಾಣ ಆಗುತ್ತಿರುವ ಕಾರಣ ನಗರ ಅಡ್ಡಾದಿಡ್ಡಿಯಾಗಿ ಬೆಳೆಯುತ್ತಿದೆ. ಆದ ಕಾರಣ ಇನ್ನು ಮುಂದೆ ಖಾಸಗಿಯವರಿಗೆ ಬಡಾವಣೆ ನಿರ್ಮಾಣಕ್ಕೆ ಅವಕಾಶ ನೀಡದೆ ಮುಡಾ ಮಾತ್ರವೇ ಬಡಾವಣೆ ನಿರ್ಮಾಣ ಮಾಡಬೇಕು. ಮೈಸೂರು ನಗರದಲ್ಲಿ ಪ್ರತಿದಿನ 500 ಟನ್ ಹಸಿ ಕಸ ಸಂಗ್ರಹವಾಗುತ್ತಿದ್ದು, ಇದರಿಂದ ಅನಿಲ ಹಾಗೂ ಸಾವಯವ ಗೊಬ್ಬರ ಉತ್ಪಾದನೆ ಮಾಡಬಹುದು. ವಾಣಿಜ್ಯವಾಗಿ ಬಳಕೆ ಮಾಡಿಕೊಳ್ಳುವುದರಿಂದ ಒಂದೂವರೆ ಕೋಟಿ ರೂಪಾಯಿ ಆದಾಯ ಬರುತ್ತದೆ.

ಅಶೋಕ, ನಾಗರಿಕ: ಮೈಸೂರು ನಗರದ ಹೊರ ಭಾಗದ ಒಳ ಚರಂಡಿ ನೀರನ್ನು ನೇರವಾಗಿ ನಾಲೆಗಳಿಗೆ ಬಿಡಲಾಗುತ್ತಿದೆ. ಇದರಿಂದ ಕುಡಿಯುವ ನೀರು ಕಲುಷಿತವಾಗುತ್ತಿದೆ. ಈ ಹಿನ್ನೆಲೆಯಲ್ಲಿ ಕೆಆರ್‌ಎಸ್ ಸನಿಹದಲ್ಲಿ ಯಾವುದೇ ಖಾಸಗಿ ಬಡಾವಣೆ ನಿರ್ಮಾಣಕ್ಕೆ ಅನುಮತಿ ನೀಡಬಾರದು.

“ಚಾಮುಂಡೇಶ್ವರಿ ಕ್ಷೇತ್ರ ಒಂದರಲ್ಲೆ 150 ಕ್ಕೂ ಹೆಚ್ಚು ಬಡಾವಣೆಗಳಿವೆ. ಕೆಲವು ಉದ್ಯಾನವನ ಬಿಟ್ಟರೆ ಉಳಿದವು ಅಭಿವೃದ್ಧಿಯಾಗುತ್ತಿಲ್ಲ. ಒಳಚರಂಡಿ ನೀರು ನೇರವಾಗಿ ನಾಲೆಗೆ ಸೇರುತ್ತಿದೆ. ಸಿಡಿಪಿಯಂತೆ ಮೈಸೂರು ನಗರ ಬೆಳೆಯುತ್ತಿಲ್ಲ. ಖಾಸಗಿ ಬಡಾವಣೆಗಳು ಎಲ್ಲಾ ಕಡೆ ತಲೆ ಎತ್ತುತ್ತಿರುವ ಕಾರಣ ಶಾಲೆ, ಅಂಗನವಾಡಿ ಕೇಂದ್ರ ನಿರ್ಮಾಣಕ್ಕೂ ಜಾಗ ದೊರೆಯುತ್ತಿಲ್ಲ. ಹೂಟಗಳ್ಳಿ ನಗರಸಭೆ ಒಂದಕ್ಕೆ 70 ಕೋಟಿ ಆದಾಯವಿದೆ. ಆದರೆ ಅದರಿಂದ ಯಾವುದೇ ಅಭಿವೃದ್ಧಿ ಆಗುತ್ತಿಲ್ಲ. ಇನ್ನು ಮುಂದಾದರೂ ಯೋಜನಾಬದ್ಧವಾಗಿ ಮೈಸೂರು ನಗರವನ್ನು ಅಭಿವೃದ್ಧಿ ಮಾಡಬೇಕು. ಮೆಟ್ರೊಗಾಗಿ ಈಗಲೇ ಯೋಜನೆ ರೂಪಿಸಬೇಕು. ಪೆರಿಫೆರಲ್ ರಿಂಗ್ ರಸ್ತೆ ನಿರ್ಮಾಣ ಮಾಡಬೇಕು.

–ಜಿ.ಟಿ.ದೇವೇಗೌಡ, ಶಾಸಕ

“ಗ್ರೇಟರ್ ಮೈಸೂರು ಮಾಡಲು ಕೆಲವು ಅವಶ್ಯ ಯೋಜನೆ ರೂಪಿಸಬೇಕು. ಆಗ ಕೇಂದ್ರ ಸರ್ಕಾರದಿಂದ ಸುಲಭವಾಗಿ ಅನುದಾನ ದೊರೆಯುತ್ತದೆ. ಈಗಿರುವ ಸಮಸ್ಯೆಗಳನ್ನು ಪರಿಹಾರ ಮಾಡಿದ ನಂತರವಷ್ಟೆ ಗ್ರೇಟರ್ ಮೈಸೂರು ಮಾಡಲು ಚಿಂತಿಸಬೇಕು.

–ಯದುವೀರ್, ಸಂಸದ

“ಮೈಸೂರು ನಗರಪಾಲಿಕೆ, ಹೂಟಗಳ್ಳಿ ನಗರಸಭೆ ಸೇರಿದಂತೆ ಇತರೆ ಸ್ಥಳೀಯ ಸಂಸ್ಥೆಗಳ ನಡುವೆ ಸಮನ್ವಯತೆ ಇಲ್ಲ. ಈಗಾಗಲೇ ಮೂರು ಬಾರಿ ರೂಪಿಸಿರುವ ಸಿಡಿಪಿಯಂತೆ ಮೈಸೂರು ನಗರದ ಅಭಿವೃದ್ಧಿಯಾಗುತ್ತಿಲ್ಲ. ಆದ ಕಾರಣ ಯೋಜನಾಬದ್ಧವಾಗಿ ಮೈಸೂರು ನಗರವನ್ನು ಅಭಿವೃದ್ಧಿ ಮಾಡಲು ಸಿಡಿಪಿ ಪರಿಷ್ಕರಣೆಗೊಳಿಸಬೇಕು. ಗ್ರೇಟರ್ ಮೈಸೂರು ಮಾಡುವ ಮೊದಲು ಸಾಧಕ–ಬಾಧಕಗಳ ಬಗ್ಗೆ ಚರ್ಚೆ ಆಗಬೇಕು. –ತನ್ವೀರ್ ಸೇಠ್, ಶಾಸಕ

“ಮೈಸೂರು ರಾಜರು ವಿಶಾಲವಾದ ಯೋಜನಾಬದ್ಧ ನಗರ ನಿರ್ಮಾಣ ಮಾಡಿದ್ದಾರೆ. ಇದನ್ನು ಉಳಿಸಿ ಬೆಳೆಸಿಕೊಂಡು ಹೋಗುವ ಅವಶ್ಯವಿದೆ. ಖಾಸಗಿ ಬಡಾವಣೆಗಳು ಅಡ್ಡಾದಿಡ್ಡಿ, ಬಹಳ ಇಕ್ಕಟ್ಟಾಗಿವೆ. ಮೂಲ ಸೌಕರ್ಯವಿಲ್ಲದೆ ಸೊರಗುತ್ತಿವೆ. ಈ ಹಿನ್ನೆಲೆಯಲ್ಲಿ ರಾಜರ ಕಾಲದ ಮಾದರಿಯ ಮೈಸೂರು ಬೆಳವಣಿಗೆ ಆಗಬೇಕು.

–ಕೆ.ಹರೀಶ್‌ಗೌಡ, ಶಾಸಕ

ಪ್ರೊ.ರಂಗರಾಜು, ನಿವೃತ್ತ ಪ್ರಾಧ್ಯಾಪಕ: ಮೈಸೂರು ನಗರದ 18 ರಸ್ತೆಗಳನ್ನು ಪಾರಂಪರಿಕ ರಸ್ತೆಗಳಾಗಿ ಗುರುತಿಸಲಾಗಿದೆ. ಆದರೆ ಈ ರಸ್ತೆಗಳಲ್ಲಿ ವಾಣಿಜ್ಯ ಕಟ್ಟಡಗಳು ತಲೆ ಎತ್ತಿ, ಪಾರಂಪರಿಕ ಸೌಂದರ್ಯಕ್ಕೆ ಧಕ್ಕೆ ಉಂಟಾಗುತ್ತಿದೆ. ಹಾಗೆಯೇ ನಗರದಲ್ಲಿ 131 ಪಾರಂಪರಿಕ ಕಟ್ಟಡಗಳಿದ್ದು, ಇವುಗಳ ಸಂರಕ್ಷಣೆ ಮಾಡದೆ ಶಿಥಿಲಾವಸ್ಥೆಯಲ್ಲಿವೆ. ನಗರದ ದೊಡ್ಡ ಗಡಿಯಾರಕ್ಕೆ ಮಿಂಚು ಪ್ರತಿಬಂಧಕ ಅಳವಡಿಸಬೇಕು, ಇಲ್ಲದಿದ್ದರೆ ಸಿಡಿಲು ಹೊಡೆದು ದೊಡ್ಡ ಗಡಿಯಾರಕ್ಕೆ ಧಕ್ಕೆಯಾಗುತ್ತದೆ. ತಲಕಾಡಿನಲ್ಲಿ ಈಗಾಗಲೇ ಉತ್ಖನನ ಮಾಡಲಾಗಿದ್ದು, ಅಲ್ಲಿ ಅಂತರರಾಷ್ಟ್ರೀಯ ಮಟ್ಟದ ವಸ್ತು ಸಂಗ್ರಹಾಲಯ ನಿರ್ಮಾಣ ಮಾಡಬೇಕು.

ಪ್ರೊ.ನಂಜರಾಜ ಅರಸ್, ನಿವೃತ್ತ ಪ್ರಾಧ್ಯಾಪಕ: ಮೈಸೂರು ನಗರವನ್ನು ಆರ್ಥಿಕವಾಗಿ ಬೆಳವಣಿಗೆ ಮಾಡಿ ಅದರ ಸಾಂಸ್ಕೃತಿಕ ಹಾಗೂ ಪಾರಂಪರಿಕ ಸೌಂದರ್ಯಕ್ಕೆ ಧಕ್ಕೆ ತರುವುದು ಬೇಡ. ಮೈಸೂರು ಮುದ್ದಾದ ಗೊಂಬೆಯಂತಿದ್ದು, ಇದರ ಪರಂಪರೆಯನ್ನು ಸಂರಕ್ಷಣೆ ಮಾಡಬೇಕು. ಮೈಸೂರನ್ನು ಮೈಸೂರಾಗಿಯೇ ಉಳಿಸಿಕೊಳ್ಳಬೇಕು. ಚಾಮುಂಡಿಬೆಟ್ಟವನ್ನು ಹಾಳು ಮಾಡಲು ಹೊರಟಿದ್ದು, ಇದಕ್ಕೆ ಕಡಿವಾಣ ಹಾಕಿ ಪಾರಂಪರಿಕ ಬೆಟ್ಟವಾಗಿ ಸಂರಕ್ಷಿಸಬೇಕು. ಕಾರಂಜಿಕೆರೆ, ಕುಕ್ಕರಹಳ್ಳಿ ಕೆರೆ ಹಾಳಾಗಿದ್ದು, ಇದನ್ನು ಕಲುಷಿತವಾಗುವುದನ್ನು ತಡೆಗಟ್ಟಬೇಕು. ಮೈಸೂರನ್ನು ಕಮರ್ಷಿಯಲ್ ಸೆಂಟರ್ ಆಗಿ ಮಾಡುವುದು ಬೇಡ, ಬದಲಿಗೆ ಸುತ್ತಮುತ್ತಲಿನ ಪ್ರವಾಸಿ ತಾಣಗಳನ್ನು ಅಭಿವೃದ್ಧಿಪಡಿಸಿ, ಮೈಸೂರಿನ ಮೆರುಗು ಹೆಚ್ಚಿಸಬೇಕು.

ಸಂದೇಶ್ ಸ್ವಾಮಿ, ಮಾಜಿ ಮೇಯರ್: ಮೈಸೂರಿನ ಸುತ್ತಮುತ್ತಲಿನ ಬಡಾವಣೆಗಳನ್ನು ನಗರಪಾಲಿಕೆಗೆ ಹಸ್ತಾಂತರ ಮಾಡಲು ಮುಂದಾಗಿದ್ದೀರಾ. ಆದರೆ, ಪಾಲಿಕೆಗೆ ಈ ಬಡಾವಣೆಗಳನ್ನು ನಿರ್ವಹಣೆ ಮಾಡಲು ಹಣಕಾಸಿನ ಕೊರತೆ ಉಂಟಾಗುತ್ತದೆ. ಈ ಹಿನ್ನೆಲೆಯಲ್ಲಿ ಮೈಸೂರಿನ ಅಭಿವೃದ್ಧಿಗೆ ಡಿಪಿಆರ್ ಸಿದ್ಧಪಡಿಸಿ, ಅಭಿವೃದ್ಧಿಗೆ ಅಗತ್ಯ ಹಣಕಾಸಿನ ನೆರವನ್ನು ಸರ್ಕಾರ ನೀಡಬೇಕು.

ನಾರಾಯಣ್, ಮಾಜಿ ಮೇಯರ್: ಮೈಸೂರು ನಗರ ಬೆಳೆಯುತ್ತಿದೆ. ಕೈಗಾರಿಕೆ ಸೇರಿದಂತೆ ಇತರೆ ತ್ಯಾಜ್ಯ ಹೆಚ್ಚಾಗುತ್ತಿದೆ. ಆದರೆ ನಗರದ ಸ್ವಚ್ಛತೆಗೆ ಪೌರಕಾರ್ಮಿಕರ ಸಂಖ್ಯೆ ಮೊದಲಿದ್ದಷ್ಟೇ ಇದೆ. ಆದ ಕಾರಣ ಗ್ರೇಟರ್ ಮೈಸೂರು ಮಾಡುವ ಮುನ್ನ ಇಂತಹ ಹಲವು ಪ್ರಮುಖ ಅಂಶಗಳ ಬಗ್ಗೆ ಗಮನ ನೀಡಬೇಕು.

ಜಿ.ಪಿ.ಬಸವರಾಜ್, ಹಿರಿಯ ಪತ್ರಕರ್ತ: ಬೆಂಗಳೂರಿನಲ್ಲಿ ಸಮರ್ಪಕ ಮೂಲ ಸೌಕರ್ಯವಿಲ್ಲ. ಕುಡಿಯುವ ನೀರಿಗೆ ಕೊರತೆ ಇದೆ. ಮಳೆ ಬಂದರೆ ಹಲವು ಬಡಾವಣೆ ಮುಳುಗಿ ಹೋಗುತ್ತವೆ. ಸಾಫ್ಟ್‌ವೇರ್ ಇಂಜಿನಿಯರ್‌ಗಳು ಅನಿವಾರ್ಯವಾಗಿ ಅಲ್ಲಿ ಬದುಕುತ್ತಿದ್ದಾರೆ. ಬೆಂಗಳೂರಿನಂತೆ ಮೈಸೂರು ಆಗಬಾರದು. ಈ ನಿಟ್ಟಿನಲ್ಲಿ ನಗರದ ವಿಸ್ತರಣೆ ಯೋಜನಾಬದ್ಧವಾಗಿ ಆಗಬೇಕು. ಸಾಂಸ್ಕೃತಿಕ ವಾತಾವರಣ ನಿರ್ಮಾಣ ಮಾಡಿ, ಆರ್ಟ್ ಕಾಂಪ್ಲೆಕ್ಸ್ ಸ್ಥಾಪಿಸಬೇಕು.

ಬಸವಲಿಂಗಯ್ಯ, ರಂಗಕರ್ಮಿ: ಮೈಸೂರಿನ ಕಲಾಮಂದಿರ ಕೇವಲ ರಾಜಕಾರಣಿಗಳ ಸಭೆ, ಸಮಾರಂಭಕ್ಕೆ ಮೀಸಲಾಗಿದೆ. ಆದ ಕಾರಣ ನಗರದ ಹಲವು ಬಡಾವಣೆಗಳಲ್ಲಿ ಕಿರು ರಂಗಮಂದಿರ ನಿರ್ಮಾಣ ಮಾಡಬೇಕು. ಮೈಸೂರಿನ ಭವಿಷ್ಯದ ಅಭಿವೃದ್ಧಿ ದೃಷ್ಟಿಯಲ್ಲಿಟ್ಟುಕೊಂಡು ಮೆಟ್ರೊ ನಿರ್ಮಾಣಕ್ಕೆ ಈಗಲೇ ಯೋಜನೆ ರೂಪಿಸಬೇಕು.

ಪುರುಷೋತ್ತಮ್, ನಾಗರಿಕ: ಮೈಸೂರಿನ ಹಳೆ ಜಿಲ್ಲಾಧಿಕಾರಿ ಕಚೇರಿಯನ್ನು ಡಿಜಿಟಲ್ ವಸ್ತು ಸಂಗ್ರಹಾಲಯವಾಗಿ ಮಾಡಬೇಕು. ವಿಶ್ವದ ಯಾವುದೇ ಮೂಲೆಯಲ್ಲಿ ಕುಳಿತು ಇಲ್ಲಿನ ಮಾಹಿತಿ ತಿಳಿಯುವಂತಹ ಹೈಟೆಕ್ ವ್ಯವಸ್ಥೆ ರೂಪಿಸಬೇಕು.

ಸುರೇಶ್‌ಕುಮಾರ್ ಜೈನ್, ಕೈಗಾರಿಕೋದ್ಯಮಿಗಳ ಸಂಘದ ಅಧ್ಯಕ್ಷ: ಮೈಸೂರು ನಗರದಲ್ಲಿ ಕೈಗಾರಿಕೆಗಳು ಹೆಚ್ಚಾಗಿ ಸ್ಥಾಪನೆಯಾಗುತ್ತಿವೆ. ಈ ಹಿನ್ನೆಲೆಯಲ್ಲಿ ಕೈಗಾರಿಕಾ ಪಟ್ಟಣ ಪ್ರಾಧಿಕಾರ ರಚನೆ ಮಾಡಬೇಕು. ನಗರಪಾಲಿಕೆ ಹಾಗೂ ನಗರಸಭೆಗಳಿಗೆ ದ್ವಿ ತೆರಿಗೆ ಪಾವತಿ ಮಾಡುತ್ತಿದ್ದು, ಕೈಗಾರಿಕೆಗಳಿಗೆ ಮೂಲ ಸೌಕರ್ಯ ಕಲ್ಪಿಸುತ್ತಿಲ್ಲ.

ಸಭೆಯ ಕೊನೆಯಲ್ಲಿ ಮಾತನಾಡಿದ ಡಾ.ಮಹದೇವಪ್ಪ, 28ಕ್ಕೂ ಹೆಚ್ಚು ಜನರು ಸಲಹೆ ನೀಡಿದ್ದೀರಾ. ಇದನ್ನೆಲ್ಲಾ ದಾಖಲೆ ಮಾಡಿಟ್ಟುಕೊಂಡಿದ್ದೇವೆ. ಎಲ್ಲರ ಸಲಹೆ ಕ್ರೋಢೀಕರಿಸಿ ಮೈಸೂರು ನಗರವನ್ನು ಯೋಜನಾಬದ್ಧವಾಗಿ ಅಭಿವೃದ್ಧಿ ಮಾಡಲು ಮುಖ್ಯಮಂತ್ರಿ ಸಿದ್ದರಾಮಯ್ಯ ಜೊತೆ ಚರ್ಚೆ ನಡೆಸುತ್ತೇನೆ ಎಂದು ಭರವಸೆ ನೀಡಿದರು.

ರಾಜಕಾರಣಿಗಳ ತರ್ಲೆ ತಾಪತ್ರಯ ಇಲ್ಲಿ ಬೇಡ; ಅಜೆಂಡಾ ಸೋತಿದೆ, ಹಿಡನ್ ಅಜೆಂಡಾ ಗೆದ್ದಿದೆ

ಮೈಸೂರು ನಗರದ 50 ವರ್ಷದ ಅಭಿವೃದ್ಧಿ ದೃಷ್ಟಿಯಲ್ಲಿಟ್ಟುಕೊಂಡು ಇಂದು ಕರೆದಿದ್ದ ಅಭಿಪ್ರಾಯ ಸಂಗ್ರಹ ಸಭೆಯಲ್ಲಿ ರಾಜಕಾರಣಿಗಳ ಭಾಷಣ, ಆರೋಪ–ಪ್ರತ್ಯಾರೋಪಕ್ಕೆ ಕೆರಳಿದ ವಿವಿಧ ಕ್ಷೇತ್ರದ ಮುಖಂಡರು ಚಳಿ ಬಿಡಿಸಿದರು. ರಾಜಕಾರಣಿಗಳ ತರ್ಲೆ ತಾಪತ್ರಯ ಆಮೇಲೆ ಇಟ್ಟುಕೊಳ್ಳಿ. ಇಲ್ಲಿ ನಗರದ ಅಭಿವೃದ್ಧಿ ಕುರಿತಂತೆ ಮಾತ್ರ ಮಾತನಾಡಿ. ಅದು ಬಿಟ್ಟು ರಾಜಕೀಯವಾಗಿ ಯಾವ ವಿಚಾರವನ್ನು ಪ್ರಸ್ತಾಪಿಸಬೇಡಿ ಎಂದು ಡಾ.ಹಿ.ಶಿ.ರಾಮಚಂದ್ರೇಗೌಡ ಹೇಳಿದರು.

ಇದು ವಿರೋಧ ಮತ್ತು ಆಡಳಿತ ಪಕ್ಷದ ಸಭೆಯಲ್ಲ. ಯಾವ ವಿಚಾರಕ್ಕೆ ಸಭೆ ಕರೆಯಲಾಗಿದೆಯೋ ಅದನ್ನು ಮಾತ್ರ ಪ್ರಸ್ತಾಪಿಸಿ. ಬೇಕಿದ್ದರೆ ನೀವು ಪ್ರತ್ಯೇಕವಾಗಿ ಸಭೆ ಕರೆದು ನಿಮ್ಮ ರಾಜಕಾರಣದ ಮಾತುಗಳನ್ನಾಡಿಕೊಳ್ಳಿ ಎಂದು ಸಲಹೆ ನೀಡಿದರು.

ಒಂದು ಸಭೆ ಅಂದರೆ ಅದಕ್ಕೆ ಒಂದು ಅಜೆಂಡಾ ಅವಶ್ಯವಿರುತ್ತದೆ. ಆದರೆ, ಇಲ್ಲಿ ಅಜೆಂಡಾ ಇಟ್ಟುಕೊಳ್ಳದೆ ಸಭೆ ನಡೆಸಲಾಗುತ್ತಿದೆ. ಇದರಿಂದ ಇಲ್ಲಿ ನಡೆದಿರುವ ಸಭೆಯಲ್ಲಿ ಅಜೆಂಡಾ ಸೋತಿದೆ, ಹಿಡನ್ ಅಜೆಂಡ್ ಗೆದ್ದಿದೆ ಎಂದು ವಿಧಾನಪರಿಷತ್ ಸದಸ್ಯ ಹೆಚ್.ವಿಶ್ವನಾಥ್ ಗೇಲಿ ಮಾಡಿದರು. ಇದು ರಾಜಕೀಯ ಸಭೆ ಅಲ್ಲ. ಆದ ಕಾರಣ ನಗರದ ಅಭಿವೃದ್ಧಿಗೆ ಸಂಬಂಧಿಸಿದಂತೆ ಮಾತ್ರ ಸಲಹೆಗಳನ್ನು ನೀಡಿ ಎಂದು ಡಾ.ಮಹದೇವಪ್ಪ ಈ ವೇಳೆ ತಾಕೀತು ಮಾಡಿದರು.

“ಮೈಸೂರು ನಗರದಲ್ಲಿ ವಾರ್ಡ್ ಸಮಿತಿಗಳನ್ನು ರಚನೆ ಮಾಡಬೇಕು. ಈ ಮೂಲಕ ಸ್ಥಳೀಯ ಸಮಸ್ಯೆಗಳನ್ನು ಅಲ್ಲೇ ಪರಿಹಾರ ಮಾಡಬೇಕು. ಈ ಹಿಂದೆ ಸಿಡಿಪಿ ರಚನೆ ಮಾಡಿದವರು ಆಯಾ ಕ್ಷೇತ್ರದ ತಜ್ಞರಾಗಿರಲಿಲ್ಲ. ಆದರೆ ಈಗ ಆಯಾ ಕ್ಷೇತ್ರದ ತಜ್ಞರನ್ನು ಆಯ್ಕೆ ಮಾಡಿ ಯೋಜನಬದ್ಧವಾಗಿ ಮೈಸೂರು ರೂಪಿಸಲು ಸಿಡಿಪಿ ರಚನೆ ಆಗಬೇಕು. ಈ ಮೂಲಕ ಪ್ಲ್ಯಾನ್ ಆಫ್ ಆಕ್ಷನ್ ರೂಪಿಸಬೇಕು.

–ಭಾಮಿ ಶೆಣೈ, ಮೈಸೂರು ಗ್ರಾಹಕ ಪರಿಷತ್ ಸಂಸ್ಥಾಪಕ ಅಧ್ಯಕ್ಷರು

“ನಗರದ ಹೊರ ವಲಯದ ಹಸಿರು ಸಂರಕ್ಷಣೆ ಮಾಡಬೇಕು. ಬಡಾವಣೆಗಳನ್ನು ನಿರ್ಮಾಣ ಮಾಡುತ್ತಾ ಹೋದರೆ ಕಾಂಕ್ರಿಟ್ ಕಾಡಾಗಿ ಕೃಷಿ ವಲಯ ನಶಿಸಿ ಹೋಗುತ್ತದೆ. ಇದರಿಂದ ಗುಣಮಟ್ಟದ ಗಾಳಿ ಸಿಗುವುದಿಲ್ಲ. ಭವಿಷ್ಯತ್ತಿನಲ್ಲಿ ಆಹಾರಕ್ಕೆ ತತ್ವಾರ ಉಂಟಾಗುತ್ತದೆ. –ಮೀನಾ, ನಾಗರಿಕರು

“ದೇವರಾಜ ಮಾರುಕಟ್ಟೆ ಪ್ರವೇಶ ದ್ವಾರ ಧರಾಶಾಯಿಯಾಗಿ ಹಲವು ವರ್ಷ ಕಳೆದಿದೆ. ಈಗ ಮಾರುಕಟ್ಟೆ ಪುನರ್ ನಿರ್ಮಾಣವಾದರೂ ಮಾಡಿ ಅಥವಾ ನವೀಕರಣವಾದರೂ ಮಾಡಿ. ಈ ಕುರಿತಂತೆ ಏನಾದರೊಂದು ತೀರ್ಮಾನ ಮಾಡಿ. ಮೈಸೂರಿಗೆ ಐಐಟಿ ತರಬೇಕು, ಈ ನಿಟ್ಟಿನಲ್ಲಿ ಸಂಸದ ಯದುವೀರ್ ಆಸಕ್ತಿ ವಹಿಸಬೇಕು.

–ಕೆ.ಬಿ.ಲಿಂಗರಾಜು, ಮೈಸೂರು ಚೇಂಬರ್ಸ್ ಅಂಡ್ ಕಾಮರ್ಸ್ ಅಧ್ಯಕ್ಷ

ಇಂದು 76ನೇ ಎನ್‌ಸಿಸಿ ದಿನಾಚರಣೆ

ಮೈಸೂರು, ನ.23(ಜಿಎ)– 4 ಕೆಎಆರ್ ವಾಯುದಳ ಎನ್‌ಸಿಸಿ ವಿಭಾಗದ ಈ ಹಿಂದಿನ ಕೆಡೆಟ್‌ಗಳು ನ.24ರಂದು ಮೈಸೂರಲ್ಲಿ 76ನೇ ಎನ್‌ಸಿಸಿ ದಿನಾಚರಣೆ ಪ್ರಯುಕ್ತ ವಿಶೇಷ ಕಾರ್ಯಕ್ರಮ ಹಮ್ಮಿಕೊಂಡಿದ್ದಾರೆ ಎಂದು ಮಾಜಿ ಕೆಡೆಟ್‌ಗಳ ಸಂಘದ ಅಧ್ಯಕ್ಷ ಡಾ.ಅನಿಲ್ ಥಾಮಸ್ ತಿಳಿಸಿದರು.

ಮೈಸೂರು ಜಿಲ್ಲಾ ಪತ್ರಕರ್ತರ ಭವನದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಅಂದು ಬೆಳಗ್ಗೆ 7.30ಕ್ಕೆ ನಗರದ ಕೋಟೆ ಆಂಜನೇಯ ಸ್ವಾಮಿ ದೇವಸ್ಥಾನದ ಬಳಿಯಿಂದ ಬೈಕ್ ರ‍್ಯಾಲಿ ಹೊರಡಲಿದ್ದು, ಪೊಲೀಸ್ ಆಯುಕ್ತ ಸೀಮಾ ಲಾಟ್ಕರ್ ಚಾಲನೆ ನೀಡಲಿದ್ದಾರೆ. ರ‍್ಯಾಲಿಯಲ್ಲಿ ಸುಮಾರು ನೂರು ಮಂದಿ ಮೋಟಾರ್ ಬೈಕ್, ಕಾರುಗಳೊಡನೆ ಪಾಲ್ಗೊಳ್ಳಲಿದ್ದಾರೆ. ಎನ್‌ಸಿಸಿ ವಾಹನಗಳೂ ಇರಲಿವೆ ಎಂದರು.

ರ‍್ಯಾಲಿಯು ಮೆಟ್ರೋಪೋಲ್ ವೃತ್ತದ ಫೀಲ್ಡ್ ಮಾರ್ಷಲ್ ಕಾರ್ಯಪ್ಪ ಅವರ ಪುತ್ಥಳಿ ತಲುಪಿ ನಮನ ಸಲ್ಲಿಸಲಾಗುತ್ತದೆ. ಬಳಿಕ, ಹೋಟೆಲ್ ಸದರ್ನ್ ಸ್ಟಾರ್‌ನಲ್ಲಿ ಬೆಳಗ್ಗೆ 10.30ಕ್ಕೆ ವಿಶೇಷ ಕಾರ್ಯಕ್ರಮವಿದ್ದು, ಕರ್ನಲ್ ರೋಹಿತ್ ಥಾಕುರ್, ವಿಂಗ್ ಕಮಾಂಡರ್ ಆಶೀಶ್, ಆಲ್ಫಾ ಲೀಡ್ ಸಂಸ್ಥೆಯ ನಾಗರಾಜ್, ನಿವೃತ್ತ ರೋರೋ ಮಾಡೆಲಿಂಗ್ ಬೋಧಕರಾದ ಸೋಮೇಂದ್ರಸಿಂಗ್, ನಗರದ ಮೊದಲ ಮಹಿಳಾ ಫೈಟರ್ ಪೈಲಟ್ ಪುಣ್ಯಾ ನಂಜಪ್ಪ ಮೊದಲದವರು ಪಾಲ್ಗೊಳ್ಳಲಿದ್ದಾರೆ ಎಂದು ತಿಳಿಸಿದರು.

ಈ ವೇಳೆ ಇವರು ರಕ್ಷಣಾ ದಳ ಮೊದಲಾದ ಕಡೆ ಎನ್‌ಸಿಸಿ ಕೆಡೆಟ್‌ಗಳಿಗೆ ಇರುವ ಉದ್ಯೋಗಾವಕಾಶ ಮೊದಲಾದವನ್ನು ವಿವರಿಸುವರು ಎಂದು ತಿಳಿಸಿದರು. ಸುದ್ದಿಗೋಷ್ಠಿಯಲ್ಲಿ ಮಾಜಿ ಕೆಡೆಟ್‌ಗಳ ಸಂಘದ ಪದಾಧಿಕಾರಿಗಳಾದ ಉಮಾ ವೆಂಕಟೇಶ್, ಶಂಕರ್ ದನಗೌಡ, ಕೆ.ಪಿ.ಲಕ್ಷ್ಮಿ ವಲ್ಲಭ ಉಪಸ್ಥಿತರಿದ್ದರು.

ನಾಡೋಜ ಪ್ರೊ. ಭಾಷ್ಯಂ ಸ್ವಾಮೀಜಿ ಸೇರಿದಂತೆ 7 ಮಂದಿ ಸಾಧಕರಿಗೆ ಕನ್ನಡಾಂಬೆ ರತ್ನ ಪ್ರಶಸ್ತಿ



ಪ್ರೊ.ಭಾಷ್ಯಂ ಸ್ವಾಮೀಜಿ

ಮೈಸೂರು,ನ.23–ಮೈಸೂರಿನ ಹೂಟಗಳ್ಳಿಯ ಕನ್ನಡಾಂಬೆ ರಕ್ಷಣಾ ವೇದಿಕೆ ವತಿಯಿಂದ ವಿವಿಧ ಕ್ಷೇತ್ರಗಳ ಸಾಧಕರಿಗೆ ನ. 30 ರಂದು ಸಂಜೆ 4 ಗಂಟೆಗೆ ಹೂಟಗಳ್ಳಿ ಸಂತೇಮಾಳ ಮೈದಾನದಲ್ಲಿ 'ಕನ್ನಡಾಂಬೆ ರತ್ನ' ಪ್ರಶಸ್ತಿ ಪ್ರದಾನ ಸಮಾರಂಭವನ್ನು ಏರ್ಪಡಿಸಲಾಗಿದೆ. ಧಾರ್ಮಿಕ ಕ್ಷೇತ್ರದಿಂದ ಪ್ರೊ. ಭಾಷ್ಯಂ ಸ್ವಾಮೀಜಿ, ಮಾಧ್ಯಮ ಕ್ಷೇತ್ರದಿಂದ ಬಿ. ರಾಘವೇಂದ್ರ ಮತ್ತು ಎಸ್.ಬಿ.ದೇವರಾಜು, ಆರಕ್ಷಕ ಕ್ಷೇತ್ರದಿಂದ ಕುಮಾರ್, ವೈದ್ಯಕೀಯ ಕ್ಷೇತ್ರದಿಂದ ಡಾ.ಕೆ.ಆರ್.ಗೌತಮ್, ಕನ್ನಡ ಹೋರಾಟ ಕ್ಷೇತ್ರದಿಂದ ಮಂಡ್ಯ ಹೆಚ್.ಸಿ. ಮಂಜುನಾಥ್, ಇಂಟರ್ ನ್ಯಾಷನಲ್ ಬುಕ್ ಆಫ್ ರೆಕಾರ್ಡ್ ವಿಹಿಕ ಅವರಿಗೆ 'ಕನ್ನಡಾಂಬೆ ರತ್ನ' ಪ್ರಶಸ್ತಿ ಪ್ರದಾನ ಮಾಡಲಾಗುವುದು.

ಮುಖ್ಯ ಅತಿಥಿಗಳಾಗಿ ಶಾಸಕ ಜಿ.ಟಿ.ದೇವೇಗೌಡ, ಶ್ರೀ ಬಸವ ಮೃತ್ಯುಂಜಯ ಸ್ವಾಮೀಜಿ, ಜಿಲ್ಲಾ ಉಸ್ತುವಾರಿ ಸಚಿವ ಡಾ.ಹೆಚ್.ಸಿ.ಮಹದೇವಪ್ಪ, ಶ್ರೀ ಅರ್ಜುನ್ ಅವಧೂತ ಸ್ವಾಮೀಜಿ, ಶಾಸಕ ವಿನಯ್ ಕುಲಕರ್ಣಿ, ಬಿಜೆಪಿ ಮುಖಂಡ ಕವೀಶ್‌ಗೌಡ, ಅಪರ ಜಿಲ್ಲಾಧಿಕಾರಿ ಕೆ.ಶಿವರಾಜು ಭಾಗವಹಿಸಲಿದ್ದಾರೆ.



ಪೌರಕಾರ್ಮಿಕರಿಗೆ ಅಭಿನಂದನೆ...

ಮೈಸೂರಿನ ಗೋಕುಲಂನ ಸಾಂಸ್ಕೃತಿಕ ಭವನದಲ್ಲಿ ಕನಸು ನೆನಪಿನೆಡೆಗೆ ಪಯಣ ರಂಗ ತಂಡ ಮತ್ತು ಎಸ್‌ಬಿಎಂ ಮಂಜು ಸ್ನೇಹ ಬಳಗದಿಂದ ನಡೆದ ರಂಗ ರಾಜ್ಯೋತ್ಸವದಲ್ಲಿ ನಾಟಕದ ಮೂಲಕ ಸ್ವಚ್ಛತೆ ಕುರಿತು ಅರಿವು ಮೂಡಿಸಿದ ಪೌರಕಾರ್ಮಿಕರನ್ನು ಅಭಿನಂದಿಸಲಾಯಿತು. ಈ ವೇಳೆ ಮೈಸೂರು ನಗರಪಾಲಿಕೆ ಆಯುಕ್ತ ಆಶಾದ್ ಉರ್‌ರೆಹಮಾನ್ ಷರೀಫ್, ಮುಡಾ ಆಯುಕ್ತ ಎ.ಎನ್. ರಘುನಂದನ್, ಮುಡಾ ಮಾಜಿ ಅಧ್ಯಕ್ಷ ಮೋಹನ್ ಕುಮಾರ್, ಪಾಲಿಕೆ ಮಾಜಿ ಸದಸ್ಯ ಎಸ್.ಬಿ.ಎಂ.ಮಂಜು, ಶರಣು ದೇವರಾಜ್, ಶ್ರೇಯಸ್ ಮಹದೇವ್ ಇತರರಿದ್ದರು.

ಮೈಸೂರಲ್ಲಿ ಚೆಸ್ ಸ್ಪರ್ಧೆ

ಮೈಸೂರು, ನ.23(ಬಿಎಲ್‌ಯು)– ರೋಟರಿ ಮೈಸೂರು ಚಿಲ್ಡ್ರನ್ಸ್ ಲೈಬ್ರರಿ ಡಿ.1ರಂದು ಶಾಲಾ ಮಕ್ಕಳಿಗಾಗಿ ಚೆಸ್ ಸ್ಪರ್ಧೆ ಆಯೋಜಿಸಿದೆ. ನಗರದ ಫಿಯೋನಿಕ್ಸ್ ಇಂಟರ್ ನ್ಯಾಷನಲ್ ಅಕಾಡೆಮಿಯಲ್ಲಿ ಅಂದು ಬೆಳಗ್ಗೆ 8.30ರಿಂದ ಸಂಜೆ 5.30 ರವರೆಗೆ ಚೆಸ್ ಸ್ಪರ್ಧೆ ನಡೆಯಲಿದೆ ಎಂದು ರೋಟರಿ ಮೈಸೂರು ಚಿಲ್ಡ್ರನ್ಸ್ ಲೈಬ್ರರಿ ಅಧ್ಯಕ್ಷ ಮುಬೀನ್ ಸೇಟ್ ತಿಳಿಸಿದ್ದಾರೆ.

ಮುಡಾ, ಖಾಸಗಿ ಬಡಾವಣೆಗಳ ಮೈಸೂರು ಮಹಾನಗರಪಾಲಿಕೆ, ಇತರೆ ಸ್ಥಳೀಯ ಸಂಸ್ಥೆಗಳಿಗೆ ಹಸ್ತಾಂತರ ಪ್ರಕ್ರಿಯೆ

ಸದರಿ ಬಡಾವಣೆಗಳ ಪರಿಶೀಲನೆಗಿಳಿದ ಪಾಲಿಕೆ ಅಧಿಕಾರಿಗಳು

● ಅಲ್ಲಿನ ಮೂಲಸೌಕರ್ಯಗಳ ಬಗ್ಗೆ ಖುದ್ದು ಸ್ಥಳ ಪರಿಶೀಲನೆ ● ನಂತರವೇ ಪಾಲಿಕೆ, ಇತರೆ ಸ್ಥಳೀಯ ಸಂಸ್ಥೆಗಳಿಗೆ ಹಸ್ತಾಂತರ



ಮೈಸೂರು ಪಾಲಿಕೆ ಆಯುಕ್ತ ಆಶಾದ್ ಉರ್ ರೆಹಮಾನ್ ಷರೀಫ್, ಸೂಪರಿಂಟೆಂಡಿಂಗ್ ಇಂಜಿನಿಯರ್ ಕೆ.ಜೆ.ಸಿಂಧು ಹಾಗೂ ಅಭಿವೃದ್ಧಿ ಅಧಿಕಾರಿ ಸತ್ಯಮೂರ್ತಿ ಅವರೊಂದಿಗೆ ಬಡಾವಣೆಯ ಪರಿಶೀಲನೆ ನಡೆಸಿದರು.

ಮೈಸೂರು, ನ.23(ಆರ್‌ಕೆ)– ಜಿಲ್ಲಾಧಿಕಾರಿಗಳ ನಿರ್ದೇಶನದಂತೆ ಮೂಲಸೌಕರ್ಯಗಳೊಂದಿಗೆ ಶೇ.100ರಷ್ಟು ಅಭಿವೃದ್ಧಿಗೊಂಡಿರುವ ವಸತಿ ಬಡಾವಣೆಗಳನ್ನು ಮೈಸೂರು ನಗರಾಭಿವೃದ್ಧಿ ಪ್ರಾಧಿಕಾರ (ಮುಡಾ)ದಿಂದ ಮೈಸೂರು ಮಹಾನಗರಪಾಲಿಕೆ ಹಾಗೂ ಆಯಾ ವ್ಯಾಪ್ತಿಯ ಸ್ಥಳೀಯ ಸಂಸ್ಥೆಗಳಿಗೆ ಹಸ್ತಾಂತರಿಸುವ ಪ್ರಕ್ರಿಯೆ ಭರದಿಂದ ಸಾಗಿದೆ.

ಇತ್ತೀಚೆಗಷ್ಟೇ ಜಿಲ್ಲಾಧಿಕಾರಿ ಜಿ.ಲಕ್ಷ್ಮಿಕಾಂತರೆಡ್ಡಿ, ಜಿಲ್ಲಾ ಪಂಚಾಯತಿ ಸಭಾಂಗಣದಲ್ಲಿ ಮುಡಾ, ಪಾಲಿಕೆ, ಚೆಸ್ಕಾಂ, ಒಳಚರಂಡಿ, ವಾಣಿವಿಲಾಸ ವಾಟರ್ ವರ್ಕ್ಸ್ ಅಧಿಕಾರಿಗಳ ಸಭೆ ನಡೆಸಿ, ಸರ್ಕಾರದ ಆದೇಶದನ್ವಯ ಮೂಲಸೌಕರ್ಯ ಒಳಗೊಂಡು ಅಭಿವೃದ್ಧಿಗೊಂಡಿರುವ ವಸತಿ ಬಡಾವಣೆಗಳನ್ನು ಮೈಸೂರು ಮಹಾನಗರಪಾಲಿಕೆಯೂ ಸೇರಿದಂತೆ ಆಯಾ ವ್ಯಾಪ್ತಿಯ ಸಂಬಂಧಿಸಿದ ಸ್ಥಳೀಯ ಸಂಸ್ಥೆಗಳಿಗೆ ಹಸ್ತಾಂತರಿಸಿ, ಸಮರ್ಪಕವಾಗಿ ನಿರ್ವಹಣೆ ಮಾಡಬೇಕಾಗಿದೆ. ಹಾಗಾಗಿ ಸ್ಥಳಕ್ಕೆ ಭೇಟಿ ನೀಡಿ, ಜಂಟಿ ಪರಿಶೀಲನೆ ನಡೆಸಿದ ಬಳಿಕ ಕುಡಿಯುವ ನೀರು, ರಸ್ತೆ, ಆಟದ ಮೈದಾನ, ಒಳಚರಂಡಿ, ಉದ್ಯಾನವನ, ವಿದ್ಯುತ್ ಸಂಪರ್ಕ ಸೇರಿದಂತೆ ಮೂಲಸೌಕರ್ಯ ಸಮರ್ಪಕವಾಗಿದ್ದರೆ ಅಂತಹ ಬಡಾವಣೆಗಳನ್ನು ಪಟ್ಟಿ ಮಾಡಿ ಆದ್ಯತೆ ಮೇರೆಗೆ ಹಸ್ತಾಂತರ ಪ್ರಕ್ರಿಯೆ ನಡೆಸುವಂತೆ ಸೂಚನೆ ನೀಡಿದ್ದರು.

ಅದರಂತೆ ಮೈಸೂರು ಮಹಾನಗರಪಾಲಿಕೆ ಆಯುಕ್ತ ಆಶಾದ್ ಉರ್ ರೆಹಮಾನ್ ಷರೀಫ್, ಸೂಪರಿಂಟೆಂಡಿಂಗ್ ಇಂಜಿನಿಯರ್ ಕೆ.ಜೆ.ಸಿಂಧು, ಪಾಲಿಕೆಯ ಎಲ್ಲಾ ವಲಯ ಕಚೇರಿಗಳ ವಲಯಾಧಿಕಾರಿಗಳು, ಅಭಿವೃದ್ಧಿ ಅಧಿಕಾರಿಗಳು, ಇಂಜಿನಿಯರ್‌ಗಳು ಹಾಗೂ ಕಂದಾಯ ಅಧಿಕಾರಿಗಳ ಜೊತೆ ಮೈಸೂರು ನಗರದಾದ್ಯಂತ ಅಭಿವೃದ್ಧಿಗೊಂಡಿರುವ ಮುಡಾ ಹಾಗೂ ಖಾಸಗಿ ವಸತಿ ಬಡಾವಣೆಗಳ ಖುದ್ದು ಪರಿಶೀಲನೆ ನಡೆಸುತ್ತಿದ್ದಾರೆ. ಮೈಸೂರು ನಗರ ಹಾಗೂ ಹೊರವಲಯದಲ್ಲಿ ಸುಮಾರು 800ಕ್ಕೂ ಹೆಚ್ಚು ವಸತಿ ಬಡಾವಣೆಗಳು ಅಭಿವೃದ್ಧಿಗೊಂಡಿವೆ. ಕೆಲವು ಬಡಾವಣೆಗಳಲ್ಲಿ ಕನಿಷ್ಠ ಮೂಲಸೌಕರ್ಯಗಳಿಲ್ಲ. ಗಿಡಗಂಟಿ ಬೆಳೆದು ಪಾಳು ಕೊಂಪೆಯಂತಿವೆ. ಕೇವಲ 200 ಬಡಾವಣೆಗಳು ಮಾತ್ರ ವಸತಿಗೆ ಯೋಗ್ಯವಾಗಿದ್ದು, ಉಳಿದ 600 ಬಡಾವಣೆಗಳ ಸಂಬಂಧ ಸದ್ಯಕ್ಕೆ ಯಾವುದೇ ತೀರ್ಮಾನಕ್ಕೆ ಬರಲು ಸಾಧ್ಯವಾಗಿಲ್ಲ. ಇದೀಗ ಶೇ.100ರಷ್ಟು ಅಭಿವೃದ್ಧಿಗೊಂಡಿರುವ ವಸತಿ ಬಡಾವಣೆಗಳನ್ನು ಪಾಲಿಕೆ ಹಾಗೂ ಆಯಾ ವ್ಯಾಪ್ತಿಯ ಸ್ಥಳೀಯ ಆಡಳಿತ ಸಂಸ್ಥೆಗಳಿಗೆ ಹಸ್ತಾಂತರಿಸುವ ಪ್ರಕ್ರಿಯೆ ಆರಂಭಿಸಿರುವ ಅಧಿಕಾರಿಗಳು, ಬಾಕಿ ಕಾಮಗಾರಿ ಪೂರ್ಣಗೊಳಿಸಲು ತಾಕೀತು ಮಾಡಿದ್ದಾರೆ.

“ದಟ್ಟಗಳ್ಳಿ, ಚನ್ನಮ್ಮ ದೇವೇಗೌಡ, ಕಾರ್ತಿಕ್ ಬಡಾವಣೆ, ಶ್ರೀರಾಂಪುರ 3ನೇ ಹಂತ, ದೇವನೂರು 3ನೇ ಹಂತ, ಮೇಟಗಳ್ಳಿ ಸೇರಿದಂತೆ ಮೈಸೂರು ನಗರಾದ್ಯಂತ ಖಾಸಗಿ ವ್ಯಕ್ತಿಗಳು, ಗೃಹ ನಿರ್ಮಾಣ ಸಹಕಾರ ಸಂಘಗಳು ಹಾಗೂ ಮೈಸೂರು ನಗರಾಭಿವೃದ್ಧಿ ಪ್ರಾಧಿಕಾರದಿಂದ ಅಭಿವೃದ್ಧಿಪಡಿಸಿರುವ ವಸತಿ ಬಡಾವಣೆಗಳನ್ನು ಮಹಾನಗರಪಾಲಿಕೆ, ಹೂಟಗಳ್ಳಿ ನಗರಸಭೆ ಮತ್ತು ರಮ್ಮನಹಳ್ಳಿ, ಬೋಗಾದಿ, ಶ್ರೀರಾಂಪುರ ಪಟ್ಟಣ ಪಂಚಾಯತಿಗಳಿಗೆ ನಿರ್ವಹಣೆಯ ಜವಾಬ್ದಾರಿ ವಹಿಸಿ ಖಾತಾ, ಕಂದಾಯ, ಸ್ವಚ್ಛತೆ ಜವಾಬ್ದಾರಿಯನ್ನು ವಹಿಸಬೇಕು.

– ಆಶಾದ್ ಉರ್ ರೆಹಮಾನ್ ಷರೀಫ್, ಮೈಸೂರು ಮಹಾನಗರಪಾಲಿಕೆ ಆಯುಕ್ತ

ಹಸ್ತಾಂತರವಾದ ನಂತರ ಸ್ಥಳೀಯ ಸಂಸ್ಥೆಗಳು ತಮ್ಮ ವ್ಯಾಪ್ತಿಗೆ ಬರುವ ಬಡಾವಣೆಗಳಲ್ಲಿ ಸ್ವಚ್ಛತೆ, ಕುಡಿಯುವ ನೀರು, ರಸ್ತೆ, ಚರಂಡಿ, ವಿದ್ಯುತ್ ದೀಪ, ಉದ್ಯಾನವನಗಳ ನಿರ್ವಹಣೆ ಹೊರಲಿದ್ದು, ಅವುಗಳಿಂದ ಪ್ರತೀ ವರ್ಷ ಕಂದಾಯವನ್ನೂ ವಸೂಲಿ ಮಾಡಿ ಅಲ್ಲಿನ ನಿವಾಸಿಗಳಿಗೆ ಮೂಲಸೌಕರ್ಯ ನಿರ್ವಹಣೆ ಮಾಡಬೇಕಾಗಿದೆ. ಪಾಲಿಕೆ ವ್ಯಾಪ್ತಿಗೆ ಹಸ್ತಾಂತರಿಸಿಕೊಳ್ಳುವ ಬಡಾವಣೆಗಳನ್ನು ಮುಂದೆ ನಾವೇ ನಿರ್ವಹಿಸುತ್ತೇವೆ ಎಂದು ನಗರಪಾಲಿಕೆ ಆಯುಕ್ತರು 'ಮೈಸೂರು ಮಿತ್ರ'ನಿಗೆ ತಿಳಿಸಿದರು.

ಮತ್ತೊಂದು ಮದುವೆ; ತಕರಾರು ತೆಗೆದ ಪತ್ನಿಯ ನಾಲೆಗೆ ತಳ್ಳಿ ಹತ್ಯೆ: ಪತಿಯ ಬಂಧನ

ಮೊದಲ ಪತಿಯ ನಿಧನದ ನಂತರ ಪ್ರೀತಿಸಿ ಮದುವೆಯಾಗಿದ್ದ ಮಹಿಳೆಯ ದುರಂತ ಅಂತ್ಯ; ಇಬ್ಬರು ಮಕ್ಕಳೀಗ ತಬ್ಬಲಿ

ಶ್ರೀರಂಗಪಟ್ಟಣ, ನ.23–ಕಳೆದ ಐದು ದಿನದ ಹಿಂದೆ ತಾಲೂಕಿನ ಮಾದರಹಳ್ಳಿ ಬಳಿ ವರುಣ ನಾಲೆಯಲ್ಲಿ ಮೀನು ಹಿಡಿಯಲು ಹಾಕಿದ್ದ ಬಲೆಗೆ ಸಿಲುಕಿದ್ದ ಮಹಿಳೆಯ ಶವದ ಪ್ರಕರಣ ಬಯಲಾಗಿದ್ದು, ಎರಡು ಮಕ್ಕಳ ವಿಧವೆಯನ್ನು ಪ್ರೀತಿಸಿ ಮದುವೆಯಾಗಿದ್ದ ಪತಿಯೇ ಆಕೆಯನ್ನು ನಾಲೆಗೆ ತಳ್ಳಿ ಹತ್ಯೆ ಮಾಡಿದ್ದ ಎಂಬುದು ಬಯಲಾಗಿದೆ.

ಮೂಲತಃ ಹಾಸನ ಜಿಲ್ಲೆ ಆಲೂರು ತಾಲೂಕು ಯಡವನಹಳ್ಳಿ ನಿವಾಸಿ ವೈ.ಎನ್.ಕಿರಣ್(32) ಪತ್ನಿಯನ್ನು ಕೊಂದವನಾಗಿದ್ದು, ಹಾಸನದ ಕೃಷ್ಣಾನಗರ ನಿವಾಸಿ ಎ.ಪಿ.ಪ್ರಮೀಳಾ(39) ಪತಿಯಿಂದಲೇ ಹತ್ಯೆಗೀಡಾದವರು.

ವಿವರ: ನ.18ರಂದು ತಾಲೂಕಿನ ಮಾದರಹಳ್ಳಿ ಸಮೀಪ ವರುಣ ನಾಲೆಯಲ್ಲಿ ಮೀನು ಹಿಡಿಯಲು ಹಾಕಿದ್ದ ಬಲೆಗೆ ಮಹಿಳೆಯ ಶವ ಸಿಕ್ಕಿಬಿದ್ದಿತ್ತು. ಮೃತದೇಹ ವಶಪಡಿಸಿಕೊಂಡಿದ್ದ ಕೆಆರ್‌ಎಸ್ ಠಾಣೆ ಪೊಲೀಸರು, ಅಸ್ವಾಭಾವಿಕ ಸಾವು ಪ್ರಕರಣ ದಾಖಲಿಸಿಕೊಂಡು, ವಾರಸುದಾರರು ಪತ್ತೆಯಾಗದ ಕಾರಣ ಅವರೇ ಅಂತ್ಯಕ್ರಿಯೆ ನೆರವೇರಿಸಿದ್ದರು.

ಪ್ರೇಮಾಂಕುರ: ಪ್ರಮೀಳಾ ಪತಿ ಐದು ವರ್ಷದ ಹಿಂದೆ ಸಾವನ್ನಪ್ಪಿದ್ದು, ಈಕೆ ಎರಡು ಮಕ್ಕಳೊಂದಿಗೆ ಜೀವನ ಸಾಗಿಸುತ್ತಿದ್ದಳು. ಈಕೆಯ ಮನೆ ಸಮೀಪವೇ ವಾಸವಿದ್ದ, ಮೈಸೂರಿನ ಆರ್‌ಬಿಐನ ಅರೆಕಾಲಿಕ ನೌಕರ ಕಿರಣ್ ಹಾಗೂ ಈಕೆಯ ನಡುವೆ ಪ್ರೇಮಾಂಕುರವಾಗಿದೆ. ಆತ ಮೈಸೂರಿನ ಲಕ್ಷ್ಮೀಕಾಂತನಗರದಲ್ಲಿ ಬಾಡಿಗೆ ಮನೆ ಮಾಡಿಕೊಂಡು ಆಕೆಯನ್ನು ಅಲ್ಲಿಗೆ ಕರೆತಂದು ಆರ್‌ಬಿಐನಲ್ಲೇ ಅರೆಕಾಲಿಕ ನೌಕರಿ ಕೊಡಿಸಿದ್ದ.

ಈ ನಡುವೆ ಕಿರಣ್ ತನ್ನ ಪೋಷಕರ ಒತ್ತಾಯದ ಮೇರೆಗೆ ಪ್ರಮೀಳಾಗೆ ತಿಳಿಯದಂತೆ ಖಾಸಗಿ ಕಂಪನಿಯೊಂದರಲ್ಲಿ ಕೆಲಸ ಮಾಡಿಕೊಂಡಿದ್ದ ಯುವತಿಯನ್ನು ವಿವಾಹವಾಗಿದ್ದ. ಕಿರಣ್ ಮತ್ತು ಪ್ರಮೀಳಾ ಶ್ರಮಪಟ್ಟು ದುಡಿದ ಹಣವನ್ನು ಬಡ್ಡಿಗೆ ಬಿಟ್ಟಿದ್ದು, ಐದಾರು ಲಕ್ಷ ರೂ. ಸಾಲ ಪಡೆದಿದ್ದ ವ್ಯಕ್ತಿ ಹಣ ಹಿಂತಿರುಗಿಸದೇ ಮೋಸ ಮಾಡಿದ್ದ ಎನ್ನಲಾಗಿದೆ. ಈ ಮಧ್ಯೆ ಮೈಸೂರು ರಿಂಗ್ ರಸ್ತೆ ಸಮೀಪ ಕಿರಣ್ ಗೌಡಾಸ್ ಮಿಲ್ಟ್ರಿ ಹೋಟೆಲ್ ಹೆಸರಿನಲ್ಲಿ ಹೋಟೆಲ್‌ವೊಂದನ್ನು ಆರಂಭಿಸಿದ್ದು, ಅದಕ್ಕೆ ಪ್ರಮೀಳಾ 3ಲಕ್ಷರೂ. ನೀಡಿದ್ದಳು. ಆದರೆ ಹೋಟೆಲ್ ವ್ಯವಹಾರದಲ್ಲಿ ನಷ್ಟವಾಗಿದೆ. ಅದೇ ವೇಳೆ ಕಿರಣ್ ತನಗೆ ತಿಳಿಯದೇ ಬೇರೊಂದು ಯುವತಿಯನ್ನು ಮದುವೆಯಾಗಿರುವ ವಿಷಯವೂ ಆಕೆಗೆ ಗೊತ್ತಾಗಿದ್ದು, ಈ ಸಂಬಂಧ ಇವರಿಬ್ಬರ ನಡುವೆ ಪದೇ ಪದೇ ಗಲಾಟೆಯಾಗುತ್ತಿತ್ತು. ಕಿರಣ್ ಎರಡನೇ ಪತ್ನಿ 8 ತಿಂಗಳ ಗರ್ಭಿಣಿಯಾಗಿದ್ದು, ಆಕೆಯನ್ನು ಆತ ಆಸ್ಪತ್ರೆಗೆ ಕರೆದೊಯ್ದ ವಿಚಾರವಾಗಿ ಪ್ರಮೀಳಾ ರಂಪಾಟ ನಡೆಸಿದ್ದಳು ಎಂದು ಹೇಳಲಾಗಿದೆ.


ಎ.ಪಿ.ಪ್ರಮೀಳಾ


ವೈ.ಎನ್.ಕಿರಣ್

ಇದರಿಂದ ಬೇಸತ್ತ ಕಿರಣ್ ನ.17ರಂದು ಮಧ್ಯಾಹ್ನ ಪ್ರಮೀಳಾರ ಪುತ್ರಿ ವರ್ಷಿತಾ ಹುಟ್ಟುಹಬ್ಬವಿದ್ದುದರಿಂದ ಮೀನು ತರಲೆಂದು ಪ್ರಮೀಳಾಳನ್ನು ಮೊಗರಹಳ್ಳಿ ಸಮೀಪದ ವರುಣ ನಾಲೆ ಬಳಿ ಕರೆತಂದು ನಾಲೆಗೆ ತಳ್ಳಿ ಸ್ಥಳದಿಂದ ಕಾಲ್ಕಿತ್ತಿದ್ದಾನೆ. ಮನೆಗೆ ಹೋದ ನಂತರ ಪ್ರಮೀಳಾ ಕಾಲು ಜಾರಿ ನಾಲೆಗೆ ಬಿದ್ದುಹೋಗಿದ್ದು, ಈ ಬಗ್ಗೆ ಯಾರಿಗೂ ಹೇಳಬೇಡಿ ಎಂದು ಮಕ್ಕಳಿಗೆ ತಾಕೀತು ಮಾಡಿದ್ದ ಎನ್ನಲಾಗಿದೆ.

ಈ ಮಧ್ಯೆ ಪ್ರಮೀಳಾಳ ಸಹೋದರ ಆಕೆಯ ಮೊಬೈಲ್‌ಗೆ ಕರೆ ಮಾಡಿದ್ದು, ಕರೆ ಸ್ವೀಕರಿಸದ ಕಾರಣ ಮೈಸೂರಿಗೆ ಬಂದು ವಿಚಾರಿಸಿದಾಗ ಕಿರಣ್ ಉಢಾಪೆಯಿಂದ ಉತ್ತರಿಸಿದ್ದಾನೆ ಎಂದು ಹೇಳಲಾಗಿದೆ. ಅದೇ ವೇಳೆ ಮಕ್ಕಳು, ತಮ್ಮ ತಾಯಿ ಕಾಲು ಜಾರಿ ನಾಲೆಗೆ ಬಿದ್ದಿದ್ದಾಳೆ ಎಂದು ಕಿರಣ್ ಹೇಳಿದ ವಿಚಾರವನ್ನು ತಿಳಿಸಿದ್ದಾರೆ ಎಂದು ಹೇಳಲಾಗಿದೆ.

ಈ ಹಿನ್ನೆಲೆಯಲ್ಲಿ ಪ್ರಮೀಳಾಳ ಸಹೋದರ ಮತ್ತು ತಾಯಿ ಹೆಬ್ಬಾಳ್ ಠಾಣೆಗೆ ದೂರು ನೀಡಲು ಹೋದಾಗ ಪ್ರಮೀಳಾ ಚಹರೆಯುಳ್ಳ ಮಹಿಳೆಯ ಶವ ಕೆಆರ್‌ಎಸ್ ಠಾಣೆ ವ್ಯಾಪ್ತಿಯಲ್ಲಿ ದೊರೆತಿರುವ ಬಗ್ಗೆ ಪೊಲೀಸರು ಹೇಳಿ, ಆ ಠಾಣೆಗೆ ತೆರಳಿ ನೋಡಿಕೊಂಡು ಬರುವಂತೆ ತಿಳಿಸಿದ್ದಾರೆ. ಕೆಆರ್‌ಎಸ್ ಠಾಣೆಗೆ ಬಂದು ಪೊಲೀಸರು ತೆಗೆದಿದ್ದ ಫೋಟೋಗಳನ್ನು ನೋಡಲಾಗಿ ಶವ ತನ್ನ ಸಹೋದರಿಯದೇ ಎಂದು ಪತ್ತೆಯಾದ ಕಾರಣ ಆತ ತನ್ನ ಸಹೋದರಿಯನ್ನು ಕಿರಣ್ ಕೊಲೆ ಮಾಡಿರುವ ಬಗ್ಗೆ ಅನುಮಾನ ವ್ಯಕ್ತಪಡಿಸಿ ಅಲ್ಲಿನ ಪೊಲೀಸರಿಗೆ ದೂರು ನೀಡಿದ್ದ. ಅಲ್ಲದೇ ಪ್ರಮೀಳಾ ಕಾಲು ಜಾರಿ ನಾಲೆಗೆ ಬಿದ್ದಳು ಎಂದು ಮಕ್ಕಳಿಗೆ ಕಿರಣ್ ಹೇಳಿರುವ ವಿಚಾರವನ್ನೂ ಕೂಡ ತಿಳಿಸಿದ್ದ.

ತಕ್ಷಣ ಕಾರ್ಯಪ್ರವೃತ್ತರಾದ ಕೆಆರ್‌ಎಸ್ ಠಾಣೆ ಪೊಲೀಸರು, ಹಾಸನದ ಬೇಕರಿವೊಂದರ ಬಳಿ ಕಿರಣ್‌ನನ್ನು ವಶಕ್ಕೆ ಪಡೆದು ವಿಚಾರಣೆಗೊಳಪಡಿಸಿದಾಗ ಹತ್ಯೆ ಪ್ರಕರಣ ಬಯಲಾಗಿದೆ. ಅಸಹಜ ಸಾವು ಪ್ರಕರಣವನ್ನು ಕೊಲೆ ಪ್ರಕರಣವನ್ನಾಗಿ ಮಾರ್ಪಡಿಸಿಕೊಂಡ ಪೊಲೀಸರು ಕಿರಣ್‌ನನ್ನು ಬಂಧಿಸಿ ನ್ಯಾಯಾಲಯಕ್ಕೆ ಹಾಜರುಪಡಿಸಲಾಗಿ, ಆತನನ್ನು ನ್ಯಾಯಾಂಗ ಬಂಧನಕ್ಕೆ ಒಳಪಡಿಸಲಾಗಿದೆ.

ಮಂಡ್ಯ ಜಿಲ್ಲಾ ಎಸ್ಪಿ ಮಲ್ಲಿಕಾರ್ಜುನ ಬಾಲದಂಡಿ, ಶ್ರೀರಂಗಪಟ್ಟಣ ಡಿವೈಎಸ್‌ಪಿ ಮುರಳಿ ನಿರ್ದೇಶನದ ಮೇರೆಗೆ ಶ್ರೀರಂಗಪಟ್ಟಣ ಸರ್ಕಲ್ ಇನ್ಸ್‌ಪೆಕ್ಟರ್ ಪುನೀತ್ ನೇತೃತ್ವದಲ್ಲಿ ಕೆಆರ್‌ಎಸ್ ಠಾಣೆ ಎಸ್‌ಐಗಳಾದ ರಮೇಶ್ ಕರ್ಕಿ ಕಟ್ಟೆ, ರಾಮಣ್ಣ, ಎಎಸ್‌ಐ ನಟರಾಜು, ಸಿಬ್ಬಂದಿಗಳಾದ ಸತೀಶ್, ಪುರುಷೋತ್ತಮ, ಶ್ರೀಧರ್, ರವೀಶ್, ಪ್ರಭುಸ್ವಾಮಿ ಈ ಕಾರ್ಯಾಚರಣೆಯಲ್ಲಿ ಭಾಗವಹಿಸಿದ್ದರು.

ಕಾಂಗ್ರೆಸ್ ಬೆಂಬಲಿತ ಅಭ್ಯರ್ಥಿಗಳನ್ನು ಬೆಂಬಲಿಸಿ

ಮಂಡ್ಯ,ನ.23– ಮುಂಬರುವ ಫೆ.2ರಂದು ಜಿಲ್ಲಾ ಹಾಲು ಒಕ್ಕೂಟದ ಚುನಾವಣೆಯನ್ನು ಜಿಲ್ಲಾಧಿಕಾರಿಗಳು ಅಧಿಕೃತವಾಗಿ ಘೋಷಣೆ ಮಾಡಿದ್ದು ಕಾಂಗ್ರೆಸ್ ಪಕ್ಷದ ನಾಯಕರು, ಮುಖಂಡರು ಹಾಗೂ ಕಾರ್ಯಕರ್ತರು ಪಕ್ಷ ಪರವಾದ ಅಭ್ಯರ್ಥಿಗಳನ್ನು ಬೆಂಬಲಿಸಬೇಕು ಎಂದು ಕೃಷಿ ಸಚಿವ ಎನ್.ಚಲುವರಾಯಸ್ವಾಮಿ ಮನವಿ ಮಾಡಿದರು.


ಸುದ್ದಿಗೋಷ್ಠಿಯಲ್ಲಿ ಮಾತನಾಡುತ್ತಿರುವ ಸಚಿವ ಚಲುವರಾಯಸ್ವಾಮಿ.

ನಗರದ ಪ್ರವಾಸಿ ಮಂದಿರದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಈ ಚುನಾವಣೆಯಲ್ಲಿ ಯಾವುದೇ ಪಕ್ಷದ ಗುರುತು ಇರುವುದಿಲ್ಲ, ಪಕ್ಷದ ಪರವಾಗಿ ಬೆಂಬಲಿತ ವ್ಯಕ್ತಿಗಳು ಸ್ಪರ್ಧಿಸಲಿದ್ದಾರೆ ಎಂದು ಹೇಳಿದರು.

ಮಂಡ್ಯ ತಾಲೂಕಿನಿಂದ ಹಾಲಿ ನಿರ್ದೇಶಕ ಯು.ಸಿ.ಶಿವಕುಮಾರ್, ಕಾಂಗ್ರೆಸ್ ಮುಖಂಡ ಕೆಬ್ಬಹಳ್ಳಿ ರಾಜು ಹಾಗೂ ಮಾಜಿ ಶಾಸಕ ಹೆಚ್.ಬಿ.ರಾಮು ಪುತ್ರ ವಿನಯ್ ಅವರನ್ನು ಅಂತಿಮಗೊಳಿಸಲಾಗಿದ್ದು, ಮದ್ದೂರು ತಾಲೂಕಿನಿಂದ ಮನ್‌ಮುಲ್ ಮಾಜಿ ಅಧ್ಯಕ್ಷ ಕದಲೂರು ರಾಮಕೃಷ್ಣ, ಸ್ಥಳೀಯ ಮುಖಂಡ ಹರೀಶ್, ಮಳವಳ್ಳಿಯಿಂದ ಕಾಂಗ್ರೆಸ್ ಮುಖಂಡ ಕೃಷ್ಣೇಗೌಡ, ನಾಗಮಂಗಲದಿಂದ ವಿಧಾನಪರಿಷತ್ ಮಾಜಿ ಸದಸ್ಯ ಎನ್.ಅಪ್ಪಾಜಿಗೌಡ, ಸ್ಥಳೀಯ ಮುಖಂಡ ಲಕ್ಷೀನಾರಾಯಣ ಹಾಗೂ ಶ್ರೀರಂಗಪಟ್ಟಣದಿಂದ ಹಾಲಿ ಅಧ್ಯಕ್ಷ ಬೋರೇಗೌಡ ಅವರನ್ನು ಘೋಷಣೆ ಮಾಡಲಾಗಿದೆ ಎಂದು ತಿಳಿಸಿದರು. ಕೆಆರ್.ಪೇಟೆ ತಾಲೂಕಿನ ಇಬ್ಬರು ಅಭ್ಯರ್ಥಿಯನ್ನು ಘೋಷಿಸಲು ಕಾದು ನೋಡುವ ತಂತ್ರಗಾರಿಕೆ ನಡೆಸಲಾಗಿದ್ದು ಪಾಂಡವಪುರ ತಾಲೂಕಿನಿಂದ ಒಬ್ಬ ನಿರ್ದೇಶಕ ಸ್ಥಾನಕ್ಕೆ ಇನ್ನು ಎರಡು ದಿನಗಳಲ್ಲಿ ಅಭ್ಯರ್ಥಿ ಘೋಷಣೆ ಮಾಡಲಾಗುವುದು ಎಂದು ಹೇಳಿದರು.

ಕಿಕ್ಕೇರಮ್ಮ ಎಳನೀರು ವರ್ತಕರ ಸಂಘ ಅಸ್ತಿತ್ವಕ್ಕೆ

ಕೆ.ಆರ್.ಪೇಟೆ,ನ.23–ತಾಲೂಕಿನ ಕಿಕ್ಕೇರಿ ಪಟ್ಟಣದಲ್ಲಿ ಕೃಷಿ ಉತ್ಪನ್ನ ಮಾರುಕಟ್ಟೆ ಸಮಿತಿಯ ಉಪ ಮಾರುಕಟ್ಟೆ ಪ್ರಾಂಗಣದಲ್ಲಿ ನೂತನವಾಗಿ ಆರಂಭಿಸಲಾದ ಕಿಕ್ಕೇರಮ್ಮ ಎಳನೀರು ವರ್ತಕರ ಸಂಘವನ್ನು ಕೃಷಿ ಸಚಿವ ಎನ್.ಚೆಲುವರಾಯಸ್ವಾಮಿ ಉದ್ಘಾಟಿಸಿದರು.


ಸಂಘವನ್ನು ಉದ್ಘಾಟಿಸಿದ ಸಚಿವರನ್ನು ಅಭಿನಂದಿಸಿದ ಎಳನೀರು ವರ್ತಕರು

ಬಳಿಕ ಮಾತನಾಡಿದ ಅವರು, ಕಿಕ್ಕೇರಿ ಭಾಗದ ರೈತರಿಗೆ ಅನುಕೂಲವಾಗುವಂತೆ ಕಿಕ್ಕೇರಿ ಪಟ್ಟಣದ ಎಪಿಎಂಸಿ ಉಪ ಮಾರುಕಟ್ಟೆಯಲ್ಲಿ ಎಳನೀರು ಮಾರುಕಟ್ಟೆ ಆರಂಭಿಸಲಾಗಿದೆ. ಇದೀಗ ಎಳನೀರು ಮಾರುಕಟ್ಟೆಗೆ ಎಳನೀರು ತಂದು ಮಾರಾಟ ಮಾಡುವ ವರ್ತಕರು ಸಂಘಟಿತರಾಗಿ ಕಿಕ್ಕೇರಮ್ಮ ಎಳನೀರು ವರ್ತಕರ ಸಂಘವನ್ನು ಆರಂಭಿಸಿರುವುದು ಒಳ್ಳೆಯ ಬೆಳವಣಿಗೆಯಾಗಿದೆ ಎಂದರು.

ಎಳನೀರು ವರ್ತಕರು ರೈತರಿಗೆ ವೈಜ್ಞಾನಿಕ ಬೆಲೆ ನೀಡಬೇಕು. ತೂಕದಲ್ಲಿ ಮೋಸವಾಗದಂತೆ ನೋಡಿಕೊಳ್ಳಬೇಕು. ನಮ್ಮ ಮಂಡ್ಯ ಜಿಲ್ಲೆಯ ಕೆ.ಆರ್.ಪೇಟೆ ಹಾಗೂ ಮದ್ದೂರಿನ ಎಳೆನೀರು ಮಾರುಕಟ್ಟೆಯಲ್ಲಿ ಉತ್ತಮ ಗುಣಮಟ್ಟದ ಎಳೆನೀರು ಬರುತ್ತಿದೆ. ನಮ್ಮ ಮಂಡ್ಯ ಜಿಲ್ಲೆಯ ಕೆ.ಆರ್.ಪೇಟೆ, ಕಿಕ್ಕೇರಿ, ಮದ್ದೂರಿನ ಎಳೆನೀರಿಗೆ ಮುಂಬೈ ಮತ್ತು ಬೆಂಗಳೂರು, ದೆಹಲಿಯ ಮಾರುಕಟ್ಟೆಯಲ್ಲಿ ಉತ್ತಮ ಬೇಡಿಕೆ ಇದೆ ಹಾಗಾಗಿ ವರ್ತಕರು ನಮ್ಮ ರೈತರಿಗೆ ಹೆಚ್ಚಿನ ನೀಡಿ ಅನುಕೂಲ ಮಾಡಿಕೊಡಬೇಕು ಎಂದರು.

ಕಿಕ್ಕೇರಮ್ಮ ಎಳನೀರು ವರ್ತಕರ ಸಂಘದ ಅಧ್ಯಕ್ಷ ಹೆಚ್.ಕೆ.ಸುಂದರ್ ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿದ್ದರು. ತೆಂಡೇಕೆರೆ ಬಾಳೆಹೊನ್ನೂರು ಶಾಖಾ ಮಠದ ಶ್ರೀ ಗಂಗಾಧರ ಶಿವಾಚಾರ್ಯ ಸ್ವಾಮೀಜಿ, ಬೆಡದಹಳ್ಳಿ ಶ್ರೀ ಪಂಚಭೂತೇಶ್ವರ ಮಠದ ಶ್ರೀ ರುದ್ರಮುನಿ ಸ್ವಾಮೀಜಿ ಕಾರ್ಯಕ್ರಮದ ದಿವ್ಯಸಾನ್ನಿಧ್ಯ ವಹಿಸಿದ್ದರು. ಮೈಷುಗರ್ ಅಧ್ಯಕ್ಷ ಸಿ.ಡಿ.ಗಂಗಾಧರ್, ತಾಲೂಕು ಪಂಚಾಯಿತಿ ಮಾಜಿ ಅಧ್ಯಕ್ಷ ಕಿಕ್ಕೇರಿ ಸುರೇಶ್, ಟಿಎಪಿಸಿಎಂಎಸ್ ಅಧ್ಯಕ್ಷ ಬಿ.ಎಲ್.ದೇವರಾಜು, ಕಾರ್ಯಕ್ರಮದಲ್ಲಿ ಕಿಕ್ಕೇರಮ್ಮ ಎಳೆನೀರು ವರ್ತಕರ ಸಂಘದ ಗೌರವಾಧ್ಯಕ್ಷ ಪುಟ್ಟಣ್ಣ ಇದ್ದರು.

ನ.26ರಿಂದ ಮಂಡ್ಯ ವಿ.ಸಿ.ಫಾರಂನಲ್ಲಿ ಕೃಷಿ ಮೇಳ

ಮಂಡ್ಯ,ನ.23– ಸಮೃದ್ಧ ಬಾಳ್ವೆಗೆ ಸಮಗ್ರ ಕೃಷಿ ಎಂಬ ಧ್ಯೇಯ ವಾಕ್ಯವನ್ನೊಳಗೊಂಡಂತೆ ನ.26, 27ರಂದು ಕೃಷಿ ಮೇಳವನ್ನು ಆಯೋಜಿಸಲಾಗಿದ್ದು, ರೈತರ ಸುಸ್ಥಿರತೆಯನ್ನು ಕಾಪಾಡಲು ಸಮಗ್ರ ಕೃಷಿ ವಾರ್ಷಿಕ ಬೆಳೆಗಳ ಜೊತೆಗೆ ತೋಟಗಾರಿಕೆ, ಹೈನುಗಾರಿಕೆ, ಮೀನುಗಾರಿಕೆ, ಕೋಳಿ ಸಾಕಾಣಿಕೆ, ಹಂದಿ ಸಾಕಾಣಿಕೆಯನ್ನು ಮಾಡಿದಾಗ ಮಾತ್ರ ಹವಾಮಾನ ವೈಪರಿತ್ಯ ಉಂಟಾದರು ಕೂಡ ರೈತರ ಆದಾಯವನ್ನು ದ್ವಿಗುಣಗೊಳಿಸಲು ಸಮಗ್ರ ಕೃಷಿ ವಿಧಾನ ಸಹಾಯ ಮಾಡುತ್ತದೆ ಈ ಬಗ್ಗೆ ಕೃಷಿ ಮೇಳದಲ್ಲಿ ರೈತರಿಗೆ ಮಾಹಿತಿ ಒದಗಿಸಲಾಗುವುದು ಎಂದು ಬೆಂಗಳೂರು ಕೃಷಿ ವಿಶ್ವವಿದ್ಯಾನಿಲಯದ ಸಂಶೋಧನಾ ನಿರ್ದೇಶಕ ಡಾ.ಎಚ್.ಎಸ್.ಶಿವರಾಮು ತಿಳಿಸಿದರು.

ಶನಿವಾರ ಸುದ್ದಿಗೋಷ್ಠಿಯನ್ನುದ್ದೇಶಿಸಿ ಮಾತನಾಡಿದ ಅವರು, ಬೆಂಗಳೂರು ಕೃಷಿ ವಿಶ್ವವಿದ್ಯಾನಿಲಯ, ಮಂಡ್ಯ ವಿಸಿ ಫಾರಂ ವಲಯ ಕೃಷಿ ಸಂಶೋಧನಾ ಕೇಂದ್ರ, ಕೃಷಿ ಮಹಾವಿದ್ಯಾಲಯ ಮತ್ತು ಕೃಷಿ ವಿಜ್ಞಾನ ಕೇಂದ್ರದ ಸಂಯುಕ್ತ ಆಶ್ರಯದಲ್ಲಿ ಮಂಡ್ಯ, ಮೈಸೂರು ಹಾಗೂ ಚಾಮರಾಜನಗರ ಜಿಲ್ಲೆಯ ವಲಯದ ರೈತರಿಗಾಗಿ ಮಂಡ್ಯದ ವಿ.ಸಿ ಫಾರಂ ವಲಯ ಕೃಷಿ ಸಂಶೋಧನಾ ಕೇಂದ್ರದಲ್ಲಿ ನ.26 ಮತ್ತು 27ನೇ ರಂದು ಕೃಷಿ ಮೇಳವನ್ನು ಹಮ್ಮಿಕೊಳ್ಳಲಾಗಿದೆ. ಕಾರ್ಯಕ್ರಮದಲ್ಲಿ 3 ಜಿಲ್ಲೆಗಳ ಸ್ಥಳ ಆಧಾರಿತ ಕೃಷಿ ತಾಂತ್ರಿಕತೆಗಳ ಪ್ರಾತ್ಯಕ್ಷಿಕೆಗಳನ್ನು ಮೇಳದಲ್ಲಿ ಆಯೋಜಿಸಲಾಗಿದ್ದು ರೈತರು ಇದರ ಸದುಪಯೋಗಪಡೆದುಕೊಳ್ಳಬೇಕು ಎಂದರು.


ಬೆಂಗಳೂರು ಕೃಷಿ ವಿವಿಯ ಸಂಶೋಧನಾ ನಿರ್ದೇಶಕ ಡಾ.ಹೆಚ್.ಎಸ್.ಶಿವರಾಮು ಪತ್ರಿಕಾಗೋಷ್ಠಿಯಲ್ಲಿ ಮಾತನಾಡುತ್ತಿರುವುದು.

ಕೃಷಿ ಮೇಳದಲ್ಲಿ ಪ್ರಮುಖ ಆಕರ್ಷಣೆಗಳಿದ್ದು, ಕೃಷಿ ವಿಶ್ವವಿದ್ಯಾನಿಲಯದಿಂದ ಬಿಡುಗಡೆ ಮಾಡಲಾಗಿರುವ ಮುಸುಕಿನ ಜೋಳದ ಅಭಿವೃದ್ಧಿ ತಳಿ, ಹಲಸಂದೆ ಕೆಬಿಸಿ–12, ಎಣ್ಣೆ ಕಾಳು ಸೂರ್ಯಕಾಂತಿ ಕೆವಿಎಸ್‌ಹೆಚ್–90 ಮತ್ತು ದೀರ್ಘವಾದ ಹಾಗೂ ಹೆಚ್ಚು ಬೆಳೆ ಕೊಡುವ ಪಿಎಲ್‌ಬಿ–342 ಮೇವಿನ ಬೆಳೆಯಾದ ನಾಲ್ಕು ಪ್ರಮುಖ ತಳಿಗಳನ್ನು ಅನಾವರಣಗೊಳಿಸಲಾಗುವುದು. ಮಂಡ್ಯ, ಮೈಸೂರು ಹಾಗೂ ಚಾಮರಾಜನಗರ ಜಿಲ್ಲೆಗೆ ಶಿಫಾರಸ್ಸು ಮಾಡಲಾಗಿರುವ ಭತ್ತ, ರಾಗಿ ಮತ್ತು ಸಿರಿಧಾನ್ಯ, ಮುಸುಕಿನ ಜೋಳದಲ್ಲಿ ಹೈಬ್ರಿಡ್ ತಳಿ, ಅತ್ಯುತ್ತಮ ಇಳುವರಿ ಕೊಡುವ ಹಾಗೂ ಹೆಚ್ಚು ಸಕ್ಕರೆ ಅಂಶವಿರುವ ಕಬ್ಬಿನ ತಳಿಯಾದ ಬಾಹುಬಲಿ–517, ಮೇವಿನ ಬೆಳೆ, ದ್ವಿದಳ ಧಾನ್ಯಗಳು, ಎಣ್ಣೆ ಕಾಳುಗಳು, ನೀರಾವರಿ ಪದ್ಧತಿ ಹಾಗೂ ಇನ್ನಿತರೆ ರೈತರಿಗೆ ಬೇಕಾದ ಮುಖ್ಯ ವಿಷಯಗಳ ಬಗ್ಗೆ ಪ್ರಾತ್ಯಕ್ಷಿಕೆಯನ್ನು ಏರ್ಪಡಿಸಲಾಗಿದೆ ಎಂದು ತಿಳಿಸಿದರು.

ಒಂದನೇ ಪುಟದಿಂದ

2028ರ ಚುನಾವಣೆಗೆ ಮುನ್ನುಡಿ

ಬಿಜೆಪಿಗರು ಸುಳ್ಳು ಹೇಳುವುದನ್ನು ಮೊದಲು ಬಿಡಿ. ಮತದಾರರು ಪ್ರಜ್ಞಾವಂತರಿದ್ದಾರೆ. ಶಿಗ್ಗಾವಿಯಲ್ಲಿ 14 ಸಾವಿರ ಲೀಡ್ ಬಂದಿದೆ. ಅದು ಕಿತ್ತೂರು ಕರ್ನಾಟಕದ ಕ್ಷೇತ್ರ, ಮತ್ತೊಂದು ಕಲ್ಯಾಣ ಕರ್ನಾಟಕದ ಕ್ಷೇತ್ರ. ಚನ್ನಪಟ್ಟಣ ಹಳೆ ಮೈಸೂರು ಭಾಗದ ಕ್ಷೇತ್ರ ಎಂದರು.

ನಾವು ಹೊಂದಾಣಿಕೆಯಿಂದ ಇದ್ದೇವೆ ಎಂದು ಅವರಿಬ್ಬರು ಚುನಾವಣೆಗೆ ಹೋಗಿದ್ದರು. ಈಗ ಜನ ಆ ಹೊಂದಾಣಿಕೆಗೆ ತೀರ್ಪು ಕೊಟ್ಟಿದ್ದಾರೆ. ಸಿದ್ದರಾಮಯ್ಯ ಆಡಳಿತಕ್ಕೆ ಜನ ಬೆಂಬಲ ಕೊಟ್ಟಿದ್ದಾರೆ. ಸಿದ್ರಾಮಯ್ಯನವರನ್ನು ಎಷ್ಟು ಆಡಿ ಕೊಂಡ್ರು ಏನೂ ಇಲ್ಲದ ಆರೋಪಗಳನ್ನು ಮಾಡಿದರು. ಅದನ್ನೇ ದೊಡ್ಡದು ಮಾಡಿಕೊಂಡು ಹೋದರು. ಚನ್ನಪಟ್ಟಣ ಅಪೂರ್ವ ಸಹೋದರರ ಚುನಾವಣೆ ಅಲ್ಲ. ನಾವು ಜನರ ಬದುಕು ಕಟ್ಟಲು ಹೋಗಿದ್ದು. ಅಭಿವೃದ್ಧಿಗಾಗಿ ಅಲ್ಲಿಗೆ ಹೋಗಿದ್ದೆವು. ಜನ ಅಲ್ಲೂ ತೀರ್ಪು ಕೊಟ್ಟಿದ್ದಾರೆ ಎಂದು ವ್ಯಾಖ್ಯಾನಿಸಿದರು.

ಮುಂದಾದವರಿಗೆ ಫಲಿತಾಂಶವೇ ಉತ್ತರ

ಆದರೆ, ಬಿಜೆಪಿ–ಜೆಡಿಎಸ್ ನಾಯಕರ ಸುಳ್ಳುಗಳನ್ನು ಯಾರೂ ನಂಬಿಲ್ಲ. ಅದಕ್ಕೆ ಚುನಾವಣೆಯ ಫಲಿತಾಂಶವೇ ಸಾಕ್ಷಿ ಎಂದರು. ಅಲ್ಲದೆ, ಬಿಜೆಪಿ ಮತ್ತು ಜೆಡಿಎಸ್‌ನವರು ಅಪಪ್ರಚಾರದ ಮೂಲಕ ಧಾರ್ಮಿಕ ಉನ್ಮಾದಗಳನ್ನು ಸೃಷ್ಟಿಸಿ ಜಾತಿ–ಧರ್ಮಗಳ ನಡುವೆ ಒಡಕು ಮೂಡಿಸಿ ಕಾಂಗ್ರೆಸ್ ಪಕ್ಷವನ್ನು ಮಣಿಸಲು ಪ್ರಯತ್ನಿಸಿದರು. ರಾಜ್ಯದ ಜಾತ್ಯತೀತ ಮತ್ತು ಶಾಂತಿಪ್ರಿಯ ಮತದಾರರು ಅದನ್ನು ಒಪ್ಪಿಕೊಳ್ಳದೆ ನಮ್ಮನ್ನು ಗೆಲ್ಲಿಸಿದ್ದಾರೆ. ಸಾವಿರಾರು ಕೋಟಿ ರೂಪಾಯಿ ಸುರಿದು ನಮ್ಮ ಶಾಸಕರನ್ನು ಖರೀದಿಸುವ ದುಷ್ಟ ಪ್ರಯತ್ನದ ಮೂಲಕ ಸರ್ಕಾರವನ್ನು ಉರುಳಿಸುವ ಬಿಜೆಪಿ–ಜೆಡಿಎಸ್‌ನವರ ಪ್ರಜಾಪ್ರಭುತ್ವ ವಿರೋಧಿ ನಡೆಯನ್ನೂ ಈ ರಾಜ್ಯದ ಜನರು ಸಹಿಸಿಲ್ಲ ಎನ್ನುವುದನ್ನು ಕೂಡ ಈ ಫಲಿತಾಂಶ ಹೇಳಿದೆ ಎಂದೂ ಹೇಳಿದರು. ಶಿಗ್ಗಾಂವಿ ಕ್ಷೇತ್ರದಲ್ಲಿ ಮುಸ್ಲಿಂ ಅಭ್ಯರ್ಥಿಗೆ ನಾವು ಟಿಕೆಟ್ ನೀಡಿದ್ದರಿಂದ ಹಿಂದೂ ಮತ ಧ್ರುವೀಕರಣವಾಗುತ್ತದೆ ಎಂಬ ಶಂಕೆಯನ್ನು ಕೆಲವರು ವ್ಯಕ್ತಪಡಿಸಿದ್ದರು. ಆದರೆ, ಮತದಾರರು ನಮ್ಮ ಮಾತಿಗೆ ಒಪ್ಪಿಕೊಂಡು ಅಲ್ಲಿ ನಮ್ಮ ಅಭ್ಯರ್ಥಿಯನ್ನು ಗೆಲ್ಲಿಸಿದ್ದಾರೆ. ಇದು ಬಿಜೆಪಿಯವರ ಕೋಮುವಾದಿ ರಾಜಕಾರಣಕ್ಕೆ ನೀಡಿದ ಉತ್ತರವೂ ಆಗಿದೆ ಎಂದೂ ಪ್ರತಿಪಾದಿಸಿದರು.

ಕಾಂಗ್ರೆಸ್ ಸರ್ಕಾರವನ್ನು ಕಿತ್ತೊಗೆಯುವುದೇ ನನ್ನ ಗುರಿ, ಸಿದ್ದರಾಮಯ್ಯ ಅಹಂಕಾರ, ಸೊಕ್ಕು ಮುರಿಯುತ್ತೇನೆ ಎಂದೆಲ್ಲ ಮಾಜಿ ಪ್ರಧಾನಿ ದೇವೇಗೌಡರು ಮಾತನಾಡಿದರು. ಆದರೆ, ನಾನು ಯಾವತ್ತೂ ಸೊಕ್ಕು, ಅಹಂಕಾರ ಮಾಡಿಲ್ಲ. ದೇವೇಗೌಡರು, ಕುಮಾರಸ್ವಾಮಿ, ನಿಖಿಲ್ ಎಲ್ಲರೂ ಅಳುವುದನ್ನು ರೂಢಿ ಮಾಡಿಕೊಂಡಿದ್ದಾರೆ. ಆದರೂ ಜನ ನಮಗೆ ಮತ ಹಾಕಿದ್ದಾರೆ ಎಂದು ಹೇಳಿದರು.

2028ರ ಚುನಾವಣೆ ಫಲಿತಾಂಶಕ್ಕೆ ಮುನ್ನುಡಿ: ಉಪ ಚುನಾವಣೆಯ ಫಲಿತಾಂಶ 2028ರ ವಿಧಾನಸಭೆ ಚುನಾವಣೆ ಫಲಿತಾಂಶಕ್ಕೆ ರಾಜ್ಯದ ಜನರ ಮುನ್ನುಡಿ ಎಂದು ಕೆಪಿಸಿಸಿ ಅಧ್ಯಕ್ಷರೂ ಆಗಿರುವ ಉಪ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಅಭಿಪ್ರಾಯಪಟ್ಟರು. ಸುದ್ದಿಗಾರರ ಜೊತೆ ಮಾತನಾಡಿದ ಅವರು ವಿರೋಧ ಪಕ್ಷಗಳ ಸುಳ್ಳು ಟೀಕೆ ಅಪಪ್ರಚಾರಕ್ಕೆ ಮತದಾರರು ತಕ್ಕ ಪಾಠ ಕಲಿಸಿದ್ದಾರೆ. ಸಿದ್ದರಾಮಯ್ಯ ಅವರ ನೇತೃತ್ವದಲ್ಲಿ ಜಾರಿಯಾದ ಗ್ಯಾರಂಟಿ ಯೋಜನೆಗಳು ಹಾಗೂ ಅಭಿವೃದ್ಧಿಗೆ ಜಯ ಸಿಕ್ಕಿದೆ. ಭಾವನೆಗಳ ಮೇಲೆ ರಾಜಕಾರಣ ನಡೆಯುವುದಿಲ್ಲ. ಬದುಕಿನ ಮೇಲಿನ ರಾಜಕಾರಣಕ್ಕೆ ಒತ್ತು ನೀಡುವಂತೆ ಜನ ಸಂದೇಶ ನೀಡಿದ್ದಾರೆ ಎಂದರು. ಚನ್ನಪಟ್ಟಣದಲ್ಲಿ ನಿಖಿಲ್ ಕುಮಾರಸ್ವಾಮಿ ಅವರ ಸೋಲು ಎಂದು ನಾನು ಹೇಳುವುದಿಲ್ಲ. ಈ ಕ್ಷೇತ್ರದಿಂದ ಗೆದ್ದು ಮುಖ್ಯಮಂತ್ರಿಯಾಗಿದ್ದ ಅವರ ತಂದೆ ಕುಮಾರಸ್ವಾಮಿ ಬಿಟ್ಟು ಹೋದ ಗುರುತಿಗೆ ಜನ ತೀರ್ಪು ನೀಡಿದ್ದಾರೆ. ಅದೇ ರೀತಿ ಶಿಗ್ಗಾಂವಿಯಲ್ಲಿ ಬಸವರಾಜ ಬೊಮ್ಮಾಯಿ ಪುತ್ರ ಭರತ್ ಬೊಮ್ಮಾಯಿ ಸೋಲು ಎಂದು ಹೇಳುವುದಿಲ್ಲ. ಮುಖ್ಯಮಂತ್ರಿಯಾಗಿ ಅವರು ಆ ಕ್ಷೇತ್ರದಲ್ಲಿ ಮಾಡಿರುವ ಕೆಲಸದ ಮೇಲೆ ಮತ ನೀಡಿದ್ದಾರೆ. ಸಂಡೂರಿನಲ್ಲಿ ಮೊದಲಿನಿಂದ ಕಾಂಗ್ರೆಸ್ ಗೆಲ್ಲುತ್ತಾ ಬಂದಿದೆ. ಈ ಮೂರು ಕ್ಷೇತ್ರಗಳಲ್ಲಿ ಗ್ಯಾರಂಟಿ ಮತ್ತು ಅಭಿವೃದ್ಧಿಗೆ ಜನ ಮತ ನೀಡಿದ್ದಾರೆ ಎಂದು ವಿವರಿಸಿದರು.

ರಾಜಕೀಯ ಲಾಭಕ್ಕೆ ಯತ್ನಿಸಿದವರಿಗೆ ತಕ್ಕ ಶಾಸ್ತಿ: ಮುಡಾ ನಿವೇಶನ ಹಂಚಿಕೆ ವಕ್ಫ್ ಆಸ್ತಿ ವಿಚಾರ ಚನ್ನಪಟ್ಟಣದಲ್ಲಿ ನಾನು ನೀಡಿದ್ದ ಹೇಳಿಕೆಯನ್ನು ವಿವಾದ ಮಾಡಿ ರಾಜಕೀಯ ಲಾಭಕ್ಕೆ ಯತ್ನಿಸಿದವರಿಗೆ ತಕ್ಕ ಶಾಸ್ತಿ ಆಗಿದೆ ಎಂದು ವಸತಿ ಸಚಿವ ಜಮೀರ್ ಅಹಮದ್ ಖಾನ್ ಹೇಳಿದ್ದಾರೆ. ಅಹಿಂದ ನಾಯಕ ಸಿದ್ದರಾಮಯ್ಯ ವಿರುದ್ಧ ಬಿಜೆಪಿ–ಜೆಡಿಎಸ್ ಮಾಡಿದ ಆರೋಪಗಳನ್ನು ರಾಜ್ಯದ ಜನತೆ ಸಹಿಸುವುದಿಲ್ಲ ಎಂಬುದಕ್ಕೆ ಉಪ ಚುನಾವಣೆಯ ಫಲಿ ತಾಂಶವೇ ಸಾಕ್ಷಿ. ಈ ಉಪ ಚುನಾವಣೆಯಲ್ಲೂ ಮುಸ್ಲಿಂ ಸಮುದಾಯ ಪೂರ್ಣ ಪ್ರಮಾಣದಲ್ಲಿ ಕಾಂಗ್ರೆಸ್ ಕೈ ಹಿಡಿದು ಬಲಪಡಿಸಿದೆ. ಕಾಂಗ್ರೆಸ್ ಸರ್ಕಾರದ ಪರ ವಿಶ್ವಾಸ ತೋರಿಸಿದೆ ಎಂದಿದ್ದಾರೆ. ಇನ್ನು ಮುಂದೆಯಾದರೂ ವಿರೋಧ ಪಕ್ಷಗಳು ನಮ್ಮ ಅಭಿವೃದ್ಧಿಗೆ ಕೈ ಜೋಡಿಸಲಿ. ನಕಾರಾತ್ಮಕ ರಾಜಕಾರಣವನ್ನು ಕೈಬಿಡಲಿ ಎಂದರು.

ಚನ್ನಪಟ್ಟಣ, ಶಿಗ್ಗಾಂವಿ, ಸಂಡೂರು 'ಕೈ' ವಶ

ಸಿ.ಪಿ. ಯೋಗೇಶ್ವರ್ ಆರನೇ ಬಾರಿಗೆ ವಿಧಾನಸಭೆ ಪ್ರವೇಶಿಸಿದ್ದರೆ, ಯಾಸಿರ್ ಹಾಗೂ ಅನ್ನಪೂರ್ಣ ಅವರು ಇದೇ ಮೊದಲ ಬಾರಿಗೆ ವಿಧಾನಸಭೆ ಪ್ರವೇಶಿಸಿದ್ದಾರೆ. ನಿಖಿಲ್ ಕುಮಾರಸ್ವಾಮಿಗೆ ಸತತ ಮೂರನೇ ಬಾರಿಗೆ ಸೋಲು ಕಂಡಿದ್ದು, ಈ ಮೊದಲು ಮಂಡ್ಯ ಲೋಕಸಭಾ ಕಣದಲ್ಲಿ, ನಂತರ ರಾಮನಗರ ವಿಧಾನ ಸಭಾ ಕ್ಷೇತ್ರದಿಂದ ಜೆಡಿಎಸ್ ಅಭ್ಯರ್ಥಿ ಯಾಗಿ ಕಣಕ್ಕಿಳಿದು ಸೋಲನ್ನನುಭವಿಸಿದ್ದರು, ಇದೀಗ ಚನ್ನಪಟ್ಟಣದಲ್ಲೂ ಅವರು ಪರಾಭವಗೊಂಡಿದ್ದಾರೆ. ಚನ್ನಪಟ್ಟಣ ಕ್ಷೇತ್ರದಲ್ಲಿ ಸಿ.ಪಿ.ಯೋಗೇಶ್ವರ್ ತನ್ನದೇ ಆದ ವರ್ಚಸ್ಸು ಹೊಂದಿದ್ದು, ಪಕ್ಷೇತರ, ಕಾಂಗ್ರೆಸ್, ಬಿಜೆಪಿ ಹಾಗೂ ರಾಜ್ಯದಲ್ಲಿ ಅಸ್ತಿತ್ವದಲ್ಲೇ ಇಲ್ಲದಿರುವ ಸಮಾಜವಾದಿ ಪಕ್ಷದ ಅಭ್ಯರ್ಥಿಯಾಗಿಯೂ ಗೆಲುವು ಸಾಧಿಸಿದ್ದಾರೆ. ಈವರೆಗೆ ಒಟ್ಟು ಐದು ಬಾರಿ ಶಾಸಕರಾಗಿದ್ದು, ಈಗ ಆರನೇ ಗೆಲುವು ದಾಖಲಿಸಿದ್ದಾರೆ ಈ ಹಿಂದೆ ಕುಮಾರಸ್ವಾಮಿ ಅವರ ಪತ್ನಿ ಅನಿತಾ ಕುಮಾರಸ್ವಾಮಿ ಯೋಗೇಶ್ವರ್ ಮುಂದೆ ಪರಾಭವ ಹೊಂದಿದ್ದರೆ ಇದೀಗ ಅವರ ಪುತ್ರ ನಿಖಿಲ್ ಸೋಲನನುಭವಿಸಿದ್ದಾರೆ. ವಿಶೇಷವೆಂದರೆ ಕಳೆದ ಎರಡೂ ಚುನಾವಣೆಗಳಲ್ಲಿ ಕುಮಾರಸ್ವಾಮಿ ವಿರುದ್ಧ ಯೋಗೇಶ್ವರ್ ಸೋತಿದ್ದರು.

ಉಪಚುನಾವಣೆಯನ್ನು ಆಡಳಿತಾರೂಢ ಕಾಂಗ್ರೆಸ್ ಹಾಗೂ ಎನ್‌ಡಿಎ ಮೈತ್ರಿಕೂಟ ಭಾರೀ ಪ್ರತಿಷ್ಠೆಯಾಗಿ ತೆಗೆದುಕೊಂಡು, ಹೋರಾಟ ನಡೆಸಿದ್ದವು. ಉಪ ಚುನಾವಣಾ ಸಂದರ್ಭದಲ್ಲೇ ವಕ್ಫ್ ವಿವಾದ, ಬಿಪಿಎಲ್ ಕಾರ್ಡ್ ರದ್ದತಿ ಹಾಗೂ ಶಕ್ತಿ ಯೋಜನೆ ಹಿಂಪಡೆಯುವ ವಿಚಾರಗಳನ್ನು ಎನ್‌ಡಿಎ ಮೈತ್ರಿಕೂಟ ಮುಂದಿಟ್ಟುಕೊಂಡು ಹೋರಾಟ ನಡೆಸಿ ದರೂ ಮತದಾರರು ಮೈತ್ರಿಕೂಟದ ಅಭ್ಯರ್ಥಿಗಳ ಕೈಹಿಡಿಯಲಿಲ್ಲ.

ಚುನಾವಣೆಯನ್ನು ಪ್ರತಿಷ್ಠೆಯನ್ನಾಗಿ ತೆಗೆದುಕೊಂಡಿದ್ದ ಮುಖ್ಯಮಂತ್ರಿ ಸಿದ್ದರಾಮಯ್ಯ, ಉಪಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಮತ್ತು ಅವರ ಸಂಪುಟ ಸಹೋದ್ಯೋಗಿಗಳ ಚುನಾವಣಾ ಪೂರ್ವ ಸಿದ್ಧತೆ ಹಾಗೂ ಕಾರ್ಯತಂತ್ರ ಕೈಹಿಡಿಯಿತು.

ಮಹಾಯುತಿ ಮೈತ್ರಿಕೂಟಕ್ಕೆ ದಾಖಲೆ ಗೆಲುವು

ಒಂದು ಸ್ಥಾನ ಪಡೆದರೆ ಇಬ್ಬರು ಪಕ್ಷೇತರರು ಗೆಲುವು ಸಾಧಿಸಿದ್ದಾರೆ.

ಜೆಎಂಎಸ್ ಅಧಿಕಾರಕ್ಕೆ: 81 ಕ್ಷೇತ್ರಗಳನ್ನೊಳಗೊಂಡ ಜಾರ್ಖಂಡ್ ವಿಧಾನಸಭೆಯಲ್ಲಿ ಕಾಂಗ್ರೆಸ್ ಮತ್ತು ಜಾರ್ಖಂಡ್ ಮುಕ್ತಿ ಮೋರ್ಚಾ (ಜೆಎಂಎಂ) ನೇತೃತ್ವದ ಇಂಡಿಯಾ ಮೈತ್ರಿಕೂಟ 56 ಕ್ಷೇತ್ರಗಳಲ್ಲಿ ಗೆದ್ದು ವಿಜಯದ ನಗೆ ಬೀರಿದೆ. ಹೇಮಂತ್ ಸುರೇನ್ ನೇತೃತ್ವದ ಜೆಎಂಎಂ ಪಕ್ಷ ಸತತ 3ನೇ ಬಾರಿಗೆ ಅಧಿಕಾರದ ಚುಕ್ಕಾಣಿ ಹಿಡಿಯಲಿದೆ. ಈ ಪಕ್ಷಕ್ಕೆ ಕಾಂಗ್ರೆಸ್, ಆರ್‌ಜೆಡಿ ಮತ್ತು ಸಿಪಿಐ(ಎಂ) ಸಾಥ್ ನೀಡಿವೆ. ಈ ರಾಜ್ಯದಲ್ಲಿ ಜೆಎಂಎಂ 34, ಬಿಜೆಪಿ 21, ಕಾಂಗ್ರೆಸ್ 16, ಆರ್‌ಜೆಡಿ 4, ಸಿಪಿಐ(ಎಂಎಲ್) 2, ಎಜೆಎಸ್ ಯುಪಿ, ಲೋಕ್ ಜನಶಕ್ತಿ (ರಾಮದಾಸ್ ಪಾಸ್ವಾನ್) ಜೆಎಲ್‌ಕೆಎಂ ಮತ್ತು ಜೆಡಿಯು ತಲಾ ಒಂದು ಸ್ಥಾನದಲ್ಲಿ ಗೆಲುವು ಸಾಧಿಸಿದೆ.

'ಏಕ್ ಹೈ ತೋ ಸೇಫ್ ಹೈ' ಸಂದೇಶ ನೀಡಿದೆ

ಮಹಾರಾಷ್ಟ್ರ ದಲ್ಲಿನ ಈ ಐತಿಹಾಸಿಕ ಗೆಲುವು 'ಏಕ್ ಹೈ ತೋ ಸೇಫ್ ಹೈ (ಒಂದಾಗಿದ್ದರೆ ಸುರಕ್ಷಿತವಾಗಿರುತ್ತೀವಿ)' ಎಂಬ ಸಂದೇಶವನ್ನು ಸ್ಪಷ್ಟವಾಗಿ ನೀಡಿದೆ. ನಕಾರಾತ್ಮಕತೆಯ ರಾಜಕಾರಣ ಅಳಿದುಹೋಗಿದ್ದು, ಸುಳ್ಳು ಮತ್ತು ದ್ರೋಹ ಸೋತಿದೆ. ಬಿಜೆಪಿ ನೇತೃತ್ವದ ಎನ್‌ಡಿಎ ಮೈತ್ರಿಯು ಕಳೆದ 50 ವರ್ಷಗಳಲ್ಲಿ ಅತಿದೊಡ್ಡ ಗೆಲುವನ್ನು ಪಡೆದುಕೊಂಡಿದೆ. ಇದು ಬಿಜೆಪಿಗೆ ಸತತ ಮೂರನೇ ದೊಡ್ಡ ಗೆಲುವಾಗಿದ್ದು, ಅಭಿವೃದ್ಧಿ ಮತ್ತು ಉತ್ತಮ ಆಡಳಿತದ ದೃಷ್ಟಿಕೋನವುಳ್ಳ ಪಕ್ಷಕ್ಕೆ ಬೆಂಬಲ ಹೆಚ್ಚುತ್ತಿರುವುದಕ್ಕೆ ಸಾಕ್ಷಿಯಾಗಿದೆ. ಈ ಫಲಿತಾಂಶ ದೇಶದಲ್ಲಿ ಮೈತ್ರಿಯ ಪ್ರಾಬಲ್ಯವನ್ನು ಮತ್ತಷ್ಟು ಗಟ್ಟಿಗೊಳಿಸಿದೆ ಎಂದು ಹೇಳಿದರು.

ಮಹಾರಾಷ್ಟ್ರದ ಜನರು ಮಹಾ ವಿಕಾಸ್ ಆಘಾಡಿಯನ್ನು ಸೋಲಿಸುವ ಮೂಲಕ ನಕಾರಾತ್ಮಕ ರಾಜಕೀಯ ಹಾಗೂ ಪರಿವಾರವಾದವನ್ನು ಮಣಿಸಿದ್ದಾರೆ ಇಂದು ಮಹಾರಾಷ್ಟ್ರ ಅಭಿವೃದ್ಧಿ ಹೊಂದಿದ ಭಾರತದ ಸಂಕಲ್ಪವನ್ನು ಬಲಪಡಿಸಿದ್ದು, ಇದರೊಂದಿಗೆ ವಿಕಸಿತ ಭಾರತಕ್ಕೆ ಗೆಲುವು ದೊರೆತಿದೆ. ಮೂರನೇ ಬಾರಿಗೆ ಬಿಜೆಪಿ ನೇತೃತ್ವದ ಎನ್‌ಡಿಎ ಸರ್ಕಾರ ರಚನೆ ಮಾಡಲಿದೆ ಎಂದು ತಿಳಿಸಿದರು. ಇದೇ ವೇಳೆ ಐಎನ್‌ಡಿಐಎ ಕೂಟವನ್ನು ತರಾಟೆಗೆ ತೆಗೆದುಕೊಂಡ ಮೋದಿ, ಮಹಾರಾಷ್ಟ್ರದಲ್ಲಿ ಮತದಾರರು ವಿಭಜಕ ಶಕ್ತಿಗಳಿಗಿಂತ ಅಭಿವೃದ್ಧಿ ಆಶಯವುಳ್ಳ ಪಕ್ಷವನ್ನು ಆರಿಸುವ ಮೂಲಕ ಸ್ಪಷ್ಟ ತೀರ್ಪು ನೀಡಿದ್ದಾರೆ. ಕಾಂಗ್ರೆಸ್ ಸಂವಿಧಾನದ ಹೆಸರಲ್ಲಿ ಸುಳ್ಳು ಹೇಳುವ ಮೂಲಕ ಎಸ್ಸಿ, ಎಸ್ಟಿ ಮತ್ತು ಓಬಿಸಿಯನ್ನು ವಿಭಜಿಸಬಹುದು ಎಂದು ಭಾವಿಸಿತ್ತು. ಆದರೆ ಅದನ್ನು ಮಹಾರಾಷ್ಟ್ರದ ಜನ ಸುಳ್ಳಾಗಿಸಿದ್ದಾರೆ ಎಂದರು.

ಇದಕ್ಕೂ ಮುನ್ನ ಎಕ್ಸ್‌ನಲ್ಲಿ ಪೋಸ್ಟ್ ಮಾಡಿ ಸಂತಸ ಹಂಚಿಕೊಂಡಿದ್ದ ಮೋದಿ, ಅಭಿವೃದ್ಧಿ ಗೆಲ್ಲುತ್ತದೆ. ಉತ್ತಮ ಆಡಳಿತಕ್ಕೆ ಜಯ. ನಾವು ಒಂದಾಗಿದ್ದರೆ, ಇನ್ನೂ ಎತ್ತರಕ್ಕೆ ಏರುತ್ತೇವೆ. ಎನ್‌ಡಿಎಗೆ ಐತಿಹಾಸಿಕ ಜನಾದೇಶ ನೀಡಿದ್ದಕ್ಕಾಗಿ ಮಹಾರಾಷ್ಟ್ರದ ನನ್ನ ಸಹೋದರಿ–ಸಹೋದರರಿಗೆ, ವಿಶೇಷವಾಗಿ ಯುವಕರು ಮತ್ತು ಮಹಿಳೆಯರಿಗೆ ಹೃತ್ಪೂರ್ವಕ ಕೃತಜ್ಞತೆಗಳು ಎಂದರು.

ಮಲೇಷ್ಯಾದಲ್ಲಿ ಮೈಸೂರಿನ ನೃತ್ಯ ಕಲಾವಿದೆಯರಿಂದ ಭರತನಾಟ್ಯ ಪ್ರದರ್ಶನ

ಮೈಸೂರು,ನ.23(ಪಿಎಂ)– ಮಲೇಷ್ಯಾದ ಕೌಲಾಲಂಪುರ್ ನಗರದಲ್ಲಿ ಇತ್ತೀಚೆಗೆ ನಡೆದ ಅಂತಾರಾಷ್ಟ್ರೀಯ ಸಾಂಸ್ಕೃತಿಕ ಹಬ್ಬ 2024ರಲ್ಲಿ ಮೈಸೂರಿನ ನೃತ್ಯ ಕಲಾವಿದೆಯರು ಭರತನಾಟ್ಯ ಪ್ರದರ್ಶನ ನೀಡಿದ್ದಾರೆ.

ಲಾಸ್ಯರಂಜನಾ ನೃತ್ಯ ಶಾಲೆ ನಿರ್ದೇಶಕಿ ವಿದುಷಿ ಜ್ಯೋತಿ ಎನ್.ಹೆಗಡೆ ಮತ್ತು ಶ್ರೀ ನೃತ್ಯ ನಿಕೇತನಾ ನಿರ್ದೇಶಕಿ ವಿದುಷಿ ಪ್ರಸನ್ನಲಕ್ಷ್ಮಿ ತಮ್ಮ ಶಿಷ್ಯ ವೃಂದದೊಂದಿಗೆ ಭರತನಾಟ್ಯ ಪ್ರದರ್ಶಿಸಿಸಿದ್ದಾರೆ. ಶಿಷ್ಯರಾದ ಸಾನಿಕಾ, ಭರಣಿ, ಶ್ರೀವಲ್ಲಿ, ನವ್ಯ ಮತ್ತು ತುಷಾರ ಯಾದವ್ ಅವರೊಂದಿಗೆ ವಿದುಷಿ ಪ್ರಸನ್ನಲಕ್ಷ್ಮಿ ಹೆಜ್ಜೆ ಹಾಕಿದರು.



ಮಲೇಷ್ಯಾದ ಕೌಲಾಲಂಪುರ್ ನಗರದಲ್ಲಿ ಇತ್ತೀಚೆಗೆ ನಡೆದ ಅಂತಾರಾಷ್ಟ್ರೀಯ ಸಾಂಸ್ಕೃತಿಕ ಹಬ್ಬ 2024ರಲ್ಲಿ ಮೈಸೂರಿನ ನೃತ್ಯ ಕಲಾವಿದೆಯರು ಭರತನಾಟ್ಯ ಪ್ರದರ್ಶನ ನೀಡಿದರು.

ನ.5ರಂದು ಕೌಲಾಲಂಪುರ್ ನಗರದ ನೇತಾಜಿ ಸುಭಾಷ್ ಚಂದ್ರ ಬೋಸ್ ಇಂಡಿಯನ್ ಕಲ್ಚರಲ್ ಸೆಂಟರ್‌ನಲ್ಲಿ ಕಾರ್ಯಕ್ರಮ ನಡೆಯಿತು. ಈ ಸಾಂಸ್ಕೃತಿಕ ಕಾರ್ಯಕ್ರಮವನ್ನು ವಿಶ್ವ ನೃತ್ಯ ಒಕ್ಕೂಟದ ಸದಸ್ಯ ಗುರು ಎಂ.ಸಿ.ಸುಜೇಂದ್ರ ಬಾಬು ಆಯೋಜಿಸಿದ್ದರು.

ಇದರೊಂದಿಗೆ ಮೈಸೂರಿನ ವೀಣಾ ವಿದುಷಿ ಅಶ್ವಿನಿ ನಾಗೇಂದ್ರ ಅವರು ವೀಣಾ ವಾದನವನ್ನು ಪ್ರಸ್ತುತಪಡಿಸಿದರು. ಅವರು 'ಹಚ್ಚೇವು ಕನ್ನಡದ ದೀಪ' ಹಾಡಿಗೆ ವಾದ್ಯ ಸಂಗೀತ ನುಡಿಸಿದರು. ಅವರು ಚನ್ನಪಟ್ಟಣದ ಕಲ್ಪಶ್ರೀ ಪರ್ಫಾರ್ಮಿಂಗ್ ಆರ್ಟ್ಸ್ ಸೆಂಟರ್ ಟ್ರಸ್ಟ್ ಮೂಲಕ ಕಾರ್ಯಕ್ರಮ ನೀಡಿದರು.

ಅಶ್ವಿನಿ ನಾಗೇಂದ್ರ ಅವರು ಮೈಸೂರಿನ ವೀಣಾ ಕಲಾವಿದರಾದ ಆರ್.ಕೆ.ರಾಘವನ್ ಅವರ ಶಿಷ್ಯೆ. ಹಾಸನ, ಬೇಲೂರು, ಉಜಿರೆ, ರಾಣೆಬೆನ್ನೂರು, ಬೆಂಗಳೂರು, ಕೊಪ್ಪಳ, ಗದಗಿನ ಪುಟ್ಟರಾಜ ಗವಾಯಿಗಳ ಆಶ್ರಮ, ದಸರಾ ಸಾಂಸ್ಕೃತಿಕ ಕಾರ್ಯಕ್ರಮ ಸೇರಿದಂತೆ ವಿವಿಧೆಡೆ ವೀಣಾ ಕಛೇರಿ ನೀಡಿದ್ದಾರೆ.

ರಾಜ್ಯದ 42 ಶಾಲೆಗಳಲ್ಲಿ ಎಲ್‌ಕೆಜಿ ಆರಂಭ

ಬೆಂಗಳೂರು: ರಾಜ್ಯದ 42 ಶಾಲೆಗಳಲ್ಲಿ ಎಲ್‌ಕೆಜಿ ಹಾಗೂ 51 ಶಾಲೆಗಳಲ್ಲಿ ಆಂಗ್ಲ ಮಾಧ್ಯಮದ ಹೆಚ್ಚುವರಿ ವಿಭಾಗ ಆರಂಭಿಸಲು ಶಾಲಾ ಶಿಕ್ಷಣ ಇಲಾಖೆ ಅನುಮೋದನೆ ನೀಡಿದೆ.

ಪ್ರಸಕ್ತ ಶೈಕ್ಷಣಿಕ ವರ್ಷದ ಆರಂಭದಲ್ಲಿ ಕರ್ನಾಟಕದ ಏಳು ಜಿಲ್ಲೆಗಳಲ್ಲಿ ಒಂದು ಸಾವಿರಕ್ಕೂ ಹೆಚ್ಚು ಪೂರ್ವಪ್ರಾಥಮಿಕ ಶಾಲೆಗಳನ್ನು ಆರಂಭಿಸಲಾಗಿತ್ತು. ಈಗ ಮತ್ತೆ 42 ಶಾಲೆಗಳಿಗೆ ಇಲಾಖೆಯ ಆಯುಕ್ತ ಕೆ.ವಿ. ತ್ರಿಲೋಕ್‌ಚಂದ್ರ ಅನುಮತಿ ನೀಡಿದ್ದಾರೆ.



ಸರ್ಕಾರಿ ಶಾಲೆಗಳ ಬಲವರ್ಧನೆಗೆ ಕೆಲ ವರ್ಷಗಳ ಹಿಂದೆಯೇ ಕರ್ನಾಟಕ ಪಬ್ಲಿಕ್ ಶಾಲೆಗಳನ್ನು ಆರಂಭಿಸಲಾಗಿತ್ತು. ಹಾಗೆಯೇ, ಒಂದನೇ ತರಗತಿಯಿಂದಲೇ ಆಂಗ್ಲ ಮಾಧ್ಯಮ ಶಾಲೆಗಳನ್ನು ಆರಂಭಿಸಲು ಅನುಮತಿ ನೀಡಿತ್ತು. ಪ್ರಸ್ತುತ ಇರುವ 286 ಪಬ್ಲಿಕ್ ಶಾಲೆಗಳಲ್ಲಿ ಹೆಚ್ಚು ವಿದ್ಯಾರ್ಥಿಗಳು ದಾಖಲಾಗಿರುವ 51 ಶಾಲೆಗಳಲ್ಲಿ ಹೆಚ್ಚುವರಿ ಆಂಗ್ಲ ಮಾಧ್ಯಮ ವಿಭಾಗ ಆರಂಭಿಸಲಾಗುತ್ತಿದೆ.

ಹೊಸದಾಗಿ ಆಂಗ್ಲ ಮಾಧ್ಯಮ ಶಾಲೆ ಆರಂಭಿಸಲು, ಒಂದನೇ ತರಗತಿಯಿಂದಲೇ ಕನ್ನಡ ಮಾಧ್ಯಮದ ಜತೆ ಆಂಗ್ಲ ಮಾಧ್ಯಮಕ್ಕೂ ಅವಕಾಶ ನೀಡಲು ಹಾಗೂ ಹೆಚ್ಚುವರಿ ವಿಭಾಗದ ಮಂಜೂರು ಮಾಡಲು ಪ್ರಸ್ತಾವ ಸಲ್ಲಿಸುವಂತೆ ಶಾಲಾ ಶಿಕ್ಷಣ ಇಲಾಖೆ ಈಚೆಗೆ ಸೂಚಿಸಿತ್ತು.

ರಾಜ್ಯದ ಎಲ್ಲಾ ಆಸ್ಪತ್ರೆಗಳಲ್ಲಿ ಹಾವು ಕಡಿತಕ್ಕೆ ಚುಚ್ಚುಮದ್ದು ದಾಸ್ತಾನು ಕಡ್ಡಾಯ

ಬೆಂಗಳೂರು, ನ.23– ಎಲ್ಲಾ ಸರ್ಕಾರಿ, ಖಾಸಗಿ ಆಸ್ಪತ್ರೆಗಳು ಮತ್ತು ಆರೋಗ್ಯ ಕೇಂದ್ರಗಳಲ್ಲಿ ವಿಷ ನಿವಾರಕ ಚುಚ್ಚುಮದ್ದು ಸಾಕಷ್ಟು ದಾಸ್ತಾನು ಇರುವಂತೆ ಸೂಕ್ತ ಕ್ರಮ ಕೈಗೊಳ್ಳಲಾಗುವುದು ಎಂದು ಅರಣ್ಯ, ಮತ್ತು ಪರಿಸರ ಸಚಿವ ಈಶ್ವರ ಬಿ ಖಂಡ್ರೆ ಹೇಳಿದರು.



ಪಶ್ಚಿಮ ಘಟ್ಟಕ್ಕೆ ಸ್ಥಳೀಯವಾಗಿರುವ ನಾಲ್ಕು ಹೊಸ ಕಾಳಿಂಗ ಸರ್ಪ ಪ್ರಭೇದಗಳ ಆವಿಷ್ಕಾರದ ಘೋಷಣೆಯನ್ನು ಉದ್ಘಾಟಿಸಿ ಮಾತನಾಡಿದ ಖಂಡ್ರೆ, ಆಸ್ಪತ್ರೆಗಳಲ್ಲಿ ವಿಷ ನಿವಾರಕಗಳು ಲಭ್ಯವಿದ್ದರೂ, ಜನರಲ್ಲಿ ಅವುಗಳ ಬಳಕೆ ಮತ್ತು ಮಾಹಿತಿಯ ಬಗ್ಗೆ ಅರಿವು ಸೀಮಿತವಾಗಿದೆ. ಹಾವು ಕಡಿತದಿಂದ ಉಂಟಾಗುವ ಸಾವುಗಳನ್ನು ಕಡಿಮೆ ಮಾಡಲು ಸರ್ಕಾರವು ಜನರಲ್ಲಿ ಜಾಗೃತಿ ಮೂಡಿಸುವ ಕೆಲಸ ಮಾಡುತ್ತದೆ. ಆ್ಯಂಟಿ ವೆನಮ್‌ಗಳ ಅಲಭ್ಯತೆ ಮತ್ತು ಅದರ ಬಗ್ಗೆ ಅರಿವಿನ ಕೊರತೆಯಿಂದ ಅನೇಕ ಜನರು ಸಾಯುತ್ತಾರೆ ಎಂದು ಹೇಳಿದರು. ಸಂರಕ್ಷಣಾ ತಜ್ಞರ ಸಹಾಯದಿಂದ ಜಾಗೃತಿ ಮೂಡಿಸುವಲ್ಲಿ ಸರ್ಕಾರವು ಎಲ್ಲಾ ರೀತಿಯ ಕ್ರಮ ಕೈಗೊಳ್ಳುತ್ತದೆ ಎಂದು ತಿಳಿಸಿದ್ದಾರೆ.

ಪಶ್ಚಿಮಘಟ್ಟ ಮತ್ತು ಮಲೆನಾಡಿನಲ್ಲಿ ಕಾಣಸಿಗುವ ಬೃಹತ್ ಕೃಷ್ಣ ಸರ್ಪಕ್ಕೆ **'ಓಫಿಯೋಫೇಗಸ್ ಕಾಳಿಂಗ'** ಎಂಬ ವೈಜ್ಞಾನಿಕ ಹೆಸರನ್ನು ಅರಣ್ಯ, ಜೀವಿಶಾಸ್ತ್ರ ಮತ್ತು ಪರಿಸರ ಸಚಿವ ಈಶ್ವರ ಖಂಡ್ರೆ ಅಧಿಕೃತವಾಗಿ ಘೋಷಣೆ ಮಾಡಿದರು. ಹೆಸರಾಂತ ಹರ್ಪಿಟಾಲಜಿಸ್ಟ್, ಹಾವು ತಜ್ಞ ಮತ್ತು ಕಳಿಂಗ ಫೌಂಡೇಶನ್ ಸಂಸ್ಥಾಪಕಿ, ಪಿ ಗೌರಿಶಂಕರ್, ಇತರ ದೇಶಗಳ ತಜ್ಞರೊಂದಿಗೆ ವಿವರವಾದ ಅಧ್ಯಯನದ ನಂತರ ನಾಲ್ಕುಕಾಳಿಂಗ ಸರ್ಪ ಪ್ರಭೇದಗಳಿವೆ ಎಂದು ತಿಳಿಸಿದರು. 185 ವರ್ಷಗಳ ನಂತರ ಮೊದಲ ಬಾರಿಗೆ ಈ ಸಂಶೋಧನೆ ಮಾಡಲಾಗಿದೆ. ಹಾವು ಕಚ್ಚಿದಾಗ ಫಿಲಿಪ್ಪೀನ್ಸ್‌ನ ಆ್ಯಂಟಿ ವೆನಮ್ ಪ್ರಯೋಜನವಾಗಲಿಲ್ಲ ಎಂದಾಗ ಈ ಆಲೋಚನೆ ಮತ್ತು ಅಧ್ಯಯನದ ಅಗತ್ಯವು ಹುಟ್ಟಿಕೊಂಡಿತು ಎಂದು ಶಂಕರ್ ಹೇಳಿದರು. ಹುಡುಕಲು ಎಲ್ಲ ರೀತಿಯ ನೆರವು ನೀಡಲಾಗುವುದು ಎಂದು ಭರವಸೆ ನೀಡಿದರು.

ಉಪ ಚುನಾವಣೆ ಫಲಿತಾಂಶದ ಬಗ್ಗೆ ಸಚಿವ, ಶಾಸಕರ ಪ್ರತಿಕ್ರಿಯೆ

ಬಿಜೆಪಿ, ಜೆಡಿಎಸ್ ಕುತಂತ್ರ ರಾಜಕಾರಣಕ್ಕೆ ಜನರಿಂದ ತಕ್ಕ ಉತ್ತರ

ವಿಪಕ್ಷಗಳಿಗೆ ಸಮಾಜ ಕಲ್ಯಾಣ ಸಚಿವ ಡಾ.ಹೆಚ್.ಸಿ.ಮಹದೇವಪ್ಪ ತಿರುಗೇಟು



ಮೈಸೂರು, ನ.23(ಬಿಎಲ್‌ಯು)– ರಾಜ್ಯದ ಮೂರು ಕ್ಷೇತ್ರಗಳ ಉಪ ಚುನಾವಣೆಯಲ್ಲಿ ಕಾಂಗ್ರೆಸ್ ಗೆಲ್ಲಿಸುವ ಮೂಲಕ ಬಿಜೆಪಿ ಹಾಗೂ ಜೆಡಿಎಸ್ ರಾಜಕೀಯ ಕುತಂತ್ರಕ್ಕೆ ಜನರು ತಕ್ಕ ಉತ್ತರ ನೀಡಿದ್ದಾರೆ ಎಂದು ಸಮಾಜ ಕಲ್ಯಾಣ ಸಚಿವ ಡಾ.ಹೆಚ್.ಸಿ.ಮಹದೇವಪ್ಪ ಅಭಿಪ್ರಾಯಪಟ್ಟಿದ್ದಾರೆ. ಜಿಲ್ಲಾ ಪಂಚಾಯತ್‌ನಲ್ಲಿ ಪತ್ರಕರ್ತರೊಂದಿಗೆ ಮಾತನಾಡಿದ ಅವರು, ಮೂರು ಕ್ಷೇತ್ರದಲ್ಲಿ ಕಾಂಗ್ರೆಸ್ ಗೆಲ್ಲಿಸುವ ಮೂಲಕ ಜನರು ನಮಗೆ ಆಶೀರ್ವಾದ ಮಾಡಿದ್ದು, ಸಿದ್ದರಾಮಯ್ಯ ಸರ್ಕಾರಕ್ಕೆ ಬೆಂಬಲ ನೀಡಿದ್ದಾರೆ ಎಂದರು.

ನಮ್ಮ ಸರ್ಕಾರ ನೀಡಿದ್ದ ಪಂಚ ಗ್ಯಾರಂಟಿ ಯೋಜನೆಗಳು ನಮ್ಮ ಕೈ ಹಿಡಿದಿದೆ. ವಿರೋಧ ಪಕ್ಷಗಳ ಸುಳ್ಳು ಪ್ರಚಾರಕ್ಕೆ ಜನರು ಕಿವಿಗೊಡದೆ ನಮಗೆ ಜಯದ ಮಾಲೆ ತೊಡಿಸಿದ್ದಾರೆ. ಮುಡಾ ಹಗರಣವೇ ಅಲ್ಲ, ಅಲ್ಲಿ ಏನೂ ನಡೆದಿಲ್ಲ. ಬಿಜೆಪಿ, ಜೆಡಿಎಸ್ ಸುಳ್ಳು ಪ್ರಚಾರ ಮಾಡಿದ್ದರು. ಆದರೆ, ಅದಕ್ಕೆಲ್ಲಾ ಜನರು ಕಿವಿ ಕೊಟ್ಟಿಲ್ಲ ಎಂದರು. ಬಿಜೆಪಿ ಮತ್ತು ಜೆಡಿಎಸ್ ಸುಳ್ಳನ್ನು ಸತ್ಯ ಮಾಡಲು ಹೊರಟಿದ್ದರು. ಆದರೆ ಅದು ಸಾಧ್ಯವಾಗಲಿಲ್ಲ. ಇವರ ರಾಜಕೀಯ ಕುತಂತ್ರಕ್ಕೆ ಜನರು ತಕ್ಕ ಉತ್ತರ ನೀಡಿದ್ದಾರೆ. ಈ ಮೂಲಕ ಸಿದ್ದರಾಮಯ್ಯ ಜನರ ಪರವಾಗಿ ಕೆಲಸ ಮಾಡುತ್ತಿದ್ದಾರೆ ಎಂಬ ತೀರ್ಪು ನೀಡಿದ್ದಾರೆ ಎಂದರು.

ಮುಡಾ ಹಗರಣದ ಬಗ್ಗೆ ಜನರು ತಲೆಕೆಡಿಸಿಕೊಂಡಿಲ್ಲ



ಸಿದ್ದರಾಮಯ್ಯ ವಿರುದ್ಧದ ಮುಡಾ ಹಗರಣದ ಬಗ್ಗೆ ಜನರು ತಲೆ ಕೆಡಿಸಿಕೊಂಡಿಲ್ಲ ಎಂಬುದು ಉಪ ಚುನಾವಣೆಯಲ್ಲಿ ಕಾಂಗ್ರೆಸ್‌ಗೆ ಜನರು ನೀಡಿರುವ ಬೆಂಬಲದಿಂದ ವ್ಯಕ್ತವಾಗಿದೆ ಎಂದು ಪಶು ಸಂಗೋಪನಾ ಸಚಿವ ಕೆ.ವೆಂಕಟೇಶ್ ಅಭಿಪ್ರಾಯಪಟ್ಟರು. ಬಿಜೆಪಿ ಮತ್ತು ಜೆಡಿಎಸ್ ಸುಳ್ಳನ್ನು ಸತ್ಯ ಮಾಡಲು ಹೊರಟಿದ್ದವು. ಆದರೆ ಅದು ಸಾಧ್ಯವಾಗಲಿಲ್ಲ ಎಂದರು. ಹೆಚ್.ಡಿ.ದೇವೇಗೌಡರು ಕುಟುಂಬಕ್ಕಾಗಿ ರಾಜಕಾರಣ ಮಾಡಿದ್ದಾರೆ ಎಂಬುದು ಜನರಿಗೆ ತಿಳಿದಿದೆ. ಒಕ್ಕಲಿಗರು ಈಗ ಬುದ್ಧಿ ಕಲಿತಿದ್ದಾರೆ. ಮೊದಲಿನ ವಾತಾವರಣ ಈಗ ಇಲ್ಲ ಎಂದು ವೆಂಕಟೇಶ್ ಹೇಳಿದರು.

ಅನೈತಿಕ ಮೈತ್ರಿಗೆ ತಕ್ಕ ಉತ್ತರ



ಅನೈತಿಕ ಮೈತ್ರಿ ಮಾಡಿಕೊಂಡಿರುವ ಬಿಜೆಪಿ ಮತ್ತು ಜೆಡಿಎಸ್‌ಗೆ ಈ ಮೂರು ಕ್ಷೇತ್ರಗಳ ಉಪಚುನಾವಣೆ ಫಲಿತಾಂಶದ ಮೂಲಕ ರಾಜ್ಯದ ಜನರು ತಕ್ಕ ಉತ್ತರ ನೀಡಿದ್ದಾರೆ ಎಂದು ಶಾಸಕ ತನ್ವೀರ್ ಸೇಠ್ ತಿಳಿಸಿದರು. ವಾಲ್ಮೀಕಿ, ವಕ್ಫ್, ಮುಡಾ ವಿಚಾರಕ್ಕೆ ಜನರು ಮನ್ನಣೆ ನೀಡಿಲ್ಲ. ರಾಜ್ಯ ಸರ್ಕಾರದ ಅಭಿವೃದ್ಧಿ ಕಾರ್ಯ ನೋಡಿ ಮತ ನೀಡಿ, ಕಾಂಗ್ರೆಸ್ ಗೆಲ್ಲಿಸಿದ್ದಾರೆ ಎಂದರು.

ಸಿದ್ದರಾಮಯ್ಯಗೆ ದೊರೆತ ನೈತಿಕ ಬೆಂಬಲ



ರಾಜ್ಯದ ಮೂರು ವಿಧಾನಸಭಾ ಕ್ಷೇತ್ರಗಳ ಚುನಾವಣೆಯಲ್ಲಿ ಕಾಂಗ್ರೆಸ್ ಗೆಲುವು ಸಿದ್ದರಾಮಯ್ಯ ಅವರಿಗೆ ವೈಯಕ್ತಿಕವಾಗಿ ದೊರೆತ ನೈತಿಕ ಬೆಂಬಲ ಎಂದು ವಿಧಾನಪರಿಷತ್ ಸದಸ್ಯ ಡಾ.ಯತೀಂದ್ರ ಸಿದ್ದರಾಮಯ್ಯ ಅಭಿಪ್ರಾಯಪಟ್ಟರು. ಹಗರಣವೇ ಅಲ್ಲದಿರುವುದನ್ನು ಹಗರಣ ಮಾಡಲು ಪ್ರಯತ್ನ ಮಾಡಿದರು. ಆದರೆ ಅವರಿಗೆ ಯಶಸ್ಸು ಸಿಗಲಿಲ್ಲ. ಅಂತಿಮವಾಗಿ ಸರ್ಕಾರದ ಪರವಾಗಿ ಜನರು ತೀರ್ಪು ನೀಡಿದ್ದಾರೆ ಎಂದರು. ವಕ್ಫ್ ಸೇರಿದಂತೆ ಇತರೆ ವಿಚಾರ ಮುಂದಿಟ್ಟು ಕೋಮು ದ್ವೇಷ ರಾಜಕಾರಣ ಮಾಡಲು ಪ್ರಯತ್ನ ಮಾಡಿದರು. ಅದಕ್ಕೂ ಜನರ ಮಣೆ ಹಾಕಲಿಲ್ಲ ಎಂದು ಡಾ.ಯತೀಂದ್ರ ಹೇಳಿದರು.

ಸೋಲಿನಿಂದ ಎದೆಗುಂದದೆ ಪಕ್ಷ ಸಂಘಟನೆ ಮಾಡಲಿ

ನಿಖಿಲ್ ಕುಮಾರಸ್ವಾಮಿಗೆ ಆತ್ಮವಿಶ್ವಾಸ ತುಂಬಿದ ಶಾಸಕ ಜಿ.ಟಿ.ದೇವೇಗೌಡರು



ಮೈಸೂರು, ನ.23(ಬಿಎಲ್‌ಯು)– ಚನ್ನಪಟ್ಟಣದ ಉಪ ಚುನಾವಣೆ ಸೋಲಿನಿಂದ ನಿಖಿಲ್ ಕುಮಾರಸ್ವಾಮಿ ಎದೆಗುಂದಬಾರದು. ಧೈರ್ಯದಿಂದ ಮತ್ತೆ ಪಕ್ಷ ಸಂಘಟನೆಯಲ್ಲಿ ತೊಡಗಿಸಿಕೊಳ್ಳಲಿ ಎಂದು ಶಾಸಕ ಜಿ.ಟಿ.ದೇವೇಗೌಡರು ಸಲಹೆ ನೀಡಿದ್ದಾರೆ.

ಮೈಸೂರು ಜಿಲ್ಲಾ ಪಂಚಾಯತ್ ನಲ್ಲಿ ಇಂದು ಪತ್ರಕರ್ತರೊಂದಿಗೆ ಮಾತನಾಡಿದ ಅವರು, ನಿಖಿಲ್ ಕುಮಾರಸ್ವಾಮಿ ಸೋಲಬಾರದಿತ್ತು. ಮೂರು ಚುನಾವಣೆ ಸೋಲಿನಿಂದ ಅವರಿಗೆ ಬೇಸರವಾಗಿದೆ. ಆದರೆ, ಸೋಲಿಗೆ ಎದೆಗುಂದದೆ ಪಕ್ಷ ಸಂಘಟನೆ ಮಾಡಬೇಕು ಎಂದು ಕಿವಿಮಾತು ಹೇಳಿದರು.

ಮೂರು ಬಾರಿ ಸೋತವರು ಗೆದ್ದು ಮಂತ್ರಿಯಾಗಿ ಉನ್ನತ ಸ್ಥಾನಕ್ಕೆ ಹೋಗಿದ್ದಾರೆ. ಇದನ್ನೆ ಆದರ್ಶವಾಗಿಟ್ಟುಕೊಂಡು ನಿಖಿಲ್ ಪಕ್ಷ ಸಂಘಟನೆ ಮಾಡಬೇಕು ಎಂದರು. ಚನ್ನಪಟ್ಟಣ ಪ್ರಚಾರಕ್ಕೆ ನನ್ನನ್ನು ಯಾರು ಕರೆದರು ಹೇಳಿ ಎಂದು ಪ್ರಶ್ನಿಸಿದ ಜಿ.ಟಿ.ದೇವೇಗೌಡರು, ಅಭ್ಯರ್ಥಿ ಕರೆಯಲಿಲ್ಲ, ಅಭ್ಯರ್ಥಿ ತಾಯಿ ಕರೆಯಲಿಲ್ಲ, ದೊಡ್ಡಗೌಡರು ಕೂಡ ಕರೆಯಲಿಲ್ಲ. ಅವರಿಗೆ ನನ್ನ ಅವಶ್ಯಕತೆ ಇದ್ದಂತೆ ಕಾಣುತ್ತಿಲ್ಲ ಎಂದು ಅಭಿಪ್ರಾಯಪಟ್ಟರು.

ಅವರೆಲ್ಲಾ, ನಾನು ಬೇಡ, ನನ್ನ ಮಗ ಬೇಕು ಎಂಬ ಮನೋಭಾವದಲ್ಲಿದ್ದಾರೆ. ಜಿ.ಟಿ.ದೇವೇಗೌಡನಿಗೆ ವಯಸ್ಸಾಗಿದೆ. ರಾಜಕೀಯದಿಂದ ನಿವೃತ್ತಿ ಹೊಂದಲಿ ಎಂಬ ಕಾರಣದಿಂದ ಪ್ರಾಯಶಃ ತಮಗೆ ಜಿ.ಟಿ.ಮಗ ಮಾತ್ರ ಸಾಕು ಎಂಬ ಆದೇಶ ಅವರಿಂದ ಆಗಿದೆ ಅನ್ನಿಸುತ್ತಿದೆ ಎಂದು ಜಿ.ಟಿ.ದೇವೇಗೌಡರು ಹೇಳಿದರು.

ನನಗೆ ರಾಜಕೀಯದಿಂದ ನಿವೃತ್ತಿ ಕೊಡಿಸಲು ತಯಾರಾಗಿದ್ದಾರೆ. ಕಾಂಗ್ರೆಸ್ ಹೌಸ್ ಫುಲ್ ಆಗಿದೆ ಎಂದು ಅವರಿಗೂ ಗೊತ್ತಿದೆ. ಹೀಗಾಗಿ ಜಿ.ಟಿ.ಡಿಗೆ ಅಲ್ಲಿ ಸ್ಥಾನ ಇಲ್ಲ. ಹೀಗಾಗಿ ನಿವೃತ್ತಿ ತೆಗೆದುಕೊಳ್ಳಲಿ ಎಂಬ ಭಾವನೆಯಲ್ಲಿದ್ದಾರೆ ಎಂದರು.

ಕುಮಾರಸ್ವಾಮಿಗೂ, ನನಗೂ ಯಾವುದೇ ರೀತಿಯಲ್ಲೂ ಮನಸ್ತಾಪ ಇಲ್ಲ. ಆದರೆ ಅವರೇ ಈ ರೀತಿ ಬಿಂಬಿಸಿಬಿಡುತ್ತಾರೆ. ನಾನೇನು ಮಾಡಲಿ ಎಂದು ಪ್ರಶ್ನಿಸಿದರು. ಆದರೆ ಅದೇನೆ ಆಗಲಿ, ಚನ್ನಪಟ್ಟಣದಲ್ಲಿ ನಿಖಿಲ್ ಕುಮಾರಸ್ವಾಮಿ ಸೋಲಬಾರದಿತ್ತು ನಾನು ಪ್ರಚಾರಕ್ಕೆ ಹೋಗದ ಕಾರಣ ಸೋಲಿನ ಕಾರಣ ತಿಳಿಯುತ್ತಿಲ್ಲ ಎಂದು ಜಿಟಿಡಿ ನುಡಿದರು.

ಕಾಂಗ್ರೆಸ್ ಸೇರುವಂತೆ ಸಿದ್ದರಾಮಯ್ಯ ನನಗೆ ಆಹ್ವಾನ ನೀಡಿಲ್ಲ

ಕಾಂಗ್ರೆಸ್‌ಗೆ ಬಾ ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ನನಗೆ ಎಂದೂ ಆಹ್ವಾನ ನೀಡಿಲ್ಲ ಎಂದು ಶಾಸಕ ಜಿ.ಟಿ.ದೇವೇಗೌಡರು ಸ್ಪಷ್ಟಪಡಿಸಿದರು.

ಇತ್ತೀಚಿಗೆ ಸಮಾರಂಭವೊಂದರಲ್ಲಿ ಕಾಂಗ್ರೆಸ್‌ಗೆ ಬರುವಂತೆ ಜಿ.ಟಿ.ದೇವೇಗೌಡರಿಗೆ ಆಹ್ವಾನ ನೀಡಿದ್ದೇನೆ ಎಂದು ಸಿದ್ದ ರಾಮಯ್ಯ ನೀಡಿದ್ದ ಹೇಳಿಕೆಗೆ ಪ್ರತಿಕ್ರಿಯೆ ನೀಡಿ ದರು. ಮೈಸೂರಿನ ಚಾಮುಂಡಿಬೆಟ್ಟದಲ್ಲಿ ದಸರಾ ಉದ್ಘಾಟನಾ ಸಮಾರಂಭದಲ್ಲಿ ಸಿದ್ದರಾಮಯ್ಯ ಜೊತೆ ವೇದಿಕೆ ಹಂಚಿಕೊಂಡಿದ್ದನ್ನು ಬಿಟ್ಟರೆ ಬೇರೆಲ್ಲೂ ಅವರನ್ನು ನಾನು ಭೇಟಿ ಮಾಡಿಲ್ಲ ಎಂದರು. ವಿಧಾನಸಭಾ ಚುನಾವಣೆಗೂ ಮುನ್ನ ಕಾಂಗ್ರೆಸ್‌ಗೆ ಬರುವಂತೆ ಸಿದ್ದರಾಮಯ್ಯ, ಡಿ.ಕೆ.ಶಿವ ಕುಮಾರ್, ರಣದೀಪ್‌ಸಿಂಗ್ ಸುರ್ಜೇವಾಲ, ರಾಹುಲ್ ಗಾಂಧಿ ಆಪ್ತ ಕಾರ್ಯದರ್ಶಿ ಆಹ್ವಾನ ನೀಡಿದ್ದರು. ಆಗ ನಾವು ಹೋಗಲಿಲ್ಲ. ಅದು ಬಿಟ್ಟರೆ ಬೇರೆ ಯಾವುದೇ ಸಮಯದಲ್ಲೂ ನನಗೆ ಕಾಂಗ್ರೆಸ್ ಆಹ್ವಾನ ನೀಡಿಲ್ಲ ಎಂದು ಹೇಳಿದರು.

ನಮ್ಮ ನಾಡು–ನಮ್ಮ ಭಾಷೆ



ರೋಟರಿ ಜಿಲ್ಲಾ ಗವರ್ನರ್ ಕಾರ್ಯಾಲಯ ಹಾಗು ರೋಟರಿ ಮೈಸೂರು ಉತ್ತರ ಆಯೋಜಿಸಿದ್ದ ನಮ್ಮ ನಾಡು, ನಮ್ಮ ಭಾಷೆ ಕಾರ್ಯಕ್ರಮವನ್ನು ರೋಟರಿ ಭವನದಲ್ಲಿ ಜಿಲ್ಲಾ ಗವರ್ನರ್ ವಿಕ್ರಂ ದತ್ತ ಉದ್ಘಾಟಿಸಿದರು. ಜಿಲ್ಲಾ ಕಾರ್ಯದರ್ಶಿ ರಿತೇಶ್ ಬಾಳಿಗ, ಆಯೋಜಕ ರಾಜಶೇಖರ ಕದಂಬ, ಅಧ್ಯಕ್ಷ ಪ್ರಭಾಕರ್, ಮುಖ್ಯ ಭಾಷಣಕಾರರಾದ ಪುಸ್ತಕ ಪ್ರಾಧಿಕಾರದ ಅಧ್ಯಕ್ಷ ಮಾನಸ, ಅಕ್ಷಯ್ ವಾಸು, ಜಿಲ್ಲಾ ಗವರ್ನರ್ ನಾಮಿನಿ ಸತೀಶ್ ಬೋಳಾರ್, ಕೇಶವಪ್ರಕಾಶ್, ಎಲ್.ಆರ್.ಮಹದೇವಸ್ವಾಮಿ, ಪುತ್ತೂರು ಉಮೇಶ್ ನಾಯಕ್ ಇತರರಿದ್ದರು.

ಸಂವಿಧಾನ ಓದು ಅಧ್ಯಯನ ಶಿಬಿರ

ಮೈಸೂರು, ನ.23–ಸಂವಿಧಾನ ಓದು ಅಭಿಯಾನ, ಅಖಿಲ ಭಾರತ ಸಂಶೋಧಕರ ಸಂಘ, ಕುವೆಂಪು ಕನ್ನಡ ಅಧ್ಯಯನ ಸಂಸ್ಥೆ, ಮೈಸೂರು ವಿಶ್ವವಿದ್ಯಾನಿಲಯ, ಸಮಾನಮನಸ್ಕ ಜನಪರ ಸಂಘಟನೆಗಳು ಜಂಟಿಯಾಗಿ ನವೆಂಬರ್ 30 ಮತ್ತು ಡಿಸೆಂಬರ್ 1 ರಂದು ಎರಡು ದಿನಗಳ ಕಾಲ ಮಾನಸಗಂಗೋತ್ರಿಯ ಮೈಸೂರು ವಿಶ್ವವಿದ್ಯಾನಿಲಯದ ವಿಜ್ಞಾನ ಭವನದಲ್ಲಿ ನೋಂದಣಿಯಾಗುವ 250 ಪ್ರತಿನಿಧಿಗಳಿಗೆ ಸಂವಿಧಾನ ಓದು ಅಧ್ಯಯನ ಶಿಬಿರ ನಡೆಸಲು ತೀರ್ಮಾನಿಸಲಾಗಿದೆ. ಹೆಚ್ಚಿನ ಮಾಹಿತಿಗೆ ಮೊ. 9483540670 ಸಂಪರ್ಕಿಸಬಹುದು.

ಉಪ ಚುನಾವಣೆಯಲ್ಲಿ ಕಾಂಗ್ರೆಸ್ ಜಯಭೇರಿ

ಮೈಸೂರಲ್ಲಿ ಕಾರ್ಯಕರ್ತರ ಸಂಭ್ರಮಾಚರಣೆ



ಉಪ ಚುನಾವಣೆಯಲ್ಲಿ ಕಾಂಗ್ರೆಸ್ ಗೆಲುವು ಸಾಧಿಸಿದ ಹಿನ್ನೆಲೆಯಲ್ಲಿ ಮಾಜಿ ಶಾಸಕ ಎಂ.ಕೆ.ಸೋಮಶೇಖರ್ ನೇತೃತ್ವದಲ್ಲಿ ಕಾಂಗ್ರೆಸ್ ಕಾರ್ಯಕರ್ತರು ಶನಿವಾರ ಸಿಹಿ ವಿತರಿಸಿ, ವಿಜಯೋತ್ಸವ ಆಚರಿಸಿದರು.



ಮೈಸೂರಿನ ಕಾಂಗ್ರೆಸ್ ಭವನದಲ್ಲಿ ಮೈಸೂರು ನಗರ ಕಾಂಗ್ರೆಸ್ ಸಮಿತಿಯ ಹಿಂದುಳಿದ ವರ್ಗದ ವತಿಯಿಂದ ವಿಜಯೋತ್ಸವ ಆಚರಿಸಲಾಯಿತು. ಹಿಂದುಳಿದ ವರ್ಗದ ಕಾಂಗ್ರೆಸ್ ಸಮಿತಿ ಅಧ್ಯಕ್ಷ ಎನ್.ಆರ್.ನಾಗೇಶ್, ಹಿಂದುಳಿದ ವರ್ಗಗಳ ನಗರ ಹಾಗೂ ರಾಜ್ಯ ಕಾರ್ಯಕಾರಿ ಸಮಿತಿಯ ಎಂ.ಎಲ್.ಗೋಪಾಲ್, ಕಮಲ, ಅನಂತರಾಮ್, ಚಂದ್ರು ವಿಶ್ವಕರ್ಮ, ಆರ್.ಕೆ. ರವಿ, ಮಹೇಂದ್ರ ಕಾಗಿನೆಲೆ, ಲಕ್ಷ್ಮೀನಾರಾಯಣ, ಲೋಕೇಶ್‌ಕುಮಾರ್ ಮಾದಾಪುರ, ಹರೀಶ್ ರೆಡ್ಡಿ, ದಿನೇಶ್, ರವಿ ಕುಂಬಾರ, ಶಿಂಶ, ದಿನೇಶ, ಲಕ್ಷ್ಮೀಶ, ಮಂಗಳ, ಶಾಂತಮ್ಮ, ಮಂಜುಳಾ ಹಾಗೂ ಕಾರ್ಯಕರ್ತರು ಉಪಸ್ಥಿತರಿದ್ದರು.

ಮೈಸೂರು, ನ.23(ಎಂಟಿವೈ)– ಚನ್ನಪಟ್ಟಣ ಸೇರಿದಂತೆ ರಾಜ್ಯದ ಮೂರು ವಿಧಾನಸಭಾ ಕ್ಷೇತ್ರಗಳ ಉಪಚುನಾವಣೆಯಲ್ಲಿ ಕಾಂಗ್ರೆಸ್ ಭರ್ಜರಿ ಗೆಲುವು ಸಾಧಿಸಿದ ಹಿನ್ನೆಲೆಯಲ್ಲಿ ಮಾಜಿ ಶಾಸಕ ಎಂ.ಕೆ. ಸೋಮಶೇಖರ್ ನೇತೃತ್ವದಲ್ಲಿ ಕಾಂಗ್ರೆಸ್ ಕಾರ್ಯಕರ್ತರು ಸಾರ್ವಜನಿಕರಿಗೆ ಸಿಹಿ ವಿತರಿಸಿ, ಸಂಭ್ರಮ ಆಚರಿಸಿದರು.

ಉಪಚುನಾವಣೆಯ ಫಲಿತಾಂಶ ಪ್ರಕಟವಾಗುತ್ತಿದ್ದಂತೆಯೇ ಬೆಂಬಲಿಗರೊಂದಿಗೆ ಮಾಜಿ ಶಾಸಕ ಎಂ.ಕೆ. ಸೋಮಶೇಖರ್ ಮೈಸೂರಿನ ರಾಮಸ್ವಾಮಿ ವೃತ್ತದಲ್ಲಿ ಸಿಎಂ ಸಿದ್ದರಾಮಯ್ಯ, ಕಾಂಗ್ರೆಸ್ ಪರ ಘೋಷಣೆ ಕೂಗಿ ಸಂಭ್ರಮಿಸಿದರು. ಅಲ್ಲದೆ, ಸಾರ್ವಜನಿಕರಿಗೆ ಸಿಹಿ ವಿತರಿಸಿ ವಿಜಯೋತ್ಸವ ಆಚರಿಸಿದರು.

ಇದೇ ವೇಳೆ ಮಾತನಾಡಿದ ಎಂ.ಕೆ. ಸೋಮಶೇಖರ್, ಮುಖ್ಯಮಂತ್ರಿ ಸಿದ್ದರಾಮಯ್ಯ ಮತ್ತು ಉಪಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ನೇತೃತ್ವದಲ್ಲಿ ರಾಜ್ಯದಲ್ಲಿ ನಡೆದ ಮೂರು ವಿಧಾನಸಭಾ ಕ್ಷೇತ್ರದ ಉಪಚುನಾವಣೆಯಲ್ಲಿ ಕಾಂಗ್ರೆಸ್ ಅಭ್ಯರ್ಥಿಗಳು ಜಯಭೇರಿ ಬಾರಿಸಿದ್ದು, ಕಾಂಗ್ರೆಸ್ ಸರ್ಕಾರದ ಜನಪರ ಆಡಳಿತಕ್ಕೆ ಈ ಫಲಿತಾಂಶ ಕೈಗನ್ನಡಿಯಾಗಿದೆ. ಇದು ಕಾಂಗ್ರೆಸ್ ಸರ್ಕಾರದ ಆಡಳಿತಕ್ಕೆ ಸಿಕ್ಕ ಜನಮನ್ನಣೆಯೂ ಆಗಿದೆ. ರಾಜ್ಯದಲ್ಲಿ ವಿರೋಧ ಪಕ್ಷ ಬಿಜೆಪಿ ಮತ್ತು ಜೆಡಿಎಸ್, ಸರ್ಕಾರದ ವಿರುದ್ಧ ಸುಳ್ಳು ಆರೋಪ ಮಾಡುವ ಮೂಲಕ ರಾಜಕೀಯ ಲಾಭ ಮಾಡಿಕೊಳ್ಳಲು ಪ್ರಯತ್ನಿಸಿದ್ದವು. ವಾಲ್ಮೀಕಿ ಹಗರಣ ಮತ್ತು ಮುಡಾ ಹಗರಣವನ್ನು ಉಪ ಚುನಾವಣೆಯ ಪ್ರಮುಖ ಅಸ್ತ್ರವಾಗಿ ಬಳಸಿಕೊಂಡಿದ್ದರು. ಆದರೆ ಮೂರು ಕ್ಷೇತ್ರದ ಜನತೆ ವಿಪಕ್ಷಗಳಾದ ಬಿಜೆಪಿ ಹಾಗೂ ಜೆಡಿಎಸ್‌ಗೆ ತಕ್ಕ ಪಾಠ ಕಲಿಸಿದ್ದಾರೆ ಎಂದು ಕಿಡಿಕಾರಿದರು.

ಕರ್ನಾಟಕದ ಮಹಾಜನತೆ ಸಿದ್ದರಾಮಯ್ಯ ಸರ್ಕಾರದ ಜಾತ್ಯಾತೀತ ನಿಲುವು, ಬಡವರ ಪರವಾಗಿ ಕೊಟ್ಟಂತಹ ಕಾರ್ಯಕ್ರಮಗಳು, ಸರ್ವರನ್ನು ಸಮಾನವಾಗಿ ಕಂಡ ಸಮಾನತೆಯ ಸಂದೇಶಗಳು, ಸಿದ್ದರಾಮಯ್ಯ ಅವರ ಪ್ರಾಮಾಣಿಕತೆ, ಜನಪ್ರಿಯತೆ, ಜನಪರತೆ, ಗ್ಯಾರಂಟಿ ಯೋಜನೆಗಳನ್ನು ಮೆಚ್ಚಿ ಬಿಜೆಪಿ ಮತ್ತು ಜೆಡಿಎಸ್‌ಗೆ ಸೋಲುಣಿಸಿದ್ದಾರೆ. ಮೂರು ಕ್ಷೇತ್ರದ ಗೆಲುವು ಸಿದ್ದರಾಮಯ್ಯನವರ ಕೈ ಬಲಪಡಿಸಿದಂತಾಗಿದೆ. ಮೂರು ಸರ್ಕಾರವನ್ನು ಅಸ್ಥಿರಗೊಳಿಸಲು ಬಿಜೆಪಿ ಮತ್ತು ಜೆಡಿಎಸ್ ಪ್ರಯತ್ನಿಸುತ್ತಿವೆ. ಈ ಗೆಲುವು ವಿಪಕ್ಷಗಳ ಷಡ್ಯಂತ್ರಗಳಿಗೆ, ಕೀಳು ಮಟ್ಟದ ರಾಜಕಾರಣಕ್ಕೆ ಎಚ್ಚರಿಕೆ ಘಂಟೆಯಾಗಿದೆ. ಇನ್ನು ಮುಂದೆಯಾದರೂ ವಿರೋಧ ಪಕ್ಷಗಳು ಎಚ್ಚೆತ್ತುಕೊಂಡು ರಾಜ್ಯ ಕಾಂಗ್ರೆಸ್ ಸುಭದ್ರ ಸರ್ಕಾರವನ್ನು ಅನಗತ್ಯವಾಗಿ ಟೀಕಿಸದೆ ರಾಜ್ಯದ ಅಭಿವೃದ್ಧಿಗೆ ಕೈಜೋಡಿಸಲಿ ಎಂದು ಸಲಹೆ ನೀಡಿದರು.

ಈ ಸಂದರ್ಭದಲ್ಲಿ ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ ಜಿ.ಸೋಮಶೇಖರ್, ವಿನಯ್ ಕುಮಾರ್, ಜೆ.ಜೋಗಿ ಮಹೇಶ್, ರವಿಶಂಕರ್, ರಮೇಶ್, ಮಂಜುನಾಥ್, ಡೈರಿ ವೆಂಕಟೇಶ್, ಗಣೇಶ್,ವಿಶ್ವನಾಥ್ (ವಿಶ್ವ), ಗುಣಶೇಖರ್, ಆರ್.ಹೆಚ್. ಕುಮಾರ್, ಜಗನ್ನಾಥ್ ಭೋವಿ, ಮಹೇಂದ್ರ, ರವಿ, ನಾಸೀರ್, ನಾಗದೇವ, ಮೋಹನ್, ಮೈಸೂರು ಬಸವಣ್ಣ, ರಾಘವೇಂದ್ರ, ಮಹ್ಮದ್ ಫಾರೂಖ್, ಭಾಗ್ಯ ಚಂದ್ರಶೇಖರ್, ಹರೀಶ್, ರವೀಶ್, ಭವ್ಯ, ಚಂದ್ರಕಲಾ, ಉಮೇಶ್ ಸೇರಿದಂತೆ ಮತ್ತಿತರರು ಪಾಲ್ಗೊಂಡಿದ್ದರು.

ಉಪಸಮರದಲ್ಲಿ ಕಾಂಗ್ರೆಸ್ ಜಯಭೇರಿ: ಕಾರ್ಯಕರ್ತರಿಂದ ವಿಜಯೋತ್ಸವ





ಮೈಸೂರು ಕಾಂಗ್ರೆಸ್ ಭವನದ ಎದುರು ಪಕ್ಷದ ಪದಾಧಿಕಾರಿಗಳು ಸಂಭ್ರಮ ಆಚರಿಸಿದರು. ಓಬಿಸಿ ಘಟಕದ ಸಂಭ್ರಮಾಚರಣೆಯನ್ನು ಮತ್ತೊಂದು ಚಿತ್ರದಲ್ಲಿ ಕಾಣಬಹುದು.

ಮೈಸೂರು, ನ.23(ಎಸ್‌ಬಿಡಿ)– ರಾಜ್ಯದಲ್ಲಿ ಉಪಚುನಾವಣೆ ನಡೆದ ಮೂರು ಕ್ಷೇತ್ರಗಳಲ್ಲೂ ಕಾಂಗ್ರೆಸ್ ಜಯಭೇರಿ ಭಾರಿಸಿದ ಹಿನ್ನೆಲೆಯಲ್ಲಿ ಮೈಸೂರಿನ ಕಾಂಗ್ರೆಸ್ ಭವನದ ಎದುರು ಪಕ್ಷದ ಮುಖಂಡರು ಹಾಗೂ ಕಾರ್ಯಕರ್ತರು ಸಂಭ್ರಮ ಆಚರಿಸಿದರು.

ಮೈಸೂರು ಜಿಲ್ಲಾ ಕಾಂಗ್ರೆಸ್ ಸಮಿತಿ ಅಧ್ಯಕ್ಷ ಡಾ.ಬಿ.ಜೆ.ವಿಜಯ್‌ಕುಮಾರ್ ನೇತೃತ್ವದಲ್ಲಿ ನಗರ ಪ್ರಧಾನ ಕಾರ್ಯದರ್ಶಿ ಎಂ.ಶಿವಣ್ಣ, ಡೈರಿ ವೆಂಕಟೇಶ್, ಮೊಸಿನ್ ಖಾನ್, ಬಸವಣ್ಣ, ತಿಮ್ಮರಾಜು ಸೇರಿದಂತೆ ಹಲವು ಮುಖಂಡರು ಪಕ್ಷದ ಬಾವುಟ ಹಿಡಿದು, ಮುಖ್ಯಮಂತ್ರಿ ಸಿದ್ದರಾಮಯ್ಯ, ಉಪಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್, ಎಐಸಿಸಿ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ ಅವರಿಗೆ ಜೈಕಾರ ಹಾಕಿದರು. ಇದೇ ವೇಳೆ ಪರಸ್ಪರ ಸಿಹಿ ಹಂಚಿಕೊಂಡರಲ್ಲದೆ, ರಸ್ತೆಗೆ ಬಂದು ಬಸ್ ಪ್ರಯಾಣಿಕರಿಗೂ ಸಿಹಿ ಹಂಚಿ, ಸಂಭ್ರಮಿಸಿದರು.

ಓಬಿಸಿ ಘಟಕದ ಸಂತಸ: ನಗರ ಕಾಂಗ್ರೆಸ್ ಹಿಂದುಳಿದ ವರ್ಗದ(ಓಬಿಸಿ) ಘಟಕದ ವತಿಯಿಂದ ಪ್ರತ್ಯೇಕವಾಗಿ ವಿಜಯೋತ್ಸವ ಆಚರಿಸಿ, ಸಿಹಿ ಹಂಚಲಾಯಿತು. ಕಾಂಗ್ರೆಸ್ ನಾಯಕರಿಗೆ ಜೈಕಾರ ಹಾಕಿ ಸಂಭ್ರಮಿಸಲಾಯಿತು.

ಈ ವೇಳೆ ಓಬಿಸಿ ನಗರ ಘಟಕದ ಅಧ್ಯಕ್ಷ ಎನ್.ಆರ್.ನಾಗೇಶ್ ಮಾತನಾಡಿ, ಮೂರು ಕ್ಷೇತ್ರಗಳ ಉಪಚುನಾವಣೆ ಗೆಲುವಿಗೆ ಶೋಷಿತ ಸಮುದಾಯದ ಬೆಂಬಲ ಮಹತ್ವದ್ದಾಗಿದೆ. ಸಾಮಾಜಿಕ ನ್ಯಾಯದ ಪರವಾಗಿರುವ ಮುಖ್ಯಮಂತ್ರಿ ಸಿದ್ದರಾಮಯ್ಯ ಹಾಗೂ ಉಪಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ನೇತೃತ್ವದ ಸರ್ಕಾರದ ಮೇಲೆ ಜನತೆಯಲ್ಲಿರುವ ವಿಶ್ವಾಸಕ್ಕೆ ಈ ಫಲಿತಾಂಶವೇ ಸಾಕ್ಷಿಯಾಗಿದೆ. ಸುಳ್ಳು ಆರೋಪಗಳ ಮೂಲಕ ಸರ್ಕಾರವನ್ನು ಟೀಕಿಸುವವರಿಗೆ ಜನ ಸರಿಯಾದ ಉತ್ತರ ನೀಡಿದ್ದಾರೆ ಎಂದರು. ಈ ವೇಳೆ ಓಬಿಸಿ ಘಟಕದ ಎಂ.ಎಲ್. ಗೋಪಾಲ್, ಕಮಲ, ಅನಂತರಾಮ್, ಚಂದ್ರು, ವಿಶ್ವಕರ್ಮ, ರವಿ, ಮಹೇಂದ್ರ ಲಕ್ಷ್ಮೀನಾರಾಯಣ, ಲೋಕೇಶ್ ಕುಮಾರ್, ಹರೀಶ್ ರೆಡ್ಡಿ, ದಿನೇಶ್, ರವಿ, ದಿನೇಶ, ಲಕ್ಷ್ಮೀಶ ಮಂಗಳ, ಶಾಂತಮ್ಮ, ಮಂಜುಳಾ ಮತ್ತಿತರರು ಇದ್ದರು.

ಮನೆಯನ್ನೂ ದೋಚಿ; ಜೊತೆಗೆ ಕಾರನ್ನು ಕದ್ದೊಯ್ದ ಖದೀಮರು!

ಮೈಸೂರು ಹೊರವಲಯದಲ್ಲಿ ಘಟನೆ

ಮೈಸೂರು, ನ.23(ಎಸ್‌ಬಿಡಿ)– ಮನೆಗೆ ನುಗ್ಗಿ ಬೆಳ್ಳಿ ಪದಾರ್ಥಗಳನ್ನು ದೋಚಿದ ಖದೀಮರು, ಅಲ್ಲಿದ್ದ ಕೀ ತೆಗೆದುಕೊಂಡು ಕಾರನ್ನೂ ಕದ್ದೊಯ್ದಿರುವ ಘಟನೆ ಮೈಸೂರು ಸಮೀಪದ ನಾಡನಹಳ್ಳಿಯಲ್ಲಿ ನಡೆದಿದೆ.

ನಂಜನಗೂಡಿನಲ್ಲಿ ಕೆಇಬಿ ಮೀಟರ್ ರೀಡಿಂಗ್ ಆಗಿ ಕಾರ್ಯ ನಿರ್ವಹಿಸುತ್ತಿರುವ ನಾಡನಹಳ್ಳಿ ಕಪಿಲಾ ಲೇಔಟ್‌ನ ಶ್ರೀನಿವಾಸಮೂರ್ತಿ ಹಾಗೂ ಸಂಗೀತ ದಂಪತಿ ಮನೆಯಲ್ಲಿ ಈ ಘಟನೆ ನಡೆದಿದ್ದು, ಸುಮಾರು 31 ಸಾವಿರ ರೂ. ಮೌಲ್ಯದ ಬೆಳ್ಳಿ ಪದಾರ್ಥಗಳು ಹಾಗೂ ಟಾಟಾ ಇಂಡಿಕಾ ಕಾರನ್ನು ಖದೀಮರು ಕದ್ದೊಯ್ದಿದ್ದಾರೆ.

ಕಾರ್ಯಸ್ಥಳವಾದ ನಂಜನಗೂಡಿನಲ್ಲೂ ದಂಪತಿ ಬಾಡಿಗೆ ಮನೆ ಮಾಡಿಕೊಂಡಿದ್ದು, ವಾರದಲ್ಲಿ ಮೂರು ದಿನ ಮೈಸೂರಿನ ನಿವಾಸದಲ್ಲಿರುತ್ತಾರೆ. ನ.14ರಂದು ಮೈಸೂರು ನಿವಾಸದಿಂದ ಮಹಾರಾಷ್ಟ್ರದ ಪಂಡರಾಪುರ ವಿಠಲ–ರುಕ್ಮಿಣಿ ದೇವಸ್ಥಾನಕ್ಕೆ ಹೋಗಿದ್ದರು. ನ.17ರಂದು ವಾಪಸ್ಸಾಗಿ ನಂಜನಗೂಡು ನಿವಾಸದಲ್ಲಿ ತಂಗಿದ್ದರು. ಎಂದಿನಂತೆ ನಾಲ್ಕು ದಿನದ ಬಳಿಕ ನ.21ರಂದು ಸಂಜೆ ಮೈಸೂರಿನ ಮನೆಗೆ ಬಂದಾಗ ಕಳ್ಳತನ ನಡೆದಿರುವುದು ತಿಳಿಯಿತು.

ಮನೆಯ ಗೇಟ್ ಹಾಗೂ ಮುಂಬಾಗಿಲು ತೆರೆದಿತ್ತಲ್ಲದೆ ಅಲ್ಲಿ ನಿಲ್ಲಿಸಿದ್ದ ಕಾರು ನಾಪತ್ತೆಯಾಗಿತ್ತು. ಗಾಬರಿಯಿಂದ ಒಳಹೋದಾಗ ಕೊಠಡಿಯಲ್ಲಿದ್ದ ವಸ್ತುಗಳೆಲ್ಲಾ ಚೆಲ್ಲಾಪಿಲ್ಲಿಯಾಗಿ ಬಿದ್ದಿದ್ದವು. ಬೀರುವಿನಲ್ಲಿದ್ದ ಬೆಳ್ಳಿಯ ದೀಪಗಳು, ತಟ್ಟೆ ಹಾಗೂ ಕಂಚಿನ ದೀಪಗಳು ಕಳುವಾಗಿದ್ದವು. ಅಲ್ಲದೆ ಟಿವಿ ಶೋಕೇಸ್ ಬಳಿ ಇಟ್ಟಿದ್ದ ಕಾರಿನ ಕೀ ಇರಲಿಲ್ಲ. ಬೆಳ್ಳಿ ಹಾಗೂ ಕಂಚಿನ ವಸ್ತುಗಳ ಜೊತೆಗೆ ಮನೆಯಲ್ಲಿದ್ದ ಕೀ ತೆಗೆದುಕೊಂಡು ಕಾರನ್ನೂ ಕದ್ದೊಯ್ದಿದ್ದಾರೆ ಎಂದು ಶ್ರೀನಿವಾಸಮೂರ್ತಿ ಪೊಲೀಸರಿಗೆ ನೀಡಿರುವ ದೂರಿನಲ್ಲಿ ತಿಳಿಸಿದ್ದಾರೆ. ಈ ಸಂಬಂಧ ಆಲನಹಳ್ಳಿ ಠಾಣೆ ಪೊಲೀಸರು ಪ್ರಕರಣ ದಾಖಲಿಸಿಕೊಂಡು, ಖದೀಮರ ಪತ್ತೆಗೆ ಕ್ರಮ ಕೈಗೊಂಡಿದ್ದಾರೆ.


ಇಂದು ಸೋಮೇಶ್ವರ ದೇವಸ್ಥಾನದ ವಾರ್ಷಿಕೋತ್ಸವ

ಮೈಸೂರು, ನ.23–ಮೈಸೂರಿನ ಬನ್ನಿಮಂಟಪ ಹುಡ್ಕೋ ಒಂದನೇ ಹಂತದಲ್ಲಿರುವ ಶ್ರೀ ಸೋಮೇಶ್ವರ ಸ್ವಾಮಿ ದೇವಸ್ಥಾನದ 25ನೇ ವಾರ್ಷಿಕೋತ್ಸವ ನಾಳೆ (ನ.24) ನಡೆಯಲಿದೆ.

ಬೆಳಗ್ಗೆ 6 ಗಂಟೆಗೆ ಸಲ್ಲುವ ಶುಭ ಮುಹೂರ್ತದಲ್ಲಿ ಗಂಗಾ ಪೂಜೆ, ಮಹಾಗಣಪತಿ ಪೂಜೆಯೊಂದಿಗೆ ಪುಣ್ಯಾಹ, ಕಲಶ ಸ್ಥಾಪನೆ, ನವಗ್ರಹ, ಮೃತ್ಯುಂಜಯ, ರುದ್ರ ತ್ರಿಶತಿ ಕಲಾ ಹೋಮಗಳೊಂದಿಗೆ ಪೂಜೆಗಳು ಆರಂಭವಾಗುವುದು. 11 ಗಂಟೆಗೆ ಪೂರ್ಣಾಹುತಿ, ಮಧ್ಯಾಹ್ನ 12 ಗಂಟೆಗೆ ಮಹಾ ಮಂಗಳಾರತಿ, ತೀರ್ಥಪ್ರಸಾದ ಹಾಗೂ ಪ್ರಸಾದ ವಿನಿಯೋಗ ನಡೆಯಲಿದೆ.

ದೇಶ - ವಿದೇಶ

ಪಾಸ್‌ಪೋರ್ಟ್ ಇಂಡೆಕ್ಸ್‌ನಲ್ಲಿ ಕುಸಿದ ಪಾಕಿಸ್ತಾನ



ಇಸ್ಲಾಮಾಬಾದ್: ಹೆನ್ಲಿ ಪಾಸ್‌ಪೋರ್ಟ್ ಇಂಡೆಕ್ಸ್ ಪ್ರಕಟವಾಗಿದ್ದು, ಪಾಕಿಸ್ತಾನದ ರ‍್ಯಾಂಕಿಂಗ್ ಭಾರಿ ಪ್ರಮಾಣದಲ್ಲಿ ಕುಸಿದಿದೆ. ಯೆಮೆನ್ ಜೊತೆ 103ನೇ ಸ್ಥಾನವನ್ನು ಹಂಚಿಕೊಂಡಿರುವ ಪಾಕಿಸ್ತಾನದ ಕೆಳಗಡೆ ಕೇವಲ ಇರಾಕ್, ಸಿರಿಯಾ ಹಾಗೂ ಅಫ್ಘಾನಿಸ್ತಾನ ರಾಷ್ಟ್ರಗಳು ಇವೆ. ಈ ಪಟ್ಟಿಯಲ್ಲಿ ಪಾಕಿಸ್ತಾನಕ್ಕಿಂತ ಉತ್ತಮ ಸ್ಥಾನದಲ್ಲಿ ಸೋಮಾಲಿಯಾ, ನೇಪಾಳ, ಬಾಂಗ್ಲಾದೇಶ, ಪ್ಯಾಲೆಸ್ತೀನ್, ಎರಿಟ್ರಿಯಾ, ಸುಡಾನ್, ಇರಾನ್ ಮತ್ತು ಲಿಬಿಯಾಗಳು ಇರುವುದು ಪಾಕಿಸ್ತಾನದ ಶೋಚನೀಯ ಸ್ಥಿತಿಯನ್ನು ತೋರಿಸುತ್ತಿದೆ. ರಾಜಕೀಯ ಅಸ್ಥಿರತೆ, ಆರ್ಥಿಕ ಸವಾಲುಗಳು ಮತ್ತು ರಾಜತಾಂತ್ರಿಕ ಉದ್ವಿಗ್ನತೆಗಳು ದೇಶದ ಪಾಸ್‌ಪೋರ್ಟ್ ರ‍್ಯಾಂಕಿಂಗ್ ಮೇಲೆ ಪರಿಣಾಮ ಬೀರುತ್ತವೆ. ಹೆನ್ಲಿ ಪಾಸ್‌ಪೋರ್ಟ್ ಇಂಡೆಕ್ಸ್‌ನಲ್ಲಿ ಕಡಿಮೆ ರ‍್ಯಾಂಕಿಂಗ್ ಹೊಂದಿದ್ದರೆ, ಆ ದೇಶದ ನಾಗರಿಕರು ವೀಸಾ ಇಲ್ಲದೇ ಕೆಲವೇ ಕೆಲವು ದೇಶಗಳಿಗೆ ಮಾತ್ರ ಪ್ರಯಾಣಿಸಲು ಅವಕಾಶ ಇರಲಿದೆ. ಈಗ ಪಾಕಿಸ್ತಾನಿ ಪಾಸ್‌ಪೋರ್ಟ್ ಕೇವಲ 34 ದೇಶಗಳಿಗೆ ವೀಸಾ ಮುಕ್ತ ಪ್ರವೇಶವನ್ನು ಹೊಂದಿದ್ದು, ಈ ಸಂಖ್ಯೆಯೂ ಕಡಿತಗೊಳ್ಳುವ ಸಾಧ್ಯತೆ ಇದೆ. ಈಗಾಗಲೇ ಪಾಕಿಸ್ತಾನದ ಆರ್ಥಿಕತೆ ಕುಸಿದಿದ್ದು, ಹಣದುಬ್ಬರ ಮುಗಿಲು ಮುಟ್ಟಿದೆ.

ಕೋತಿ ಬಿದ್ದ ರಭಸಕ್ಕೆ ಮುರಿದ ಕಾರಿನ ಸನ್‌ರೂಫ್



ವಾರಣಾಸಿ: ಮನೆ ಮೇಲೆ ಕೂತಿದ್ದ ಕೋತಿಯೊಂದು ಹಾರಿ ಬಿದ್ದು ಕಾರಿನ ಸನ್ ರೂಫ್ ಧ್ವಂಸಗೊಳಿಸಿದ ಘಟನೆ ವಾರಣಾಸಿಯಲ್ಲಿ ನಡೆದಿದೆ. ಕೋತಿಗೆ ಯಾವುದೇ ಗಾಯಗಳಾಗಿಲ್ಲ, ಆದರೆ ಕಾರಿನ ಮಾಲೀಕರಿಗೆ ಸಾವಿರಾರು ರೂ. ನಷ್ಟವಾಗಿದೆ. ಈ ಘಟನೆಯ ವಿಡಿಯೋ ಸಾಮಾಜಿಕ ಜಾಲತಾಣದಲ್ಲಿ ವೈರಲ್ ಆಗಿದೆ.

ಸಿಸಿಟಿವಿಯಲ್ಲಿ ಸೆರೆಯಾಗಿರುವ ಈ ದೃಶ್ಯಾವಳಿಯಲ್ಲಿ ಕಾಣಿಸುತ್ತಿರುವಂತೆ ರಸ್ತೆಬದಿ ನಿಲ್ಲಿಸಿದ್ದ ಕಾರಿನ ಮೇಲೆ ಕೋತಿಯೊಂದು ಮನೆಯೊಂದರ ಎತ್ತರದಿಂದ ಕೆಳಗೆ ಹಾರಿದೆ. ಸೀದಾ ಬಂದು ಅದು ಕಾರಿನ ಸನ್‌ರೂಫ್ ಮೇಲೆ ಬಿದ್ದಿದ್ದು, ಸನ್ ರೂಫ್ ಕುಸಿದು ಕೋತಿ ಕಾರಿನ ಒಳಗೆ ಬಿದ್ದಿದೆ. ಕೂಡಲೇ ಕೋತಿ ಸನ್ ರೂಪ್ ಮುರಿದ ಜಾಗದಿಂದಲೇ ಕಾರೊಳಗಿನಿಂದ ಮೇಲೇರಿ ಬಂದು ಓಡಿದೆ. ಘಟನೆಯಲ್ಲಿ ಕೋತಿಗೇನು ಗಾಯವಾಗಿಲ್ಲ, ಆದರೆ ಕಾರಿನ ಸನ್‌ರೂಫ್ ಮುರಿದಿದ್ದರಿಂದ ಕಾರಿನ ಮಾಲೀಕನಿಗೆ ಮಾತ್ರ ಸಾವಿರಾರು ರೂ.ಗಳ ವೆಚ್ಚ ಬಂದಿದೆ. ಈ ಹಾನಿಯನ್ನು ಸರಿಪಡಿಸಲು ಮಾಲೀಕರಿಗೆ ಎಷ್ಟು ಹಣ ಬೇಕಾಗಬಹುದು ಎಂದು ಪ್ರಶ್ನೆ ಕೇಳಿದರೆ, ಮತ್ತೆ ಕೆಲವರು ಈ ತೊಂದರೆಗೆ ಇನ್ಸ್ಯುರೆನ್ಸ್ ಕಂಪನಿಗಳು ವಿಮೆ ನೀಡುತ್ತವೆಯೇ ಎಂದು ಪ್ರಶ್ನೆ ಮಾಡಿದ್ದಾರೆ.

ಗೂಗಲ್ ಸರ್ಚ್ ಎಂಜಿನ್ ಕ್ರೋಮ್ ಮಾರಾಟ?

ವಾಷಿಂಗ್ಟನ್: ವಿಶ್ವದ ಅತೀ ಜನಪ್ರಿಯ ಅಂತರ್ಜಾಲ ಸರ್ಚ್ ಎಂಜಿನ್ ಗೂಗಲ್ ಕ್ರೋಮ್‌ನ್ನು ಅಮೆರಿಕದ ಅಧಿಕಾರಿಗಳು ಒತ್ತಾಯಪೂರ್ವಕವಾಗಿ ಮಾರಾಟ ಮಾಡಿಸುವ ಸಾಧ್ಯತೆ ಇದೆ. ಅಂತರ್ಜಾಲದಲ್ಲಿ ಗೂಗಲ್ ಸರ್ಚ್ ಎಂಜಿನ್ ಕ್ರೋಮ್ ಮಾರುಕಟ್ಟೆಯಲ್ಲಿ ಏಕ ಸ್ವಾಮ್ಯವನ್ನು ಸಾಧಿಸಿರುವ ಹಿನ್ನೆಲೆಯಲ್ಲಿ ಅಮೆರಿಕದ ನ್ಯಾಯಾಂಗ ಇಲಾಖೆ ಅಧಿಕಾರಿಗಳು ಒತ್ತಾಯಪೂರ್ವಕವಾಗಿ ಮಾರಾಟ ಮಾಡಿಸಲು ಅಲ್ಲಿನ ಸುಪ್ರೀಂಕೋರ್ಟ್‌ಗೆ ಕಳೆದ ತಿಂಗಳು ಪ್ರಸ್ತಾವನೆ ಸಲ್ಲಿಸಿದ್ದಾರೆ ಎನ್ನಲಾಗಿದೆ. ಅಮೆರಿಕದಲ್ಲಿ ವ್ಯಾಪಾರ ಏಕಸ್ವಾಮ್ಯಕ್ಕೆ ಅವಕಾಶವಿಲ್ಲ. ಆದರೆ ಗೂಗಲ್ ಕ್ರೋಮ್ ಸರ್ಚ್ ಎಂಜಿನ್ ಮಾರುಕಟ್ಟೆಯಲ್ಲಿ ಜಗತ್ತಿನಾದ್ಯಂತ ಶೇ.90 ಹಿಡಿತವನ್ನು ಹೊಂದಿದೆ. ಒಂದು ವೇಳೆ ಅಲ್ಲಿನ ಕೋರ್ಟ್ ಮಾರಾಟ ಪ್ರಸ್ತಾವನೆ ಒಪ್ಪಿಕೊಂಡರೆ ಗೂಗಲ್ ಕ್ರೋಮ್ ಮೂಲ ಕಂಪನಿ ಅಲ್ಫಾಬೆಟ್ ತನ್ನ ಸರ್ಚ್ ಎಂಜಿನ್ ಮಾರಾಟ ಮಾಡುವುದು ಅನಿವಾರ್ಯವಾಗಲಿದೆ. ಕಂಪನಿ ಮೌಲ್ಯ 1.6 ಲಕ್ಷ ಕೋಟಿ ರೂ. (20 ಬಿಲಿಯನ್ ಡಾಲರ್) ಎಂದು ಅಂದಾಜಿಸಲಾಗಿದೆ. ಟ್ರಂಪ್ ಮೊದಲ ಅವಧಿಯಿಂದ ಜೋ ಬಿಡೆನ್ ಕಾಲದವರೆಗೆ ಗೂಗಲ್ ಕಾನೂನು ಹೋರಾಟ ಎದುರಿಸುತ್ತಲೇ ಇದೆ. ಜತೆಗೆ ಯಾವುದೇ ಕಾನೂನು ಹೋರಾಟಕ್ಕೆ ಸಿದ್ಧ ಎಂದು ಗೂಗಲ್ ಉನ್ನತ ಅಧಿಕಾರಿಗಳು ತಿಳಿಸಿದ್ದಾರೆ.

ಕೂಲಿ ಕೆಲಸ ಮಾಡುತ್ತಲೇ ಹೈ ಸ್ಕೋರ್‌ನಲ್ಲಿ ನೀಟ್ ಪಾಸಾದ ಯುವಕ

ಪಶ್ಚಿಮ ಬಂಗಾಳ: ಯಾವುದೇ ತರಬೇತಿ ಸವಲತ್ತುಗಳಿಲ್ಲದೆ ಪಶ್ಚಿಮ ಬಂಗಾಳ ಮೂಲದ 21 ವರ್ಷದ ಸರ್ಫರಾಜ್ 2024ರ ನೀಟ್ ಪರೀಕ್ಷೆಯಲ್ಲಿ 720 ಅಂಕಗಳಲ್ಲಿ 677 ಅಂಕ ಗಳಿಸುವ ಮೂಲಕ ಟ್ಯೂಷನ್ ಪಡೆದ ವಿದ್ಯಾರ್ಥಿಯೂ ದಾಖಲಿಸದಂತಹ ಅತ್ಯುನ್ನತ ಸ್ಕೋರ್ ದಾಖಲಿಸಿದ್ದಾನೆ. ಈತನ ಈ ಸಾಧನೆಯ ಸ್ಟೋರಿಯನ್ನು ಇನ್ಸ್ಟಾಗ್ರಾಮ್‌ನಲ್ಲಿ 'ಫಿಸಿಕ್ಸ್ ವಾಲಾ'ದ ಫೌಂಡರ್ ಆಗಿರುವ ಅಲ್ಖಾ ಪಾಂಡೆ ಎಂಬುವವರು ಪೋಸ್ಟ್ ಮಾಡಿದ್ದು, ಪಶ್ಚಿಮ ಬಂಗಾಳದ ಪುಟ್ಟ ಗ್ರಾಮವೊಂದರಿಂದ ಬಂದ ಸರ್ಫರಾಜ್ ದಿನಕ್ಕೆ 300 ರೂ. ಸಂಬಳಕ್ಕೆ 400 ಇಟ್ಟಿಗೆಗಳನ್ನು ಹೊರುತ್ತ ದಿನಗೂಲಿ ಕೆಲಸ ಮಾಡುತ್ತಿದ್ದ. ಕೋವಿಡ್ ಸಮಯದಲ್ಲಿ ಸರ್ಫರಾಜ್ ವೈದ್ಯನಾಗುವ ಕನಸಿಗೆ ತಿರುವು ಸಿಕ್ಕಿತ್ತು. ಸರ್ಕಾರ ನೀಡಿದ ಹಣಕಾಸಿನ ಸಹಾಯದಿಂದ ಸ್ಮಾರ್ಟ್‌ಫೋನೊಂದನ್ನು ಖರೀದಿಸಿದ ಸರ್ಫರಾಜ್ ಯೂಟ್ಯೂಬ್‌ನಲ್ಲಿ ಫಿಸಿಕ್ಸ್ ವಾಲಾದ ಉಚಿತ ಪಾಠಗಳನ್ನು ಕೇಳುತ್ತಾ, ಸ್ವಂತವಾಗಿ ಅಧ್ಯಯನ ಮಾಡಲು ಶುರು ಮಾಡಿದ್ದರು. ಪರಿಣಾಮ ನೀಟ್ ಪರೀಕ್ಷೆಯನ್ನು ಅತ್ಯುನ್ನತ ದರ್ಜೆಯಲ್ಲಿ ಪಾಸ್ ಮಾಡಿದ್ದಾರೆ. 2023ರಲ್ಲಿ ಸರ್ಫರಾಜ್ ದಂತ ವೈದ್ಯಕೀಯ ಕೋರ್ಸ್‌ಗೆ ಸೇರಿದ್ದರು. ನಂತರ 2024ರಲ್ಲಿ ಮತ್ತೆ ನೀಟ್ ಬರೆದ ಸರ್ಫರಾಜ್ ಜನ ಮೆಚ್ಚುವ ಸಾಧನೆ ಮಾಡಿದ್ದಾರೆ.

ವಿಶ್ವದ ಅತೀ ಎತ್ತರ, ಅತೀ ಕುಳ್ಳ ಮಹಿಳೆಯರ ಸಮಾಗಮ

ಲಂಡನ್: ವಿಶ್ವದ ಅತೀ ಎತ್ತರದ ಟರ್ಕಿ ಮಹಿಳೆ ಮತ್ತು ಅತ್ಯಂತ ಕುಳ್ಳ ಭಾರತದ ಮಹಿಳೆಯರ ಸಮಾಗಮ ವಾಗಿದ್ದು, ಇದರ ವಿಡಿಯೋ ವೈರಲ್ ಆಗಿದೆ. 7 ಅಡಿ 1 ಇಂಚು ಎತ್ತರ ಇರುವ 27 ವರ್ಷದ ರುಮೇಸಾ ಹಾಗೂ 2 ಅಡಿ 1 ಇಂಚು ಇರುವ 30 ವರ್ಷದ ಜ್ಯೋತಿ ಅಮ್ಗೆ. ಇವರಿಬ್ಬರೂ ವಿಶ್ವದ ಅತೀ ಎತ್ತರ ಮತ್ತು ಅತೀ ಕುಳ್ಳಗಿರುವ ಯುವತಿಯರು. ಗಿನ್ನೆಸ್ ದಾಖಲೆಗಳಲ್ಲಿ ಹೆಸರು ಪಡೆದಿರುವ ಈ ಯುವತಿಯರು ಪರಸ್ಪರ ಭೇಟಿಯಾಗುವ ಅಪರೂಪದ ಕ್ಷಣಕ್ಕೆ ಲಂಡನ್‌ನ ಪ್ರತಿಷ್ಠಿತ ಸವೊಯ್ ಹೋಟೆಲ್ ಸಾಕ್ಷಿಯಾಯಿತು. ಇವರಿಬ್ಬರೂ ಚಹಾ ಸವಿಯುತ್ತಾ ತಮ್ಮ ಜೀವನದ ಕಥೆ ಮತ್ತು ಅನುಭವಗಳನ್ನು ಹಂಚಿಕೊಂಡಿದ್ದಾರೆ. ಈ ವಿಡಿಯೋವನ್ನು ಇನ್‌ಸ್ಟಾಗ್ರಾಮ್ ಖಾತೆಯಲ್ಲಿ ಹಂಚಿಕೊಳ್ಳಲಾಗಿದೆ.

2024ರ ಗಿನ್ನೆಸ್ ವಿಶ್ವ ದಾಖಲೆಯ ದಿನವನ್ನು ಆಚರಿಸುವ ಸಲುವಾಗಿ ಇಂಥದ್ದೊಂದು ಭೇಟಿಯನ್ನು ಆಯೋಜಿಸಲಾಗಿತ್ತು. ವಿಶ್ವದ ಅತೀ ಎತ್ತರದ ಹಾಗೂ ಅತೀ ಕುಬ್ಜ ಮಹಿಳೆಯರು ಭೇಟಿಯಾಗುವ ಮೂಲಕ ಮತ್ತೊಮ್ಮೆ ದಾಖಲೆ ಪುಟ ಸೇರಿದ್ದಾರೆ. ಟರ್ಕಿಯಲ್ಲಿ ವಾಸಿಸುತ್ತಿರುವ ರುಮೇಸಾ ಅವರು ವಿಶ್ವದ ಅತಿ ಎತ್ತರದ ಮಹಿಳೆ, ಆಗಿದ್ದು, ಅವರು ವೆಬ್ ಡೆವಲಪರ್ ಆಗಿದ್ದಾರೆ. ಸೆಂಟಿ ಮೀಟರ್ ಲೆಕ್ಕದಲ್ಲಿ ಹೇಳುವುದಾದರೆ, 215.16 ಸೆಂ.ಮೀ. ಇನ್ನು ಜ್ಯೋತಿ ಅವರು ಭಾರತದವರೇ ಆಗಿದ್ದು, ಅವರ ಎತ್ತರ 2 ಅಡಿ 1 ಇಂಚು ಅರ್ಥಾತ್ 62.8 ಸೆಂಟಿ ಮೀಟರ್.

ಫೀ.ಮಾ.ಕೆ.ಎಂ.ಕಾರ್ಯಪ್ಪ, ಜನರಲ್ ಕೆ.ಎಸ್.ತಿಮ್ಮಯ್ಯನವರ ಬಗ್ಗೆ ಅವಹೇಳನಕಾರಿ ಹೇಳಿಕೆ

ವಕೀಲ ವಿದ್ಯಾಧರ್ ಬಂಧನ


ಕೆ.ಆರ್.ವಿದ್ಯಾಧರ್

ಮಡಿಕೇರಿ, ನ.23–ವಿಶ್ವದಾದ್ಯಂತ ಗೌರವಕ್ಕೆ ಪಾತ್ರರಾಗಿರುವ ಕೊಡಗಿನ ವೀರ ಪುತ್ರರಾದ ಫೀಲ್ಡ್ ಮಾರ್ಷಲ್ ಕೆ.ಎಂ.ಕಾರ್ಯಪ್ಪ ಮತ್ತು ಜನರಲ್ ಕೆ.ಎಸ್.ತಿಮ್ಮಯ್ಯ ಅವರ ಕುರಿತು, ಸಾಮಾಜಿಕ ಜಾಲತಾಣದಲ್ಲಿ ಆಕ್ಷೇಪಾರ್ಹ ಹೇಳಿಕೆ ನೀಡಿದ ಪ್ರಕರಣಕ್ಕೆ ಸಂಬಂಧಿಸಿದಂತೆ ವಕೀಲರಾದ ಕೆ.ಆರ್. ವಿದ್ಯಾಧರ್(66) ಎಂಬುವರನ್ನು ಬಂಧಿಸಿರುವುದಾಗಿ ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಕೆ.ರಾಮರಾಜನ್ ಸ್ಪಷ್ಟಪಡಿಸಿದ್ದಾರೆ.

ತಮ್ಮ ಕಚೇರಿಯಲ್ಲಿ ಕರೆದಿದ್ದ ಸುದ್ದಿಗೋಷ್ಠಿಯಲ್ಲಿ ಈ ಕುರಿತು ಮಾಹಿತಿ ನೀಡಿದ ಅವರು, 'ಸಪ್ತ ಸಾಗರ(ಕಡಲು)' ಎನ್ನುವ ವಾಟ್ಸ್ ಅಪ್ ಗ್ರೂಪ್‌ನಲ್ಲಿ 'ಶ್ರೀವತ್ಸ ಭಟ್' ಹೆಸರಿನಲ್ಲಿ ಫೀ.ಮಾ.ಕಾರ್ಯಪ್ಪ ಮತ್ತು ಜನರಲ್ ತಿಮ್ಮಯ್ಯ ಅವರ ವಿರುದ್ಧ ಆಕ್ಷೇಪಾರ್ಹ ಹೇಳಿಕೆಯನ್ನು ಪೋಸ್ಟ್ ಮಾಡಲಾಗಿತ್ತು. ಈ ಸಂಬಂಧ ಸುಂಟಿಕೊಪ್ಪ ಠಾಣೆಯಲ್ಲಿ ಶುಕ್ರವಾರ ಸ್ವಯಂಪ್ರೇರಿತವಾಗಿ ಪ್ರಕರಣವನ್ನು ಪೊಲೀಸ್ ಇಲಾಖೆ ದಾಖಲಿಸಿಕೊಳ್ಳಲಾಗಿತ್ತು ಎಂದು ಮಾಹಿತಿ ನೀಡಿದರು.

ಪ್ರಕರಣದ ಬಗ್ಗೆ ತನಿಖೆ ನಡೆಸಿದಾಗ ಸಪ್ತಸಾಗರ(ಕಡಲು) ವಾಟ್ಸ್ ಅಪ್ ಗ್ರೂಪ್‌ನಲ್ಲಿ 'ಶ್ರೀವತ್ಸ ಭಟ್' ಹೆಸರಿನಲ್ಲಿ ಹೇಳಿಕೆ ಪೋಸ್ಟ್ ಮಾಡಿರುವ ವ್ಯಕ್ತಿ ಸುಳ್ಯ ತಾಲೂಕಿನ ಹಾಲೆಟ್ಟಿ ಗ್ರಾಮದ ನಿವಾಸಿ, ಮಡಿಕೇರಿಯಲ್ಲಿ ವಕೀಲ ವೃತ್ತಿ ನಡೆಸುತ್ತಿರುವ ಕೆ.ಆರ್. ವಿದ್ಯಾಧರ(66) ಎನ್ನುವುದು ಖಚಿತವಾಯಿತು. ಇದರ ಆಧಾರದಲ್ಲಿ 'ವಕೀಲರ ಸಂರಕ್ಷಣಾ ಕಾಯ್ದೆಯ' ಅನ್ವಯ ಮಡಿಕೇರಿ ವಕೀಲರ ಸಂಘಕ್ಕೆ ಮಾಹಿತಿ ನೀಡಿ ಕಾನೂನು ಬದ್ಧವಾಗಿ ವಕೀಲ ವಿದ್ಯಾಧರ್ ಅವರನ್ನು ಬಂಧಿಸಿ, ಮ್ಯಾಜಿಸ್ಟ್ರೇಟ್ ಅವರ ಮುಂದೆ ಹಾಜರುಪಡಿಸಲಾಗಿದೆ. ಬಳಿಕ ಅವರು ಜಾಮೀನಿನ ಮೇರೆ ಬಿಡುಗಡೆಯಾಗಿರುವುದಾಗಿ ವಿವರಿಸಿದರು.

ಬೇರೊಬ್ಬರ 'ಸಿಮ್' ಬಳಕೆ: ಸಪ್ತಸಾಗರ (ಕಡಲು) ವಾಟ್ಸ್ ಅಪ್ ಗ್ರೂಪ್‌ನಲ್ಲಿದ್ದ ಕೆ.ಆರ್. ವಿದ್ಯಾಧರ್, ಕಿರಿಯ ಮಹಿಳಾ ವಕೀಲರೊಬ್ಬರ ಹೆಸರಿನಲ್ಲಿದ್ದ 'ಸಿಮ್' ಬಳಕೆ ಮಾಡುತ್ತಿದ್ದರು. ವಾಟ್ಸ್ ಗ್ರೂಪ್‌ನಲ್ಲಿ ವೀರ ಸೇನಾನಿಗಳ ಕುರಿತು ನೀಡಿರುವ ಹೇಳಿಕೆಯನ್ನು ತಾನೆ ನೀಡಿದ್ದು ಎಂದು ವಿಚಾರಣೆ ವೇಳೆ ವಕೀಲ ವಿದ್ಯಾಧರ್ ಅವರು ಒಪ್ಪಿಕೊಂಡಿರುವುದಾಗಿ ಎಸ್.ಪಿ. ರಾಮರಾಜನ್ ಮಾಹಿತಿ ನೀಡಿದರು.



ವೀರ ಸೇನಾನಿಗಳ ಬಗ್ಗೆ ಅವಹೇಳನ ಮಾಡಿರುವ ಪ್ರಕರಣದ ತನಿಖೆ ನಡೆಸಿದ ಸಂದರ್ಭ ಸುಂಟಿಕೊಪ್ಪ ವ್ಯಾಪ್ತಿಯಲ್ಲಿ ಮೂಲ ಸಾಕ್ಷಿ ಪತ್ತೆಯಾಗಿತ್ತು. ಈ ಹಿನ್ನೆಲೆಯಲ್ಲಿ ಸುಂಟಿಕೊಪ್ಪ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಿಸಲಾಗಿದೆ. ಆ ಠಾಣೆಯ ಮೂಲಕವೇ ಆರೋಪಿಯ ವಿಚಾರಣೆ ನಡೆಸಲಾಗಿದೆ.


– ಕೆ.ರಾಮರಾಜನ್, ಎಸ್.ಪಿ. ಕೊಡಗು

ಸುದ್ದಿಗಾರರ ಪ್ರಶ್ನೆಯೊಂದಕ್ಕೆ ಉತ್ತರಿಸಿದ ಅವರು, ಸಪ್ತಸಾಗರ(ಕಡಲು) ವಾಟ್ಸ್ ಅಪ್ ಗ್ರೂಪ್‌ನಲ್ಲಿ 20 ಮಂದಿ 'ಅಡ್ಮಿನ್' ಗಳಿದ್ದಾರೆ. ಆಯಾ ಗ್ರೂಪ್‌ನಲ್ಲಿನ ಹೇಳಿಕೆಗಳಿಗೆ ಅವರು ಜವಾಬ್ದಾರರಾಗುತ್ತಾರೆ. ಆದರೆ ಸಾಕಷ್ಟು ಸಂದೇಶಗಳು ಇರುವಾಗ ಅದನ್ನು ಗಮನಿಸಲು ಎಲ್ಲ ಅಡ್ಮಿನ್‌ಗಳಿಗೆ ಸಾಧ್ಯವಾಗುವುದಿಲ್ಲ. ಹೀಗಿದ್ದೂ ವಿದ್ಯಾಧರ್ ಅವರ ಹೇಳಿಕೆ ಮತ್ತು ಅದಕ್ಕೆ ಸಂಬಂಧಿಸಿದ ಮಾಹಿತಿಗಳನ್ನು ತನಿಖೆಗೆ ಒಳಪಡಿಸಲಾಗುತ್ತದೆ. ಅಗತ್ಯವಿದ್ದಲ್ಲಿ ಗ್ರೂಪ್ ಪ್ರಮುಖರ ಮೇಲೂ ತನಿಖೆ ನಡೆಸಲಾಗುತ್ತದೆ ಎಂದು ಸ್ಪಷ್ಟಪಡಿಸಿದರು. ವೀರ ಸೇನಾನಿಗಳ ಬಗ್ಗೆ ಅವಾಚ್ಯವಾಗಿ ಸಂದೇಶ ರವಾನಿಸಿದ್ದ ಆರೋಪಿಯ ಪತ್ತೆಗಾಗಿ ಸೋಮವಾರಪೇಟೆ ಡಿವೈಎಸ್‌ಪಿ ಆರ್.ವಿ.ಗಂಗಾಧರಪ್ಪ, ಕುಶಾಲನಗರ ಸಿಪಿಐ ರಾಜೇಶ್.ಕೆ, ಸುಂಟಿಕೊಪ್ಪ ಪಿಎಸ್‌ಐ ಚಂದ್ರಶೇಖರ್ ಹೆಚ್.ವಿ, ಅಪರಾಧ ಪತ್ತೆ ಹಾಗೂ ತಾಂತ್ರಿಕ ಸಿಬ್ಬಂದಿಗಳ ಒಳಗೊಂಡಂತೆ ವಿಶೇಷ ತನಿಖಾ ತಂಡವನ್ನು ರಚಿಸಿ ತನಿಖೆ ಕೈಗೊಳ್ಳಲಾಗಿತ್ತು ಎಂದು ತಿಳಿಸಿದರು.

ಸ್ವಯಂ ಪ್ರಕರಣ ದಾಖಲು: ಸಾರ್ವಜನಿಕವಾದ ಯಾವುದೇ ವಾಟ್ಸ್‌ಅಪ್ ಗ್ರೂಪ್‌ಗಳಲ್ಲಿ ಆಗು–ಹೋಗುಗಳ ಬಗ್ಗೆ, ಕೆಲಸ ಕಾರ್ಯಗಳ ಬಗ್ಗೆ ಮುಕ್ತವಾಗಿ ಅಭಿಪ್ರಾಯವನ್ನು ಹಂಚಿಕೊಳ್ಳುವುದು ಅವರವರ ಸ್ವಾತಂತ್ರ್ಯ. ಹೀಗಿದ್ದೂ, ಸಮಾಜದ ಶಾಂತಿಗೆ ಭಂಗವನ್ನು ಉಂಟು ಮಾಡುವ, ಕೋಮು ಸಾಮರಸ್ಯಕ್ಕೆ ಧಕ್ಕೆಯನ್ನು ಉಂಟು ಮಾಡುವ ಹೇಳಿಕೆಗಳನ್ನು ಯಾರೇ ಆಗಲಿ ಹರಿಬಿಟ್ಟಲ್ಲಿ ಪೊಲೀಸ್ ಇಲಾಖೆ ಸ್ವಯಂ ಪ್ರಕರಣ ದಾಖಲಿಸಿಕೊಳ್ಳುತ್ತದೆ ಎಂದು ಎಚ್ಚರಿಕೆ ನೀಡಿದರು. ಯಾವುದೇ ಒಂದು ಸಮುದಾಯದಲ್ಲಿ ಒಳ್ಳೆಯವರು ಮತ್ತು ಕೆಟ್ಟವರು ಇದ್ದೇ ಇರುತ್ತಾರೆ. ಸಮಾಜದ ಸಾಮರಸ್ಯವನ್ನು, ಶಾಂತಿಯನ್ನು ಕದಡುವ ಚಿಂತನೆಯಿಂದ ಹೇಳಿಕೆಗಳನ್ನು ನೀಡುವವರಿಗೆ ಸಮಾಜದ ಯಾರೊಬ್ಬರು ಬೆಂಬಲ ವ್ಯಕ್ತಪಡಿಸುವುದಿಲ್ಲ ಎಂದು ಎಸ್.ಪಿ. ರಾಮರಾಜನ್ ಅವರು ವಿಶ್ವಾಸ ವ್ಯಕ್ತಪಡಿಸಿದರು.

ಸುದ್ದಿಗೋಷ್ಠಿಯಲ್ಲಿ ಹೆಚ್ಚುವರಿ ಪೊಲೀಸ್ ವರಿಷ್ಠಾಧಿಕಾರಿ ಸುಂದರರಾಜ್ ಉಪಸ್ಥಿತರಿದ್ದರು.

ಫೀಲ್ಡ್ ಮಾರ್ಷಲ್ ಕಾರ್ಯಪ್ಪ ಪ್ರತಿಮೆ ಸ್ವಚ್ಛಗೊಳಿಸಿದ ಎನ್‌ಸಿಸಿ ಕೆಡೆಟ್‌ಗಳು


ಎನ್‌ಸಿಸಿ ಕೆಡೆಟ್‌ಗಳು ಕಾರ್ಯಪ್ಪ ಅವರ ಪ್ರತಿಮೆ ವ್ಯಾಪ್ತಿ ಸ್ವಚ್ಛಗೊಳಿಸುತ್ತಿರುವುದು.

ಮಡಿಕೇರಿ,ನ.23– ಎನ್‌ಸಿಸಿ ದಿನಾಚರಣೆ ಅಂಗವಾಗಿ ಕೊಡಗು ವಿದ್ಯಾಲಯದ ಎನ್‌ಸಿಸಿ ಕೆಡೆಟ್‌ಗಳು ನಗರದ ಫೀಲ್ಡ್ ಮಾರ್ಷಲ್ ಕಾರ್ಯಪ್ಪ ಅವರ ಪ್ರತಿಮೆಯನ್ನು ಸ್ವಚ್ಛಗೊಳಿಸಿದರು.

ನಗರದ ಮೈಸೂರು ರಸ್ತೆಯಲ್ಲಿನ ಫೀಲ್ಡ್ ಮಾರ್ಷಲ್ ಕಾರ್ಯಪ್ಪ ವೃತ್ತದ ಬಳಿ ಇರುವ ಫೀಲ್ಡ್ ಮಾರ್ಷಲ್ ಕಾರ್ಯಪ್ಪ ಪ್ರತಿಮೆಯನ್ನು ಶುಚಿಗೊಳಿಸಿ, ಈ ವ್ಯಾಪ್ತಿಯಲ್ಲಿದ್ದ ಕಾಡು ಗಿಡಗಳನ್ನು ಕಡಿದು, ಕುರುಚಲು ಗಿಡಗಳನ್ನು ತೆರವುಗೊಳಿಸಲಾಯಿತು.

40 ಕೆಡೆಟ್‌ಗಳು ಪಾಲ್ಗೊಂಡಿದ್ದ ಈ ಸ್ವಚ್ಛತಾ ಅಭಿಯಾನದಲ್ಲಿ ಕೊಡಗು ವಿದ್ಯಾಲಯದ ಪ್ರಾಂಶುಪಾಲೆ ಕೆ.ಎಸ್.ಸುಮಿತ್ರಾ ಆಡಳಿತಾಧಿಕಾರಿ ಪಿ.ರವಿ, 19 ಕರ್ನಾಟಕ ಬೆಟಾಲಿಯನ್ ಎನ್‌ಸಿಸಿ ಅಧಿಕಾರಿ ದಾಮೋದರ ಪಾಲ್ಗೊಂಡಿದ್ದರು.

ವಿರಾಜಪೇಟೆಯಲ್ಲಿ ಕಾಂಗ್ರೆಸ್ ವಿಜಯೋತ್ಸವ


ವಿರಾಜಪೇಟೆ ಪಟ್ಟಣದ ಗಡಿಯಾರ ಕಂಬದ ಬಳಿ ಕಾಂಗ್ರೆಸ್ ಕಾರ್ಯಕರ್ತರು ಪಟಾಕಿ ಸಿಡಿಸಿ, ವಿಜಯೋತ್ಸವ ಆಚರಿಸಿದರು.

ವಿರಾಜಪೇಟೆ, ನ.23– ವಿಧಾನಸಭಾ ಕ್ಷೇತ್ರದ ಚನ್ನಪಟ್ಟಣ, ಶಿಗ್ಗಾಂವಿ, ಸಂಡೂರು ಉಪಚುನಾವಣೆಯಲ್ಲಿ ಕಾಂಗ್ರೆಸ್ ಪಕ್ಷ ಜಯ ಸಾಧಿಸಿದ ಹಿನ್ನೆಲೆಯಲ್ಲಿ ವಿರಾಜಪೇಟೆ ಪಟ್ಟಣದ ಗಡಿಯಾರ ಕಂಬದ ಬಳಿ ಕಾಂಗ್ರೆಸ್ ಕಾರ್ಯಕರ್ತರು ಪಟಾಕಿ ಸಿಡಿಸಿ, ಸಿಹಿ ಹಂಚಿ ವಿಜಯೋತ್ಸವ ಆಚರಿಸಿದರು.

ಈ ವೇಳೆ ವಿರಾಜಪೇಟೆ ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ ಪಟ್ಟಡ ರಂಜಿ ಪೂಣಚ್ಚ ಮಾತನಾಡಿ, ಕಾಂಗ್ರೆಸ್ ಸರಕಾರದ ಗ್ಯಾರಂಟಿ ಯೋಜನೆ ಹಾಗೂ ಅಭಿವೃದ್ಧಿ ಕಾರ್ಯಗಳನ್ನು ನೋಡಿ ಜನರು ಮತ ನೀಡಿದ್ದಾರೆ. ಇನ್ನು ಮುಂದೆ ತಾಲೂಕು ಮತ್ತು ಜಿಲ್ಲಾ ಪಂಚಾಯತ್ ಚುನಾವಣೆಯಲ್ಲಿ ಕಾಂಗ್ರೆಸ್ ಪಕ್ಷ ಹೆಚ್ಚು ಜಯ ಸಾಧಿಸಲಿದೆ ಎಂದರು. ವಿಜಯೋತ್ಸವದಲ್ಲಿ ಜಿಲ್ಲಾ ಕಾಂಗ್ರೆಸ್ ಎಸ್.ಸಿ. ಘಟಕದ ವಿ.ಕೆ. ಸತೀಶ್, ಅಲ್ಪ ಸಂಖ್ಯಾತರ ಘಟಕದ ಹನೀಫ್, ನಗರ ಕಾಂಗ್ರೆಸ್ ಅಧ್ಯಕ್ಷ ಮಾದಂಡ ತಿಮ್ಮಯ್ಯ, ಜಿಲ್ಲಾ ಸಮಿತಿಯ ನರೇಂದ್ರ ಕಾಮತ್, ಪುರಸಭೆಯ ಕಾಂಗ್ರೆಸ್ ಉಪಾಧ್ಯಕ್ಷರಾದ ಫಸಿಹಾ ತಬಸುಮ್, ಸದಸ್ಯರಾದ ಎಸ್.ಹೆಚ್.ಮತೀನ್, ಡಿ.ಪಿ.ರಾಜೇಶ್, ಮಹ್ಮದ್ ರಾಫಿ, ರಜನಿಕಾಂತ್, ಅಗಸ್ಟಿನ್ ಬೆನ್ನಿ, ಪೂರ್ಣಿಮ, ಕೆ.ಸಿ.ಶಭರಿಶ್, ಶಹಲ್ ಹಮೀದ್, ಜಿ.ಜಿ.ಮೋಹನ್, ದಿನೇಶ್, ಸುನೀತಾ, ಪ್ರಮುಖರಾದ ಎಂ.ಎಲ್.ಸೈನೂದ್ದಿನ್, ಕೊಲುಮಂಡ ರಫೀಕ್, ಮಹದೇವ, ಕೋಲತಂಡ ಬೋಪಯ್ಯ, ಪಕ್ಷದ ಕಾರ್ಯಕರ್ತರು ಭಾಗವಹಿಸಿದ್ದರು.

ಅಮ್ಮತ್ತಿಯಲ್ಲಿ ಬ್ಲೂ ಬ್ಯಾಂಡ್ ರೋಬಸ್ಟಾ ರ್‍ಯಾಲಿಗೆ ಚಾಲನೆ

ಇಂಡಿಯನ್ ನ್ಯಾಷನಲ್ ರ್‍ಯಾಲಿ ಚಾಂಪಿಯನ್‌ಶಿಪ್‌ನಲ್ಲಿ 60ಕ್ಕೂ ಹೆಚ್ಚು ಸ್ಪರ್ಧಿಗಳು ಭಾಗಿ




ಕೊಡಗಿನ ಸಂಪ್ರದಾಯದ ಬೋಳಕಾಟ್ ಪ್ರದರ್ಶನದೊಂದಿಗೆ ಗಾಳಿಯಲ್ಲಿ ಗುಂಡು ಹಾರಿಸಿ, ಗಣ್ಯರು ರ್‍ಯಾಲಿ ಧ್ವಜವನ್ನು ಮೇಲೆತ್ತಿ ಚಾಲನೆ ನೀಡಿದರು.

ಸಿದ್ದಾಪುರ : ಬ್ಲೂ ಬ್ಯಾಂಡ್, ಎಫ್‌ಎಂಎಸ್ಸಿಐ, ಇಂಡಿಯನ್ ನ್ಯಾಷನಲ್ ರ್‍ಯಾಲಿ ಚಾಂಪಿಯನ್ ಶಿಪ್ ನೇತೃತ್ವದಲ್ಲಿ ರೋಬಸ್ಟಾ ಸ್ಪೋರ್ಟ್ಸ್ ಅಂಡ್ ಅಡ್ವೆಂಚರ್ ಅಕಾಡೆಮಿ ಸಹಕಾರದೊಂದಿಗೆ ರೋಬಸ್ಟಾ–2024 ರ್‍ಯಾಲಿಗೆ ವಿರಾಜಪೇಟೆ ತಾಲೂಕಿನ ಅಮ್ಮತ್ತಿ ಪ್ರೌಢಶಾಲೆ ಮೈದಾನದಲ್ಲಿ ಕೊಡಗಿನ ಸಂಪ್ರದಾಯದ ಬೋಳಕಾಟ್ ಪ್ರದರ್ಶನದೊಂದಿಗೆ ಗಾಳಿಯಲ್ಲಿ ಗುಂಡು ಹಾರಿಸುವ ಮೂಲಕ ಗಣ್ಯರು ರ್‍ಯಾಲಿ ಧ್ವಜವನ್ನು ಮೇಲೆತ್ತಿ ಚಾಲನೆ ನೀಡಿದರು.

ಕರ್ನಾಟಕ, ತಮಿಳುನಾಡು, ಆಂಧ್ರ, ಕೇರಳ, ಮಹಾರಾಷ್ಟ್ರ, ಪಾಂಡಿ, ಗೋವಾ, ಪೂನಾ, ಚಂಡಿಗಡ್, ಕೊಲ್ಕತ್ತಾ, ದೆಹಲಿ ಸೇರಿದಂತೆ ವಿವಿಧ ರಾಜ್ಯಗಳ ಸುಮಾರು ಪುರುಷ ಹಾಗೂ ಮಹಿಳಾ 60ಕ್ಕೂ ಹೆಚ್ಚು ಸ್ಪರ್ಧಾಳುಗಳು ಕಾರು ರ್‍ಯಾಲಿಯಲ್ಲಿ ಭಾಗವಹಿಸಿದ್ದರು. ಅಮ್ಮತ್ತಿ ಪ್ರೌಢಶಾಲಾ ಮೈದಾನದಲ್ಲಿ ರ್‍ಯಾಲಿ ಕಾರು ನೋಡಲು ಜಿಲ್ಲೆಯ ನಾನಾ ಭಾಗಗಳಿಂದ ಸಾವಿರಾರು ಮಂದಿ ಮೈದಾನದಲ್ಲಿ ಜಮಾಯಿಸಿ ಕಾರುಗಳನ್ನು ನೋಡಿ ಖುಷಿಪಟ್ಟರಲ್ಲದೆ ಸ್ಪರ್ಧಾಳುಗಳಿಗೆ ಶುಭ ಕೋರಿದರು.

ಪಾಲಿಬೆಟ್ಟ ಸುತ್ತಮುತ್ತಲ ಕಾಫಿ ತೋಟಗಳಾದ ಪಾಲಿಬೆಟ್ಟ ಎಸ್ಟೇಟ್, ಆನಂದಪುರ, ಹೊಸಳ್ಳಿ, ಮಾರ್ಗೊಳ್ಳಿ ಕಾಫಿ ತೋಟದ ಕಡಿದಾದ ರಸ್ತೆಯಲ್ಲಿ ರ್‍ಯಾಲಿ ಕಾರುಗಳು ಸಂಚರಿಸಲಿವೆ. ಈ ಸಂದರ್ಭ ಬ್ಲೂ ಬ್ಯಾಂಡ್‌ನ ಪ್ರಮುಖರಾದ ಪ್ರೇಮ್ ನಾಥ್, ಮೂಸ, ರೋಬಸ್ಟಾ ಸ್ಪೋರ್ಟ್ಸ್ ಅಂಡ್ ಅಡ್ವೆಂಚರ್ ಅಕಾಡೆಮಿಯ ಉದ್ದಪಂಡ ತಿಮ್ಮಣ್ಣ,ಅಪ್ಪಣ್ಣ, ಜಮ್ಮಂಡ ಸೋಮಣ್ಣ, ಮಹೇಶ್ ಅಪ್ಪಯ್ಯ ಸೇರಿದಂತೆ ಮತ್ತಿತರರು ಹಾಜರಿದ್ದರು.

ಬಗರ್‌ಹುಕುಂ ಸಕ್ರಮೀಕರಣ ಸಮಿತಿಯಿಂದ ಸ್ಥಳ ಪರಿಶೀಲನೆ

ಮಡಿಕೇರಿ: ವಿರಾಜಪೇಟೆ ತಾಲೂಕು ಬಗರ್‌ಹುಕುಂ ಸಾಗುವಳಿ ಸಕ್ರಮೀಕರಣ ಸಮಿತಿ ವತಿಯಿಂದ 2ನೇ ಹಂತದ ಅರ್ಜಿಗಳನ್ನು ವಿಲೇವಾರಿ ಮಾಡುವ ಸಲುವಾಗಿ ಸಂಬಂಧಿಸಿದ ಸ್ಥಳಗಳನ್ನು ಪರಿಶೀಲಿಸಲಾಯಿತು. ವಿರಾಜಪೇಟೆ ಕ್ಷೇತ್ರದ ಶಾಸಕ ಹಾಗೂ ಮುಖ್ಯಮಂತ್ರಿಗಳ ಕಾನೂನು ಸಲಹೆಗಾರ ಅಜ್ಜಿಕುಟ್ಟಿರ ಎಸ್.ಪೊನ್ನಣ್ಣ ಅವರ ನಿರ್ದೇಶನದ ಮೇರೆಗೆ ವಿರಾಜಪೇಟೆ ತಾಲೂಕು ಬಗರ್‌ಹುಕುಂ ಸಾಗುವಳಿ ಸಕ್ರಮೀಕರಣ ಸಮಿತಿಯ ಅಧ್ಯಕ್ಷ ಆರ್.ಕೆ.ಅಬ್ದುಲ್ ಸಲಾಂ, ಸದಸ್ಯರಾದ ವಿ.ಕೆ.ಸತೀಶ್ ಕುಮಾರ್, ಕೋಳೆರ ಟೀನಾ ಅವರ ನೇತೃತ್ವದಲ್ಲಿ ತಹಶೀಲ್ದಾರ್ ರಾಮಚಂದ್ರ, ಕಂದಾಯ ಪರಿವೀಕ್ಷಕರು, ಗ್ರಾಮ ಲೆಕ್ಕಿಗರು ಹಾಗೂ ಸಿಬ್ಬಂದಿಗಳು ಸ್ಥಳ ಪರಿಶೀಲನೆ ನಡೆಸಿದರು.

ವಿರಾಜಪೇಟೆ ಹೋಬಳಿಯ ಹೆಗ್ಗಳ, ಆರ್ಜಿ, ಬೇಟೋಳಿ ಗ್ರಾಮಗಳಲ್ಲಿ ಸರ್ಕಾರಿ ಜಾಗ ಮಂಜೂರಾತಿ ಕೋರಿ ಫಾರಂ 57ರಲ್ಲಿ ಈಗಾಗಲೇ ಅರ್ಜಿ ಸಲ್ಲಿಕೆಯಾಗಿದೆ. ಈ ಸಂಬಂಧ ಸ್ಥಳ ಪರಿಶೀಲನೆ ನಡೆಸಲಾಯಿತು ಎಂದು ಆರ್.ಕೆ.ಅಬ್ದುಲ್ ಸಲಾಂ ತಿಳಿಸಿದರು.

ಯಳಂದೂರಲ್ಲೂ ಸಂಭ್ರಮಾಚರಣೆ


ಯಳಂದೂರು ಕಾಂಗ್ರೆಸ್ ಕಚೇರಿಯ ಬಳಿ ರಾಜ್ಯದ ಮೂರು ವಿಧಾನಸಭಾ ಕ್ಷೇತ್ರಗಳಲ್ಲಿ ನಡೆದ ಉಪ ಚುನಾವಣೆಯಲ್ಲಿ ಕಾಂಗ್ರೆಸ್ ಅಭ್ಯರ್ಥಿಗಳು ಜಯಗಳಿಸಿದ ಹಿನ್ನೆಲೆಯಲ್ಲಿ ಕಾಂಗ್ರೆಸ್ ಮುಖಂಡ ಕಂದಹಳ್ಳಿ ನಂಜುಂಡಸ್ವಾಮಿ ನೇತೃತ್ವದಲ್ಲಿ ಕಾರ್ಯಕರ್ತರು ವಿಜಯೋತ್ಸವ ಆಚರಿಸಿದರು.

ಅತಿ ಹೆಚ್ಚು ಗಿಡ ನೆಡುವ ಕಾರ್ಯಕ್ರಮದಲ್ಲಿ ಚಾ.ನಗರ ಜಿಲ್ಲೆಗೆ ಪ್ರಥಮ ಸ್ಥಾನ

ಚಾಮರಾಜನಗರ: ಕರ್ನಾಟಕ ರಾಜ್ಯ ಸರ್ಕಾರವು ಕಳೆದ ಸೆ.15 ರಂದು 'ಅಂತಾರಾಷ್ಟ್ರೀಯ ಪ್ರಜಾಪ್ರಭುತ್ವ ದಿನಾಚರಣೆ' ಅಂಗವಾಗಿ ಆಯೋಜಿಸಿದ್ದ ವಿವಿಧ ಕಾರ್ಯಕ್ರಮಗಳ ವಿಭಾಗದಲ್ಲಿ ಚಾಮರಾಜನಗರ ಜಿಲ್ಲೆಯು ಅತಿ ಹೆಚ್ಚು ಗಿಡಗಳನ್ನು ನೆಡುವ ವಿಭಾಗದಲ್ಲಿ ರಾಜ್ಯದಲ್ಲೇ ಪ್ರಥಮ ಸ್ಥಾನ ಪಡೆದಿದೆ.

ಪ್ರಜಾಪ್ರಭುತ್ವ ದಿನಾಚರಣೆಯ ಅಂಗವಾಗಿ ಆಯೋಜಿಸಿದ್ದ ಮಾನವ ಸರಪಳಿ ಹಾಗೂ ಐದು ವಿವಿಧ ಕಾರ್ಯಕ್ರಮಗಳಲ್ಲಿ ಭಾಗವಹಿಸಿದ್ದ ಜಿಲ್ಲೆಗಳಿಗೆ ಐದು ವಿಭಾಗಗಳಲ್ಲಿ ತಲಾ ಮೂರು ಪ್ರಶಸ್ತಿಗಳನ್ನು ನೀಡಲು ತೀರ್ಮಾನಿಸಲಾಗಿತ್ತು.

ಮಾನವ ಸರಪಳಿ ನಾವೀನ್ಯತೆ, ಅತ್ಯಂತ ಉದ್ದದ ಮಾನವ ಸರಪಳಿ, ಅತಿ ಹೆಚ್ಚು ಗಿಡಗಳನ್ನು ನೆಡುವುದು, ಅತಿ ಹೆಚ್ಚು ಸ್ವಯಂಸೇವಾ ಸಂಘಗಳ ಭಾಗವಹಿಸುವಿಕೆ, ಅತಿ ಹೆಚ್ಚು ಖಾಸಗಿ ಕಂಪನಿಗಳ ಭಾಗವಹಿಸುವಿಕೆ ವಿಭಾಗಗಳಲ್ಲಿ ಪ್ರಶಸ್ತಿ ನೀಡಲಾಗುತ್ತಿದೆ. ಈ ಐದು ವಿಭಾಗಗಳ ಪೈಕಿ ಅತಿ ಹೆಚ್ಚು ಗಿಡಗಳನ್ನು ನೆಡುವ ವಿಭಾಗದಲ್ಲಿ ಚಾಮರಾಜನಗರ ಜಿಲ್ಲೆ ಇಡಿ ರಾಜ್ಯದಲ್ಲೇ ಮೊದಲ ಸ್ಥಾನ ಪಡೆದು ಗಮನ ಸೆಳೆದಿದೆ.

ಇದೇ ನ.26ರಂದು ಬೆಂಗಳೂರಿನ ಡಾ.ಬಿ.ಆರ್. ಅಂಬೇಡ್ಕರ್ ಭವನದಲ್ಲಿ ಏರ್ಪಡಿಸಿರುವ ಸಂವಿಧಾನ ದಿನಾಚರಣೆಯ ಕಾರ್ಯಕ್ರಮದಲ್ಲಿ ಮುಖ್ಯಮಂತ್ರಿಗಳು ಪ್ರಶಸ್ತಿ ವಿತರಿಸಲಿದ್ದು, ಚಾಮರಾಜನಗರ ಜಿಲ್ಲೆಯ ಜಿಲ್ಲಾಧಿಕಾರಿಗಳಾದ ಶಿಲ್ಪಾನಾಗ್ ಅವರನ್ನು ಪ್ರಶಸ್ತಿ ಸ್ವೀಕರಿಸಲು ಆಹ್ವಾನಿಸಲಾಗಿದೆ ಎಂದು ಪ್ರಕಟಣೆ ತಿಳಿಸಿದೆ.

ಚನ್ನಪಟ್ಟಣ, ಶಿಗ್ಗಾವಿ, ಸಂಡೂರು ಉಪಚುನಾವಣೆಯಲ್ಲಿ ಕಾಂಗ್ರೆಸ್ ಜಯಭೇರಿ

ಚಾ.ನಗರದಲ್ಲಿ ಕಾಂಗ್ರೆಸ್‌ನಿಂದ ವಿಜಯೋತ್ಸವ

ಚಾಮರಾಜನಗರ, ನ.23– ಚನ್ನಪಟ್ಟಣ, ಶಿಗ್ಗಾಂವಿ, ಸಂಡೂರು ಕ್ಷೇತ್ರಕ್ಕೆ ನಡೆದ ಉಪಚುನಾವಣೆಯಲ್ಲಿ ಆಡಳಿತಾರೂಢ ಕಾಂಗ್ರೆಸ್ ಪಕ್ಷದ ಅಭ್ಯರ್ಥಿಗಳು ಜಯಭೇರಿ ಬಾರಿಸಿದ ಹಿನ್ನೆಲೆಯಲ್ಲಿ ನಗರದಲ್ಲಿ ಜಿಲ್ಲಾ ಕಾಂಗ್ರೆಸ್ ಪಕ್ಷದ ವತಿಯಿಂದ ವಿಜಯೋತ್ಸವ ಆಚರಿಸಲಾಯಿತು.


ಆಡಳಿತಾರೂಢ ಕಾಂಗ್ರೆಸ್ ಪಕ್ಷದ ಅಭ್ಯರ್ಥಿಗಳು ಜಯಭೇರಿ ಬಾರಿಸಿದ ಹಿನ್ನೆಲೆಯಲ್ಲಿ ಚಾಮರಾಜನಗರದಲ್ಲಿ ಜಿಲ್ಲಾ ಕಾಂಗ್ರೆಸ್ ಪಕ್ಷದ ವತಿಯಿಂದ ಜಿಲ್ಲಾ ಕಾಂಗ್ರೆಸ್ ಕಚೇರಿ ಆವರಣದಲ್ಲಿ ವಿಜಯೋತ್ಸವ ನಡೆಯಿತು.

ಮೊದಲಿಗೆ ನಗರದ ಜಿಲ್ಲಾ ಕಾಂಗ್ರೆಸ್ ಸಮಿತಿ ಕಚೇರಿಯಲ್ಲಿ ಸಮಾವೇಶಗೊಂಡ ಕಾಂಗ್ರೆಸ್ ಮುಖಂಡರು, ಪದಾಧಿಕಾರಿಗಳು, ಕಾರ್ಯಕರ್ತರು ಸಮಾವೇಶಗೊಂಡು, ಪಟಾಕಿಸಿಡಿಸಿ, ವಿಜಯೋತ್ಸವ ಆಚರಿಸಿದರು. ನಂತರ ಭುವನೇಶ್ವರಿ ವೃತ್ತದಲ್ಲಿ ಜಮಾಯಿಸಿ, ಅಲ್ಲೂ ಕೂಡಾ ಜಯಕಾರ ಕೂಗಿ ಸಿಹಿಹಂಚಿ ಸಂಭ್ರಮಿಸಿದರು.

ಇದೇವೇಳೆ ಕಾಡಾ ಅಧ್ಯಕ್ಷ ಹಾಗೂ ಜಿಲ್ಲಾ ಕಾಂಗ್ರೆಸ್ ಸಮಿತಿ ಅಧ್ಯಕ್ಷ ಪಿ.ಮರಿಸ್ವಾಮಿ ಮಾತನಾಡಿ, ರಾಜ್ಯದಲ್ಲಿನ ಮುಖ್ಯಮಂತಿ ಸಿದ್ದರಾಮಯ್ಯ ನೇತೃತ್ವದ ಸರ್ಕಾರ ಜಾರಿಗೆ ತಂದ ಬಡವರ ಪರ 5 ಗ್ಯಾರಂಟಿ ಯೋಜನೆಗಳು ಉಪಚುನಾವಣೆಯಲ್ಲಿ ಪಕ್ಷದ ಗೆಲುವಿಗೆ ಸಹಕಾರಿಯಾಗಿವೆ. ಮುಖ್ಯಮಂತ್ರಿ ಸಿದ್ದರಾಮಯ್ಯ ಹಾಗೂ ಡಿಸಿಎಂ ಡಿ.ಕೆ.ಶಿವಕುಮಾರ್ ಅವರ ನೇತೃತ್ವದಲ್ಲಿ ನಡೆದ ಉಪಚುನಾವಣೆ ಗೆಲುವು ಪಕ್ಷದ ಸದೃಢತೆಗೆ ಮತ್ತಷ್ಟು ಬಲನೀಡಿದೆ ಎಂದರು.

ಚುಡಾ ಅಧ್ಯಕ್ಷ ಮಹಮದ್ ಅಸ್ಗರ್, ನಂಜೇದೇವನಪುರ ಗ್ರಾಪಂ ಅಧ್ಯಕ್ಷ ಶೇಖರಪ್ಪ, ಗ್ರಾಪಂ ಸದಸ್ಯ ಉಮೇಶ್, ಶಿವಣ್ಣ, ನಗರಸಭೆ ಮಾಜಿ ಸದಸ್ಯರಾದ ಪುಟ್ಟಸ್ವಾಮಿ, ರಾಜಣ್ಣ, ಕರಿನಂಜನಪುರ ಸ್ವಾಮಿ, ಮರಿಯಾಲಹುಂಡಿ ಕುಮಾರ್, ಎಂ.ಸಿ.ನಾಗರಾಜು, ಮಲ್ಲಿಕಾರ್ಜುನ ಲಿಂಗನಪುರ, ಚಿನ್ನಪ್ಪ, ಅಪ್ಸರ್ ಅಹಮದ್, ಇಮ್ರಾನ್ ಅಹಮದ್, ನಸ್ರುಲ್ಲಾಖಾನ್, ಮಹದೇವಸ್ವಾಮಿ ರಾಮಸಮುದ್ರ ನಾಗರಾಜು ನಾಗಬಸವಣ್ಣ, ಮಹದೇವಸ್ವಾಮಿ, ಶೇಷಣ್ಣ, ತಾಪಂ ಮಾಜಿ ಸದಸ್ಯರಾದ ಪುಟ್ಟಸ್ವಾಮಿ, ರಾಜು, ಸಿದ್ದರಾಜು, ದ್ವಾರ್ಕಿ, ರವಿಗೌಡ, ನಾಗೇಂದ್ರ, ರಾಜಣ್ಣ, ಗುರುಸ್ವಾಮಿ, ಮಹದೇವ ಉಡಿಗಾಲ, ಲೋಕೇಶ್ ಸೇರಿದಂತೆ ಪಕ್ಷದ ಕಾರ್ಯಕರ್ತರು ಪಾಲ್ಗೊಂಡಿದ್ದರು.

ಚಾಮರಾಜನಗರ ಸದಾ ಅರಳುತ್ತಿರುವ ಸೀಮೆ

ಚಾಮರಾಜನಗರ, ನ.23– ಕರ್ನಾಟಕ ಸಾಹಿತ್ಯ ಅಕಾಡೆಮಿ ಸಾಹಿತ್ಯ ಶ್ರೀ ಪ್ರಶಸ್ತಿ ಪುರಸ್ಕೃತರಾದ ಮಹೇಶ್ ಹರವೆ ಅವರು ಆತ್ಮಶೋಧನೆ ಜೊತೆಗೆ ಇನ್ನೊಂದು ಆತ್ಮದ ಜೊತೆ ಆಪ್ತವಾಗಿ ಮಾತನಾಡುವ ಯೋಗ್ಯತೆ ಇರುವ ಒಬ್ಬ ಯೋಗಿ ಎಂದು ಬೆಂಗಳೂರು ಕರ್ನಾಟಕ ವಸತಿ ಶಿಕ್ಷಣ ಸಂಸ್ಥೆಗಳ ಸಂಘ ಸಂಸ್ಕೃತ ಚಿಂತಕರು ಹಾಗೂ ಸಲಹೆಗಾರ ಎಸ್.ತುಕಾರಾಂ ಅಭಿಪ್ರಾಯಪಟ್ಟರು

ನಗರದ ಜೆ.ಎಚ್.ಪಟೇಲ್ ಸಭಾಂಗಣದಲ್ಲಿ ಚೇತನಕಲಾವಾಹಿನಿ, ಜಿಲ್ಲಾ ಪದವಿ ಪೂರ್ವ ಕಾಲೇಜುಗಳ ಪ್ರಾಂಶುಪಾಲರ ಸಂಘ, ಜಿಲ್ಲಾ ಪದವಿಪೂರ್ವ ಕನ್ನಡ ಉಪನ್ಯಾಸಕರ ಸಂಘ, ಪದವಿಶಿಕ್ಷಣ ಇಲಾಖೆ ಇವರ ಸಹಯೋಗದಲ್ಲಿ ನಡೆದ ಕರ್ನಾಟಕ ಸಾಹಿತ್ಯ ಅಕಾಡೆಮಿ ಸಾಹಿತ್ಯ ಶ್ರೀ ಪ್ರಶಸ್ತಿ ಪುರಸ್ಕೃತ ಮಹೇಶ್ ಹರವೆ ಅಭಿನಂದನಾ ಸಮಾರಂಭವನ್ನು ಉದ್ಘಾಟಿಸಿ ಮಾತನಾಡಿದರು.


ಚಾಮರಾಜನಗರದ ಜೆ.ಎಚ್.ಪಟೇಲ್ ಸಭಾಂಗಣದಲ್ಲಿ ನಡೆದ ಕರ್ನಾಟಕ ಸಾಹಿತ್ಯ ಅಕಾಡೆಮಿ ಸಾಹಿತ್ಯ ಶ್ರೀ ಪ್ರಶಸ್ತಿ ಪುರಸ್ಕೃತರಾದ ಮಹೇಶ್ ಹರವೆ ಅಭಿನಂದನಾ ಸಮಾರಂಭವನ್ನು ಬೆಂಗಳೂರು ಕರ್ನಾಟಕ ವಸತಿ ಶಿಕ್ಷಣ ಸಂಸ್ಥೆಗಳ ಸಂಘ ಸಂಸ್ಕೃತ ಚಿಂತಕರು ಹಾಗೂ ಸಲಹೆಗಾರ ಡಾ. ಎಸ್.ತುಕಾರಾಂ ಉದ್ಘಾಟಿಸಿದರು.

ಮಹೇಶ್ ಹರವೆಗೆ ಸಾಹಿತ್ಯಶ್ರೀ ಪ್ರಶಸ್ತಿ ಒಲಿದು ಬಂದಿದೆ. ಕನ್ನಡನಾಡಿನಲ್ಲಿ ಜಿಲ್ಲೆಗೆ ಒಂದು ವಿಶೇಷತೆ ಇದೆ. ಅದನ್ನು ಏನೆಂದು ಕರೆಯಲು ನಾನು ಇಷ್ಟ ಪಡುತ್ತೇನೆಂದರೆ ಈ ಜಿಲ್ಲೆಯನ್ನು ಜಾನಪದ ನಾಡೋಜ ಸೀಮೆ ಎಂದು ಕರೆಯಬೇಕೆನ್ನುಸುತ್ತದೆ. ಈ ಜಾನಪದ ಸೀಮೆಯಿಂದ ಕರ್ನಾಟಕ ನೆಲೆಯೂ ಕಲಿಯಬೇಕು. ಭಾರತವೂ ಕಲಿಯಬೇಕಿದೆ ಎಂದರು.

ಮಹೇಶ್ ಹರವೆ ಅವರಿಗೆ ಸಾಹಿತ್ಯಶ್ರೀ ಪ್ರಶಸ್ತಿ ನೀಡಿದ ಕರ್ನಾಟಕ ಸಾಹಿತ್ಯ ಅಕಾಡೆಮಿ ನಿಮ್ಮೆಲ್ಲರ ಪರವಾಗಿ ಕೃತಜ್ಞತೆ ಹೇಳುತ್ತೇನೆ. ಸಮಾನ ಅಭಿರುಚಿ ಗೆಳೆಯರಿಗೆ, ವಿದ್ಯಾರ್ಥಿಗಳಿಗೆ ಭೌತಿಕ ಕನ್ನಡಿ ಹಿಡಿಯುವವರು ಮಹೇಶ್. ಕನ್ನಡ ಭೌತಿಕ ವಲಯದಲ್ಲಿ ಅವರ ಆಸಕ್ತಿಗಳು ವಿಶಿಷ್ಟವಾದದ್ದು. ಕಾರಣ ಅವರ ಬೆಳೆದ ಸೀಮೆಯ ಗುಣ ಅಂತದ್ದು. ಚಾಮರಾಜನಗರ ಸೀಮೆ ಸದಾ ಅರಳುತ್ತಲೆ ಇರುವ ಸೀಮೆ. ದಿನದಿನವು ಭಾವಚಿತ್ರವನ್ನು ನವೀಕರಿಸುವಂತ ಬಹಳ ದೊಡ್ಡ ಆಪ್ತವಾದ ಸೀಮೆ, ಮಹೇಶ್ ಅವರ ಸಾಹಿತ್ಯ ಮತ್ತು ಸಾಂಸ್ಕೃತಿಕ ಅಭಿವ್ಯಕ್ತಿಯನ್ನು ಸಾರಸಾಂಗವಾಗಿ ಹೇಳುವುದಾದರೆ ಕವಿ ಸಮೃದ್ಧಿ, ಸಾಮಾಜಿಕ ವಾತ್ಸಲ್ಯ ಇದೆ. ಸಾಂಸ್ಕೃತಿಕ ಸಂಯಮ, ಸಮಾನತೆ ಇದೆ. ಅವರ ಸೃಜನಶೀಲಮನಸ್ಸು ಇಷ್ಟು ಸಾಕು. ಸ್ಥಳೀಯ ಪರಂಪರೆಗೆ ಹೆಚ್ಚು ಒಲಿಯುತ್ತಾರೆ. ಬರೆಯುವುದು, ಬೆರೆಯುವುದು. ಬರೆದು ಮಾತನಾಡುವುದು. ಬರೆದವವರಿಗೆ ಬರೆಯುವಂತೆ ಪ್ರೇರೇಪಿಸುವುದು ಇವರ ವಿಶೇಷತೆಯಾಗಿದೆ. ಅವರಿಗೆ ಮತ್ತಷ್ಟು ಪ್ರಶಸ್ತಿ ಲಭಿಸಲಿ ಎಂದು ಆಶಿಸಿದರು.

ಮಹೇಶ್ ಬುದ್ಧ ತತ್ವದಡಿಯಲ್ಲಿ ಪ್ರಭಾವಿತರಾಗಿದ್ದರು : ಮೈವಿವಿ ಡಾ.ಬಿ.ಆರ್.ಅಂಬೇಡ್ಕರ್ ಸಂಶೋಧನಾ ಮತ್ತು ವಿಸ್ತರಣಾ ಕೇಂದ್ರ ಅಧ್ಯಾಪಕಿ ಡಾ.ಟಿ.ಪದ್ಮಶ್ರೀ ಮಾತನಾಡಿ, ನಾಡಿನ ಎಲ್ಲ ಜನಪರ ಚಳವಳಿ ಜೊತೆಗೆ ಒಡನಾಟವನ್ನಿಟ್ಟಿಕೊಂಡಿರುವಂತಹ ಮಹೇಶ್ ಅವರಿಗೆ ಆ ಚಳವಳಿಯ ಮೇಲೆ ಅಷ್ಟೆ ಪ್ರೀತಿ, ಕಾಳಜಿಯಿತ್ತು. ಅವರೊಂದು ಆಸಕ್ತಿ ಕ್ಷೇತ್ರ ಎಂದರೆ ವೈಚಾರಿಕವಾದ, ವೈಜ್ಞಾನಿಕವಾದ ಶ್ರಮದ ಪರಂಪರೆ, ಜನಪದ ಪರಂಪರೆ ಮೇಲೆ ಹೆಚ್ಚಿನ ಆಸಕ್ತಿ ಅದರ ಮೇಲೆ ಮಾತನಾಡುವುದು, ಬರೆಯುವುದು. ಅದರ ಬಗ್ಗೆ ಚರ್ಚೆ ಮಾಡುವಂತಹದ್ದು ಎಲ್ಲೂ ಇಲ್ಲದ ಪ್ರೀತಿ ಎಂದರು.

ಅಧ್ಯಕ್ಷತೆ ವಹಿಸಿದ್ದ ಪದವಿಪೂರ್ವ ಶಿಕ್ಷಣ ಇಲಾಖೆ ಉಪನಿರ್ದೇಶಕ ಸಿ.ಮಂಜುನಾಥ ಪ್ರಸನ್ನ ಮಾತನಾಡಿ, ಮಹೇಶ್ ಹರವೆ ಅವರಿಗೆ ಕರ್ನಾಟಕ ಸಾಹಿತ್ಯ ಅಕಾಡೆಮಿ ಸಾಹಿತ್ಯಶ್ರೀ ಪ್ರಶಸ್ತಿ ಲಭಿಸುವ ಮೂಲಕ ಅವರಿಗೆ ಗೌರವ ಸಿಕ್ಕಿದೆ ಎನ್ನುವುದಕ್ಕಿಂತ ಹೆಚ್ಚಾಗಿ ಅವರಿಗೆ ಪ್ರಶಸ್ತಿಕೊಟ್ಟು ಸಾಹಿತ್ಯ ಅಕಾಡೆಮಿಗೂ ಒಂದು ಗೌರವ ಬಂದಿದೆ ಎಂದು ಭಾವಿಸಿದ್ದೇನೆ ಎಂದರು.

ಅಭಿನಂದನೆ ನನ್ನ ಜವಾಬ್ದಾರಿ ಹೆಚ್ಚಿಸಿದೆ: ಅಭಿನಂದನೆ ಸ್ವೀಕರಿಸಿದ ಸಾಹಿತ್ಯಶ್ರೀ ಪ್ರಶಸ್ತಿ ಪುರಸ್ಕೃತ ಮಹೇಶ್ ಹರವೆ ಮಾತನಾಡಿ, ಚೇತನ ಕಲಾವಾಹಿನಿ, ಜಿಲ್ಲಾ ಪದವಿಪೂರ್ವ ಕಾಲೇಜುಗಳ ಪ್ರಾಂಶುಪಾಲರ ಸಂಘ, ಜಿಲ್ಲಾ ಪದವಿಪೂರ್ವ ಕನ್ನಡ ಉಪನ್ಯಾಸಕ ಸಂಘ, ಪದವಿಪೂರ್ವ ಶಿಕ್ಷಣ ಇಲಾಖೆ ತಮ್ಮ ಅಭಿನಂದಿಸಿರುವುದು ನನ್ನ ಜವಾಬ್ದಾರಿಯನ್ನು ಹೆಚ್ಚಿಸಿದೆ. ಕರ್ನಾಟಕ ಸಾಹಿತ್ಯ ಅಕಾಡೆಮಿಯು ನನಗೆ ನೀಡಿರುವ ಸಾಹಿತ್ಯ ಶ್ರೀ ಪ್ರಶಸ್ತಿಯನ್ನು ಸದಾ ನನ್ನ ಏಳಿಗೆಗೆ ಬಯಸಿದ ನನ್ನ ಊರು. ಸ್ನೇಹಿತರಿಗೆ ಜಿಲ್ಲೆಗೆ ಸಮರ್ಪಿಸುತ್ತೇನೆ ಎಂದರು.

ಸಮಾಜ ಕಲ್ಯಾಣ ಇಲಾಖೆ ಉಪನಿರ್ದೇಶಕ ಎನ್.ಮುನಿರಾಜು, ಪ್ರಾಂಶುಪಾಲ ಸಿ.ಲಿಂಗಯ್ಯ ಮಾತನಾಡಿದರು. ಕಾರ್ಯಕ್ರಮದಲ್ಲಿ ಜಿಲ್ಲಾ ಪದವಿ ಪೂರ್ವ ಕಾಲೇಜುಗಳ ಪ್ರಾಂಶುಪಾಲರ ಸಂಘದ ಅಧ್ಯಕ್ಷ ಸೋಮಣ್ಣ, ಖಜಾಂಚಿ ಸ್ವಾಮಿ, ಜಿಲ್ಲಾ ಪದವಿಪೂರ್ವ ಕಾಲೇಜುಗಳ ಕನ್ನಡ ಉಪನ್ಯಾಸಕರ ಸಂಘದ ಅಧ್ಯಕ್ಷ ಎಸ್.ಮಹದೇವ ಪ್ರಭು, ಕಾರ್ಯದರ್ಶಿ ಎಂ.ಕೃಷ್ಣಮೂರ್ತಿ, ಕಲಾವಾಹಿನಿ ಅಧ್ಯಕ್ಷ ರಾಜಪ್ಪ, ಪ್ರಧಾನ ಕಾರ್ಯದರ್ಶಿ ಮಂಜುನಾಥ್ ಜೆ.ಬಿ. ರಾಜೇಶ್ ಇತರರು ಹಾಜರಿದ್ದರು.

ಇಂದು ಪೊಲೀಸ್ ಇಲಾಖೆಯಿಂದ ಕುಂದುಕೊರತೆ ಸಭೆ

ಚಾಮರಾಜನಗರ, ನ.23– ಪೊಲೀಸ್ ಇಲಾಖೆ ವತಿಯಿಂದ ಜಿಲ್ಲಾ ಮಟ್ಟದ ಪರಿಶಿಷ್ಟ ಜಾತಿ, ಪರಿಶಿಷ್ಟ ಪಂಗಡ (ಎಸ್,ಸಿ.ಎಸ್.ಟಿ.) ಮುಖಂಡರ ಕುಂದು ಕೊರತೆ ಸಭೆಯನ್ನು ನ.24 ರಂದು ಬೆಳಿಗ್ಗೆ 11 ಗಂಟೆಗೆ ನಗರದ ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿಗಳ ಕಚೇರಿ ಸಭಾಂಗಣದಲ್ಲಿ ಏರ್ಪಡಿಸಲಾಗಿದೆ.

ಹೊಂಗನೂರಲ್ಲಿ ಶ್ರೀ ಶನೇಶ್ವರ ಸ್ವಾಮಿಯ ಆರಾಧನಾ ಮಹೋತ್ಸವ


ಕಾರ್ಯಕ್ರಮದಲ್ಲಿ ಸಾಮೂಹಿಕ ವಿವಾಹ ನಡೆಯಿತು.

ಆಲೂರು,(ಚಾಮರಾಜನಗರ), ನ.23– ಸಮೀಪದ ಹೊಂಗನೂರು ಗ್ರಾಮದ ಶ್ರೀ ಶನೇಶ್ವರ ಸ್ವಾಮಿಯ 19ನೇ ವರ್ಷದ ಆರಾಧನಾ ಮಹೋತ್ಸವದ ಅಂಗವಾಗಿ ವಿವಿಧ ಪೂಜಾ ಹಾಗೂ ಸಾಮೂಹಿಕ ವಿವಾಹ ಕಾರ್ಯಕ್ರಮ ಏರ್ಪಡಿಸಲಾಗಿತ್ತು.

ದೇವಾಲಯವನ್ನು ಶೃಂಗರಿಸಿ ತಳಿರು ತೋರಣಗಳಿಂದ ಅಲಂಕರಿಸಿ ದೀಪಾಲಂಕಾರ ಮಾಡಲಾಗಿತ್ತು. ಬೆಳಗ್ಗೆ ನಲ್ಲಿ ಮರದ ಮಂಟೇಸ್ವಾಮಿ ದೇವಾಲಯದಿಂದ 101 ಹಾಲು ಹರಿವೆ ಹೊತ್ತ ಮಕ್ಕಳು ವೀರ ಗಾಸೆ, ಡೊಲ್ಲು, ಗೊರವರ ಕುಣಿತ ಜನಪದ ಹಾಡುಗಳ ನೀಲಗಾರರು, ದೇವರಗುಡ್ಡರು, ದಾಸಯ್ಯ ಛತ್ರಿಚಾಮರಗಳ ಸಮೇತ ಶ್ರೀ ಶನೇಶ್ವರ ಸ್ವಾಮಿ ದೇವರನ್ನು ಮೆರವಣಿಗೆ ಮೂಲಕ ದೇವಾಲಯಕ್ಕೆ ತಂದರು.

ನಂತರ ದೇವಾಲಯದ ಅವರಣದಲ್ಲಿ ಸಾಮೂಹಿಕ ವಿವಾಹವನ್ನು ದೇವಾಲಯದ ಪ್ರಧಾನ ಅರ್ಚಕರಾದ ಸಿದ್ದಶೆಟ್ಟಿ ನೇತೃತ್ವದಲ್ಲಿ ನಡೆಸಲಾಯಿತು ಹಾಗೂ ಅನ್ನಸಂತರ್ಪಣೆ ಮಾಡಲಾಯಿತು. ರಾತ್ರಿ ಶ್ರೀ ಶನೇಶ್ವರ ಸ್ವಾಮಿಯ ಕಥೆ ನಡೆಯಿತು. ಈ ಸಂದರ್ಭದ ಗ್ರಾಮದ ಎಲ್ಲಾ ಕೋಮಿನ ಯಜಮಾನರು, ಮುಖಂಡರು, ಗ್ರಾಮಸ್ಥರು ಹಾಜರಿದ್ದರು.

ವಾರದ ಮಿತ್ರ
ಸಾಪ್ತಾಹಿಕ ಪುರವಣಿ
ಮೈಸೂರು ಮಿತ್ರ
ಭಾನುವಾರ 24-11-2024

ನ. 15ರಿಂದ ಶಬರಿಮಲೆ ಅಯ್ಯಪ್ಪ ಸ್ವಾಮಿ ದೇವಸ್ಥಾನದಲ್ಲಿ ಮಂಡಲ ಪೂಜೆ ಮತ್ತು ಮಕರ ಜ್ಯೋತಿ. ಸ್ವಾಮಿ ದರ್ಶನದ ಉತ್ಸವವು ಸುಮಾರು ಎರಡೂವರೆ ತಿಂಗಳುಗಳ ಸುದೀರ್ಘಕಾಲ ವಿಜೃಂಭಣೆಯಿಂದ ಜರುಗುತ್ತಿದೆ. ತನ್ನಿಮಿತ್ತ ಈ ಲೇಖನ.

ಭಕ್ತ ಪ್ರಿಯ ಶರಣಂ ಅಯ್ಯಪ್ಪ...

■ಬನ್ನೂರು ಕೆ. ರಾಜು,
ಸಾಹಿತಿ-ಪತ್ರಕರ್ತ





"ಭೂಖಂಡದ ಅತ್ಯುತ್ತಮ ಸಂದರ್ಶನ ಯೋಗ್ಯವಾದ ಐವತ್ತು ಭೂ ಪ್ರದೇಶಗಳಲ್ಲಿ ಕೇರಳವೂ ಒಂದು. ಇಂತಹ ಸ್ಥಳ ಬೇರೊಂದಿಲ್ಲ" -ಅಮೆರಿಕದ ನ್ಯಾಷನಲ್ ಜಿಯಾಗ್ರಫಿಕ್ ಮಾಸಿಕ

ದೇವರ ನಾಡು ಎಂದೇ ದೇಶದಲ್ಲಿ ಹೆಸರುವಾಸಿಯಾಗಿರುವ ಕೇರಳದಲ್ಲಿ ಹಲವಾರು ಸುಪ್ರಸಿದ್ಧ ದೇವಸ್ಥಾನಗಳಿವೆ. ಅವುಗಳಲ್ಲಿ ಶಬರಿಮಲೆಯ ಶ್ರೀ ಅಯ್ಯಪ್ಪ ಸ್ವಾಮಿ ದೇಗುಲವಂತೂ ಕೋಟ್ಯಾನುಕೋಟಿ ಭಕ್ತರನ್ನು ಕೈಬೀಸಿ ಕರೆವ ಮಹಾ ಯಾತ್ರಾ ಸ್ಥಳವಾಗಿದೆ. ಅಯ್ಯಪ್ಪನ ನೆಲೆಯ ಶಬರಿಗಿರಿಯ ವೈಭವ ವರ್ಣಿಸಲಸದಳ. ದಟ್ಟಾರಣ್ಯದ ನಡುವೆ ನೆಲೆ ನಿಂತಿರುವ ಈ ಶಬರಿಮಲೆ ಆಸ್ತಿಕರ ಪಾಲಿಗೆ ಪುಣ್ಯಕ್ಷೇತ್ರ, ಪಶ್ಚಿಮ ಘಟ್ಟದ ತಪ್ಪಲಿನಲ್ಲಿ ಹಸಿರಿನೈಸಿರಿಯನ್ನು ಹೊದ್ದು ಮಲಗಿರುವ ಶಬರಿಮಲೆ, ಸದಾ ಜುಳು ಜುಳು ಹರಿಯುವ ತೊರೆ ಮತ್ತು ಪವಿತ್ರ ಪಂಪಾ ನದಿಯ ಕಲರವ ಹಾಗೂ ಪ್ರಕೃತಿಯ ಹೊಂಬೆಳಕಿನಿಂದ ತನ್ನ ನೈಜ ಸೌಂದರ್ಯವನ್ನು ಚಿರವಾಗಿರಿಸಿಕೊಂಡಿದೆ. ಮಲಯಾಳಂ ಕ್ಯಾಲೆಂಡರ್ ಪ್ರಕಾರ ನವೆಂಬರ್ ಮತ್ತು ಡಿಸೆಂಬರ್ ತಿಂಗಳಿನ ಪವಿತ್ರ 'ಮಂಡಲ ಕಾಲ' ಸಮಯದಲ್ಲಿ ಲಕ್ಷಾಂತರ ಭಕ್ತರು ಸಾಗರೋಪಾದಿಯಲ್ಲಿ ಇಲ್ಲಿ ಸೇರುತ್ತಾರೆ. ಈ ಪುಣ್ಯ ಸಮಯದಲ್ಲಿ ಯಾವುದೇ ಜಾತಿ ಮತ್ತು ಧರ್ಮ, ವರ್ಗ ಮತ್ತು ಆರ್ಥಿಕ ಹಿನ್ನೆಲೆಯ ಭೇದ-ಭಾವವಿರದೆ ಭಾರತದ ವಿವಿಧ ಕಡೆಗಳಿಂದ ಮತ್ತು ವಿದೇಶಗಳಿಂದಲೂ ಭಕ್ತರ ದಂಡು ಶಬರಿಮಲೆಯತ್ತ ಧಾವಿಸಿ ಬರುತ್ತದೆ.

ಶ್ರೀರಾಮ ಭಕ್ತೆಯ ಗಿರಿಯಿದು: ಲಂಕೆಗೆ ಸೀತಾನ್ವೇಷಣೆಯಲ್ಲಿ ಹೊರಟಿದ್ದ ಶ್ರೀರಾಮಚಂದ್ರ, ತನ್ನ ಭಕ್ತೆ ಶಬರಿಗೆ ದರ್ಶನ ನೀಡಿದ ಗಿರಿಯೇ 'ಶಬರಿಮಲೆ'. ಇದಕ್ಕೆ ಶಬರಿಮಲೆ ಎಂಬ ಹೆಸರು ಬರಲು ರಾಮಾಯಣದಲ್ಲಿ ಬರುವ ಪೌರಾಣಿಕ ಪಾತ್ರವಾದ ಈ ಶಬರಿಯೇ ಮೂಲ ಕಾರಣ. ಪಟ್ಟನಂತಿಟ್ಟ ಜಿಲ್ಲೆಯ ಪೂರ್ವದಲ್ಲಿ ನೆಲೆ ನಿಂತಿರುವ ಶಬರಿಮಲೆ, ಕೇರಳದ ಸೌಂದರ್ಯವನ್ನು ಹೆಚ್ಚಿಸಿರುವ ಸಂರಕ್ಷಿತ ಪೆರಿಯಾರ್ ಹುಲಿಬೆಟ್ಟವನ್ನೂ ಒಳಗೊಂಡಿದೆ. ಶಬರಿಮಲೆಯಲ್ಲಿ ಪೂಜಿಸಲ್ಪಡುವ ಅಧಿದೇವತೆ ಸ್ವಾಮಿ ಅಯ್ಯಪ್ಪ. ಶಬರಿಮಲೆಗೆ ತೀರ್ಥಯಾತ್ರೆಗೆ ಬರಲು ಇಚ್ಛಿಸುವ ಭಕ್ತರು ಕಡ್ಡಾಯವಾಗಿ ಮಾಂಸಾಹಾರವನ್ನು ತ್ಯಜಿಸಬೇಕು ಮತ್ತು 41 ದಿನಗಳ ಕಠಿಣ ವ್ರತಾಚರಣೆ ಮಾಡಬೇಕು. ದಟ್ಟ ಮರಗಳು ಮತ್ತು ತೊರೆಗಳ ಮಧ್ಯೆ ಕಡಿದಾದ ಬೆಟ್ಟವನ್ನು ಹತ್ತುವ ಅನುಭವವನ್ನು ಇಲ್ಲಿ ಪ್ರತಿಯೊಬ್ಬರು ಅನುಭವಿಸಬಹುದು.

ದೇವರೆಡೆಗೆ ಸಾಗುವ ನಡಿಗೆ ಹಾದಿ: ನಡಿಗೆಯ ಮೂಲಕ ದೇವಸ್ಥಾನವನ್ನು ತಲುಪಲು ಇಚ್ಛಿಸುವವರಿಗೆ, ಶಬರಿಮಲೆ ದೇವಸ್ಥಾನದ ಹಾದಿ ಕಡಿದಾದ, ಅಷ್ಟೇ ಪ್ರಯಾಸಕರ ಮತ್ತು ದೂರದ ಹಾದಿ. ಆದರೆ ಬಹಳ ದಣಿವಾದರೆ ತಣ್ಣನೆಯ ಗಾಳಿ ಹಾಗೂ ಗಿಡಮರಗಳ ನೆರಳು ನಿಮ್ಮನ್ನು ಪ್ರಯಾಣದುದ್ದಕ್ಕೂ ಸಂತೈಸುತ್ತದೆ. ಪ್ರತಿವರ್ಷ ಸರಿ ಸುಮಾರು 45-50 ದಶಲಕ್ಷಕ್ಕೂ ಅಧಿಕ ಭಕ್ತರು ಶಬರಿಮಲೆಗೆ ಭೇಟಿ ನೀಡುತ್ತಿದ್ದು, ಇದು ಪ್ರಪಂಚದಲ್ಲಿಯೇ ಅತೀ ಹೆಚ್ಚು ವಾರ್ಷಿಕ ಭಕ್ತರು ಭೇಟಿ ನೀಡುವ ತೀರ್ಥಕ್ಷೇತ್ರ ಎನಿಸಿಕೊಂಡಿದೆ. ಹಾಗೆಯೇ ನಿರ್ದಿಷ್ಟ ಋತುವಿನಲ್ಲಿ ಭೇಟಿ ನೀಡುವ ಅತೀ ಹೆಚ್ಚಿನ ಸಂಖ್ಯೆಯ ಯಾತ್ರಿಕರ ಪೈಕಿ ಪ್ರಪಂಚದಲ್ಲಿ ಶಬರಿಮಲೆ ಎರಡನೇ ಸ್ಥಾನವನ್ನು ಪಡೆದಿದೆ. ಮೆಕ್ಕಾದ ಹಜ್ ಯಾತ್ರೆ ಈ ದಿಸೆಯಲ್ಲಿ ಮೊದಲ ಸ್ಥಾನದಲ್ಲಿದೆ.

ಶಬರಿಮಲೆಯ ಪುರಾಣೈತಿಹ್ಯ: ಪುರಾಣ ಐತಿಹ್ಯಗಳ ಪ್ರಕಾರ, ಹಿಂದೂ ದೇವರಾದ ಅಯ್ಯಪ್ಪ, ಜಗದಲ್ಲಿ ಭಯ ಹುಟ್ಟಿಸಿದ್ದ ಭಯಂಕರ ರಕ್ಕಸಿ ಮಹಿಷಿಯನ್ನು ಸಂಹಾರ ಮಾಡಿದ ನಂತರ ಇದೇ ಸ್ಥಳದಲ್ಲಿ ಧ್ಯಾನಸ್ಥನಾಗುತ್ತಾನೆ. ವಾಸ್ತವವಾಗಿ ಶಬರಿಮಲೆ ದೇವಸ್ಥಾನವೆಂದರೆ ಏಕತೆ, ಸಮಾನತೆ, ಭಾವೈಕ್ಯತೆ ಮತ್ತು ಪ್ರಪಂಚದ ಎಲ್ಲಾ ಒಳ್ಳೆತನಗಳ ಸಂಕೇತ. ನಿಜಕ್ಕೂ ಇದು ಸೂಚಿಸುವುದೆಂದರೆ ದುಷ್ಟ ಶಕ್ತಿಗಳ ವಿರುದ್ಧ ಧರ್ಮಕ್ಕೆ ವಿಜಯ ಮತ್ತು ಪ್ರತಿಯೊಬ್ಬರಿಗೂ ನ್ಯಾಯ ದೊರೆಯುತ್ತದೆ ಎಂಬುದು. ಭಕ್ತರ ಜನಾಂಗ, ಸಂತತಿ, ವಂಶ ಮತ್ತು ಧರ್ಮಗಳನ್ನು ಲೆಕ್ಕಿಸದೆ ಎಲ್ಲಾ ಭಕ್ತರನ್ನೂ ಒಪ್ಪಿಕೊಳ್ಳುವ ಅಪರೂಪದ ದೇವಸ್ಥಾನಗಳಲ್ಲಿ ಶಬರಿಮಲೆಯೂ ಒಂದು. ಶಬರಿಮಲೆಯು ಸರ್ಕಾರಿ ಸ್ವಾಮ್ಯದ ತಿರುವನಂತಪುರ ದೇವಸ್ಥಾನ ಮಂಡಳಿಯ ಆಡಳಿತಕ್ಕೊಳಪಟ್ಟಿದೆ.

ಭಕ್ತರ ತೀರ್ಥಯಾತ್ರೆ: ನವೆಂಬರ್ ತಿಂಗಳ ಮಧ್ಯಭಾಗದಿಂದ ಶುರುವಾಗುವ ತೀರ್ಥಯಾತ್ರೆಯ ಸಮಯ ಜನವರಿ ತಿಂಗಳ ನಾಲ್ಕನೇ ವಾರಕ್ಕೆ ಅಂತ್ಯವಾಗುತ್ತದೆ. ಸ್ಥಳೀಯರ ವಾಸ ಕಡಿಮೆ ಇರುವ ಶಬರಿಮಲೆ ಸದಾ ತೀರ್ಥಯಾತ್ರಿಗಳಿಂದ ಗಿಜಿಗುಡುತ್ತದೆ. ಮಂಡಲಪೂಜೆ ಮತ್ತು ಮಕರವಿಳಕ್ಕು ಶಬರಿಮಲೆಯ ಪ್ರಮುಖ ಹಬ್ಬದ ಅವಧಿಗಳು. ಮುಸ್ಲಿಂ ಸಂತ ವಾವರ ಸ್ವಾಮಿಯ ಪುಣ್ಯ ಸ್ಥಳವೂ ಇಲ್ಲಿದ್ದು ಪೂಜೆ ಸಲ್ಲಿಸಲಾಗುತ್ತಿದ್ದು ಈ ಕ್ಷೇತ್ರವು ಧಾರ್ಮಿಕ ಸಹಿಷ್ಣುತೆ ಮತ್ತು ಏಕತೆಗೆ ಪ್ರತ್ಯಕ್ಷ ನಿದರ್ಶನವಾಗಿದೆ. ಆಧ್ಯಾತ್ಮಿಕ ಮತ್ತು ಸೌಂದರ್ಯಯುತ ಮೌಲ್ಯವನ್ನು ಹೊಂದಿದ ಶಬರಿಮಲೆಯ ಭೇಟಿ ಅನುಭವದ ಕಣಜ. ಸಾವಿರಾರು ತೀರ್ಥಯಾತ್ರಿಕರು ವರ್ಷದಲ್ಲಿ ಒಮ್ಮೆಯಾದರೂ ತಮ್ಮ ಭಕ್ತಿಯನ್ನು ಸಂತೃಪ್ತಿಗೊಳಿಸಲು ಈ ಆಧ್ಯಾತ್ಮ ಕೇಂದ್ರಕ್ಕೆ ಭೇಟಿ ನೀಡುತ್ತಾರೆ. ಹುಲುಸಾಗಿ ಬೆಳೆದ ಕಾಡು ಮತ್ತು ಹರಿಯುವ ತೊರೆಯ ಬುಗ್ಗೆಗಳನ್ನು ದಾಟಿ ಬೆಟ್ಟವೇರುತ್ತ ಅಯ್ಯಪ್ಪ ಸ್ವಾಮಿಯ ದೇವಸ್ಥಾನ ತಲುಪುವುದು ಒಂದು ಸಾಹಸವೇ ಸರಿ. ದೇವಸ್ಥಾನದ ತುದಿಯನ್ನೇರಲು ಸರಿಸುಮಾರು 9 ಕಿ.ಮೀ.ಗಳ ಚಾರಣದ ಅಗತ್ಯವಿದೆ. ಆದರೆ ಮಾಡಿದ ಚಾರಣ ಸಾರ್ಥಕವೆನಿಸುತ್ತದೆ. ಏರಿಳಿಯುವ ಪರ್ವತ ಶ್ರೇಣಿಗಳು ಮತ್ತು ಆಯಾ ಕಾಲದ ಹೂವು, ಮರ-ಗಿಡ, ಪಶು-ಪಕ್ಷಿಗಳನ್ನು ನೋಡುತ್ತ ಸಾಗುವ ಚಾರಣ ಪ್ರಕೃತಿ ಪ್ರಿಯರಿಗಂತೂ ತೃಪ್ತಿ ನೀಡುತ್ತವೆ. ಮುಖ್ಯ ನಗರಗಳಿಂದ ರಸ್ತೆ ಮತ್ತು ರೈಲು ಮಾರ್ಗವಾಗಿ ಶಬರಿಮಲೆಯನ್ನು ತಲುಪಬಹುದು. ಎಲ್ಲ ಕಾಲದಲ್ಲೂ ಪ್ರವಾಸಿ ಪ್ಯಾಕೇಜ್‌ಗಳು ಮತ್ತು ತಕ್ಕುದಾದ ಹೋಟೆಲುಗಳು ಇಲ್ಲಿ ಲಭ್ಯವಿದೆ. ಶಬರಿಮಲೆ ಎಂಬುದು ಅತ್ಯಂತ ಮನೋಹರ, ಮನಮೋಹಕ ತಾಣ. ಅದು ಇತರ ಎಲ್ಲಾ ಯಾತ್ರಾಸ್ಥಳಗಳಿಗಿಂತ ಅತಿಶಯವಾಗಿ ಕಂಗೊಳಿಸುತ್ತಿದೆ. ಶಬರಿಮಲೆಯು ಭೌಗೋಳಿಕವಾಗಿಯೂ, ಪ್ರಾಕೃತಿಕವಾಗಿಯೂ, ಧರ್ಮಾಚರಣೆ ಪರವಾಗಿಯೂ ಯಾವುದೇ ದೃಷ್ಟಿಕೋನಗಳಿಂದ ನೋಡಿದರೂ ಇತರ ಯಾತ್ರಾ ಸ್ಥಳಗಳಿಗಿಂತ ಭಿನ್ನವಾಗಿ ನಿಲ್ಲುತ್ತದೆ. ಶಬರಿಮಲೆ ಅಯ್ಯಪ್ಪಸ್ವಾಮಿ ದೇವಾಲಯವು ಪ್ರತಿವರ್ಷ ಸುದೀರ್ಘ ಎರಡೂವರೆ ತಿಂಗಳು ಕಾಲ ಭಕ್ತ ಸಮೂಹವು ತುಂಬಿ ನಿಂತಿರುವ ಯಾತ್ರಾ ಸ್ಥಳವಾಗಿದೆ. ಕೋಟಿಗಟ್ಟಲೆ ಅಯ್ಯಪ್ಪ ಭಕ್ತರು ನಲವತ್ತೊಂದು ದಿವಸದ ವ್ರತಾಚರಣೆಯ ತರುವಾಯ ಶಬರಿಮಲೆಗೆ ಹೋಗಿ ಪುಣ್ಯ ನದಿ ಪಂಪದಲ್ಲಿ ಮಿಂದು ಮಲೆಯ ನೆತ್ತಿಯಲ್ಲಿ ನೆಲೆಸಿರುವ ಅಯ್ಯಪ್ಪ ಮಂದಿರ ತಲುಪಿ ಸ್ವಾಮಿಯ ದರ್ಶನಪಡೆದು ತಮ್ಮ ಜೀವನವನ್ನು ಪಾವನಗೊಳಿಸಿಕೊಳ್ಳುತ್ತಾರೆ.

ಅಯ್ಯಪ್ಪ ದೇವಸ್ಥಾನವು ಸಮುದ್ರ ಮಟ್ಟದಿಂದ 914 ಮೀಟರ್ ಎತ್ತರದಲ್ಲಿ ಪೆರಿಯಾರ್ ಹುಲಿಧಾಮದ ಭಾಗವಾದ ಗೊಂಡಾರಣ್ಯದ ಪಶ್ಚಿಮಘಟ್ಟದ 18 ಬೆಟ್ಟಗಳ ಮಧ್ಯದಲ್ಲಿದೆ. ಇದು ಪತ್ತನಂತಿಟ್ಟ ಜಿಲ್ಲೆಯ ರಾನ್ನಿ ತಾಲ್ಲೂಕಿನ ಪೆರಿನಾಡು ಗ್ರಾಮಕ್ಕೊಳಗೊಂಡಿದೆ. ಭಕ್ತಾದಿಗಳು ಬಂದ ವಾಹನಗಳನ್ನು ಪಂಪದವರೆಗೆ ಬಿಡಲಾಗುವುದು. ಭಕ್ತರು ಪಂಪಾ ನದಿಯಲ್ಲಿ ಮಿಂದು ಅಲ್ಲಿಂದ ಮತ್ತೆ ಸನ್ನಿಧಿಗೆ ತಲುಪಲು 8.5 ಕಿ.ಮೀ. ಕಡಿದಾದ ಗುಡ್ಡದ ದಾರಿಯಾಗಿ ಬೆಟ್ಟ ಏರಿ ನಡೆದು ಹೋಗಬೇಕಾಗಿದೆ. ಕಾಲ್ನಡಿಗೆಯಲ್ಲಿ ಬೆಟ್ಟ ಹತ್ತಲಾರದವರು ಡೋಲಿ ಮೂಲಕ ಹೋಗಬಹುದು. ಪಂಪ ಯಾತ್ರೆಯ ಮೂಲ ಕೇಂದ್ರವಾಗಿದೆ.

ಶಬರಿಮಲೆ ದೇವಾಲಯವು ಭಕ್ತ ದರ್ಶನಕ್ಕಾಗಿ ಉತ್ಸವಕಾಲ ಹೊರತು ಪ್ರತಿ ಮಲಯಾಳ ತಿಂಗಳ ಮೊದಲ 5 ದಿನಗಳಲ್ಲಿ ಮಾತ್ರ ತೆರೆದಿರುತ್ತದೆ. ಉತ್ಸವ ಕಾಲದಲ್ಲಿ 'ಮಂಡಲಪೂಜೆ' ಮತ್ತು 'ಮಕರವಿಳಕ್ಕು' ನಡೆಯುವ ಪುಣ್ಯ ಮುಹೂರ್ತಗಳಲ್ಲಿ ಎರಡೂವರೆ ತಿಂಗಳು ಭಕ್ತ ದರ್ಶನಕ್ಕಾಗಿ ಮುಕ್ತವಾಗಿರುತ್ತದೆ. ಉತ್ಸವ ಸಮಯವು ಆರಂಭವಾಗುವುದು ಮಲಯಾಳ ತಿಂಗಳು ವೃಶ್ಚಿಕಂ ಒಂದಕ್ಕೆ (ನವೆಂಬರ್‌ನಲ್ಲಿ) ಮತ್ತು ಕೊನೆಗೊಳ್ಳುವುದು ಮಕರಂ ಒಂದಕ್ಕೆ (ಜನವರಿಯಲ್ಲಿ). ಅಲ್ಲದೇ ಶಬರಿಮಲೆ ದೇವಾಲಯವು ಕೇರಳದ ಪ್ರಧಾನ ಉತ್ಸವಗಳಾದ ಓಣಂ, ವಿಷು, ಹಸ್ತಚಿತ್ರ, ನಿರಪುತ್ತರಿ (ಮನೆತುಂಬು ಹುತ್ತರಿ) ಮತ್ತು ಪೈಂಗುಣಿ ಉತ್ತರಂ (ಉತ್ತರಾಷಾಡ) ದಿನಗಳಲ್ಲಿ ದೇವಾಲಯದ ಬಾಗಿಲು ತೆರೆಯುತ್ತಾರೆ. ಮಂಡಲಪೂಜೆ ಮತ್ತು ಮಕರವಿಳಕ್ಕು ಸಮಯದಲ್ಲಿ ಲಕ್ಷಗಟ್ಟಲೆ ಅಯ್ಯಪ್ಪ ಭಕ್ತರು ಸನ್ನಿಧಿಗೆ ಬರುತ್ತಾರೆ. ಅಬಾಲವೃದ್ಧರಾದಿಯಾಗಿ ಸ್ತ್ರೀಪುರುಷ ಭೇದವಿಲ್ಲದೆ ಬರುತ್ತಾರೆ. ಆದರೆ 10ರಿಂದ 50 ವರ್ಷದವರೆಗಿನ ಪ್ರಾಯದ ಸ್ತ್ರೀಯರು ಶಬರಿಮಲೆಗೆ ಬರಬಾರದೆಂಬ ನಿಯಮವಿದೆ. ಹಾಗೆಯೇ ಇರುಮುಡಿಕಟ್ಟು ಇಲ್ಲದೆ ಹದಿನೆಂಟು ಮೆಟ್ಟಿಲುಗಳನ್ನು ಮೆಟ್ಟುವಂತಿಲ್ಲ.

ಮಕರ ಜ್ಯೋತಿ ದರ್ಶನ: ಶಬರಿಮಲೆಯ ಎರಡು ತಿಂಗಳ ಪವಿತ್ರ ವ್ರತಾಚರಣೆಯ ಕೊನೆಯ ದಿನವಾದ ಮಕರ ಸಂಕ್ರಮಣದಂದು 'ಮಕರಜ್ಯೋತಿ'ಯ ದರ್ಶನವಾಗುತ್ತದೆ. ಮಕರಜ್ಯೋತಿಯ ದರ್ಶನಕ್ಕಾಗಿ ದೇಶದ ನಾನಾ ಮೂಲೆಗಳಿಂದ ಲಕ್ಷಾಂತರ ಭಕ್ತರು ಶಬರಿಮಲೆಗೆ ಆಗಮಿಸುತ್ತಾರೆ. ಶಬರಿಮಲೆಗೆ ವಿರುದ್ಧ ದಿಕ್ಕಿನಲ್ಲಿರುವ ಪೊನ್ನಂಬಲಮೇಡು ಗಿರಿಯಲ್ಲಿ ಮಕರ ಜ್ಯೋತಿ ಕಾಣಿಸಿಕೊಳ್ಳುತ್ತದೆ. ಪ್ರತಿವರ್ಷ ಜನವರಿ 14ರ ಸಂಕ್ರಾಂತಿ ಹಬ್ಬದಂದು ಅಯ್ಯಪ್ಪ ಸ್ವಾಮಿಗೆ ಸಂಜೆ 7 ಗಂಟೆಗೆ ನಡೆಯುವ ಮಹಾಮಂಗಳಾರತಿ ಬಳಿಕ ಮಕರ ಜ್ಯೋತಿಯ ದರ್ಶನವಾಗುತ್ತದೆ. ಮಕರ ಜ್ಯೋತಿಯು ಮೂರು ಬಾರಿ ದೇದೀಪ್ಯಮಾನವಾಗಿ ಮಿಣುಗಿ ಅದೃಶ್ಯವಾಗುತ್ತದೆ. ಆ ದಿನ ದೇವತೆಗಳು ಅಯ್ಯಪ್ಪ ಸ್ವಾಮಿಗೆ ಆ ಗಿರಿಯಲ್ಲಿಯೇ ಪೂಜೆ ಮಾಡುವುದರಿಂದ ಆ ಬೆಳಕು ಕಾಣಿಸುತ್ತದೆ ಎಂದು ಹೇಳಲಾಗುತ್ತದೆ. ಸ್ವತಃ ಅಯ್ಯಪ್ಪನೇ ಅಲ್ಲಿಗೆ ಬಂದು ಬೆಳಕಿನ ರೂಪದಲ್ಲಿ ಭಕ್ತರಿಗೆ ದರ್ಶನ ನೀಡುತ್ತಾನೆಂದೂ ಭಕ್ತರ ನಂಬಿಕೆಯಾಗಿದೆ. ಇಂಥ ಮಹಾ ಮಕರಜ್ಯೋತಿ ದರ್ಶನವಾಗುತ್ತಿದ್ದಂತೆ ಲಕ್ಷಾಂತರ ಭಕ್ತರು ಅಯ್ಯಪ್ಪಸ್ವಾಮಿಯ ಮಂತ್ರಗಳನ್ನು ಪಠಿಸುತ್ತಾ ಜ್ಯೋತಿಯನ್ನು ದರ್ಶಿಸಿಕೊಂಡು ಪಾವನರಾಗುತ್ತಾರೆ.

ವಾರಭವಿಷ್ಯ



24.11.2024 ರಿಂದ 30.11.2024

ಈ ವಾರದಲ್ಲಿ ಗ್ರಹಗಳ ರಾಶಿ ಸಂಚಾರ :- ರವಿ-ವೃಶ್ಚಿಕ, ಚಂದ್ರ-ಸಿಂಹ, ಕನ್ಯಾ, ತುಲಾ, ವೃಶ್ಚಿಕ,ಕುಜ-ಕಟಕ, ಬುಧ-ವೃಶ್ಚಿಕ, ಗುರು-ವೃಷಭ, ಶುಕ್ರ-ಧನುಸ್ಸು, ಶನಿ-ಕುಂಭ, ರಾಹು-ಮೀನ ಮತ್ತು ಕೇತು-ಕನ್ಯಾ.

ವಿ.ಕೇಶವಮೂರ್ತಿ
ಜ್ಯೋತಿಷ್ಯ ವಿದ್ವಾಂಸರು, 'ಭಾವಸಾರ ರತ್ನ'
'ಚೈತನ್ಯಶ್ರೀ ಪ್ರಶಸ್ತಿ ಪುರಸ್ಕೃತರು'
ಕಲ್ಪದ್ರುಮ ಜ್ಯೋತಿಷ್ಯ ಅಧ್ಯಯನ ಕೇಂದ್ರ
ವಿಳಾಸ: 533, 6ನೇ ಕ್ರಾಸ್, ಜೋಗಾದಿ ಉತ್ತರ,
ಮೈಸೂರು ನಿರ್ಮಿತಿ ಕೇಂದ್ರ ಹತ್ತಿರ, ಮೈಸೂರು.
ಮೊ.9740973224, 9739548720



ಮೇಷ (ಚು.ಚೆ.ಲ.ಲಿ.ಲು.ಲೆ.ಲೋ.ಅ)
ಧರ್ಮ ದಾರಿ ತೋರಿಸುತ್ತದೆ, ಕರ್ಮ ಗುರಿ ಮುಟ್ಟಿಸುತ್ತದೆ. ಹಿಂದೆ ಆಗಿದ್ದ ಕೆಲವು ಅಹಿತಕರ ಘಟನೆಗಳು ಸುಖಾಂತ್ಯವಾಗಲಿದೆ. ಗುರುಕೃಪೆಯಿಂದ ಬದುಕು ಸಮೃದ್ಧವಾಗಲಿದೆ. ಕೈಗೆ ಬರುವ ಹಣವನ್ನು ಕಷ್ಟಕಾಲಕ್ಕೆ ಉಳಿಸಿಕೊಳ್ಳಿ. ವಾರ ಮಧ್ಯೆ ನೂತನ ವ್ಯಾಪಾರ ಪ್ರಾರಂಭಕ್ಕೆ ತಯಾರಿ ನಡೆಸಿಕೊಳ್ಳಿ. ರಫ್ತು ಉದ್ಯಮಿಗಳಿಗೆ ಭರಪೂರ ಲಾಭವಾಗುವುದು. ಸಹವಾಸಗಳು ನೆಟ್ಟಗಿರಲಿ.
ಶ್ರೀಗಣೇಶ ಉಪಾಸನೆ. ಶುಭ ಸಂಖ್ಯೆ-4.

ವೃಷಭ (ಇ.ಉ.ಎ.ಒ.ವ.ವಿ.ವು.ವೆ.ವೊ)
ಸಹೋದರ ಸಂಬಂಧಿಗಳಲ್ಲಿ ಉಂಟಾಗಿದ್ದ ವಾದ-ವಿವಾದಗಳು ಬಗೆಹರಿಯುತ್ತವೆ. ದೈವ ಸಹಾಯವಿಲ್ಲದೆ ಜಯ ದೊರಕದು, ಸ್ವಪ್ರಯತ್ನವಿಲ್ಲದೆ ದೈವ ಸಹಾಯವೂ ದೊರಕದು. ಕಾರ್ಯಾನುಕೂಲವಾಗಬೇಕೆಂದರೆ ದಕ್ಷತೆ, ದೃಢತೆಯಿಂದ ಮುಂದೆ ಸಾಗಿರಿ. ವಾರ ಮಧ್ಯೆ ಅಧಿಕಾರಿಗಳ ಭೇಟಿಯಿಂದ ಅನುಕೂಲ. ತಾಮ್ರ-ಹಿತ್ತಾಳೆ ವ್ಯಾಪಾರಿಗಳಿಗೆ ಉತ್ತಮ ವ್ಯಾಪಾರ ಹಾಗೂ ಧನ ಲಾಭವಾಗುವುದು.
ಶ್ರೀ ಲಕ್ಷ್ಮೀ ಅರ್ಚನೆ. ಶುಭ ಸಂಖ್ಯೆ-7.

ಮಿಥುನ (ಕ.ಕಿ.ಕು.ಘ.ಙ.ಛ.ಕೆ.ಕೊ.ಹ)
ವಾರದಾರಂಭಕ್ಕೆ ನಿರೀಕ್ಷಿತ ಹಣ ಕೈಗೆ ಬರುವುದು. ನೂತನ ಮಿತ್ರರ ಪರಿಚಯದಿಂದ ಸಾಮಾಜಿಕ ಸ್ಥಳದಲ್ಲಿ ನಿಮ್ಮ ಮಾನ ಪ್ರತಿಷ್ಠೆಗಳಲ್ಲಿ ವೃದ್ಧಿಯಾಗುವುದು. ಕಲಾವಿದರಿಗೆ ಪ್ರಶಸ್ತಿ, ಪುರಸ್ಕಾರಗಳು ದೊರೆಯುವ ಸಾಧ್ಯತೆ. ತತ್ವ ವಿಚಾರಗಳಲ್ಲಿ ಆಸಕ್ತಿ ಮೂಡುವುದು. ಸೋದರ ಸಂಬಂಧಗಳಲ್ಲಿ ವಿರಸ ಉಂಟಾಗಲಿದೆ. ಜೀವನ ಕೆಲವೊಮ್ಮೆ ಕಷ್ಟವೂ, ಮಧುರವೂ ಅನ್ನಿಸುವುದು. ಆರೋಗ್ಯ ಕಾಪಾಡಿಕೊಳ್ಳಿ.
ಶ್ರೀ ಮನ್ನಾರಾಯಣ ನಾಮ ಜಪ. ಶುಭ ಸಂಖ್ಯೆ-8.

ಕಟಕ (ಹೀ.ಹು.ಹೆ.ಹೊ.ಡ.ಡಿ.ಡು)
ಲಾಭ ಸ್ಥಾನದಲ್ಲಿ ಗುರುವಿದ್ದಾಗ, ಅನೇಕ ಮಾರ್ಗಗಳಿಂದ ಧನಸಂಚಯ, ನಿಮ್ಮ ರಾಶ್ಯಾಧಿಪತಿ ಚಂದ್ರನ ಬಲವೂ ಇದೆ. ಜಾಣ್ಮೆಯಿಂದ ಸ್ವಂತ ಕೆಲಸಗಳನ್ನು ಸಾಧಿಸಿಕೊಳ್ಳುವಿರಿ. ನೆರೆಹೊರೆಯಲ್ಲಿ ಸೌಹಾರ್ದತೆಯಿಂದಿರಲು ಪ್ರಯತ್ನಿಸಿ, ಅನ್ಯಥಾ ಪರಿಸ್ಥಿತಿ ವಿಕೋಪಕ್ಕೆ ಹೋದೀತು. ಸರ್ಕಾರಿ ನೌಕರರಿಗೆ ವರ್ಗಾವಣೆಯೊಂದಿಗೆ ವಾಸ್ತವ್ಯ ಬದಲಾವಣೆ ಆಗುವುದು. ಆತುರದ ವಾಹನ ಡ್ರೈವಿಂಗ್‌ನಿಂದ ಸಂಕಷ್ಟಕ್ಕೆ ಗುರಿಯಾಗುವಿರಿ.
ಶ್ರೀದುರ್ಗಾ ಸ್ತುತಿ. ಶುಭ ಸಂಖ್ಯೆ-5.

ಸಿಂಹ (ಮ.ಮಿ.ಮು.ಮೊ.ಮೆ.ಟ.ಟಿ.ಟು.ಟೆ)
ವಾರದಾರಂಭಕ್ಕೆ ಹರ್ಷ ಚಿತ್ತರಾಗಿರುವಿರಿ. ನಿಮ್ಮ ಆಶೋತ್ತರಗಳಿಗೆ ಗ್ರಹಗಳು ಪೂರಕವಾಗಿವೆ. ಏನಾದರೂ ಸಮಸ್ಯೆ ಉಂಟಾದರೆ ಸವಿ ಮಾತಿನಿಂದ ಬಗೆಹರಿಯುವುದು. ನಿಮ್ಮ ಕಾಯಕಕ್ಕೆ ತಂದೆ-ತಾಯಿಗಳ ಸಹಕಾರ ದೊರೆಯುವುದು. ಉತ್ತರ ದಿಕ್ಕಿನ ಪ್ರಯಾಣದಿಂದ ಅನುಕೂಲ. ಪಾಲುದಾರಿಕೆ ವ್ಯಾಪಾರದಲ್ಲಿ ಸಮಸ್ಯೆಗಳು ಉಂಟಾಗುತ್ತವೆ. ಅಸಹಾಯಕರಿಗೆ ಸಹಾಯ ಮಾಡಿ ಒಳಿತಾಗುತ್ತದೆ.
ಶ್ರೀ ಸೂರ್ಯ ನಮಸ್ಕಾರ. ಶುಭ ಸಂಖ್ಯೆ-2.

ಕನ್ಯಾ (ಟೊ.ಪ.ಪಿ.ಪು.ಷ.ಣ.ಠ.ಪೆ.ಪೊ)
'ರೋಗಿ ಬಯಸಿದ್ದು ಹಾಲು ಅನ್ನ, ವೈದ್ಯರು ಹೇಳಿದ್ದೂ ಹಾಲು ಅನ್ನ' ಎಂಬಂತೆ ಸಾಗುವುದು ಈ ಸಪ್ತಾಹ. ಶತ್ರುಗಳು ಮಿತ್ರತ್ವ ಬಯಸಿ ರಾಜೀ ಮಾರ್ಗಕ್ಕೆ ಬರುವರು, ತಿರಸ್ಕರಿಸದಿರಿ. ವಾರ ಮಧ್ಯೆ ಸತ್ಸಂಗದಿಂದ ಮನಸ್ಸಿಗೆ ನೆಮ್ಮದಿ. ನೌಕರಿ ಹುಡುಕುತ್ತಿದ್ದವರಿಗೆ ಅದೃಷ್ಟ ಒಲಿದು ಬರುತ್ತದೆ. ಸರ್ಕಾರಿ ಉದ್ಯೋಗಿಗಳಿಗೆ ಬೇಡದ ಸ್ಥಳಕ್ಕೆ ಸ್ಥಾನ ಪಲ್ಲಟ. ಸ್ಥಿರಾಸ್ತಿ ಹೊಂದುವ ಯೋಗವಿದೆ. ಪ್ರಯತ್ನಿಸಿ.
ಶ್ರೀ ವಿಷ್ಣು ಸಹಸ್ರನಾಮ ಪಠಿಸಿ. ಶುಭ ಸಂಖ್ಯೆ-1.

ತುಲಾ (ರ.ರಿ.ರು.ರೆ.ರೊ.ತ.ತಿ.ತು.ತೆ)
ಸ್ವಂತ ಉದ್ಯೋಗದಲ್ಲಿ ಅನುಕೂಲ. ಅಧಿಕಾರಿಗಳಿಂದ ಸಹಾಯ ದೊರಕುವುದು. ಆರ್ಥಿಕ ಚೇತರಿಕೆಯಿಂದ ಜೀವನದಲ್ಲಿ ಲವಲವಿಕೆ. ಕೊಟ್ಟ ಮಾತು ಉಳಿಸಿಕೊಂಡು ಪ್ರಶಂಸೆಗೆ ಪಾತ್ರರಾಗುವಿರಿ. ಗುಪ್ತ ಶತ್ರುಗಳ ಕಾಟದಿಂದ ವ್ಯಾಪಾರದಲ್ಲಿ ಹಿನ್ನಡೆ. ಸ್ಥಿರಾಸ್ತಿ ವಿಲೇವಾರಿಯಲ್ಲಿ ವಿಳಂಬದಿಂದ ಮನಸ್ಸಿಗೆ ಬೇಸರ. ದೂರ ಪ್ರಯಾಣಗಳನ್ನು ಮುಂದೂಡಿ. ರೇಸು, ಸಟ್ಟಾಗಳಿಂದ ದೂರವಿರಿ.
ಶ್ರೀ ಅಪರಾಜಿತ ಸ್ತೋತ್ರ ಪಠಿಸಿ. ಶುಭ ಸಂಖ್ಯೆ-3.

ವೃಶ್ಚಿಕ (ತೊ.ನ.ನಿ.ನು.ನೆ.ನೊ.ಯ.ಯಿ.ಯ
ವಾರದಾರಂಭಕ್ಕೆ ಸಕಲರೊಡನೆ ಆದರೆ, ವೈಯಕ್ತಿಕ ಕೆಲಸಗಳಲ್ಲಿ ವಿಶೇಷ ಆಸಕ್ತಿ ವಹಿಸುವುದರಿಂದ ವಿಜಯ ಪ್ರಾಪ್ತಿ. ಮಕ್ಕಳ ಜೀವನದಲ್ಲಿ ಬದಲಾವಣೆ ಉಂಟಾಗಲಿದೆ. ವಿವಾಹಾಕಾಂಕ್ಷಿಗಳಿಗೆ ಮನೆ ಮುಂದೆ ಹಸಿರು ಚಪ್ಪರ ಹಾಕುವ ಸಂದರ್ಭ. ಹೊಸ ಒಡಂಬಡಿಕೆಗಳಿಗೆ ಸಹಿ ಹಾಕುವ ಮುನ್ನ ವಕೀಲರ ಸಲಹೆ ಪಡೆಯಿರಿ. ಪರೋಪಕಾರ ಬುದ್ಧಿಯಿಂದ ಜನ ಮನ್ನಣೆ.
ಶ್ರೀ ಸುಬ್ರಹ್ಮಣ್ಯಸ್ವಾಮಿ ದರ್ಶನ. ಶುಭ ಸಂಖ್ಯೆ-9.

ಧನುಸ್ಸು (ಯೆ.ಯೊ.ಬ.ಬಿ.ಬು.ಧ.ಭ.ಢ.ಬೆ)
ಯತ್ನ ಕಾರ್ಯಗಳು ನಿಧಾನಗತಿಯಲ್ಲಿ ಸಾಗಿದರೂ ನಿರಾಶಾದಾಯಕರಾಗುವ ಪ್ರಮೇಯವಿಲ್ಲ. ಸ್ನೇಹಿತರಲ್ಲಿ ವ್ಯವಹಾರದ ಮಾತುಕತೆಗಳು ಸಫಲವಾಗುವುದು. ಯಾವುದೇ ಕೆಲಸ ಮರುಯತ್ನದಿಂದ ಕಾರ್ಯ ಸಾಧನೆಯಾಗುವುದು. ಹಣಕಾಸು ವಿಷಯ ಟೈಟ್ ಎನಿಸುವುದು. ಕೈ ಹಿಡಿದು ಖರ್ಚು ಮಾಡಿ ವಾರಾಂತ್ಯಕ್ಕೆ ಗೃಹೋಪಯೋಗಿ ವಸ್ತುಗಳ ಖರೀದಿಯಿಂದ ಶ್ರೀಮತಿಗೆ ಸಂತೋಷ.
ಶ್ರೀ ದಕ್ಷಿಣಾಮೂರ್ತಿ ಸ್ತೋತ್ರ ಪಠಿಸಿ. ಶುಭ ಸಂಖ್ಯೆ-5.

ಮಕರ (ಬೊ.ಜ.ಜಿ.ಶಿ.ಶು.ಶೆ.ಶೊ.ಗ.ಗಿ.)
ವಾರದ ಆರಂಭಕ್ಕೆ ಸಮಾಜದಲ್ಲಿ ಗೌರವ ಪ್ರಾಪ್ತಿ. ಗೃಹ ನಿರ್ಮಾಣಕ್ಕೆ ಪ್ರಯತ್ನಗಳು ಮುಂದುವರೆಯುವುದು. ವಿದ್ಯಾ ಕ್ಷೇತ್ರದ ಸಂಶೋಧಕರಿಗೆ ಗುರುತರವಾದ ಕೆಲಸ ದೊರಕಲಿದೆ. ಮನೆಯಲ್ಲಿ ಮಂಗಳ ಕಾರ್ಯಗಳು ನೆರವೇರಲಿದೆ. ವ್ಯಾಪಾರದಲ್ಲಿ ಹೊಸ ಯೋಜನೆಗಳು ಸೇರ್ಪಡೆಗೆ ಅಡ್ಡಿ ಇಲ್ಲ. ಪಿತ್ರಾರ್ಜಿತ ಆಸ್ತಿ ವಿಕ್ರಯದಲ್ಲಿ ಹಿನ್ನಡೆ ಉಂಟಾಗುತ್ತದೆ. ನ್ಯಾಯಾಲಯ ವಿಚಾರಗಳೂ ನಿಮ್ಮ ಪರ ಇರುವುದಿಲ್ಲ.
ಶ್ರೀ ಶನಿ ಅಷ್ಟೋತ್ತರ ಪಠಿಸಿ. ಶುಭ ಸಂಖ್ಯೆ-4.


ಕುಂಭ (ಗು.ಗೆ.ಗೊ.ಸ.ಸಿ.ಸು.ಸೆ.ಸೊ.ದ)
ಮರು ಯತ್ನದಿಂದ ಕಾರ್ಯ ಸಾಧನೆ. ಕೈ ಕೆಸರಾಗದೆ ಬಾಯಿ ಮೊಸರಾಗದು. ಗೃಹೋಪಯೋಗಿ ವಸ್ತುಗಳ ಖರೀದಿ. ಕೆಲಸದ ಒತ್ತಡ ಹೆಚ್ಚಾಗಲಿದೆ. ಅಪರಿಚಿತರೊಡನೆ ಹಣಕಾಸಿನ ವ್ಯವಹಾರ ಮಾಡಿ ನಷ್ಟಕ್ಕೆ ಗುರಿಯಾಗುವಿರಿ. ಕೃಷಿಕರಿಗೆ ಶ್ರಮಕ್ಕೆ ತಕ್ಕ ಪ್ರತಿಫಲ ದೊರೆಯದೆ ನಿರಾಶೆ. ದೇಹಾರೋಗ್ಯದಲ್ಲಿ ಅಸಮತೋಲನ ಕಾಡುವುದು. ಅನಾವಶ್ಯಕ ಸಂಚಾರಗಳು ಸಂಚಕಾರ ತರುವುದು.
ಶ್ರೀ ಶನಿಚಾಲೀಸ ಪಠಿಸಿ. ಶುಭ ಸಂಖ್ಯೆ-5.

ಮೀನ (ದಿ.ದು.ಖ.ಝ.ಥ.ತೆ.ದೊ.ಚ.ಚಿ)
ವಾರದಾರಂಭಕ್ಕೆ ಶುಭ ಸುದ್ದಿ ಬರುವುದು. ಸಾಫ್ಟ್‌ವೇರ್ ಮಂದಿಗೆ ಕಂಪನಿ ಬದಲಾವಣೆಯಿಂದ ಉನ್ನತಿ. ಸರ್ಕಾರಿ ಅಧಿಕಾರಿಗಳು ಕಾನೂನುಬಾಹಿರ ಕೆಲಸ ಮಾಡಿ ಸಂಕಷ್ಟಕ್ಕೆ ಸಿಲುಕುವರು. ರಾಜಕೀಯ ರಂಗದವರಿಗೆ ವಿರೋಧಿಗಳ ಉಪಟಳದಿಂದ ಹಿನ್ನಡೆ ಉಂಟಾಗುವುದು.ಆಸ್ತಿ ವಿವಾದಗಳು ಇತ್ಯರ್ಥವಾಗದೆ ಬೇಸರ. ಅನಾರೋಗ್ಯದಿಂದ ಪ್ರತಿಕೂಲ ಪರಿಣಾಮ. ವೈದ್ಯಕೀಯ ಖರ್ಚುಗಳು.
ಶ್ರೀ ರಾಘವೇಂದ್ರ ವಂದನೆ. ಶುಭ ಸಂಖ್ಯೆ-4.


ಮಕ್ಕಳ ಚಿತ್ರಕಥೆ

'ಗುರುಗಳು ನೀಡಿದ ಉಪದೇಶ'


■ ಹೆಚ್.ಜಿ.ಎನ್.ಪ್ರಸಾದ್
ಮೊ. 98453 76199




ಒಂದು ಬಾರಿ ಒಬ್ಬ ವ್ಯಕ್ತಿ ಬಹಳ ನೊಂದುಕೊಂಡು ಒಬ್ಬ ಗುರುವಿನ ಹತ್ತಿರ ಹೋದ. ಅಲ್ಲಿ ಗುರುವಿನ ಬಳಿ "ನಾನು ಜೀವನದಲ್ಲಿ ಬಹಳ ನೋವು ಅನುಭವಿಸಿಬಿಟ್ಟಿದ್ದೇನೆ, ನನಗೆ ಬದುಕಲೇ ಇಷ್ಟವಾಗುತ್ತಿಲ್ಲ... ನಾನು ಏನು ಮಾಡಲಿ..?" ಎಂದು ಕೇಳಿದ.




ಆಗ ಗುರುವು ಆತನಿಗೆ ಒಂದು ಬಟ್ಟಲಿನಲ್ಲಿ ಉಪ್ಪು ತೆಗೆದುಕೊಂಡು ಬರುವಂತೆ ಹೇಳಿದ. ನಂತರ ಗುರುವು ಉಪ್ಪಿನ ಬಟ್ಟಲಿನಿಂದ ಒಂದು ಚಮಚ ಉಪ್ಪನ್ನು ತೆಗೆದು ನೀಡಿ ತಿನ್ನುವಂತೆ ಹೇಳಿದ. ಆತ ಮನಸಿಲ್ಲದಿದ್ದರೂ ಮುಜುಗರದಿಂದ ಗುರುವಿನ ಆದೇಶದಂತೆ ಚಮಚದಲ್ಲಿದ್ದ ಉಪ್ಪನ್ನು ಬಾಯಿಗೆಕೊಂಡ. ತಕ್ಷಣವೇ ಆಚೆಗೆ ಉಗಿದುಬಿಟ್ಟ. ನಂತರ ಗುರುವು, ಒಂದು ಲೋಟ ನೀರು ತರೆಸಿ, ಅದಕ್ಕೆ ಒಂದು ಚಮಚ ಉಪ್ಪನ್ನು ಹಾಕಿ "ಈಗ ಕುಡಿ" ಎಂದ.




ಅದನ್ನು ಸ್ವೀಕರಿಸಿ ಕುಡಿದ, ಈಗ ಆತನಿಗೆ ವಾಕರಿಕೆಯುಂಟಾಗಿ ವಾಂತಿಯನ್ನೇ ಮಾಡಿಕೊಂಡುಬಿಟ್ಟ. ನಂತರ ಬೇಸರದಿಂದ "ಏನು ಗುರುಗಳೇ ಮೊದಲೇ ನಾನು ಜೀವನದಲ್ಲಿ ಬಹಳ ಬೇಸರದಿಂದ ನೊಂದು ಬಳಲಿದ್ದೇನೆ ಇಂತಹ ಪರಿಸ್ಥಿತಿಯಲ್ಲಿ ಹೀಗೆ ನೀಡುತ್ತಿದ್ದೀರಲ್ಲಾ...?" ಎಂದ.



ಗುರುವು, "ಹಾಗಾದರೆ ಬಾ ನನ್ನ ಜೊತೆಗೆ" ಎಂದು ಹೇಳಿ ಪಕ್ಕದಲ್ಲೇ ಇದ್ದ ಒಂದು ಕೆರೆಯ ಬಳಿ ಕರೆತಂದ. ಗುರುವು ಮತ್ತೆ ಒಂದು ಚಮಚ ಉಪ್ಪನ್ನು ನೀಡಿ ಕರೆಗೆ ಹಾಕುವಂತೆ ಆದೇಶಿಸಿದ. ಗುರು ಹೇಳಿದಂತೆ ಆತ ಒಂದು ಚಮಚ ಉಪ್ಪನ್ನು ಕೆರೆಗೆ ಹಾಕಿದ. ಗುರುವು ಉಪ್ಪನ್ನು ಚೆನ್ನಾಗಿ ಕಲಕಿ ಕುಡಿ ಎಂದ. ಆತ ನೀರು ಕುಡಿದ. ನಂತರ ಗುರು, "ಈಗ ಹೇಗಿದೆ...?" ಎಂದ ಪ್ರಶ್ನಿಸಿದ. "ಈಗ ಚೆನ್ನಾಗಿದೆ" ಎಂದ.



ಮತ್ತೆ ಗುರುವು, "ಏಕೆ... ಉಪ್ಪು ಗೊತ್ತಾಗಲಿಲ್ಲವೇ ನಿನಗೆ ...?" ಪ್ರಶ್ನಿಸಿದರು. ಆತ "ಇಲ್ಲಾ ನನಗೆ ಏನೂ ಗೊತ್ತಾಗಲಿಲ್ಲ...!" ಎಂದ. ಆಗ ಗುರುವು ಹಸನ್ಮುಖಿಯಾಗಿ "ಜೀವನವೇ ಹಾಗೆ ಕಣಯ್ಯಾ,, ನೋವು ಇದೆಯಲ್ಲ... ಅದು ಉಪ್ಪಿನ ಹಾಗೆ. ನೀನು ಒಂದು ಬಟ್ಟಲು ಆಗುತ್ತೀಯೋ ಅಥವಾ ಕೆರೆಯಾಗುತ್ತೀಯೋ ಅದು ನಿನಗೆ ಬಿಟ್ಟಿದ್ದು" ಎಂದರು.



ಗುರುವು ತಮ್ಮ ಮಾತನ್ನು ಮುಂದುವರೆಸಿ,"ನೋವನ್ನು ನೋವೆಂದು ತೆಗೆದುಕೊಂಡರೆ ಮಾತ್ರ ನೋವಾಗುತ್ತದೆ. ಅದನ್ನು ಸವಾಲಾಗಿ ಸ್ವೀಕರಿಸಿದರೆ ನೋವಾಗುವುದಿಲ್ಲ. ಮನಸ್ಸು ವಿಶಾಲವಾಗಿದ್ದರೆ ಸಣ್ಣಪುಟ್ಟ ವಿಷಯಗಳಿಗೆ ನೋವನ್ನು ಮಾಡಿಕೊಳ್ಳುವುದಿಲ್ಲ. ಹಾಗಾಗಿ ನಾವು ಸಂಕುಚಿತವಾದ ಲೋಟವಾಗುತ್ತೇವೋ ಅಥವಾ ವಿಸ್ತಾರವಾದ ಕೆರೆಯಾಗುತ್ತೇವೋ ಅದು ನಮಗೆ ಬಿಟ್ಟಿದ್ದು...! " ಎಂದು ಉಪದೇಶಿಸಿದರು.

ಉಪ ಚುನಾವಣೆಯ 3 ಕ್ಷೇತ್ರಗಳಲ್ಲೂ ಕಾಂಗ್ರೆಸ್ ಜಯಭೇರಿ

ವಿವಿಧೆಡೆ ಕಾಂಗ್ರೆಸ್ ಮುಖಂಡರು, ಕಾರ್ಯಕರ್ತರ ವಿಜಯೋತ್ಸವ





ರಾಜ್ಯದಲ್ಲಿ ನಡೆದ ಉಪಚುನಾವಣೆಯಲ್ಲಿ ಶಿಗ್ಗಾಂವಿ, ಸಂಡೂರು ಹಾಗೂ ಚನ್ನಪಟ್ಟಣ ಕ್ಷೇತ್ರಗಳಲ್ಲಿ ಕಾಂಗ್ರೆಸ್ ಅಭ್ಯರ್ಥಿಗಳು ಜಯಗಳಿಸಿದ ಹಿನ್ನೆಲೆಯಲ್ಲಿ ಕೆ.ಆರ್.ನಗರ, ಹುಣಸೂರು, ಸರಗೂರಲ್ಲಿ ಕಾಂಗ್ರೆಸ್ ಕಾರ್ಯಕರ್ತರು ವಿಜಯೋತ್ಸವ ಆಚರಿಸಿದರು.

ಮೈಸೂರು, ನ.23– ರಾಜ್ಯದಲ್ಲಿ ನಡೆದ ಉಪಚುನಾವಣೆಯಲ್ಲಿ ಶಿಗ್ಗಾಂವಿ, ಸಂಡೂರು ಹಾಗೂ ಚನ್ನಪಟ್ಟಣ ಕ್ಷೇತ್ರಗಳಲ್ಲಿ ಕಾಂಗ್ರೆಸ್ ಅಭ್ಯರ್ಥಿಗಳು ಜಯಗಳಿಸಿದ ಹಿನ್ನೆಲೆಯಲ್ಲಿ ಮೈಸೂರು ಜಿಲ್ಲೆಯ ತಿ.ನರಸೀಪುರ, ಕೆ.ಆರ್.ನಗರ, ಹುಣಸೂರು, ಸರಗೂರು ಹಾಗೂ ಬೆಟ್ಟದಪುರದಲ್ಲಿ ಕಾಂಗ್ರೆಸ್ ಕಾರ್ಯಕರ್ತರು ವಿಜಯೋತ್ಸವ ಆಚರಿಸಿದರು.

ಕೆ.ಆರ್.ನಗರ: ರಾಜ್ಯದಲ್ಲಿ ನಡೆದ ಉಪ ಚುನಾವಣೆಯಲ್ಲಿ ಕಾಂಗ್ರೆಸ್ ಜಯಭೇರಿ ಬಾರಿಸಿದ ಹಿನ್ನೆಲೆಯಲ್ಲಿ ಸಾಲಿಗ್ರಾಮ ಮತ್ತು ಕೆ.ಆರ್.ನಗರ ಬ್ಲಾಕ್ ಕಾಂಗ್ರೆಸ್ ವತಿಯಿಂದ ಕೆ.ಆರ್.ನಗರದ ಗರುಡಗಂಭ ವೃತ್ತದಲ್ಲಿ ವಿಜಯೋತ್ಸವ ಆಚರಿಸಲಾಯಿತು.

2 ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷರ ಸಮ್ಮುಖದಲ್ಲಿ ಜಮಾಯಿಸಿದ ಕಾರ್ಯಕರ್ತರು ಪಟಾಕಿ ಸಿಡಿಸಿ, ಶಾಸಕ ಡಿ.ರವಿಶಂಕರ್, ಸಿಎಂ, ಡಿಸಿಎಂ ಸೇರಿದಂತೆ ಅಭ್ಯರ್ಥಿಗಳಿಗೆ ಜೈಕಾರ ಕೂಗಿದರು.

ನಂತರ ಮಾತನಾಡಿದ ಮುಖಂಡರು, ಮೂರು ಕ್ಷೇತ್ರದಲ್ಲಿ ಜಯಗಳಿಸಿದ ಸಿ.ಪಿ.ಯೋಗೇಶ್ವರ್, ಅನ್ನಪೂರ್ಣ ತುಕಾರಾಂ ಮತ್ತು ಯಾಸಿರ್ ಪಠಾಣ್ ಅವರಿಗೆ ಅಭಿನಂದನೆ ಸಲ್ಲಿಸುತ್ತೇವೆ. ಮೈತ್ರಿಕೂಟದ ಅಪಪ್ರಚಾರ, ಜಾತಿ ರಾಜಕಾರಣಕ್ಕೆ ಆದ್ಯತೆ ನೀಡದ ಮತದಾರರು ಗ್ಯಾರಂಟಿ ಯೋಜನೆಗಳು ಹಾಗೂ ಸರ್ಕಾರದ ಅಭಿವೃದ್ಧಿ ಕಾರ್ಯಗಳಿಗೆ ಮನ್ನಣೆ ನೀಡಿದ್ದಾರೆ. ಮುಂಬರುವ 2028ರಲ್ಲಿಯೂ ಕಾಂಗ್ರೆಸ್ ಅಧಿಕಾರ ಹಿಡಿಯಲಿದೆ ಎಂದು ವಿಶ್ವಾಸ ವ್ಯಕ್ತಪಡಿಸಿದರು.

ಈ ವೇಳೆ ತಾಲೂಕು ಕುರುಬರ ಸಂಘದ ಅಧ್ಯಕ್ಷ ಶಿವಣ್ಣ, ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ ಎಂ.ಎಸ್.ಮಹದೇವ್, ಉದಯಶಂಕರ್, ನಗರ ಯೋಜನಾ ಪ್ರಾಧಿಕಾರದ ಅಧ್ಯಕ್ಷ ಮಹೇಶ್ ಮಾತನಾಡಿದರು. ಪುರಸಭೆ ಸದಸ್ಯರಾದ ಕೆ.ಜಿ.ಸುಬ್ರಹ್ಮಣ್ಯ, ಶಂಕರ್, ನಟರಾಜು, ಮಾಜಿ ಅಧ್ಯಕ್ಷ ನರಸಿಂಹರಾಜು, ಮಾಜಿ ಸದಸ್ಯರಾದ ಕೆ.ವಿನಯ್, ಸೈಯದ್ ಅಸ್ಲಾಂ, ತಾಪಂ ಮಾಜಿ ಸದಸ್ಯರಾದ ಬಿ.ಟಿ.ಮಹದೇವ್, ಅರವಿಂದ್, ಮುಖಂಡರಾದ ಸಿ.ಆರ್.ಲೋಕೇಶ್ ಭರಣಿ, ನಾಗರಾಜನಾಯಕ, ಸುಧಾಕರ್, ನಾಗೇಂದ್ರ, ಕೆ.ಎನ್.ಪ್ರಸನ್ನಕುಮಾರ್, ಶಿವಕುಮಾರ್, ಸಂಜಯ್ ತಿಲಕ್.ಜೆ, ರಾಜಯ್ಯ, ಬಿ.ಹೆಚ್.ಕುಮಾರ್, ರಮೇಶ್, ಸಂಪತ್ ಕುಮಾರ್, ಕೃಷ್ಣೇಗೌಡ, ಪುಟ್ಟರಾಜು, ಮಹದೇವಸ್ವಾಮಿ, ಶಿವರಾಜು, ಆದರ್ಶ, ರಾಜಯ್ಯ ಮತ್ತಿತರರಿದ್ದರು.

ಹುಣಸೂರು: ರಾಜ್ಯದಲ್ಲಿ ನಡೆದ ಉಪ ಚುನಾವಣೆಯಲ್ಲಿ ಮೂರೂ ಕ್ಷೇತ್ರಗಳಲ್ಲಿ ಕಾಂಗ್ರೆಸ್ ಜಯಗಳಿಸಿದ ಹಿನ್ನೆಲೆಯಲ್ಲಿ ನಗರದಲ್ಲಿ ಕಾರ್ಯಕರ್ತರು ಪಟಾಕಿ ಸಿಡಿಸಿ, ಸಿಹಿ ಹಂಚುವ ಮೂಲಕ ವಿಜಯೋತ್ಸವ ಆಚರಿಸಿದರು.

ಈ ವೇಳೆ ಹುಡಾ ಅಧ್ಯಕ್ಷ ಹೆಚ್.ಪಿ.ಅಮರನಾಥ್, ಬ್ಲಾಕ್ ಅಧ್ಯಕ್ಷ ಟಿ.ವಿ.ನಾರಾಯಣ್, ನಗರಾಧ್ಯಕ್ಷ ರಮೇಶ್, ರಾಘು, ಅಫ್ರೋಜ್, ವಕೀಲ ಪುಟ್ಟರಾಜು, ರವಿಪ್ರಸನ್ನ, ಕುಮಾರ್, ಜಾಕೀರ್ ಹುಸೇನ್, ಎಸ್.ಜಯರಾಮ್ ಇತರರಿದ್ದರು.

ಸರಗೂರು: ಉಪ ಚುನಾವಣೆಯಲ್ಲಿ ಕಾಂಗ್ರೆಸ್ ಜಯಗಳಿಸಿದ ಹಿನ್ನೆಲೆಯಲ್ಲಿ ಪಟ್ಟಣದಲ್ಲಿ ಕಾಂಗ್ರೆಸ್ ಮುಖಂಡರು ಹಾಗೂ ಕಾರ್ಯಕರ್ತರು ಪಟಾಕಿ ಸಿಡಿಸಿ, ಸಿಹಿ ಹಂಚುವ ಮೂಲಕ ವಿಜಯೋತ್ಸವ ಆಚರಿಸಿದರು.

ಪಪಂ ಸದಸ್ಯ ಶ್ರೀನಿವಾಸ್ ಮಾತನಾಡಿದರು. ಇದೇ ವೇಳೆ ಶಾಸಕ ಅನಿಲ್, ದರ್ಶನ್, ಸಂಸದ ಸುನೀಲ್ ಬೋಸ್ ಹಾಗೂ ಕಾಂಗ್ರೆಸ್ ಪಕ್ಷಕ್ಕೆ ಕಾರ್ಯಕರ್ತರು ಜೈಕಾರ ಕೂಗಿದರು. ಪಪಂ ಸದಸ್ಯ ಚಲುವಕೃಷ್ಣ, ಮುಖಂಡರಾದ ಬ್ರಹ್ಮದೇವಯ್ಯ, ಎಸ್.ಬಿ.ನಾಗರಾಜು, ತಾಲೂಕು ಕಾಸಪ ಅಧ್ಯಕ್ಷ ಎಂ.ಕೆಂಡಗಣ್ಣಸ್ವಾಮಿ, ಅಕ್ರಮ ಸಕ್ರಮ ಸದಸ್ಯ ಶಿವಶಂಕರ್, ಗುತ್ತಿಗೆದಾರ ಎಸ್.ಎಸ್.ಬಸವರಾಜು, ಬೀದಿ ಬದಿ ವ್ಯಾಪಾರಿಗಳ ಸಂಘದ ಅಧ್ಯಕ್ಷ ಮಹದೇವ್, ಆಟೋ ಚಾಲಕರ ಸಂಘದ ಅಧ್ಯಕ್ಷ ಸಯ್ಯದ್ ವಸೀಮ್, ಲೋಡರ್ಸ್ ಸಂಘದ ಮಾಜಿ ಅಧ್ಯಕ್ಷ ಗೋಪಾಲ್, ರಂಗಸ್ವಾಮಿ, ಕಾರ್ಯಕರ್ತರಾದ ಮಹೇಶ್, ಯಾಸೀನ್, ಸೋಮಶೇಖರ್, ಮಹೇಶ್, ಪರಶುರಾಮ್, ನಿಂಗರಾಜು ಇತರರಿದ್ದರು.

ತಿ.ನರಸೀಪುರದಲ್ಲೂ 'ಕೈ' ಕಾರ್ಯಕರ್ತರ ಸಂಭ್ರಮಾಚರಣೆ



ತಿ.ನರಸೀಪುರದಲ್ಲಿ ಕಾಂಗ್ರೆಸ್ ಕಾರ್ಯಕರ್ತರು ವಿಜಯೋತ್ಸವ ಆಚರಿಸಿದರು.

ತಿ.ನರಸೀಪುರ, ನ.23– ರಾಜ್ಯದಲ್ಲಿ ನಡೆದ ಉಪಚುನಾವಣೆಯಲ್ಲಿ ಕಾಂಗ್ರೆಸ್ ಅಭ್ಯರ್ಥಿಗಳು ಮೂರು ಕ್ಷೇತ್ರಗಳಲ್ಲೂ ಜಯಭೇರಿ ಬಾರಿಸಿದ ಹಿನ್ನೆಲೆಯಲ್ಲಿ ಕಾಂಗ್ರೆಸ್ ಕಾರ್ಯಕರ್ತರು ಪಟ್ಟಣದಲ್ಲಿ ವಿಜಯೋತ್ಸವ ಆಚರಿಸಿ ಸಂಭ್ರಮಿಸಿದರು.

ಶಿಗ್ಗಾಂವಿ, ಸಂಡೂರು ಹಾಗೂ ಚನ್ನಪಟ್ಟಣ ಕ್ಷೇತ್ರಗಳಲ್ಲಿ ಕಾಂಗ್ರೆಸ್ ಅಭ್ಯರ್ಥಿಗಳು ಜಯಗಳಿಸುತ್ತಿದ್ದಂತೆ ಪಟ್ಟಣದ ವಿದ್ಯೋದಯ ಕಾಲೇಜು ವೃತ್ತದಲ್ಲಿ ಜಮಾಯಿಸಿದ ಕಾಂಗ್ರೆಸ್ ಕಾರ್ಯಕರ್ತರು ಪಟಾಕಿ ಸಿಡಿಸಿ, ಸಿಹಿ ಹಂಚಿ ಸಂಭ್ರಮಿಸಿದರು. ಈ ವೇಳೆ ಸಿಎಂ ಸಿದ್ದರಾಮಯ್ಯ, ಡಿಸಿಎಂ ಡಿ.ಕೆ.ಶಿವಕುಮಾರ್, ಮಲ್ಲಿಕಾರ್ಜುನ ಖರ್ಗೆ, ರಾಹುಲ್ ಗಾಂಧಿ, ಪ್ರಿಯಾಂಕ ಗಾಂಧಿ, ಯತೀಂದ್ರ, ಜಮೀರ್ ಅಹ್ಮದ್, ಹೆಚ್.ಸಿ.ಮಹದೇವಪ್ಪ ಹಾಗೂ ಸುನೀಲ್ ಬೋಸ್ ಪರ ಕಾರ್ಯಕರ್ತರು ಘೋಷಣೆ ಕೂಗಿದರು.

ರಾಜ್ಯ ಹಿಂದುಳಿದ ವರ್ಗಗಳ ಕೆಪಿಸಿಸಿ ಕಾರ್ಯದರ್ಶಿ ಎಂ.ರಮೇಶ್ ಮಾತನಾಡಿ, ಚುನಾವಣಾ ಪೂರ್ವದಲ್ಲಿ ವಿಪಕ್ಷದವರು ಕಾಂಗ್ರೆಸ್ ಅಭ್ಯರ್ಥಿಗಳು ಹಾಗೂ ಗ್ಯಾರಂಟಿ ಯೋಜನೆಗಳನ್ನು ಹೀಯಾಳಿಸಿ ಕುಹಕವಾಡಿದ್ದರು. ಆದರೆ ಉಪ ಚುನಾವಣೆಯಲ್ಲಿ ಕಾಂಗ್ರೆಸ್ ಅಭ್ಯರ್ಥಿಗಳನ್ನು ರಾಜ್ಯದ ಜನತೆ ಗೆಲ್ಲಿಸುವ ಮೂಲಕ ಗ್ಯಾರಂಟಿ ಯೋಜನೆಗೆ ಬೆಂಬಲ ಸೂಚಿಸಿದ್ದಾರೆ. ಹೀಗಾಗಿ ವಿಪಕ್ಷಗಳು ಸರ್ಕಾರದ ಮೇಲೆ ಇಲ್ಲಸಲ್ಲದ ಆರೋಪ ಹೊರಿಸುವುದನ್ನು ಬಿಟ್ಟು ಸಹಕಾರ ನೀಡಿ ಎಂದು ಸಲಹೆ ನೀಡಿದರು.

ನಿಖಿಲ್ ಕುಮಾರಸ್ವಾಮಿ ಅವರೇ ನೀವಿನ್ನೂ ಚಿಕ್ಕವರಿದ್ದೀರಿ. ಚುನಾವಣೆಯಲ್ಲಿ ಮೊದಲು ಹಿರಿಯರಿಗೆ ಬೆಲೆ ಕೊಡುವುದನ್ನು ಕಲಿಯಿರಿ. ಚುನಾವಣೆ ವೇಳೆ ಸಚಿವ ಜಮೀರ್ ಅಹ್ಮದ್ ಮೇಲೆ ಏನೆಲ್ಲಾ ಆರೋಪ ಮಾಡಿದ್ದೀರಿ. ಡಿ.ಕೆ.ಶಿವಕುಮಾರ್ ಅವರ ಶಕ್ತಿಯನ್ನು ಚನ್ನಪಟ್ಟಣದಲ್ಲಿ ಅಡಗಿಸುತ್ತೇವೆ ಎಂಬ ಮೈತ್ರಿ ಪಕ್ಷದವರ ಹೇಳಿಕೆ ಈಗ ಏನಾಗಿದೆ ಎಂದು ಪ್ರಶ್ನಿಸಿದ ಅವರು ಎನ್‌ಡಿಎ ಮೈತ್ರಿಕೂಟಕ್ಕೆ ಮುಂದಿನ 10 ವರ್ಷಗಳವರೆಗೂ ವಿಪಕ್ಷ ಸ್ಥಾನವೇ ಗಟ್ಟಿ ಎಂದು ಲೇವಡಿ ಮಾಡಿದರು.

ಪುರಸಭಾಧ್ಯಕ್ಷೆ ವಸಂತ ಶ್ರೀಕಂಠ, ಸದಸ್ಯ ಬಾದಾಮಿ ಮಂಜು, ತಾಲೂಕು ಕುರುಬರ ಸಂಘದ ಅಧ್ಯಕ್ಷ ಮನ್ನೇಹುಂಡಿ ಮಹೇಶ್, ನಿರ್ದೇಶಕರಾದ ಅರುಣ್ ಕುಮಾರ್, ಲೋಹಿತ್, ದೇವರಾಜು, ಚೇತನ್, ಮುರುಳಿ, ಸಿದ್ದಶೆಟ್ಟಿ, ಗುರುಮಲ್ಲ, ಚಿಲ್ಲರೆ ಅಂಗಡಿ ಮಹದೇವ ಸ್ವಾಮಿ, ಹಾಳೇಗೌಡ, ಅಕ್ಕೂರು ರಾಜೇಗೌಡ, ಶಿವಶಂಕರ್, ಕುಮಾರ್, ಬಸವರಾಜು, ಡಾ.ಪ್ರದೀಪ್ ಸೇರಿದಂತೆ ಇನ್ನಿತರರಿದ್ದರು.

ಶಿಕ್ಷಕರು ಮಕ್ಕಳ ಕಲಿಕೆಯಲ್ಲಿ ಸಕಾರಾತ್ಮಕ ಚಿಂತನೆ ಮೂಡಿಸಿ

ಶಿಶುವಾಟಿಕಾ ಆಚಾರ್ಯ ಸಮ್ಮೇಳನದಲ್ಲಿ ಶಾಸಕ ಟಿ.ಎಸ್.ಶ್ರೀವತ್ಸ



ಕರ್ನಾಟಕ ಪ್ರಾಂತ ಶಿಶುವಾಟಿಕಾ ಆಚಾರ್ಯ ಸಮ್ಮೇಳನದಲ್ಲಿ ಶಾಸಕ ಶ್ರೀವತ್ಸ ಮಾತನಾಡಿದರು

ಹುಣಸೂರು, ನ.23– ಶಿಕ್ಷಕರು ಮಕ್ಕಳ ಕಲಿಕೆಯಲ್ಲಿ ಸಕಾರಾತ್ಮಕ ಚಿಂತನೆ ಬಿತ್ತುವುದರಿಂದ ಅವರನ್ನು ದೇಶದ ಉತ್ತಮ ಪ್ರಜೆಯಾಗಿ ರೂಪಿಸಲು ಸಾಧ್ಯವಾಗುತ್ತದೆ ಎಂದು ಶಾಸಕ ಟಿ.ಎಸ್.ಶ್ರೀವತ್ಸ ತಿಳಿಸಿದರು.

ನಗರದ ಶಾಸ್ತ್ರಿ ವಿದ್ಯಾಸಂಸ್ಥೆಯಲ್ಲಿ ನಡೆದ ವಿದ್ಯಾಭಾರತಿ ಕರ್ನಾಟಕ ಪ್ರಾಂತ ಶಿಶುವಾಟಿಕಾ ಆಚಾರ್ಯ ಸಮ್ಮೇಳನವನ್ನು ಉದ್ಘಾಟಿಸಿ ಮಾತನಾಡಿದ ಅವರು, ಮಕ್ಕಳು ದೇಶದ ಆಸ್ತಿಯಾಗಬೇಕಿದ್ದು, ಆ ದಿಕ್ಕಿನಲ್ಲಿ ಮಗುವಿನ ಸರ್ವತೋಮುಖ ಅಭಿವೃದ್ಧಿಗೆ ಶಿಶಿವಾಟಿಕ ಹಂತದ ಶಿಕ್ಷಕ ಮತ್ತು ಪೋಷಕರು ಮಕ್ಕಳಿಗೆ ದೇಶಿಯ ಸಂಸ್ಕೃತಿ ಮತ್ತು ಸಂಪ್ರದಾಯದ ಶಿಕ್ಷಣ ಕಲಿಸುವ ಪ್ರಯತ್ನ ನಡೆಸಬೇಕು ಎಂದರು.

ವಿದ್ಯಾಭಾರತಿ ಅಖಿಲ ಭಾರತ ಸಂಘಟನಾ ಮಂತ್ರಿ ಗೋವಿಂದ ಚಂದ್ರ ಮಹಂತ್ ಮಾತನಾಡಿ, ಮಗುವಿನ ಸರ್ವತೋಮುಖ ಅಭಿವೃದ್ಧಿಗೆ ಶಿಶು ಶಿಕ್ಷಾ ಅಡಿಪಾಯವಾಗಿದ್ದು, ಈ ಶಿಕ್ಷಣ ಪದ್ಧತಿಯಲ್ಲಿ ಭಾರತೀಯ ಸಂಸ್ಕೃತಿ ಮತ್ತು ಸಂಪ್ರದಾಯ ಇರುವ ಪಠ್ಯವನ್ನು ತಿಳಿಸುವ ಮೂಲಕ ಸದೃಢ ಭಾರತ ನಿರ್ಮಿಸಲು ಸಹಕಾರಿಯಾಗಲಿದೆ ಎಂದರು.

ದೇಶದಲ್ಲಿ ಸ್ವಾತಂತ್ರ್ಯ ಪೂರ್ವದಿಂದ ಈವರೆಗೂ ಶಿಕ್ಷಣದಲ್ಲಿ ಬದಲಾವಣೆ ಕಾಣದೆ ಪಾಶ್ಚಿಮಾತ್ಯ ಸಂಸ್ಕೃತಿಯಲ್ಲಿ ವ್ಯಾಸಂಗ ಮಾಡುವ ಪದ್ಧತಿ ಜಾರಿಯಲ್ಲಿದೆ. ನಮ್ಮ ದೇಶ ಪ್ರತಿಯೊಂದು ಕ್ಷೇತ್ರದಲ್ಲೂ ತನ್ನದೇ ನೀತಿ ಅಳವಡಿಸಿಕೊಂಡಿದ್ದರೂ ದೇಶದ ಅಭಿವೃದ್ಧಿಗೆ ಬೇಕಿರುವ ಶಿಕ್ಷಣದಲ್ಲಿ ಬದಲಾವಣೆ ಈವರೆಗೂ ಕಾಣದೆ ದೇಶಿಯ ಸಂಸ್ಕೃತಿ ಮತ್ತು ಸಂಪ್ರದಾಯ ಭವಿಷ್ಯದ ಕುಡಿಗಳಿಗೆ ಇಲ್ಲವಾಗಿರುವುದು ವಿಪರ್ಯಾಸ ಎಂದರು.

ವಿದ್ಯಾಭಾರತಿ ದೇಶದಲ್ಲಿ 1952 ರಿಂದಲೂ ಶಿಕ್ಷಣ ಕ್ಷೇತ್ರದಲ್ಲಿ ದೇಶದ ಸಂಸ್ಕೃತಿ ಮತ್ತು ಸಂಪ್ರದಾಯದ ತಳಹದಿಯಲ್ಲಿ ಶಿಕ್ಷಣ ಕ್ಷೇತ್ರ ಕಟ್ಟಿಕೊಂಡು ಬಂದಿದೆ. ಇತ್ತೀಚಿನ ದಿನದಲ್ಲಿ ರಾಷ್ಟ್ರೀಯ ಶಿಕ್ಷಣ ನೀತಿಯಲ್ಲಿ ಬದಲಾವಣೆ ತರುವ ಚರ್ಚೆಗಳು ನಡೆದು ಕೇಂದ್ರದಲ್ಲಿ ಪ್ರಧಾನಿ ನೇತೃತ್ವದಲ್ಲಿ ಕೇಂದ್ರಿಯ ಪಠ್ಯ ಶಿಕ್ಷಣ ವಿಭಾಗದಲ್ಲಿ ಭಾರತೀಯ ಮೌಲ್ಯಗಳುಳ್ಳ ಪಠ್ಯವನ್ನು ಅಳವಡಿಸಿ ಭವಿಷ್ಯದ ಕುಡಿಗಳಿಗೆ ತಿಳಿಸುವ ಪ್ರಯತ್ನ ನಡೆದಿದೆ. ದೇಶದಲ್ಲಿ 16 ರಾಜ್ಯದಲ್ಲಿ ರಾಷ್ಟ್ರೀಯ ಶಿಕ್ಷಣ ನೀತಿ ಜಾರಿಗೊಳಿಸಿದ್ದು, ವಿಶ್ವದಾದ್ಯಂತ ರಾಷ್ಟ್ರೀಯ ಶಿಕ್ಷಣ ನೀತಿ ಕುರಿತು ಗಂಭೀರ ಚರ್ಚೆಗಳು ನಡೆದು ಯೂನಿಸೆಫ್ ಆಸಕ್ತಿ ತೋರಿಸಿದೆ ಎಂದರು.

ಕಾರ್ಯಕ್ರಮದ ಅಧ್ಯಕ್ಷತೆಯನ್ನು ವಿದ್ಯಾಭಾರತಿ ಕರ್ನಾಟಕದ ಅಧ್ಯಕ್ಷ ಪರಮೇಶ್ವರ ಹೆಗ್ಗಡೆ ವಹಿಸಿದ್ದರು. ತಾರಾ ಮಾತನಾಡಿದರು. ಶಾಸ್ತ್ರಿ ವಿದ್ಯಾಸಂಸ್ಥೆಯ ಕಾರ್ಯದರ್ಶಿ ರಾಧಾಕೃಷ್ಣ ಸ್ವಾಗತ ಭಾಷಣ ಮಾಡಿದರು.

ಆಕಸ್ಮಿಕ ಬೆಂಕಿಗೆ ಗ್ಯಾರೇಜ್ ಸಂಪೂರ್ಣ ಭಸ್ಮ

18 ಬೈಕ್, 2 ಕಾರು ಬೆಂಕಿಗೆ ಆಹುತಿ: 20 ಲಕ್ಷಕ್ಕೂ ಹೆಚ್ಚು ನಷ್ಟ



ಆಕಸ್ಮಿಕ ಬೆಂಕಿಗೆ ಗ್ಯಾರೇಜ್ ಭಸ್ಮವಾಗಿರುವುದು

ಹೆಚ್.ಡಿ.ಕೋಟೆ, ನ.23– ಆಕಸ್ಮಿಕ ಬೆಂಕಿಗೆ ಗ್ಯಾರೇಜ್ ಸಂಪೂರ್ಣ ಭಸ್ಮವಾಗಿರುವ ಘಟನೆ ತಾಲೂಕಿನ ಪಡುಕೋಟೆ ಗ್ರಾಮದಲ್ಲಿ ಶುಕ್ರವಾರ ರಾತ್ರಿ ನಡೆದಿದೆ.

ತಾಲೂಕಿನ ಪಡುಕೋಟೆ ಗಾಂಧಿನಗರ ಗ್ರಾಮದ ನಿವಾಸಿ ಅಜಿತ್ ಕುಮಾರ್ ಅವರಿಗೆ ಸೇರಿದ ಗ್ಯಾರೇಜ್ ಭಸ್ಮವಾಗಿರುವುದು. ಈ ವೇಳೆ ರಿಪೇರಿಗೆ ಬಂದಿದ್ದ 18 ಬೈಕ್‌ಗಳು, 2 ಕಾರುಗಳು ಹಾಗೂ ಇತರೆ ವಸ್ತುಗಳು ಬೆಂಕಿಗೆ ಆಹುತಿಯಾಗಿ 20 ಲಕ್ಷಕ್ಕೂ ಹೆಚ್ಚು ನಷ್ಟ ಸಂಭವಿಸಿದೆ.

ಮೆಕ್ಯಾನಿಕ್ ಕೆಲಸ ಮಾಡುತ್ತಿದ್ದ ಅಜಿತ್ ಕುಮಾರ್ ಅವರು ಗ್ಯಾರೇಜ್ ನಡೆಸುತ್ತಿದ್ದರು. ನಿತ್ಯ ಮಧ್ಯರಾತ್ರಿ 1 ಗಂಟೆವರೆಗೂ ಕೆಲಸ ಮಾಡುತ್ತಿದ್ದ ಅವರು ನಂತರ ಮನೆಗೆ ತೆರಳುತ್ತಿದ್ದರು. ಆದರೆ ಶುಕ್ರವಾರ ರಾತ್ರಿ 10.30ರಲ್ಲಿ ಊಟಕ್ಕೆಂದು ಮನೆಗೆ ಹೋದ ವೇಳೆ ಗ್ಯಾರೇಜ್‌ಗೆ ಆಕಸ್ಮಿಕ ಬೆಂಕಿ ತಗುಲಿದೆ. ಈ ವೇಳೆ ಅಜಿತ್ ಹಾಗೂ ಕುಟುಂಬದವರು ಮತ್ತು ಗ್ರಾಮಸ್ಥರು ಬೆಂಕಿ ನಂದಿಸಲು ಪ್ರಯತ್ನಿಸಿದರಾದರೂ ಯಾವುದೇ ಪ್ರಯೋಜನವಾಗಲಿಲ್ಲ. ಈ ಸಂದರ್ಭ ಗಾಬರಿಗೊಳಗಾಗಿದ್ದ ಗ್ರಾಮಸ್ಥರು ಹೆಚ್.ಡಿ.ಕೋಟೆ ಅಗ್ನಿಶಾಮಕ ದಳಕ್ಕೆ ಕರೆ ಮಾಡುವ ಬದಲು ಬೆಂಗಳೂರು ಅಗ್ನಿಶಾಮಕ ದಳಕ್ಕೆ ಕರೆ ಮಾಡಿದ್ದು, ಸ್ಥಳಕ್ಕೆ ಅಗ್ನಿಶಾಮಕ ದಳದ ಸಿಬ್ಬಂದಿ ಆಗಮಿಸಲಿಲ್ಲ ಎಂದು ಆಕ್ರೋಶ ವ್ಯಕ್ತಪಡಿಸಿದರು.

ಈ ವೇಳೆ ಬೆಂಗಳೂರಿನ ಅಗ್ನಿಶಾಮಕ ದಳದವರು ಕೋಟೆ ಅಗ್ನಿಶಾಮಕ ದಳದ ಸಿಬ್ಬಂದಿ ಕರೆ ಮಾಡಿ ತಿಳಿಸಲಾಗಿ ಸ್ಥಳಕ್ಕಾಗಮಿಸಿದ ಸಿಬ್ಬಂದಿ ಬೆಂಕಿ ನಂದಿಸುವಲ್ಲಿ ಯಶಸ್ವಿಯಾಗಿದ್ದಾರೆ. ವಿಷಯ ತಿಳಿದು ಸ್ಥಳಕ್ಕಾಗಮಿಸಿದ ಸಿಪಿಐ ಶಬ್ಬೀರ್ ಹುಸೇನ್ ಪರಿಶೀಲನೆ ನಡೆಸಿದರು. ಈ ಸಂಬಂಧ ಹೆಚ್.ಡಿ.ಕೋಟೆ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ಬೆಟ್ಟದಪುರದಲ್ಲಿ ವಿಜಯೋತ್ಸವ



ರಾಜ್ಯದಲ್ಲಿ ನಡೆದ ಉಪಚುನಾವಣೆಯಲ್ಲಿ ಕಾಂಗ್ರೆಸ್ ಜಯಗಳಿಸಿದ ಹಿನ್ನೆಲೆಯಲ್ಲಿ ಬೆಟ್ಟದಪುರದಲ್ಲಿ ಕಾಂಗ್ರೆಸ್ ಕಾರ್ಯಕರ್ತರು ವಿಜಯೋತ್ಸವ ಆಚರಿಸಿದರು. ಈ ವೇಳೆ ಗ್ರಾಪಂ ಮಾಜಿ ಅಧ್ಯಕ್ಷ ಬಿ.ಸಿ.ಗಿರೀಶ್, ಮುಖಂಡರಾದ ಕುಮಾರ್, ಮಧು, ಮಹೇಶ್, ಗ್ರಾಪಂ ಮಾಜಿ ಸದಸ್ಯ ಜಗದೀಶ್, ಮಹಿದ್ದೀನ್ ಸೇರಿದಂತೆ ಇನ್ನಿತರರಿದ್ದರು.

ಕನ್ನಡ ಉಳಿವಿಗೆ ಎಲ್ಲರ ಸಹಕಾರ ಅಗತ್ಯ

ಸಾಹಿತಿ ಮಲ್ಕುಂಡಿ ಮಹದೇವಸ್ವಾಮಿ



ಹುರದಲ್ಲಿ ಕನ್ನಡ ರಾಜ್ಯೋತ್ಸವ, ಮಕ್ಕಳ ದಿನಾಚರಣೆ ನಡೆಯಿತು

ಮಲ್ಕುಂಡಿ, ನ.23– ಕನ್ನಡ ಭಾಷೆ ಉಳಿವಿಗೆ ಪ್ರತಿಯೊಬ್ಬರ ಸಹಕಾರ ಅಗತ್ಯ ಎಂದು ಸಾಹಿತಿ ಮಲ್ಕುಂಡಿ ಮಹದೇವಸ್ವಾಮಿ ತಿಳಿಸಿದರು.

ಇಲ್ಲಿಗೆ ಸಮೀಪದ ಹುರ ಗ್ರಾಮದ ಗಾಯಿತ್ರಿ ವಿದ್ಯಾಸಂಸ್ಥೆಯಲ್ಲಿ ಆಯೋಜಿಸಿದ್ದ ಕನ್ನಡ ರಾಜ್ಯೋತ್ಸವ ಹಾಗೂ ಮಕ್ಕಳ ದಿನಾಚರಣೆ ಉದ್ಘಾಟಿಸಿ ಮಾತನಾಡಿದ ಅವರು, ಮಗುವಿಗೆ ಜಾಗತಿಕವಾಗಿ ನಡೆಯುತ್ತಿರುವ ಎಲ್ಲಾ ವಿದ್ಯಮಾನಗಳು ಕನ್ನಡದಲ್ಲೇ ಪರಿಚಯವಾಗಬೇಕು. ಎಲ್ಲಿ ಸಾಧ್ಯವೋ ಅಂತಹ ಕಡೆಗಳಲ್ಲಿ ಗರಿಷ್ಠ ಮಟ್ಟದಲ್ಲಿ ಕನ್ನಡವನ್ನೇ ಬಳಸಬೇಕು. ಕನ್ನಡದಲ್ಲೇ ವ್ಯವಹಾರ ಮಾಡಬೇಕು. ಗ್ರಾಪಂನಿಂದ ವಿಧಾನಸೌಧದವರೆಗೂ, ಪ್ರಾಥಮಿಕ ಶಿಕ್ಷಣದಿಂದ ಉನ್ನತ ಶಿಕ್ಷಣದವರೆಗೂ ಅನುಕೂಲವಾಗುವ ಸಶಕ್ತ ಸದೃಢ ತಂತ್ರಾಂಶವೊಂದು ಕನ್ನಡ ಭಾಷೆಗೆ ಅಗತ್ಯವಿದೆ ಎಂದರು.

ಸಂಸ್ಥೆ ಕಾರ್ಯದರ್ಶಿ ನಟರಾಜ್ ಮಾತನಾಡಿ, ಪ್ರತಿಯೊಬ್ಬ ವಿದ್ಯಾರ್ಥಿಗಳು ಕನ್ನಡ ಭಾಷೆ ಬಳಸಿ. ಕನಕದಾಸರು ಹಾಗೂ ನೆಹರು ಅವರ ಆದರ್ಶಗಳನ್ನು ಪ್ರತಿಯೊಬ್ಬರು ಅಳವಡಿಸಿಕೊಳ್ಳಬೇಕು ಎಂದು ತಿಳಿಸಿದರು.

ಈ ವೇಳೆ ಹಲ್ಲರೆ ಮಠದ ಬಸವಣ್ಣ ಸ್ವಾಮೀಜಿ, ಕಸುವಿನಹಳ್ಳಿ ಮಠದ ಶಿವಕುಮಾರಸ್ವಾಮೀಜಿ, ರಮೇಶ್, ರಂಗನಾಥ್, ಪತ್ರಕರ್ತ ಚನ್ನಪ್ಪ, ಮುಖ್ಯ ಶಿಕ್ಷಕ ಮಹದೇವಯ್ಯ, ಶಿಕ್ಷಕರಾದ ಸರೋಜ, ನಾಗೇಂದ್ರ, ಶಿವಲಿಂಗಮ್ಮ, ಶಿವಲಿಂಗಯ್ಯ, ಶೋಭಾ, ಶಾಂತ, ಪದ್ಮಶ್ರೀ, ಶಿವಲಿಂಗಸ್ವಾಮಿ, ರಜಿನಿ, ಸುಮ, ಮಹದೇವಸ್ವಾಮಿ, ರಕ್ಷಿತಾ ಸೇರಿದಂತೆ ಇತರರಿದ್ದರು.

ನಂ.ಗೂಡಲ್ಲಿ ಉಚಿತ ಆರೋಗ್ಯ ತಪಾಸಣಾ ಶಿಬಿರ



ಉಚಿತ ಆರೋಗ್ಯ ತಪಾಸಣಾ ಶಿಬಿರ ನಡೆಯಿತು.

ನಂಜನಗೂಡು, ನ.23– ನಗರದ ಚಾಮುಂಡೇಶ್ವರಿ ದೇವಾಲಯದ ಆವರಣದಲ್ಲಿ ಶನಿವಾರ ಮೈಸೂರಿನ ಅಮೃತ ಕೃಪ ಆಸ್ಪತ್ರೆಹಾಗೂ ನಯನಜ ಕ್ಷತ್ರಿಯ ಸಮಾಜದ ಸಹಯೋಗದಲ್ಲಿ ಉಚಿತ ಆರೋಗ್ಯ ತಪಾಸಣಾ ಹಾಗೂ ಚಿಕಿತ್ಸಾ ಶಿಬಿರ ನಡೆಸಲಾಯಿತು. ಶಿಬಿರದಲ್ಲಿ 395 ರೋಗಿಗಳಿಗೆ ಬಿಪಿ, ಶುಗರ್, ರಕ್ತ ಪರೀಕ್ಷೆ, ಇಸಿಜಿ, ಎಕ್ಸರೆ ಪರೀಕ್ಷೆಗಳನ್ನು ನಡೆಸಿ ಉಚಿತ ಚಿಕಿತ್ಸೆ ಹಾಗೂ ಔಷಧ, ಹಣ್ಣು–ಹಂಪಲುಗಳನ್ನು ನೀಡಲಾಯಿತು.

ಜಯದೇವ ಆಸ್ಪತ್ರೆ ಹೃದ್ರೋಗ ತಜ್ಞ ಪಿ.ಕುಮಾರ್ ಮಾತನಾಡಿ, ಸಾಮಾನ್ಯ ಜನರು ಬಿಪಿ, ಶುಗರ್ ಇರುವುದನ್ನು ಅರಿಯದೆ ದುರಂತಕ್ಕೊಳಗಾಗುತ್ತಿದ್ದಾರೆ. ಆರೋಗ್ಯ ತಪಾಸಣೆ ಶಿಬಿರಗಳಲ್ಲಿ ಭಾಗವಹಿಸಿ ತಮ್ಮ ಆರೋಗ್ಯ ತಪಾಸಣೆಗೊಳಪಟ್ಟು ಸಮಯಕ್ಕೆ ಸರಿಯಾಗಿ ಸೂಕ್ತ ಚಿಕಿತ್ಸೆ ಪಡೆದರೆ ಆಯುಷ್ಯವನ್ನು ವೃದ್ಧಿಸಿಕೊಳ್ಳಬಹುದು ಮತ್ತು ರೋಗ ಮುಕ್ತರಾಗಬಹುದು ಎಂದು ಹೇಳಿದರು.

ಅಮೃತ ಕೃಪ ಆಸ್ಪತ್ರೆ ವೈದ್ಯೆ ಸೌಮ್ಯ ಮತ್ತು ಅವರ ತಂಡ, ವಿಶ್ವ ಹಿಂದೂ ಪರಿಷತ್‌ನ ಘಣೇಶ್, ಬಿಜೆಪಿ ಜಿಲ್ಲಾ ಕಾರ್ಯದರ್ಶಿ ಎನ್.ಸಿ.ಬಸವಣ್ಣ, ಎನ್.ಮಹೇಶ್, ಆರ್.ವಿ.ರೇವಣ್ಣ ಗೋಪಾಲ್ ರಾವ್, ಕಾಶಿರಾವ್, ಮಣಿಕಂಠ, ಪ್ರಭುಸ್ವಾಮಿ, ಶ್ರೀಧರ್, ತಾಲೂಕು ನಯನಜ ಕ್ಷತ್ರಿಯ ಸಂಘದ ಅಧ್ಯಕ್ಷ ಶ್ರೀನಿವಾಸ್ ಉಪಸ್ಥಿತರಿದ್ದರು.

ವಿವಿಧ ಬೇಡಿಕೆ ಈಡೇರಿಕೆಗೆ ಆಗ್ರಹಿಸಿ ಪ್ರತಿಭಟನೆ



ಚುಂಚನಕಟ್ಟೆಯಲ್ಲಿ ರೈತರು ಪ್ರತಿಭಟನೆ ನಡೆಸಿದರು.

ಚುಂಚನಕಟ್ಟೆ ನ.23– ಹಾಲಿನ ಪ್ರೋತ್ಸಾಹ ಧನ ವಿತರಣೆ ಸೇರಿದಂತೆ ವಿವಿಧ ಬೇಡಿಕೆ ಈಡೇರಿಕೆಗೆ ಆಗ್ರಹಿಸಿ ರೈತರು ಗ್ರಾಮದಲ್ಲಿ ಶನಿವಾರ ಪ್ರತಿಭಟನೆ ನಡೆಸಿದರು.

ಇಲ್ಲಿನ ಹಾಲು ಉತ್ಪಾದಕರ ಮಹಿಳಾ ಸಹಕಾರ ಸಂಘದ ಎದುರು ಜಮಾಯಿಸಿದ ರೈತರು ಪ್ರತಿಭಟನೆ ನಡೆಸಿ ಆಕ್ರೋಶ ವ್ಯಕ್ತಪಡಿಸಿದರು.

ಈ ವೇಳೆ ಮಾತನಾಡಿದ ರೈತರು, ಹಾಲಿನ ದರದಲ್ಲಿ ವ್ಯತ್ಯಾಸವಾಗುತ್ತಿದ್ದು, ಸ್ವಲ್ಪ ಡಿಗ್ರಿ ವ್ಯತ್ಯಾಸವಾದರೆ 28 ರೂ. ನೀಡಲಾಗುತ್ತಿದೆ 3.5 ಜಿಡ್ಡಿನಾಂಶ ಇರುವ ಹಾಲಿಗೆ 30ರಿಂದ 32 ರೂ. ನೀಡಲಾಗುತ್ತಿದೆ ಅಲ್ಲದೇ ಡೈರಿಯಲ್ಲಿ ರೈತರಿಗೆ ಸಮರ್ಪಕವಾಗಿ ಹಾಲಿನ ಪ್ರೋತ್ಸಾಹಧನ ನೀಡುತ್ತಿಲ್ಲ. ನಿತ್ಯ 30 ಲೀಟರ್ ಹಾಲು ಸರಬರಾಜು ಮಾಡುವ ರೈತರಿಗೂ ತಿಂಗಳಿಗೆ 2000 ಮಾತ್ರ ಸಹಾಯಧನ ವಿತರಿಸಲಾಗುತ್ತಿದೆ. ಈ ಬಗ್ಗೆ ಕಾರ್ಯದರ್ಶಿಯವರನ್ನು ಪ್ರಶ್ನಿಸಿದರೆ ಗಲಾಟೆ ಮಾಡಲು ಬಂದಿದ್ದೀರಾ ಎಂದು ದುರುತ್ತಾ ಪೊಲೀಸ್ ಠಾಣೆಗೆ ದೂರು ನೀಡುವುದಾಗಿ ಬೆದರಿಕೆ ಹಾಕುತ್ತಾರೆ. ಈ ಸಂಬಂಧ ಕೆಎಂಎಫ್ ಅಧಿಕಾರಿಗಳಿಗೆ ತಿಳಿಸಿದರೂ ಯಾವುದೇ ಪ್ರಯೋಜನವಾಗಿಲ್ಲ ಎಂದು ಆರೋಪಿಸಿದರು.

ಷೇರುದಾರ ಮಹಿಳೆಯರಿಗೆ ಯಾವುದೇ ನೋಟಿಸ್ ನೀಡದೆ ವಾರ್ಷಿಕ ಮಹಾಸಭೆ ನಡೆಸುತ್ತಾ ಬಂದಿದ್ದು, ಸಂಘ ಸ್ಥಾಪನೆಯಾದಾಗಿನಿಂದ ಚುನಾವಣೆ ನಡೆಸದೆ ತಮಗೆ ಬೇಕಾದವರನ್ನು ಅಧ್ಯಕ್ಷ, ನಿರ್ದೇಶಕರನ್ನಾಗಿ ನೇಮಕ ಮಾಡುತ್ತಿದ್ದಾರೆ ಎಂದು ದೂರಿದರು. ಮುಂದಿನ ದಿನಗಳಲ್ಲಿ ಸಂಬಂಧಪಟ್ಟವರು ಇಲ್ಲಿನ ಸಮಸ್ಯೆ ಬಗೆಹರಿಸಬೇಕು ಎಂದು ಒತ್ತಾಯಿಸಿದರು.

ಪ್ರತಿಭಟನೆಯಲ್ಲಿ ನಿರ್ದೇಶಕರಾದ ಗೌರಮ್ಮ, ಸದಸ್ಯರಾದ ಸವಿತಾ, ಸುಂದ್ರಮ್ಮ, ಕಲ್ಪನಾ, ರೈತರಾದ ಮನೋಹರ, ಸತೀಶ, ರಮೇಶ, ಆನಂದ, ವಸಂತ, ಚಂದ್ರಣ್ಣ, ಸೌಮ್ಯ, ರಾಜು, ಶಿವಲಿಂಗೇಗೌಡ, ರಾಜೇಗೌಡ, ವೆಂಕಟೇಗೌಡ, ಶ್ರೀನಿವಾಸ್, ಗೋವಿಂದೇಗೌಡ, ಗೌರಮ್ಮ ಮತ್ತಿತರರಿದ್ದರು.

ವಿಜ್ಞಾನ ವಸ್ತು ಪ್ರದರ್ಶನದಿಂದ

ವಿದ್ಯಾರ್ಥಿಗಳಲ್ಲಿ ವೈಜ್ಞಾನಿಕ ಮನೋಭಾವ ಬೆಳವಣಿಗೆ: ಬಿಇಓ



ವಿಜ್ಞಾನ ಮತ್ತು ಕಲಾ ವಸ್ತು ಪ್ರದರ್ಶನವನ್ನು ಬಿಇಓ ಶಿವಮೂರ್ತಿ ವೀಕ್ಷಿಸಿದರು.

ತಿ.ನರಸೀಪುರ, ನ.23– ವಿಜ್ಞಾನ ವಸ್ತು ಪ್ರದರ್ಶನದಿಂದ ವಿದ್ಯಾರ್ಥಿಗಳಲ್ಲಿ ವೈಜ್ಞಾನಿಕ ಮನೋಭಾವ ಬೆಳವಣಿಗೆಯಾಗಲಿದೆ ಎಂದು ಕ್ಷೇತ್ರ ಶಿಕ್ಷಣಾಧಿಕಾರಿ ಶಿವಮೂರ್ತಿ ತಿಳಿಸಿದರು.

ಪಟ್ಟಣದ ಎನ್‌ಕೆಎಫ್ ಪಬ್ಲಿಕ್ ಶಾಲೆಯಲ್ಲಿ ಆಯೋಜಿಸಿದ್ದ ವಿಜ್ಞಾನ ಹಾಗೂ ಕಲಾ ವಸ್ತು ಪ್ರದರ್ಶನದಲ್ಲಿ ವಿದ್ಯಾರ್ಥಿಗಳು ತಯಾರಿಸಿದ್ದ ವಿವಿಧ ಮಾದರಿಗಳನ್ನು ವೀಕ್ಷಿಸಿ ಮೆಚ್ಚುಗೆ ವ್ಯಕ್ತಪಡಿಸಿ ಅವರು ಮಾತನಾಡಿದರು.

ವಿಜ್ಞಾನ ವಸ್ತು ಪ್ರದರ್ಶನದಲ್ಲಿ ವಿದ್ಯಾರ್ಥಿಗಳು ಭಾಗವಹಿಸುವುದರಿಂದ ಸೃಜನಶೀಲತೆ, ಕೌಶಲ್ಯ ಹಾಗೂ ಕ್ರಿಯಾಶೀಲತೆ ಪ್ರದರ್ಶಿಸಲು ಸಾಧ್ಯವಾಗುತ್ತದೆ. ವಿದ್ಯಾರ್ಥಿಗಳು ಸ್ಪರ್ಧಾ ಮನೋಭಾವ ಬೆಳೆಸಿಕೊಳ್ಳಬೇಕು. ವಿಜ್ಞಾನದ ತತ್ವಗಳನ್ನು ಬಳಸಿಕೊಂಡು ಜನಸಾಮಾನ್ಯರಿಗೆ ಉಪಯುಕ್ತವಾದ ತಂತ್ರಜ್ಞಾನ ಅಭಿವೃದ್ಧಿ ಪಡಿಸಲು ಮುಂದಾಗಬೇಕು. ತಂತ್ರಜ್ಞಾನದ ಮಹತ್ವವನ್ನು ಜನಸಾಮಾನ್ಯರಿಗೆ ತಿಳಿಸುವ ಕಾರ್ಯದಲ್ಲಿ ತೊಡಗಿಸಿಕೊಳ್ಳಬೇಕು ಎಂದರು.


ಇತ್ತೀಚೆಗೆ ವಿಜ್ಞಾನ ತಂತ್ರಜ್ಞಾನದಲ್ಲಿ ಆಗುತ್ತಿರುವ ನೂತನ ಬೆಳವಣಿಗೆಗಳು ಸರ್ವರಿಗೂ ತಲುಪಬೇಕಾಗಿದೆ. ಶುದ್ಧ ಮತ್ತು ಹಸಿರು ಶಕ್ತಿಯ ಮಹತ್ವ ಆಹಾರ, ಆರೋಗ್ಯ ಮತ್ತು ನೈರ್ಮಲ್ಯ, ಬಾಹ್ಯಕಾಶದ ಹುಡುಕಾಟ, ಪರಿಸರ ಸ್ನೇಹಿ ತಂತ್ರಜ್ಞಾನ ಮತ್ತು ಪ್ಲಾಸ್ಟಿಕ್ ಮಾಲಿನ್ಯ ತಡೆಗಟ್ಟುವುದರ ಕುರಿತು ಮತ್ತು ಜೈವಿಕ ತಂತ್ರಜ್ಞಾನ ಮತ್ತು ಆರೋಗ್ಯದ ಮಹತ್ವವನ್ನು ಸಾರ್ವಜನಿಕರಿಗೆ ತಿಳಿಸಬೇಕಾದಲ್ಲಿ ಇಂತಹ ವಸ್ತು ಪ್ರದರ್ಶನಗಳನ್ನು ಪ್ರತಿ ಶಾಲೆಯಲ್ಲಿ ಹಮ್ಮಿಕೊಳ್ಳುವ ಅವಶ್ಯಕತೆ ಇದೆ ಎಂದರು.

ಮುಖ್ಯ ಶಿಕ್ಷಕಿ ಹೇಮಾ ಮಾತನಾಡಿ, ಮಕ್ಕಳಲ್ಲಿ ಅಡಗಿರುವ ಪ್ರತಿಭೆ ಅನಾವರಣಕ್ಕೆ ವಸ್ತು ಪ್ರದರ್ಶನಗಳು ಸಹಕಾರಿಯಾಗಲಿವೆ. 250ಕ್ಕೂ ಹೆಚ್ಚು ಮಕ್ಕಳು ವಸ್ತು ಪ್ರದರ್ಶನದಲ್ಲಿ ಭಾಗವಹಿಸಿ ಶಿಕ್ಷಕರು ಮತ್ತು ಪೋಷಕರ ಮಾರ್ಗದರ್ಶನದೊಂದಿಗೆ ವಿವಿಧ ಮಾದರಿಗಳನ್ನು ತಯಾರಿಸಿದ್ದು, ಮಾದರಿಗಳ ಅರಿವು ಮಕ್ಕಳಲ್ಲಿದೆ. ವಿಜ್ಞಾನ ಮಾತ್ರವಲ್ಲದೇ, ಕನ್ನಡ, ಇಂಗ್ಲಿಷ್, ಸಮಾಜಕ್ಕೆ ಸಂಬಂಧಿಸಿದ ಹಾಗೂ ಕನ್ನಡ ವರ್ಣಮಾಲೆಯ ವಿಚಾರವಾಗಿಯೂ ಪ್ರದರ್ಶನ ಮಾಡಲಾಗಿದೆ ಎಂದು ತಿಳಿಸಿದರು.

ಶಾಲಾ ಮಕ್ಕಳು ಪ್ರದರ್ಶನಕ್ಕೀಟ್ಟಿದ್ದ ಅಯೋಧ್ಯೆಯ ಶ್ರೀರಾಮಮಂದಿರ, ಮಾನವನ ಹೃದಯ, ಲೋಟಸ್, ಬುರ್ಜ್ ಖಲೀಫಾ ಕಟ್ಟಡ, ಹಂಪಿಯ ಕಲ್ಲಿನ ರಥ ಸೇರಿದಂತೆ ವಿವಿಧ ಮಾದರಿಗಳು ಗಮನ ಸೆಳೆದವು.

ಈ ವೇಳೆ ಶಾಲೆ ಸಂಸ್ಥಾಪಕ ಎನ್.ಕೆ.ಫರೀದ್, ಶಿಕ್ಷಣ ಪರಿವೀಕ್ಷಕ ಜಗದೀಶ್, ಸಹ ಶಿಕ್ಷಕಿಯರಾದ ಅಶ್ವಿನಿ, ರೇಖಾ, ಶಿಲ್ಪಶ್ರೀ, ರಜಿಯಾ, ಬಿ.ಶೈಲಾ, ಎಂ.ಶಿಲ್ಪ, ಲಾವಣ್ಯ, ಬಿ.ಗೀತಾ, ಬಿ.ಅನಿತಾ, ಎನ್.ರಶ್ಮಿ, ಭಾನುಮತಿ, ಹಾಜಿರಾ, ಪಲ್ಲವಿ, ರಕ್ಷಿತಾ ಸೇರಿದಂತೆ ಪೋಷಕರು ಹಾಜರಿದ್ದರು.

ಅರಸು ಭವನಕ್ಕೆ ವೈಯಕ್ತಿಕ ಅನುದಾನ ನೀಡಲು ಮನವಿ



ತಿ.ನರಸೀಪುರ ತಾಲೂಕಿನ ಎಸ್.ದೊಡ್ಡಪುರ ಗ್ರಾಮದ ಅರಸು ಭವನಕ್ಕೆ ವೈಯಕ್ತಿಕ ಅನುದಾನ ನೀಡುವಂತೆ ಸಂಸದ ಯದುವೀರ್ ಅವರಿಗೆ ಎಸ್.ದೊಡ್ಡಪುರ ಗ್ರಾಪಂ ಉಪಾಧ್ಯಕ್ಷ ಜಗದೀಶ್ ಹಾಗೂ ಸದಸ್ಯರು ಮನವಿ ಮಾಡಿದರು. ಈ ವೇಳೆ ಭಾರತೀಯ ಕಿಸಾನ್ ಸಂಘದ ಅಧ್ಯಕ್ಷ ನಾಗಲಗೆರೆ ಶಿವಕುಮಾರ್, ಜಿಲ್ಲಾಧ್ಯಕ್ಷ ಪ್ರಭುಸ್ವಾಮಿ ಹಾಗೂ ಜಿಲ್ಲಾ ಪ್ರಧಾನ ಕಾರ್ಯದರ್ಶಿ ರವಿ ಇತರರಿದ್ದರು.

ಕರ್ನಾಟಕದಲ್ಲಿ ಕನ್ನಡ ಕಡ್ಡಾಯವಾಗಬೇಕಿದ್ದರೆ ಸಂವಿಧಾನ ತಿದ್ದುಪಡಿ ಅಭಿಯಾನ ಅವಶ್ಯ

- ಕನ್ನಡ ಅಭಿವೃದ್ಧಿ ಪ್ರಾಧಿಕಾರದ ಅಧ್ಯಕ್ಷ ಪುರುಷೋತ್ತಮ್ ಬಿಳಿಮಲೆ ಪ್ರತಿಪಾದನೆ
- ಕನ್ನಡದ ಬೆಳವಣಿಗೆ ಉಳಿದ ಭಾಷೆಗಳಿಗಿಂತ ತೀರಾ ಕಮ್ಮಿ: ವಿಷಾದ



ಮೈಸೂರು ಮಹಾರಾಜ ಕಾಲೇಜಿನ ಶತಮಾನೋತ್ಸವ ಸಭಾಂಗಣದಲ್ಲಿ ಮೈಸೂರು ಜಿಲ್ಲಾ ಬಿಸಿಎಂ ವಿದ್ಯಾರ್ಥಿನಿಲಯಗಳ ಹಿರಿಯ ವಿದ್ಯಾರ್ಥಿಗಳ ಸಂಘ ಆಯೋಜಿಸಿದ್ದ ಕನ್ನಡ ರಾಜ್ಯೋತ್ಸವ ಕಾರ್ಯಕ್ರಮವನ್ನು ಕನ್ನಡ ಅಭಿವೃದ್ಧಿ ಪ್ರಾಧಿಕಾರದ ಅಧ್ಯಕ್ಷ ಪುರುಷೋತ್ತಮ್ ಬಿಳಿಮಲೆ ಉದ್ಘಾಟಿಸಿದರು.

ಮೈಸೂರು,ನ.23(ಎಂಟಿವೈ)– ಎರಡು ಸಾವಿರ ವರ್ಷಗಳ ಇತಿಹಾಸವಿರುವ ಕನ್ನಡ ಭಾಷಾ ಬೆಳವಣಿಗೆ ಕುಂಠಿತವಾಗಿರುವ ಹಿನ್ನೆಲೆಯಲ್ಲಿ ಕರ್ನಾಟಕದಲ್ಲಿ ಕನ್ನಡ ಕಡ್ಡಾಯಗೊಳಿಸುವ ಸಂಬಂಧ ಸಂವಿಧಾನಕ್ಕೆ ತಿದ್ದುಪಡಿ ತರಲು ಅಭಿಯಾನ ನಡೆಸುವ ಅಗತ್ಯವಿದೆ ಎಂದು ಕನ್ನಡ ಅಭಿವೃದ್ಧಿ ಪ್ರಾಧಿಕಾರದ ಅಧ್ಯಕ್ಷ ಪುರುಷೋತ್ತಮ್ ಬಿಳಿಮಲೆ ಅಭಿಪ್ರಾಯಪಟ್ಟಿದ್ದಾರೆ.

ಮೈಸೂರು ಮಹಾರಾಜ ಕಾಲೇಜಿನ ಶತಮಾನೋತ್ಸವ ಸಭಾಂಗಣದಲ್ಲಿ ಮೈಸೂರು ಜಿಲ್ಲಾ ಬಿಸಿಎಂ ವಿದ್ಯಾರ್ಥಿ ನಿಲಯಗಳ ಹಿರಿಯ ವಿದ್ಯಾರ್ಥಿಗಳ ಸಂಘ ಆಯೋಜಿಸಿದ್ದ ಕನ್ನಡ ರಾಜ್ಯೋತ್ಸವ ಕಾರ್ಯಕ್ರಮ ಉದ್ಘಾಟಿಸಿ ಮಾತನಾಡಿದ ಅವರು, ಕನ್ನಡ ಭಾಷೆ ಸಂಪದ್ಭರಿತವಾದ ಭಾಷೆ. ಎರಡು ಸಾವಿರ ವರ್ಷಗಳ ಸುದೀರ್ಘ ಇತಿಹಾಸ ಹೊಂದಿರುವ ಕನ್ನಡ ಭಾಷಾ ಬೆಳವಣಿಗೆ ಕುಂಠಿತವಾಗಿದೆ. ಸಮೀಕ್ಷೆಯೊಂದರ ಪ್ರಕಾರ ವರ್ಷಕ್ಕೆ ಶೇ.66ರಷ್ಟು ವೇಗದಲ್ಲಿ ಹಿಂದಿ ಭಾಷೆ ಬೆಳೆಯುತ್ತಿದೆ. ಬಾಂಗ್ಲಾ ಭಾಷೆಯು ಶೇ.16ರಷ್ಟು, ತಮಿಳು, ಓಡಿಸ್ಸಿ, ಮಲೆಯಾಳಂ, ಮರಾಠಿ, ಪಂಜಾಬಿ, ಗುಜರಾತಿ ಭಾಷೆಗಳು ಶೇ.12, 13ರಷ್ಟು ವೇಗದಲ್ಲಿ ಬೆಳೆಯುತ್ತಿವೆ. ಆದರೆ, ಕನ್ನಡ ಭಾಷೆ ಶೇ.3.73ರಷ್ಟಕ್ಕೆ ಸೀಮಿತವಾಗಿದೆ. ಇದು ಇಡೀ ದೇಶದಲ್ಲಿ ಅತ್ಯಂತ ಕಡಿಮೆ ವೇಗದಲ್ಲಿ ಬೆಳೆಯುತ್ತಿರುವ ಭಾಷೆಯಾಗಿದೆ. ಈ ಹಿನ್ನೆಲೆಯಲ್ಲಿ ಕರ್ನಾಟಕದಲ್ಲಿ ಕನ್ನಡ ಭಾಷೆ ಕಡ್ಡಾಯಗೊಳಿಸಲೇಬೇಕಾದ ಅನಿವಾರ್ಯತೆ ಎದುರಾಗಿದೆ ಎಂದರು.

ಕರ್ನಾಟಕದಲ್ಲಿ ಕನ್ನಡ ಕಡ್ಡಾಯ ಮಾಡುವಂತೆ 1984ರಿಂದ 2015ರವರೆಗೆ ಸರ್ಕಾರಕ್ಕೆ ಆಗ್ರಹಿಸುತ್ತ ಬರಲಾಗಿದೆ. ಆದರೆ, ಅದಕ್ಕೆ ಸಂವಿಧಾನದಲ್ಲಿ ಅವಕಾಶವಿಲ್ಲ ಎಂದು ಸರ್ವೋಚ್ಚ ನ್ಯಾಯಾಲಯ ತೀರ್ಪು ನೀಡಿದೆ. ಹೀಗಾಗಿ ಹಿಂದಿಯೇತರರ ಭಾಷೆಗಳು ಒಟ್ಟಾಗಿ ಸಂವಿಧಾನದಲ್ಲಿ ಸೂಕ್ತವಾದ ಬದಲಾವಣೆ ತರದೆ ಹೋದರೆ ಹಿಂದಿಯೇತರ ರಾಜ್ಯ ಭಾಷೆಗಳು ಮುಂದಿನ 100 ವರ್ಷಗಳಲ್ಲಿ 3ನೇ ದರ್ಜೆಯ ಅಥವಾ ಅಡುಗೆ ಮನೆಯ ಭಾಷೆಯಾಗಿ ಉಳಿಯಲಿವೆ ಎಂದು ಆತಂಕ ವ್ಯಕ್ತಪಡಿಸಿದರು.

ಸರ್ಕಾರಿ ಕನ್ನಡ ಶಾಲೆಗಳನ್ನು ಉಳಿಸುವ ನಿಟ್ಟಿನಲ್ಲಿ 1439 ಶಾಲೆಗಳಲ್ಲಿ ಇಂಗ್ಲಿಷ್ ಮಾಧ್ಯಮ ಶಿಕ್ಷಣ ಆರಂಭಿಸಲಾಯಿತು. ಇದರಿಂದ 400 ಕನ್ನಡ ಮಾಧ್ಯಮ ಶಾಲೆಗಳು ಮುಚ್ಚಿ ಹೋದವು. ದೆಹಲಿ ಸರ್ಕಾರ ತನ್ನ ಬಜೆಟ್‌ನ ಶೇ.36ರಷ್ಟು ಹಣವನ್ನು ಶಿಕ್ಷಣಕ್ಕೆ ಮೀಸಲಿಟ್ಟಿದೆ. ದೆಹಲಿ ಸರ್ಕಾರದ ಮಾದರಿಯಲ್ಲಿ ಸರ್ಕಾರಿ ಶಾಲೆಗಳನ್ನು ಅಭಿವೃದ್ಧಿಪಡಿಸಬೇಕು ಎಂದು ಒತ್ತಾಯಿಸಿದರು.

ಇಂಗ್ಲೀಷ್ ಅನ್ನದ ಭಾಷೆಯಾಗಿ ಕಾಣುತ್ತಿರುವ ಸಂದರ್ಭದಲ್ಲಿ ಕನ್ನಡವನ್ನು ಅನ್ನ ಭಾಷೆಯಾಗಿ ಮಾಡಲು ಚಿಂತಿಸಬೇಕು. ಸರೋಜಿನಿ ಮಹಿಷಿ ವರದಿಯ 57 ಶಿಫಾರಸ್ಸಿನಲ್ಲಿ 47 ಶಿಫಾರಸ್ಸು ಇಂದಿಗೆ ಯೋಗ್ಯವಾಗಿಲ್ಲ. 1980ರ ಸಂದರ್ಭದಲ್ಲಿ ಸರ್ಕಾರಿ ವಲಯದಲ್ಲಿ ಮಾತ್ರವೇ ಉದ್ಯೋಗಗಳು ಲಭ್ಯ ಇದ್ದವು. ಆದರೆ, ಈಗ ಖಾಸಗಿ ವಲಯದಲ್ಲಿ ಹೆಚ್ಚು ಉದ್ಯೋಗ ಸೃಷ್ಟಿಯಾಗುತ್ತಿವೆ. ಹೀಗಾಗಿ ಖಾಸಗಿ ವಲಯದಲ್ಲಿ ಮೀಸಲಾತಿ ಬಗ್ಗೆ ಸರೋಜಿನಿ ಮಹಿಷಿ ವರದಿ ಮಾತನಾಡುವುದಿಲ್ಲ. ಕೇಂದ್ರ ಸರ್ಕಾರ ಎನ್‌ಇಪಿ ಜಾರಿಗೆ ತಂದು ಶೇ.6ರಷ್ಟು ಜಿಎಸ್‌ಟಿ ಹಣವನ್ನು ಮೀಸಲಿಡಬೇಕು. ಆದರೆ, ಇದಕ್ಕೆ ಶೇ.3ರಷ್ಟು ಹಣವನ್ನು ಮಾತ್ರವೇ ನೀಡಲಾಗುತ್ತಿದೆ. ಬಳಕೆ ಇಲ್ಲದೆ ಯಾವ ಭಾಷೆಯು ಉಳಿಯುವುದಿಲ್ಲ ಎಂದು ಹೇಳಿದರು.

ಕಾರ್ಯಕ್ರಮದಲ್ಲಿ ಜಾನಪದ ವಿದ್ವಾಂಸ ಪಿ.ಕೆ.ರಾಜಶೇಖರ್, ಮುಖ್ಯಮಂತ್ರಿಗಳ ಆಪ್ತ ಕಾರ್ಯದರ್ಶಿ ಡಾ. ವೆಂಕಟೇಶಯ್ಯ, ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆಯ ಜಿಲ್ಲಾ ಅಧಿಕಾರಿ ರಾಘವೇಂದ್ರ ಜಿಲ್ಲಾ ಬಿಸಿಎಂ ವಿದ್ಯಾರ್ಥಿನಿಲಯಗಳ ಹಿರಿಯ ವಿದ್ಯಾರ್ಥಿಗಳ ಸಂಘದ ಅಧ್ಯಕ್ಷ ಬಿ.ಶಿವಸ್ವಾಮಿ, ಉಪಾಧ್ಯಕ್ಷ ಆರ್.ಮಹದೇವ್, ಕಾರ್ಯದರ್ಶಿ ಬಿ.ಪಿ.ರಾಜೇಶ್, ಜಂಟಿ ಕಾರ್ಯದರ್ಶಿ ರಮೇಶ್ ಗೌಡ, ಮಹೇಶ್ ಸೋಸ್ಲೆ, ಅಹಿಂದ ಜವರಪ್ಪ ಇನ್ನಿತರರು ಉಪಸ್ಥಿತರಿದ್ದರು.

ಮೈಸೂರು ಚಿತ್ರಮಂದಿರಗಳಲ್ಲಿ

ಪದ್ಮ ಚಿತ್ರಮಂದಿರ	(ದೂ: 2521923)
ಪ್ರಭುತ್ವ (ಕ) + ಮರ್ಯಾದೆ ಪ್ರಶ್ನೆ (ಕ)	2+2 ಪ್ರದರ್ಶನಗಳು
ವುಡ್‌ಲ್ಯಾಂಡ್ಸ್ ಚಿತ್ರಮಂದಿರ	(ದೂ: 2422871)
ಜೀಬ್ರಾ (ಕ)	4 ಪ್ರದರ್ಶನಗಳು
ಬಾಲಾಜಿ ಚಿತ್ರಮಂದಿರ	(ದೂ: 2497199)
ಕಂಗುವಾ (ಹಿಂ)	4 ಪ್ರದರ್ಶನಗಳು
ಮಹದೇಶ್ವರ ಚಿತ್ರಮಂದಿರ	(ಮೊ:9900820093)
ವಿಶ್ವಂ (ತೆ)	4 ಪ್ರದರ್ಶನಗಳು
ಗಾಯಿತ್ರಿ	
ಭೈರತಿ ರಣಗಲ್ (ಕ)	4 ಪ್ರದರ್ಶನಗಳು
ರಾಜಕಮಲ್	
ಅಮರನ್ (ತ)	4 ಪ್ರದರ್ಶನಗಳು
ಸಂಗಂ	
ಭೈರತಿ ರಣಗಲ್ (ಕ)	4 ಪ್ರದರ್ಶನಗಳು
ಲಿಡೋ	
ಸಂಗೊಳ್ಳಿ ರಾಯಣ್ಣ (ಕ)	4 ಪ್ರದರ್ಶನಗಳು
ತಿಬ್ಬಾದೇವಿ	
ಅಮರನ್ (ತ)	4 ಪ್ರದರ್ಶನಗಳು
ಪ್ರಭಾ	
ಬಘೀರಾ (ಕ)	4 ಪ್ರದರ್ಶನಗಳು

ಡಿಆರ್‌ಸಿ ಸಿನಿಮಾಸ್
ದೂ : 4240422/4241800

ಸ್ಕ್ರೀನ್ 1	ಕಂಗುವಾ (3ಡಿ) (ತ): ಬೆ.10ಕ್ಕೆ, ಮ.1ಕ್ಕೆ, ರಾ.7.15ಕ್ಕೆ, ಅಮರನ್ (ತ): ಸಂ.4ಕ್ಕೆ, ಆನಂದ್ ಶ್ರೀಬಾಲ (ಮ): ರಾ.10.20ಕ್ಕೆ.
ಸ್ಕ್ರೀನ್ 2	ಅಮರನ್ (ತ): ಬೆ.9.40ಕ್ಕೆ, ಮ.1ಕ್ಕೆ, ಬಘೀರ (ಕ): ಸಂ.4.15ಕ್ಕೆ, ಗ್ಲಾಡಿಯೇಟರ್ 2 (ಇಂ): ರಾ.7.20ಕ್ಕೆ, ರಾ.10.20ಕ್ಕೆ.
ಸ್ಕ್ರೀನ್ 3	ದಿ ಸಬರ್‌ಮತಿ ರಿಪೋರ್ಟ್ (ಹಿಂ): ಬೆ.10.35ಕ್ಕೆ, ರಾ.7.15ಕ್ಕೆ, ಬಘೀರ (ಕ): ಮ.1.10ಕ್ಕೆ, ಲಕ್ಕಿ ಭಾಸ್ಕರ್ (ಮ): ಸಂ.4.15ಕ್ಕೆ, ಮಟ್ಕಾ (ತೆ): ರಾ.9.55ಕ್ಕೆ.
ಸ್ಕ್ರೀನ್ 4	ಭೈರತಿ ರಣಗಲ್ (ಕ): ಬೆ.10ಕ್ಕೆ, ಮ.1ಕ್ಕೆ, ಸಂ.4ಕ್ಕೆ, ರಾ.7ಕ್ಕೆ, ರಾ.10ಕ್ಕೆ.

ಐನಾಕ್ಸ್ ಮೂವೀಸ್
INOX LIVE THE MOVIE
ದೂ : 2533444 / 2433456

ಸ್ಕ್ರೀನ್ 1	ಬ್ಯಾಡ್ ನ್ಯೂಸ್ (ಹಿಂ): ಬೆ.10ಕ್ಕೆ, ಮ.1ಕ್ಕೆ, ಸಂ.4ಕ್ಕೆ, ರಾ.7ಕ್ಕೆ, ರಾ.10ಕ್ಕೆ.
ಸ್ಕ್ರೀನ್ 2	ಕಲ್ಕಿ 2898 ಎಡಿ (ಕ): ಬೆ.11.40ಕ್ಕೆ, ಸಂ.6.05ಕ್ಕೆ, ಟ್ವಿಸ್ಟರ್ಸ್ (ಇಂ): ಮ.3.20ಕ್ಕೆ, ರಾ.9.45ಕ್ಕೆ.
ಸ್ಕ್ರೀನ್ 3	ಇಂಡಿಯನ್ 2 (ತ): ಬೆ.9.40ಕ್ಕೆ, ಸಂ.4.05ಕ್ಕೆ, ಟ್ವಿಸ್ಟರ್ಸ್ (ಇಂ): ಮ.1.20ಕ್ಕೆ, ರಾ.7.45ಕ್ಕೆ, ಡಾರ್ಲಿಂಗ್ ವೈ ದಿಸ್ ಕೊಲವರಿ (ತೆ): ರಾ.10.30ಕ್ಕೆ.
ಸ್ಕ್ರೀನ್ 4	ವಿದ್ಯಾರ್ಥಿ ವಿದ್ಯಾರ್ಥಿನಿಯರೇ (ಕ): ಬೆ.11.30ಕ್ಕೆ, ಕಲ್ಕಿ 2898 ಎಡಿ (3ಡಿ)(ತೆ): ಮ.2.50ಕ್ಕೆ, ಹಿರಣ್ಯ (ಕ): ಸಂ.6.30ಕ್ಕೆ, ಕಲ್ಕಿ 2898 ಎಡಿ (ಹಿಂ): ರಾ.9.30ಕ್ಕೆ.

ಮೈಸೂರು ವಿಷನ್ ಸಿನಿಮಾ
ದೂ : 0821–2973519

ಸ್ಕ್ರೀನ್ 1	ಬಘೀರ (ಕ): ಬೆ.10ಕ್ಕೆ, ಮ.3.55ಕ್ಕೆ, ಕಂಗುವಾ (ಕ): ಮ.1ಕ್ಕೆ, ಕಂಗುವಾ (ತ): ಸಂ.6.55ಕ್ಕೆ, ಅಮರನ್ (ತ): ರಾ.9.50ಕ್ಕೆ.
ಸ್ಕ್ರೀನ್ 2	ಅಮರನ್ (ಕ): ಬೆ.10.30ಕ್ಕೆ, ಭೈರತಿ ರಣಗಲ್ (ಕ): ಮ.1.45ಕ್ಕೆ, ಸಂ.4.25ಕ್ಕೆ, ರಾ.7.05ಕ್ಕೆ, ರಾ.9.45ಕ್ಕೆ.
ಸ್ಕ್ರೀನ್ 3	ಭೈರತಿ ರಣಗಲ್ (ಕ): ಬೆ.10ಕ್ಕೆ, ಸಂ.6.30ಕ್ಕೆ, ಅಮರನ್ (ಕ): ಮ.12.40ಕ್ಕೆ, ಕಂಗುವಾ (3ಡಿ)(ತ): ಮ.3.55ಕ್ಕೆ, ರಾ.9.30ಕ್ಕೆ.
ಸ್ಕ್ರೀನ್ 4	ಕಂಗುವಾ (ತ): ಬೆ.10.30ಕ್ಕೆ, ಸಂ.5.20ಕ್ಕೆ, ಅಮರನ್ (ತ): ಮ.2.10ಕ್ಕೆ, ಅಮರನ್ (ಕ): ರಾ.8.15ಕ್ಕೆ.

ಪಿವಿಆರ್ ಸಿನಿಮಾಸ್
PVR CINEMAS
ನೆಕ್ಸಸ್ ಸೆಂಟರ್‌ಸಿಟಿ ಮಾಲ್, 2ನೇ ಮಹಡಿ, ಮೊ.ನಂ: 8951357139

ಕಿಂಗ್‌ಡಮ್ ಆಫ್ ದಿ ಪ್ಲಾನೆಟ್ ಆಫ್ ದಿ ಎಪಿಸ್ (ಇಂ): ಬೆ.10ಕ್ಕೆ, ಮ.1.05ಕ್ಕೆ, ಸಂ.4.10ಕ್ಕೆ, ರಾ.7.20ಕ್ಕೆ, ರಾ.10.30ಕ್ಕೆ, ಶ್ರೀಕಾಂತ್ (ಹಿಂ): ಬೆ.10ಕ್ಕೆ, ಮ.1ಕ್ಕೆ, ಸಂ.4.25ಕ್ಕೆ, ರಾ.7ಕ್ಕೆ, ರಾ.10.15ಕ್ಕೆ, ಸ್ಟಾರ್ (ತ): ಬೆ.11.45ಕ್ಕೆ, ಮ.3.05ಕ್ಕೆ, ಸಂ.6.25ಕ್ಕೆ, ರಾ.9.45ಕ್ಕೆ, ಅರಮನೈ 4 (ತ): ಮ.12.30ಕ್ಕೆ, ಪ್ರತಿನಿಧಿ 2 (ತೆ): ಮ.12.55ಕ್ಕೆ, ರಾ.9.15ಕ್ಕೆ, ರಾಮನ ಅವತಾರ (ಕ): ಮ.3.40ಕ್ಕೆ, ಅಂಜನೀಪುತ್ರ (ಕ): ಸಂ.4ಕ್ಕೆ, ಗ್ರೇ ಗೇಮ್ಸ್ (ಕ): ಸಂ.6.35ಕ್ಕೆ, ಕೃಷ್ಣಮ್ಮ (ತೆ): ರಾ.7.25ಕ್ಕೆ, ಮಾರಿವಿಲ್ಲಿನ್ ಗೋಪುರಂಗಲ್ (ಮ): ರಾ.10ಕ್ಕೆ.

ಸೂಚನೆ : ಸಿನಿಮಾ ಮಾರ್ಗದರ್ಶಿಯಲ್ಲಿ ಮಾಹಿತಿಯನ್ನು ಪರಿಪೂರ್ಣಗೊಳಿಸಲು ನಾವು ಸಾಧ್ಯವಾದಷ್ಟೂ ಪ್ರಯತ್ನಿಸುತ್ತಿದ್ದೇವೆ. ಆದರೂ ಕೆಲವೊಮ್ಮೆ ಮಾಹಿತಿ ಅಲಭ್ಯತೆಯಿಂದ ಲೋಪಗಳು ಉಂಟಾಗುವ ಸಾಧ್ಯತೆಯಿದ್ದು, ಸಾರ್ವಜನಿಕರು ಸಹಕರಿಸಬೇಕಾಗಿ ಕಳಕಳಿ ಮನವಿ.

ಕಾರು 'ಹಿಟ್ ಅಂಡ್ ರನ್'; ಇಬ್ಬರ ದಾರುಣ ಸಾವು!

ಮಂಗಳೂರು, ನ.23– ಕೇರಳದ ಪಾಲಕ್ಕಾಡ್‌ನಲ್ಲಿ ಭೀಕರ ರಸ್ತೆ ಅಪಘಾತ ಸಂಭವಿಸಿದ್ದು, ವೇಗವಾಗಿ ಬಂದ ಕಾರೊಂದು ಪಾದಚಾರಿ ಮಾರ್ಗದಲ್ಲಿ ಸಂಚರಿಸುತ್ತಿದ್ದ ಇಬ್ಬರಿಗೆ ಗುದ್ದಿ ಪರಾರಿಯಾಗಿರುವ ವಿಡಿಯೋ ವೈರಲ್ ಆಗಿದೆ. ಪಾಲಕ್ಕಾಡ್‌ನ ಕೊಡುವಾಯೂರಿನಲ್ಲಿ ಈ ಘಟನೆ ನಡೆದಿದ್ದು, ಇಬ್ಬರು ವ್ಯಕ್ತಿಗಳು ರಸ್ತೆ ದಾಟುತ್ತಿದ್ದಾಗ ಈ ಅವಘಡ ಸಂಭವಿಸಿದೆ.

ಅಷ್ಟೇನು ಟ್ರಾಫಿಕ್ ಇಲ್ಲದ ರಸ್ತೆಯಲ್ಲಿ ಇಬ್ಬರು ವ್ಯಕ್ತಿಗಳು ರಸ್ತೆ ದಾಟಲು ನಿಂತಿದ್ದು, ಈ ವೇಳೆ ಲಾರಿ ಮುಂದಕ್ಕೆ ಹೋಗಿದೆ. ಇದೇ ಸಂದರ್ಭದಲ್ಲಿ ಫುಟ್‌ಪಾತ್ ಮೇಲೆ ನಿಂತಿದ್ದ ವ್ಯಕ್ತಿಗಳ ಮೇಲೆ ಏಕಾಏಕಿ ಕಪ್ಪು ಬಣ್ಣದ ಕಾರೊಂದು ವೇಗವಾಗಿ ಬಂದು ಡಿಕ್ಕಿ ಹೊಡೆದಿದೆ. ಡಿಕ್ಕಿಯಾದ ರಭಸಕ್ಕೆ ಇಬ್ಬರು ವ್ಯಕ್ತಿಗಳು ಗಾಳಿಯಲ್ಲಿ 10 ಅಡಿ ಮೇಲೆ ಹಾರಿ ಸುಮಾರು ದೂರಕ್ಕೆ ಹಾರಿ ಬಿದ್ದಿದ್ದಾರೆ.

ಕನಿಷ್ಠ ಪಕ್ಷ ಅವರಿಗೆ ಏನಾಗಿದೆ ಎಂಬುದನ್ನೂ ನೋಡದ ಕಾರು ಚಾಲಕ ವೇಗವಾಗಿ ಕಾರು ಚಾಲನೆ ಮಾಡಿಕೊಂಡು ಹೋಗಿದ್ದಾನೆ. ಬಿದ್ದ ರಭಸಕ್ಕೆ ಇಬ್ಬರೂ ಸ್ಥಳದಲ್ಲೇ ಸಾವನ್ನಪ್ಪಿದ್ದಾರೆ ಎಂದು ಹೇಳಲಾಗಿದ್ದು, ಪ್ರಕರಣ ದಾಖಲಿಸಿಕೊಂಡಿರುವ ಪೊಲೀಸರು ತನಿಖೆ ನಡೆಸಿದ್ದಾರೆ.

ಪಾನಮತ್ತ ಕಾರು ಚಾಲಕನ ಬಂಧನ: ಇನ್ನು ಪಾನಮತ್ತನಾಗಿ ಕಾರು ಚಲಾಯಿಸಿ ಅಪಘಾತ ಮಾಡಿದ ಚಾಲಕ ಎಳವಂಚೇರಿ ಮೂಲದ ಪ್ರೇಮನಾಥ್ ಎಂಬಾತನನ್ನು ಕೇರಳ ಪೊಲೀಸರು ಬಂಧಿಸಿದ್ದು, ಆದರೆ ಮೃತರ ಗುರುತು ಪತ್ತೆಯಾಗಿಲ್ಲ.

ಕಾಂಗ್ರೆಸ್ ಗೆದ್ದ ಮಾತ್ರಕ್ಕೆ ಬಿಜೆಪಿ ರಾಜ್ಯಾಧ್ಯಕ್ಷ ಬಿ.ವೈ.ವಿಜಯೇಂದ್ರರ ವರ್ಚಸ್ಸು ಕುಗ್ಗುವುದಿಲ್ಲ

ಬಿಜೆಪಿ ಮೈಸೂರು ಜಿಲ್ಲಾಧ್ಯಕ್ಷ ಎಲ್.ಆರ್.ಮಹದೇವಸ್ವಾಮಿ



ಮೈಸೂರು,ನ.23(ಪಿಎಂ)– ರಾಜ್ಯದ ಮೂರು ವಿಧಾನಸಭಾ ಕ್ಷೇತ್ರಗಳಲ್ಲಿ ಕಾಂಗ್ರೆಸ್ ಗೆದ್ದ ಮಾತ್ರಕ್ಕೆ ಬಿಜೆಪಿ ರಾಜ್ಯಾಧ್ಯಕ್ಷ ಬಿ.ವೈ.ವಿಜಯೇಂದ್ರ ಅವರ ವರ್ಚಸ್ಸು ಎಂದಿಗೂ ಕುಗ್ಗುವುದಿಲ್ಲ ಎಂದು ಬಿಜೆಪಿ ಮೈಸೂರು ಜಿಲ್ಲಾಧ್ಯಕ್ಷ ಎಲ್.ಆರ್. ಮಹದೇವಸ್ವಾಮಿ ತಿಳಿಸಿದ್ದಾರೆ.

ರಾಜ್ಯ ಮತ್ತು ರಾಷ್ಟ್ರದಲ್ಲಿ ಅನೇಕ ಉಪಚುನಾವಣೆಗಳನ್ನು ನೋಡಿದ್ದೇವೆ. ಕಳೆದ ಸಾರ್ವತ್ರಿಕ ಚುನಾವಣೆಯಲ್ಲಿ ಕಾಂಗ್ರೆಸ್ 136 ಕ್ಷೇತ್ರಗಳಲ್ಲಿ ಗೆಲುವು ಸಾಧಿಸುವ ಮೂಲಕ ನಮ್ಮ ಬಿಜೆಪಿ ಪಕ್ಷವನ್ನು ವಿರೋಧ ಪಕ್ಷದ ಸ್ಥಾನದಲ್ಲಿ ಕೂರಿಸಿತು. ಇಂತಹ ಸನ್ನಿವೇಶದಲ್ಲಿ ಕೇಂದ್ರದ ಬಿಜೆಪಿ ನಾಯಕರು ಚರ್ಚಿಸಿ, ಅವಲೋಕಿಸಿಯುವ ನಾಯಕ ಬಿ.ವೈ.ವಿಜಯೇಂದ್ರ ಅವರೇ ಸೂಕ್ತವೆಂದು ಅವರನ್ನು ಪಕ್ಷದ ರಾಜ್ಯಾಧ್ಯಕ್ಷರನ್ನಾಗಿ ನೇಮಿಸಿತು.

ನಂತರ ಬಿ.ವೈ.ವಿಜಯೇಂದ್ರ ಅವರ ನೇತೃತ್ವದಲ್ಲಿ ಲೋಕಸಭಾ ಚುನಾವಣೆ ಎದುರಿಸಿ ರಾಜ್ಯದಲ್ಲಿ ಕಾಂಗ್ರೆಸ್ ಸರ್ಕಾರವಿದ್ದರೂ ಬಿಜೆಪಿ ಹೆಚ್ಚು ಸ್ಥಾನಗಳನ್ನು ಗೆಲ್ಲುವ ಮೂಲಕ ಕಾಂಗ್ರೆಸ್ ಅನ್ನು ಹಿಂದಿಕ್ಕಿತು. ಆದರೆ ಪ್ರಸ್ತುತ ರಾಜ್ಯದ ಮೂರು ಕ್ಷೇತ್ರಗಳ ಉಪಚುನಾವಣೆಯಲ್ಲಿ ಕಾಂಗ್ರೆಸ್ ಗೆದ್ದಿರಬಹುದು. ವಿಧಾನಸಭೆಯ ಉಪಚುನಾವಣೆಗಳಲ್ಲಿ ಆಡಳಿತ ಪಕ್ಷ ಗೆಲುವು ಸಾಧಿಸುವುದು ಸಾಮಾನ್ಯ. ಜೊತೆಗೆ ಕಾಂಗ್ರೆಸ್ ಹಣದ ಹೊಳೆ ಹರಿಸಿರುವುದರಲ್ಲಿ ಸಂಶಯವಿಲ್ಲ ಎಂದು ಆರೋಪಿಸಿದ್ದಾರೆ.

ಹಲವಾರು ತಿಂಗಳಿಂದ ಬಾಕಿ ಉಳಿಸಿಕೊಂಡಿದ್ದ ಭಾಗ್ಯ ಲಕ್ಷ್ಮೀ ಹಣವನ್ನು ಚುನಾವಣೆ ಸಂದರ್ಭದಲ್ಲಿ ಜನತೆಗೆ ನೀಡಿ ಅವರ ದಾರಿ ತಪ್ಪಿಸಿ ಮತ ಪಡೆದಿರುವುದು ಮೇಲ್ನೋಟಕ್ಕೆ ಕಾಣುತ್ತಿದೆ. ಈ ಎಲ್ಲಾ ಹಿನ್ನೆಲೆಯಲ್ಲಿ ಬಿಜೆಪಿ ರಾಜ್ಯಾಧ್ಯಕ್ಷರು ತಮ್ಮ ಸ್ಥಾನಕ್ಕೆ ರಾಜೀನಾಮೆ ನೀಡಬೇಕೆಂಬ ಒತ್ತಾಯ ಸೂಕ್ತವಲ್ಲ. ರಾಜ್ಯದಲ್ಲಿ ನಡೆದಿರುವುದು ಸಾರ್ವತ್ರಿಕ ಚುನಾವಣೆಯಲ್ಲ ಎಂಬುದನ್ನು ಬಿ.ವೈ.ವಿಜಯೇಂದ್ರರನ್ನು ಟೀಕೆ ಮಾಡುವವರು ಮೊದಲು ಅರಿಯಬೇಕು.

ರಾಜಕೀಯ ರೀತಿ–ನೀತಿ ಅರಿತು ನಡೆವವರು ಎಂದಿಗೂ ಹೀಗೆ ಕ್ಷುಲ್ಲಕ ಕಾರಣಕ್ಕೆ ರಾಜೀನಾಮೆ ಕೇಳಲಾರರು. ಬಿ.ವೈ.ವಿಜಯೇಂದ್ರ ಅವರೊಟ್ಟಿಗೆ ಇಡೀ ರಾಜ್ಯದ ಜನತೆ ಇದ್ದಾರೆ. ಪ್ರಸ್ತುತ ಈ ಉಪಚುನಾವಣೆ ಫಲಿತಾಂಶವನ್ನು ಸ್ವೀಕರಿಸಿ ಮುಂದೆ ಹೋರಾಟ ಮಾಡಬೇಕಿದೆ. ನಮ್ಮಂತಹ ಸಹಸ್ರಾರು ಸಂಖ್ಯೆ ಜನ ಬಿ.ವೈ.ವಿಜಯೇಂದ್ರ ಅವರ ಬೆನ್ನಿಗೆ ನಿಂತಿದ್ದಾರೆ ಎಂದು ಅವರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ವಸ್ತು ಪ್ರದರ್ಶನದಲ್ಲಿ ಜಾನಪದ ಸಮೂಹ ನೃತ್ಯ ಸ್ಪರ್ಧೆ
ಸಂಗೀತ ವಿವಿಯಲ್ಲಿ ಐಚ್ಛಿಕ ವಿಷಯಗಳಾಗಿ ಜಾನಪದ ಕಲೆ, ನೃತ್ಯ ಪ್ರಾರಂಭ

ಸಂಗೀತ ವಿವಿ ಕುಲಪತಿ ಪ್ರೊ.ನಾಗೇಶ್ ಬೆಟ್ಟಕೋಟೆ



ಮೈಸೂರಿನ ದಸರಾ ವಸ್ತು ಪ್ರದರ್ಶನದಲ್ಲಿ ಶನಿವಾರ ಹಮ್ಮಿಕೊಂಡಿದ್ದ ರಾಜ್ಯಮಟ್ಟದ ಜಾನಪದ ಸಮೂಹ ನೃತ್ಯ ಸ್ಪರ್ಧೆಯಲ್ಲಿ ತಂಡವೊಂದು ಕಂಸಾಳೆ ನೃತ್ಯ ಪ್ರದರ್ಶಿಸಿತು.

ಮೈಸೂರು,ನ.23(ಪಿಎಂ)– ಸಂಗೀತ ವಿವಿಯಲ್ಲಿ ಈ ವರ್ಷದಿಂದ ಪದವಿ ಮತ್ತು ಸ್ನಾತಕೋತ್ತರ ಪದವಿಯಲ್ಲಿ ಐಚ್ಛಿಕ ವಿಷಯಗಳಾಗಿ ಜಾನಪದ ಕಲೆ ಮತ್ತು ಜಾನಪದ ನೃತ್ಯಗಳನ್ನು ಪ್ರಾರಂಭ ಮಾಡುತ್ತಿದ್ದೇವೆ ಎಂದು ಗಂಗೂಬಾಯಿ ಹಾನಗಲ್ ಸಂಗೀತ ಮತ್ತು ಪ್ರದರ್ಶಕ ಕಲೆಗಳ ವಿಶ್ವವಿದ್ಯಾನಿಲಯದ ಕುಲಪತಿ ಪ್ರೊ.ನಾಗೇಶ್ ಬೆಟ್ಟಕೋಟೆ ಹೇಳಿದರು.

ಮೈಸೂರಿನ ದಸರಾ ವಸ್ತು ಪ್ರದರ್ಶನ ಮೈದಾನದ ಗಾನಕೋಗಿಲೆ ಪಿ.ಕಾಳಿಂಗ ರಾವ್ ರಂಗಮಂಟಪದಲ್ಲಿ ಶನಿವಾರ ಹಮ್ಮಿಕೊಂಡಿದ್ದ ರಾಜ್ಯಮಟ್ಟದ ಜಾನಪದ ಸಮೂಹ ನೃತ್ಯ ಸ್ಪರ್ಧೆ ಉದ್ಘಾಟಿಸಿ ಮಾತನಾಡಿದ ಅವರು, ನಮ್ಮ ಶ್ರಮ ಸಂಸ್ಕೃತಿಯ ಕಲೆಗಳನ್ನು ನಾವು ಮರೆಯಬಾರದು. ಆದರೆ ಇತ್ತೀಚೆಗೆ ಅವು ಮರೆಯಾಗುವ ಸನ್ನಿವೇಶ ನಿರ್ಮಾಣವಾಗುತ್ತಿದೆ. ಅವುಗಳ ಸಂರಕ್ಷಣೆಯ ಹೊಣೆ ನಮ್ಮೆಲ್ಲರ ಮೇಲಿದೆ. ನಮ್ಮ ಕಲೆಗಳಿಗೆ ಶೈಕ್ಷಣಿಕ ರೂಪ ಕೊಟ್ಟಾಗ ಮಾತ್ರ ಅವು ಉಳಿಯಲು ಸಾಧ್ಯ ಎಂದರು.

ಈ ನಿಟ್ಟಿನಲ್ಲಿ ನಮ್ಮ ವಿವಿ ರಾಷ್ಟ್ರೀಯ ಶಿಕ್ಷಣ ಪದ್ಧತಿಯಿಂದ ರಾಜ್ಯ ಶಿಕ್ಷಣ ಪದ್ಧತಿಗೆ ಬದಲಾವಣೆ ಹೊಂದುವಂತಹ ಸಂದರ್ಭದಲ್ಲಿ ಪದವಿ ಮತ್ತು ಸ್ನಾತಕೋತ್ತರ ಪದವಿಯಲ್ಲಿ ಮೂರು ಐಚ್ಛಿಕ ವಿಷಯಗಳನ್ನು ಆಯ್ಕೆಗೆ ಅವಕಾಶವಿದ್ದು, ಈ ಪೈಕಿ ಐಚ್ಛಿಕ ವಿಷಯಗಳಾಗಿ ನಾವು ಜಾನಪದ ಕಲೆಗಳು ಮತ್ತು ಜಾನಪದ ನೃತ್ಯಗಳನ್ನು ಈ ವರ್ಷದಿಂದ ಪ್ರಾರಂಭ ಮಾಡುತ್ತಿದ್ದೇವೆ ಎಂದು ತಿಳಿಸಿದರು.

ಡೊಳ್ಳು ಕುಣಿತ, ಯಕ್ಷಗಾನ, ಕಂಸಾಳೆ ಸೇರಿದಂತೆ ನಮ್ಮ ಕರ್ನಾಟಕ ಜಾನಪದ ಕಲೆಗಳು ಯಾವುದೇ ರಾಷ್ಟ್ರೀಯ ಹಬ್ಬಗಳಾಗಲಿ ಒಂದಲ್ಲ ಒಂದು ರೀತಿಯಲ್ಲಿ ಬಹುಮಾನಕ್ಕೆ ಭಾಜನವಾಗುತ್ತಿವೆ. ಜಾನಪದ ಕಲೆಗಳು ನಮ್ಮ ನೆಲಮೂಲ ಸಂಸ್ಕೃತಿಯಾಗಿದ್ದು, ನಮ್ಮ ಧಾರ್ಮಿಕ ಆಚರಣೆಗಳು, ಮೌಲ್ಯಾಧಾರಿತ ಶಿಕ್ಷಣದ ಸಂದೇಶಗಳನ್ನೂ ಒಳಗೊಂಡಿವೆ ನಮ್ಮ ಎಲ್ಲಾ ಜಾನಪದ ಕಲೆಗಳಲ್ಲಿ ಆಧ್ಯಾತ್ಮ ಮತ್ತು ಸಾಂಸ್ಕೃತಿಕ ಅಂಶಗಳನ್ನು ಕಾಣಬಹುದು ಎಂದರು.

> ಪ್ರಾಧಿಕಾರದ ವತಿಯಿಂದ ಇಲ್ಲಿನ ಪಿ.ಕಾಳಿಂಗರಾವ್ ರಂಗಮಂಟಪದಲ್ಲಿ ಡಿ.28ರವರೆಗೆ ವಾರಾಂತ್ಯದ ಪ್ರತಿ ಶನಿವಾರ ಸಾಂಸ್ಕೃತಿಕ ಸ್ಪರ್ಧೆಗಳನ್ನು ಏರ್ಪಡಿಸಲಾಗಿದೆ. ಅದರ ಭಾಗವಾಗಿ ಇಂದು ಸಮೂಹ ಜಾನಪದ ನೃತ್ಯ ಸ್ಪರ್ಧೆ ನಡೆಯಿತು. ಅದೇ ರೀತಿಯಲ್ಲಿ ಮುಂಬರುವ ಶನಿವಾರ (ನ.30) ಸಹ ಸಾಂಸ್ಕೃತಿಕ ಸ್ಪರ್ಧೆಯ ಜೊತೆಗೆ ವಿವಿಧ ಸ್ಪರ್ಧೆಗಳನ್ನು ಆಯೋಜಿಸಲಾಗಿದೆ. ಹೆಚ್ಚಿನ ವಿವರಗಳಿಗೆ ಮೊ.ಸಂ. 98803 58761 ಅಥವಾ 72042 02444 ಅನ್ನು ಸಂಪರ್ಕಿಸಬಹುದು.

ಕರ್ನಾಟಕ ವಸ್ತುಪ್ರದರ್ಶನ ಪ್ರಾಧಿಕಾರದ ಅಧ್ಯಕ್ಷ ಅಯೂಬ್ ಖಾನ್ ಮಾತನಾಡಿ, ಅ.3ರಿಂದ ಈ ವೇದಿಕೆಯಲ್ಲಿ ದಿನನಿತ್ಯ ಕಾರ್ಯಕ್ರಮಗಳು ನಡೆಯುತ್ತಿವೆ. ಮೈಸೂರು ಹಾಗೂ ಸುತ್ತಮುತ್ತಲ ಪ್ರದೇಶದ ಕಲಾವಿದರಿಗೆ ಮಾತ್ರವೇ ಹೆಚ್ಚಾಗಿ ಈ ವೇದಿಕೆ ಸೀಮಿತವಾಗಿತ್ತು ಆದರೆ ಈ ಬಾರಿ ರಾಜ್ಯದ ವಿವಿಧ ಭಾಗಗಳ ಕಲಾವಿದರೂ ತಮ್ಮ ಕಲಾ ಪ್ರದರ್ಶನ ನೀಡುವಂತಾಗಿದೆ ಎಂದು ಹೇಳಿದರು.

ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿದ್ದ ಶಾಸಕ ತನ್ವೀರ್‌ಸೇಠ್ ಮಾತನಾಡಿ, ಅಯೂಬ್ ಖಾನ್ ಅಧ್ಯಕ್ಷರಾಗಿ ವಸ್ತು ಪ್ರದರ್ಶನಕ್ಕೆ ಹೊಸತನ ಕಲ್ಪಿಸಿದ್ದಾರೆ. ಕಲೆ, ಸಂಸ್ಕೃತಿ ಮತ್ತು ಕ್ರೀಡಾ ಚಟುವಟಿಕೆಗಳಿಗೆ ಮಾನ್ಯತೆ ನೀಡಬೇಕು. ಜಾತಿ ಮತದ ಹಂಗಿಲ್ಲದ ಇವು ಮನಸ್ಸು ಮನಸ್ಸುಗಳನ್ನು ಜೋಡಿಸಲಿವೆ ಹಾಗಾಗಿ ಸಮಾಜಕ್ಕೆ ಈ ಚಟುವಟಿಕೆಗಳು ಅತ್ಯಗತ್ಯ ಎಂದು ತಿಳಿಸಿದರು.

ಇದೇ ವೇಳೆ ಮೈಸೂರು ಜಿಲ್ಲಾ ಪತ್ರಕರ್ತರ ಸಂಘದ ಅಧ್ಯಕ್ಷ ಕೆ.ದೀಪಕ್, ಕ್ಲಾರಿಯೋನೆಟ್ ವಾದಕರೂ ಆದ ರಾಜ್ಯೋತ್ಸವ ಪ್ರಶಸ್ತಿ ಪುರಸ್ಕೃತ ಡಿ.ರಾಮು ಅವರನ್ನು ಸನ್ಮಾನಿಸಲಾಯಿತು. ಜೊತೆಗೆ ವಸ್ತು ಪ್ರದರ್ಶನದ ಸಾಂಸ್ಕೃತಿಕ ಉಪಸಮಿತಿ ವತಿಯಿಂದ ಡಿ.1ರಂದು ಸಂಜೆ 5.30ಕ್ಕೆ ಇದೇ ರಂಗಮಂಟಪದಲ್ಲಿ ಹಮ್ಮಿಕೊಂಡಿರುವ ನಟ–ನಟಿಯರು, ಹಿರಿಯ ಹಾಸ್ಯ ಕಲಾವಿದರ ಹಾಸ್ಯ ರಸಮಂಜರಿ ಕಾರ್ಯಕ್ರಮದ ಪೋಸ್ಟರ್ ಬಿಡುಗಡೆ ಮಾಡಲಾಯಿತು.

ಬಳಿಕ ಎಲ್ಲಾ ವಯೋಮಾನದವರಿಗೆ ನಡೆದ ಜಾನಪದ ಸಮೂಹ ನೃತ್ಯ ಸ್ಪರ್ಧೆಯಲ್ಲಿ 8 ತಂಡಗಳು ಪಾಲ್ಗೊಂಡಿದ್ದವು. ಮುಡಾ ಮಾಜಿ ಅಧ್ಯಕ್ಷ ಹೆಚ್.ವಿ.ರಾಜೀವ್, ಮಾಜಿ ಮೇಯರ್ ಪುಷ್ಪಲತಾ ಚಿಕ್ಕಣ್ಣ, ಪಾಲಿಕೆ ಆಯುಕ್ತ ಆಸಾದ್ ಉರ್ ರೆಹಮಾನ್ ಷರೀಫ್, ಸಾಂಸ್ಕೃತಿಕ ಉಪಸಮಿತಿ ಅಧ್ಯಕ್ಷ ರಘುರಾಜೇ ಅರಸ್, ಕಾರ್ಯಾಧ್ಯಕ್ಷ ಕೆ.ವಿ.ಮಲ್ಲೇಶ್, ಸಮೂಹ ನೃತ್ಯದ ಸಂಚಾಲಕ ಡಾ.ನಿಂಗರಾಜು ಮತ್ತಿತರರು ಹಾಜರಿದ್ದರು.

14 ರಾಜ್ಯಗಳ 48 ಕ್ಷೇತ್ರಗಳಿಗೆ ಉಪಚುನಾವಣೆ
23 ಕ್ಷೇತ್ರಗಳಲ್ಲಿ ಎನ್‌ಡಿಎ ಕಮಾಲ್

ನವದೆಹಲಿ, ನ.23– ದೇಶದ 14 ರಾಜ್ಯಗಳಲ್ಲಿ 48 ವಿಧಾನಸಭಾ ಕ್ಷೇತ್ರಗಳು ಹಾಗೂ 2 ಲೋಕಸಭಾ ಕ್ಷೇತ್ರಗಳಿಗೆ ನಡೆದ ಉಪ ಚುನಾವಣೆ ಫಲಿತಾಂಶ ಹೊರಬಿದ್ದಿದೆ.

ಅಸ್ಸಾಂ, ಬಿಹಾರ, ಛತ್ತೀಸ್‌ಗಢ, ಗುಜರಾತ್, ಕರ್ನಾಟಕ, ಕೇರಳ, ಮಧ್ಯ ಪ್ರದೇಶ, ಮೇಘಾಲಯ, ಪಂಜಾಬ್, ರಾಜಸ್ಥಾನ, ಸಿಕ್ಕಿಂ, ಉತ್ತರಾಖಂಡ, ಉತ್ತರ ಪ್ರದೇಶ ಮತ್ತು ಪಶ್ಚಿಮ ಬಂಗಾಳ ರಾಜ್ಯಗಳ 48 ಕ್ಷೇತ್ರಗಳಿಗೆ ಉಪಚುನಾವಣೆ ನಡೆದಿದ್ದು, ಈ ಪೈಕಿ 23 ಕ್ಷೇತ್ರಗಳಲ್ಲಿ ಬಿಜೆಪಿ ಹಾಗೂ ಮಿತ್ರ ಪಕ್ಷಗಳು ಗೆದ್ದರೆ, ಉಳಿದ ಸ್ಥಾನಗಳು ವಿಪಕ್ಷಗಳ ಪಾಲಾಗಿವೆ.

ಕರ್ನಾಟಕದ ಮೂರೂ ಕ್ಷೇತ್ರಗಳನ್ನೂ ಕಾಂಗ್ರೆಸ್ ಗೆದ್ದುಕೊಂಡಿದೆ. ರಾಜಸ್ಥಾನದಲ್ಲಿ 7 ಕ್ಷೇತ್ರಗಳಿಗೆ ನಡೆದ ಉಪಚುನಾವಣೆಯಲ್ಲಿ 5ರಲ್ಲಿ ಬಿಜೆಪಿ ಹಾಗೂ ಕಾಂಗ್ರೆಸ್ ಮತ್ತು ಭಾರತ್ ಆದಿವಾಸಿ ಪಕ್ಷ ತಲಾ ಒಂದೊಂದು ಸ್ಥಾನಗಳಲ್ಲಿ ಗೆಲುವು ಕಂಡಿದೆ. ಪಶ್ಚಿಮ ಬಂಗಾಳದಲ್ಲಿ 6 ಸ್ಥಾನಗಳನ್ನೂ ತೃಣಮೂಲ ಕಾಂಗ್ರೆಸ್ ಕ್ಲೀನ್ ಸ್ವೀಪ್ ಮಾಡಿದೆ. ಬಿಹಾರದ 4 ಕ್ಷೇತ್ರಗಳಿಗೆ ನಡೆದ ಉಪಚುನಾವಣೆಯಲ್ಲಿ ಬಿಜೆಪಿ ನೇತೃತ್ವದ ಎನ್‌ಡಿಎ 4ಕ್ಕೆ ನಾಲ್ಕೂ ಕ್ಷೇತ್ರಗಳನ್ನು ಗೆಲ್ಲುವ ಮೂಲಕ ಇಂಡಿಯಾ ಒಕ್ಕೂಟಕ್ಕೆ ಆಘಾತ ನೀಡಿದೆ. ಅಸ್ಸಾಂನ 5 ಕ್ಷೇತ್ರಗಳ ಪೈಕಿ ನಾಲ್ಕರಲ್ಲಿ ಎನ್‌ಡಿಎ ಗೆದ್ದಿದೆ. ಇಲ್ಲಿ ಕಾಂಗ್ರೆಸ್ ಖಾತೆ ತೆರೆದಿಲ್ಲ.

ಛತ್ತೀಸ್‌ಘಡ, ಗುಜರಾತ್‌ನ ತಲಾ 1 ಕ್ಷೇತ್ರ ಬಿಜೆಪಿ ತೆಕ್ಕೆಯಲ್ಲೇ ಉಳಿದಿವೆ. ಕೇರಳದ ವಯನಾಡಿನಲ್ಲಿ ಕಾಂಗ್ರೆಸ್ ಗೆಲುವು ಕಂಡಿದೆ. ಮಧ್ಯಪ್ರದೇಶದ 2 ಕ್ಷೇತ್ರಗಳಲ್ಲಿ ಬಿಜೆಪಿ–ಕಾಂಗ್ರೆಸ್ ತಲಾ ಒಂದೊಂದು ಸ್ಥಾನ ತೆಕ್ಕೆಗೆ ತೆಗೆದುಕೊಂಡಿವೆ. ಪಂಜಾಬ್‌ನ 4 ಕ್ಷೇತ್ರಗಳಲ್ಲಿ ಮೂರು ಎಎಪಿ, ಒಂದು ಕಾಂಗ್ರೆಸ್ ಪಾಲಾಗಿದೆ. ಉತ್ತರಾಖಂಡದ ಒಂದು ಕ್ಷೇತ್ರವನ್ನು ಬಿಜೆಪಿ ತನ್ನ ತೆಕ್ಕೆಗೆ ತೆಗೆದುಕೊಂಡಿದೆ. ಮೇಘಾಲಯದಲ್ಲಿ ಗ್ಯಾಂಬೆಗ್ರೆ ಕ್ಷೇತ್ರಕ್ಕೆ ನಡೆದ ಚುನಾವಣೆಯಲ್ಲಿ ಎನ್‌ಪಿಪಿ ಗೆಲುವು ಸಾಧಿಸಿದೆ.

ನಾನಾ ಸವಾಲುಗಳ ನಡುವೆಯೂ ಮಹಿಳೆಯರಿಂದ ಸಾಕಷ್ಟು ಸಾಧನೆ

- ಕನ್ನಡ-ಸಂಸ್ಕೃತಿ ನಿರ್ದೇಶಕಿ ಧರಣಿದೇವಿ ಮಾಲಗತ್ತಿ ಪ್ರಶಂಸೆ
- ವಿವಿಧ ಪ್ರಶಸ್ತಿ ಪುರಸ್ಕೃತರಿಗೆ ಅಭಿನಂದನೆ



ಮೈಸೂರಿನ ವಿಜಯನಗರದಲ್ಲಿರುವ ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ ಭವನದಲ್ಲಿ ಸಂವಹನ ಟ್ರಸ್ಟ್, ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ತು ಕನ್ನಡ ಸಾಹಿತ್ಯ ಕಲಾಕೂಟದ ವತಿಯಿಂದ ಕುವೆಂಪು ಕನ್ನಡ ಅಧ್ಯಯನ ಸಂಸ್ಥೆಯ ವಿಶ್ರಾಂತ ನಿರ್ದೇಶಕ ಡಾ. ಡಿ.ಕೆ.ರಾಜೇಂದ್ರ, ಮಹಾರಾಣಿ ಸರ್ಕಾರಿ ಪದವಿಪೂರ್ವ ಕಾಲೇಜಿನ ಅಧ್ಯಾಪಕ ಡಾ. ಎನ್.ಎನ್.ಚಿಕ್ಕಮಾದು, ಕರ್ನಾಟಕ ಸಂಸ್ಕೃತ ವಿವಿಯ ವಿಶ್ರಾಂತ ಕುಲಪತಿ ಡಾ. ಪದ್ಮಾಶೇಖರ್, ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ ಅಧ್ಯಕ್ಷ ಮಡ್ಡೀಕೆರೆ ಗೋಪಾಲ್ ಅವರನ್ನು ಸನ್ಮಾನಿಸಲಾಯಿತು.

ಮೈಸೂರು, ನ.23(ಎಂಟಿವೈ)– ಮಹಿಳೆಯರು ನಾನಾ ಸವಾಲುಗಳ ನಡುವೆಯೂ ಧೈರ್ಯ ಮತ್ತು ಚಾಕಚಕ್ಯತೆಯಿಂದ ಸಾಧನೆ ಮಾಡುತಿದ್ದಾರೆ ಎಂದು ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ನಿರ್ದೇಶಕರಾದ ಡಾ. ಧರಣಿದೇವಿ ಮಾಲಗತ್ತಿ ಅಭಿಪ್ರಾಯಪಟ್ಟಿದ್ದಾರೆ.

ಮೈಸೂರಿನ ವಿಜಯನಗರದ ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ ಭವನದಲ್ಲಿ ಸಂವಹನ ಟ್ರಸ್ಟ್, ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ತು ಕನ್ನಡ ಸಾಹಿತ್ಯ ಕಲಾಕೂಟದ ಸಂಯುಕ್ತ ಆಶ್ರಯದಲ್ಲಿ ಆಯೋಜಿಸಿದ್ದ ಹಿರಿಯ ಸಾಹಿತಿಗಳಿಗೆ ಸನ್ಮಾನ, 'ಸಂವಹನ ಸಿರಿ' ಯುವ ಸಾಹಿತ್ಯ ಪ್ರಶಸ್ತಿ ಪ್ರದಾನ ಹಾಗೂ 2024ರ ರಾಜ್ಯೋತ್ಸವ ಪ್ರಶಸ್ತಿ ಪುರಸ್ಕೃತರಿಗೆ ಅಭಿನಂದನಾ ಸಮಾರಂಭದಲ್ಲಿ ಮಾತನಾಡಿದ ಅವರು, ಪ್ರಸ್ತುತ ಸಂದರ್ಭದಲ್ಲಿ ಎಲ್ಲಾ ಕ್ಷೇತ್ರಗಳಲ್ಲೂ ಮಹಿಳೆಯರು ಸಾಧನೆ ಮಾಡುತ್ತಿದ್ದಾರೆ. ಆದರೆ, ಸೇವಾ ವಲಯದಲ್ಲಿ ಪುರುಷರಿಗಿಂತ ಮಹಿಳೆಯರು ಹೆಚ್ಚಿನ ಸವಾಲು ಎದುರಿಸುವಂತಾಗಿದೆ ಎಂದರು.

ಕೆಲವೊಮ್ಮೆ ಹೆಣ್ಣು ತನ್ನ ಭಾವನೆಯನ್ನು ವ್ಯಕ್ತಪಡಿಸದಂತೆ ಸಮಾಜ ಮೌನವಾಗಿಸುತ್ತಿದೆ ಪ್ರಶಸ್ತಿ, ಪುರಸ್ಕಾರಗಳು ಕವಿಯ ಸಾಧನೆಯನ್ನು ಗುರುತಿಸುವ ಮಾನದಂಡವಾಗುವುದಿಲ್ಲ. ಕೃತಿಯ ಮೌಲ್ಯಗಳಷ್ಟೇ ಕವಿಯ ಸಾಧನೆಯನ್ನು ತಿಳಿಸುತ್ತವೆ. ವಿವಿಧ ಕ್ಷೇತ್ರಗಳಲ್ಲಿ ಸಾಧನೆ ಮಾಡಿದ ಬಹುತೇಕ ಸಾಧಕರು ಗ್ರಾಮೀಣ ಪ್ರದೇಶದಿಂದ ಬಂದವರೇ ಆಗಿದ್ದಾರೆ ಎಂದರು.

ಇದೇ ವೇಳೆ ಕುವೆಂಪು ಕನ್ನಡ ಅಧ್ಯಯನ ಸಂಸ್ಥೆಯ ವಿಶ್ರಾಂತ ನಿರ್ದೇಶಕ ಡಾ.ಡಿ.ಕೆ.ರಾಜೇಂದ್ರ, ಮಹಾರಾಣಿ ಸರ್ಕಾರಿ ಪದವಿಪೂರ್ವ ಕಾಲೇಜಿನ ಅಧ್ಯಾಪಕ ಡಾ.ಎನ್.ಎನ್.ಚಿಕ್ಕಮಾದು, ಕರ್ನಾಟಕ ಸಂಸ್ಕೃತ ವಿವಿಯ ವಿಶ್ರಾಂತ ಕುಲಪತಿಗಳಾದ ಡಾ.ಪದ್ಮಾಶೇಖರ್, ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ ಅಧ್ಯಕ್ಷ ಮಡ್ಡೀಕೆರೆ ಗೋಪಾಲ್ ಅವರನ್ನು ಸನ್ಮಾನಿಸಲಾಯಿತು.

ಕಾರ್ಯಕ್ರಮದಲ್ಲಿ ಕುವೆಂಪು ಕನ್ನಡ ಅಧ್ಯಯನ ಸಂಸ್ಥೆಯ ನಿರ್ದೇಶಕರಾದ ಪ್ರೊ.ಎನ್.ಕೆ. ಲೋಲಾಕ್ಷಿ, ಜೆಎಸ್‌ಎಸ್ ಮಹಾವಿದ್ಯಾಪೀಠದ ಪ್ರಕಟಣಾ ವಿಭಾಗದ ನಿರ್ದೇಶಕ ಪ್ರೊ ಮೊರಬದ ಮಲ್ಲಿಕಾರ್ಜುನ, ಹಿರಿಯ ವಿಜ್ಞಾನ ಲೇಖಕ ಎಸ್.ರಾಮಪ್ರಸಾದ್, ಕನ್ನಡ ಸಾಹಿತ್ಯ ಕಲಾ ಕೂಟದ ಅಧ್ಯಕ್ಷ ಎಂ.ಚಂದ್ರಶೇಖರ್, ಸಂವಹನ ಟ್ರಸ್ಟ್‌ನ ಅಧ್ಯಕ್ಷ ಡಿ.ಎನ್.ಲೋಕಪ್ಪ, ಹಿರಿಯ ವಿದ್ವಾಂಸ ಡಾ.ರಾಮೇಗೌಡ ಉಪಸ್ಥಿತರಿದ್ದರು.

ನಿಖಿಲ್ ಸೋಲು: ಅಭಿಮಾನಿ ವಿಷ ಸೇವಿಸಿ ಆತ್ಮಹತ್ಯೆಗೆ ಯತ್ನ

ಮಂಡ್ಯ,ನ.23–ಚನ್ನಪಟ್ಟಣ ವಿಧಾನಸಭಾ ಕ್ಷೇತ್ರದ ಉಪ ಚುನಾವಣೆಯಲ್ಲಿ ಜೆಡಿಎಸ್ ಅಭ್ಯರ್ಥಿ ನಿಖಿಲ್ ಕುಮಾರಸ್ವಾಮಿ ಸೋಲನ್ನಪ್ಪಿದ್ದರಿಂದ ಮನನೊಂದು ಅಭಿಮಾನಿಯೊಬ್ಬ ವಿಷ ಸೇವಿಸಿ ಆತ್ಮಹತ್ಯೆಗೆ ಯತ್ನಿಸಿರುವ ಘಟನೆ ಸಂಭವಿಸಿದೆ.

ಚನ್ನಪಟ್ಟಣ ತಾಲೂಕು ಕೂಡಲೂರು ಬಳಿಯ ಶ್ರೀರಾಂಪುರ ನಿವಾಸಿ, ತಮ್ಮ ನೆಚ್ಚಿನ ನಾಯಕ ಕೇಂದ್ರ ಸಚಿವ ಹೆಚ್.ಡಿ.ಕುಮಾರಸ್ವಾಮಿ ಅವರ ಪುತ್ರ ನಿಖಿಲ್ ಕುಮಾರಸ್ವಾಮಿ ಸೋಲು ಕಂಡಿದ್ದರಿಂದ ತಾನೂ ಆತ್ಮಹತ್ಯೆ ಮಾಡಿಕೊಳ್ಳುತ್ತಿರುವುದಾಗಿ ಡೆತ್‌ನೋಟ್ ಬರೆದಿಟ್ಟು ವಿಷ ಸೇವಿಸಿದ್ದಾರೆ. ತಕ್ಷಣ ಮನೆಯವರು ಚನ್ನಪಟ್ಟಣದಲ್ಲಿ ಪ್ರಾಥಮಿಕ ಚಿಕಿತ್ಸೆ ಕೊಡಿಸಿ ಮಂಡ್ಯದ ಖಾಸಗಿ ಆಸ್ಪತ್ರೆಗೆ ಕರೆತಂದು ದಾಖಲಿಸಿದ್ದಾರೆ. ಪೂರ್ಣ ವಿವರಗಳು ಲಭ್ಯವಾಗಿಲ್ಲ.

MAHENDRA DEVELOPERS
Muda Approved
SITES & HOUSE FOR SALE
Vajamangala: 20x30, 20x40, 30x40
Nagawala : 20x40, 30x40, 30x50, 40x60
Hunsuru : 20x30, 20x40, 30x40
Devagalli: 30x40, 40x60
Uttanahalli : 5.04 Guntas, Farm Land.
8884001233, 9620546347

ನೋಟುಗಳು, ನಾಣ್ಯಗಳು
ಮುಖಬೆಲೆಗೆ ಖರೀದಿ, ಮಾರಾಟ ಕೆಲವೊಂದು ನಾಣ್ಯ ನೋಟುಗಳಿಗೆ ಅಧಿಕ ಬೆಲೆ ಷೇರು, ಎಂ.ಎಫ್ ಇತರೆ ಬಾಂಡುಗಳು 5% ಎಸ್.ಪಿ ಸಂಪರ್ಕಿಸಿ:
9844058155

SITES FOR SALE
50x80, 50x70 North facing site. Prime location.
ROOPANAGAR attached to SBM Layout & Judicial Layout.
4000 per sqft.
87922 35466, 88846 16461

MAHENDRA DEVELOPERS
is looking for a Dynamic and dedicated persons for
Marketing Manager - 1
Marketing Executives - 2
Site Engineers - 2
Cook - 1
8884001233, 9620546347

NEWLY LAUNCHED PROJECT IN YELWALA
"PARISARA SIRI" - MYSORE
RESIDENTIAL PLOTS
@ JUST Rs. 675/- Sqft.,
2 KMS FROM YELWALA, 1 KM FROM NH 275
NEAR HORTICULTURE UNIVERSITY
MADIKERI – MYSORE HIGHWAY
DIMENSION
"30x40" "30x50" "40x60"
Contact: 9740391228

MAHENDRA DEVELOPERS
WANTED
Commercial/Semi Commercial/ Residential North-West corner Site or House,30x40, 40x60, 50x80 in Saraswati Puram, Kuvempunagar, Hebbal, Hootgalli and Vijaynagar 1st, 2nd, 3rd, 4th. stage
8884001233, 9620546347

VIBHA TOURS
Every Destination is a New story - Lets Create yours
EUROPE TRIP
Just ₹2,29,999/- Per Person
BOOK YOUR SPOT AT JUST 25,000/-
- TO AND FRO ECONOMY
- DAILY BREAKFAST AND DINNER
- ACCOMODATION AT 4 STAR CATEGORY HOTELS
- SCHENGEN VISA (GUARANTEED SCHENGEN VISA APPOINTMENT)
- ALL DRIVER AND TOUR MANAGER TIPS INCLUDED

BOOK NOW
#641, 8TH MAIN, A-1 BLOCK, VIJAYANAGAR 3RD STAGE, MYSORE-17
+91 8971920816
+91 8971136722

YEAR END SALE
SITES FOR SALE
30x40, 40x60
Behind Infosys,
MUDA, RERA Approved, Ready for Registration. Call:
9108471324 / 8073617959

MUDA APPROVED SITES
Next to Airport / Srinagar Behind Infosys, Vijayanagar 4th Stage, Near Uttanahalli Ring Road,
Right Time to Invest
Now in MYSORE
for Good Returns
96114 01111

COMMERCIAL SITE FOR SALE
40x60, East Face, 40 Feet Raod, near Rashtrothana School, J.P. Nagar, Mysore.
Brokers Excuse. Contact:
9739703467 / 9686895205

ಬಲಿಜ ವಧು ಬೇಕಾಗಿದೆ
ಮೈಸೂರಿನಲ್ಲಿ ವಾಸವಿರುವ 29 ವರ್ಷದ ಡಿಪ್ಲೊಮಾ ಪದವೀಧರನಿಗೆ ವಧು ಬೇಕಾಗಿದೆ.
9341845330
9886699012

ಜಮೀನು ಮಾರಾಟಕ್ಕಿವೆ
ಮೈಸೂರು ತಾ, ಜಯಪುರ ಹೋ. ಯಲ್ಲಿ ಮರಡಗಳ್ಳಿಯಲ್ಲಿ 1 ಎಕರೆ 4 ಗುಂಟೆ ಲೇಔಟ್ ಮಾಡಲು ಸೂಕ್ತವಾಗಿದೆ. ರಿಂಗ್ ರಸ್ತೆಯ ಹತ್ತಿರ ಇದೆ. ಮತ್ತು ಹತ್ತವಾಳು ಮುಖ್ಯ ರಸ್ತೆಯಲ್ಲಿ 1 ಎಕರೆ 28 ಗುಂಟೆ, ಕೊಳದಹುಂಡಿ ಮುಖ್ಯ ರಸ್ತೆಯಲ್ಲಿ 1 ಎಕರೆ 31 ಗುಂಟೆ, ಮಹಾಲಕ್ಷ್ಮಿ ಲೇಔಟ್ ಪಕ್ಕ 20 ಗುಂಟೆ, ರಿಂಗ್ ರಸ್ತೆಯ ಪಕ್ಕದಲ್ಲೇ ಜಮೀನುಗಳು ಮಾರಾಟಕ್ಕೆ ಇವೆ.
9945661696/9663793666

SITE FOR SALE
Site Dimension: 60x40 (MUDA Approved)
Facing: South- East Corner
Location : Next to R T Nagar, Mysore. Price: Rs. 72 Lakhs.
Contact : Satyamurthy N
Mob: 9739781444

AURA PLY CLUB 25 YEARS WARRANTY
PLYWOOD & DOORS @ FACTORY RATES
ISO 9001:2015 Certified Company Depot
SS Build Mart
9901291267
9845426862

WANTED
For Medical Store / Pharma Distributor
Male Staff: 3
(Packing & Distribution work)
Female Staff: 3
(Store Keeping & Office work)
4 wheel driving cum Distribution work .
SSLC/PUC Pass/Fail with or without experience
Call: 9986108208
9739377827

MUDA APPROVED SITES FOR SALE
Premium Gated Community Living at KNS Ethos!
4 West Facing Sites Available (30x40) in a Prime Gated Community
READY FOR REGISTRATION & CONSTRUCTION
BANK LOANS AVAILABLE
Construction Services Also Provided
+91 93422 33113, +91 99801 43847
or visit www.ashokrealtygroup.com

ಪ್ಲಾಸ್ಟಿಕ್ ಬಳಕೆ ನಿಷೇಧಿಸಿ
ಪರಿಸರವನ್ನು ಕಾಪಾಡಿ

REQUIRED
SOUTH INDIAN COOK
For a small Eatery in Vijayanagar 3rd stage.
Timing Morning -6:30 to 10:30, Evening 3:30 to 8:30.
Salary- 15,000 to 20,000.
Please contact:
9844421117 / 9986172570

Grand Wedding? Grand Venue !
- Wedding/Convention hall on special rate
- 2 Banquet halls to accommodate 50 to 100

- Wedding
- Engagements
- Conferences
- Trade Fairs
- Product Launches

Rajendra Kalamandhira
Ramanuja Road, Mysore-4.
Call: 0821 2434555, 9845923388, 9845016938
viceroycomforts@rpsshotels.com, rajendrakalamandhira@rpsshotels.com
The Following Dates suitable & available for auspicious wedding & other celebrations as per PANCHANGA - 2024 - 25
January 2025: 19, 23, 24. February 2025: 5, 6, 9, 14, 16, 20. March 2025: 3, 6, 9, 12, 17, 19, 21, 23, 26. April 2025: 6, 10, 16, 18, 21, 23. May 2025: 2, 4, 7, 9, 15, 21, 21, 23, 30.

COMMERCIAL SPACE FOR RENT
1800 square feet Commercial space available for Rent
2nd main, Vidyaranyapuram
Near Andhani Circle
Strictly interested can call
No Brokers Entertained
Contact: 9738266484
9036959243

NAMMANE Constructions Pvt. Ltd
SITES FOR SALE
At Prime Locations in Mysore
20X30, 30X40, 30X50
Newly Built House For Sale At Prime Locations In Mysore
30X40, 40X60
CONSTRUCTIONS | INTERIORS
9019923183
8095996669

Wirecut Red Brick
In Mysore
Price: 9.5



Features
- Competitive Price
- Lab Tested Quality Approved
- Large Quantity, We can supply to the Government Buildings
- GST Registered Manufacturers
- 24/7* Supply

Santhosh Brick Manufacturers
Aswalu Village, Hunsur Taluk, Mysore District.
Contact: +91 9606033443 / +91 9611113680

HP HYLAND PROPERTIES
DTCP APPROVAL
ನಿಸರ್ಗ ಇಕೋ ಪ್ಯಾರಡೈಸ್
ಮೈಸೂರು - ಹುಣಸೂರು ಮುಖ್ಯರಸ್ತೆ, ಮೈಸೂರು
ನಿಮ್ಮ ಕನಸಿನ ನಿವೇಶನ ಮೈಸೂರಿನಲ್ಲಿ
ಸುಲಭ 4 ಕಂತುಗಳ ಸೌಲಭ್ಯವಿದೆ
ಕೇವಲ ₹650/ ಪ್ರತಿ ಚದರ ಅಡಿ
30x40 | 30x50 | 40x60 | 50x80
ಅಳತೆಯ ಎಲ್ಲಾ ಸೌಲಭ್ಯಗಳನ್ನು ಒಳಗೊಳ್ಳುವ ನಿವೇಶನಗಳು
ಕೆಲವೇ ಸೈಟ್‌ಗಳು ಮಾತ್ರ ಲಭ್ಯ
ಹೈಲ್ಯಾಂಡ್ ಪ್ರಾಪರ್ಟೀಸ್
ಮೈಸೂರು - ಹುಣಸೂರು ಮುಖ್ಯರಸ್ತೆ, ಮೈಸೂರು
95133 01854
90713 86615

SITES ARE AVAILABLE FOR SALE
At Prime Locations in Mysore
30X40, 40X60
Near to Schools & Colleges, Hospital & Basic amenities
9986439090
9972825343

MONTESSORI / KINDERGARTEN NURSERY TEACHERS TRAINING
SIX MONTHS COURSE, REGULAR/CORRESPONDENCE
SSLC PASS / PUC / ANY DEGREE, DIPLOMA CERTIFICATE & EXAM BY MHRD NEW DELHI REGISTERED BOARD
100 % JOB ASSURED @ ANY PUBLIC OR PRIVATE SCHOOLS
JNANA GANGOTRI CONVENT
Rajendra Nagara Mysore-570 007. CALL: 9243580672

